
# ಆಕಾಶದೀಪ

ಸಂಪಾದಕರು

ಡಾ. ಎ.ಎಸ್. ಶಂಕರನಾರಾಯಣ




ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಆಕಾಶದೀಪ

*ಸಂಪಾದಕರು*

**ಡಾ. ಎ.ಎಸ್. ಶಂಕರನಾರಾಯಣ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**
ಬೆಂಗಳೂರು

**Akashadeepa** - Edited by Dr. A. S. Shankaranarayana, Published by **Ashoka N. Chalavadi,** Administrative Officer, Kannada Book Authority, J.C. Road, Bangalore - 560 002



Pages : x + 184

Price : Rs. 75/-

First Edition : 2008

Copies : 1,000

ISBN : 81-7713-280-6

ಪ್ರಕಾಶಕರು
**ಅಶೋಕ್ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು – 560 002

ಪುಟಗಳು : x + 184

ಬೆಲೆ : ರೂ. ೭೫/–

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೧೦೦೦

ಕರಡು ತಿದ್ದಿದವರು: ಡಾ. ಎ.ಎಸ್. ಶಂಕರನಾರಾಯಣ
ಬಿ.ಕೆ. ಸುಮತಿ

ಮುದ್ರಣ
**ಇಳಾ ಮುದ್ರಣ**
ನಂ. ೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
✈ : ೨೬೭೫೭೧೫೯

# ಅಧ್ಯಕ್ಷರ ಮಾತು

ಇದೊಂದು ವಿಶಿಷ್ಟ ಬಗೆಯ ಕೃತಿ. ಸಂದರ್ಭವಶದಲ್ಲಿ ರೂಪುಗೊಂಡ ಕೃತಿ, ಪ್ರಿಯಗುರುಗಳಾದ ಡಾ॥ ಜಿ.ಎಸ್.ಎಸ್. ಅವರಿಗೆ ರಾಷ್ಟ್ರಕವಿ ಪ್ರಶಸ್ತಿ ಗೌರವ ಸಂದ ಸಂದರ್ಭದಲ್ಲಿ ಈ ಕೃತಿಯ ಕಲ್ಪನೆಗೆ ಚಾಲನೆ ಬಂದರೂ ಇಲ್ಲಿ ಅಡಕವಾಗಿರುವ ಹಲವು ನಿಟ್ಟಿನ ಬರಹಗಳು ಈ ಸಂದರ್ಭಕ್ಕೆ ಮಾತ್ರ ಸೀಮಿತಗೊಂಡಂತೆ ಮೂಡಿದವುಗಳಲ್ಲ. ರಾಷ್ಟ್ರಕವಿ ಪುರಸ್ಕಾರದ ಸಂದರ್ಭದಲ್ಲಿ ಆಕಾಶವಾಣಿಯವರು ಗೌರವ ನಮನದ ಕಾರ್ಯಕ್ರಮವಾಗಿ ಜಿ.ಎಸ್.ಎಸ್. ಅವರ ಬಗ್ಗೆ ಅವರ ಸಾಹಿತ್ಯದ ವಿವಿಧ ಆಯಾಮಗಳ ಬಗೆಗೆ ಆಪ್ತರಿಂದ ಶಿಷ್ಯರಿಂದ ತಜ್ಞರಿಂದ ಕನ್ನಡ ಜನತೆಗಾಗಿ ಮಾತನಾಡಿಸಿದಾಗ ಮೂಡಿ ಬಂದ ಬರಹಗಳು ಇಲ್ಲಿವೆ. ಆಕಾಶವಾಣಿಯವರು ನೀಡುವ ಸಮಯದ ಚೌಕಟ್ಟಿನೊಳಗೆ ಇಲ್ಲಿಯ ವಿದ್ವಾಂಸರು ಶಿಷ್ಯರು ಜಿ.ಎಸ್.ಎಸ್. ಅವರ ವ್ಯಕ್ತಿತ್ವಸಾಧನೆಯ ಬಗ್ಗೆ ತಮ್ಮ ಅನುಭವ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಜೊತೆಗೆ ಇದೇ ಸಂದರ್ಭದಲ್ಲಿ ನಡೆಸಿದ ಜಿ.ಎಸ್.ಎಸ್. ಜೊತೆಗಿನ ಸಂದರ್ಶನವೂ ಇಲ್ಲಿದೆ.

ವಿಶೇಷವೆಂದರೆ, ಜಿ.ಎಸ್.ಎಸ್. ಅವರು ಇದುವರೆಗೆ ಆಕಾಶವಾಣಿಯಲ್ಲಿ ಭಾಗವಹಿಸಿ ನೀಡಿರುವ ಚಿಂತನೆಗಳು ಸಂದರ್ಶನಗಳು ಈ ಸಂಕಲನದಲ್ಲಿ ಸೇರಿವೆ. ಇದು ಈ ಸಂಕಲನದ ಮಹತ್ವವನ್ನು ಹೆಚ್ಚಿಸಿದೆ. ಈಗಾಗಲೇ ಆಕಾಶವಾಣಿಯ ಚಿಂತನ ವಾಣಿಗಳನ್ನು ಬರಹರೂಪದಲ್ಲಿ ಪ್ರಕಟಿಸಿರುವ ಬೇರೆ ಬೇರೆ ಲೇಖಕರ ಪುಸ್ತಕಗಳು ಇರಬಹುದು. ಆದರೆ, ಈ ಪುಸ್ತಕದ ಮಹತ್ವ ಅಂಥ ಪ್ರಕಟಣೆಗಳಿಗಿಂತ ಭಿನ್ನ. ಕಾರಣ ಈ ಸಂಕಲನಕ್ಕೆ ಎರಡು ರೀತಿಯ ಮಹತ್ವವಿದೆ. ೧. ವ್ಯಕ್ತಿಯ ನೆಲೆಯಲ್ಲಿ ೨. ಮಾಧ್ಯಮವೊಂದರ ಪರಿವ್ಯಾಪ್ತಿಯಲ್ಲಿ. ಇವೆರಡೂ ಪರಸ್ಪರಗಳು. ಆದರೂ ಭಿನ್ನ ಗಣನೆಯಲ್ಲಿ ವಿಶಿಷ್ಟವೆನ್ನಿಸುವಂಥವು.

ವ್ಯಕ್ತಿಯ ನೆಲೆಗೆ ಸಂಬಂಧಿಸಿದಂತೆ ಜಿ.ಎಸ್.ಎಸ್. ಅವರು ಆಕಾಶವಾಣಿಯಂಥ ಸಮೂಹ ಮಾಧ್ಯಮವೊಂದರಲ್ಲಿ ಯಾವ ಕಾಲದಿಂದ ಎಷ್ಟುಬಾರಿ ಯಾವ ಯಾವ ಸಂದರ್ಭಗಳಲ್ಲಿ ಭಾಗವಹಿಸಿದ್ದರು ಎಂಬುದು ಮುಖ್ಯವಾಗುತ್ತದೆ. ಕಾಲದಿಂದ ಕಾಲಕ್ಕೆ ಅವರ ಚಿಂತನೆಯಲ್ಲಿ ಆದ ವಿಸ್ತರಣೆಗಳನ್ನು ಈ ಭಾಗವಹಿಸುವಿಕೆಯ ಕಾಲಾನುಕ್ರಮಣಿಕೆಯಲ್ಲಿ ಗುರುತಿಸಬಹುದು. ಅಷ್ಟೇ ಅಲ್ಲ, ಸಂದರ್ಭದ ಮಹತ್ವಗಳನ್ನು ಅವುಗಳ ಬಗೆಗಿನ ಅಭಿಪ್ರಾಯ ವಿಶೇಷತೆಗಳನ್ನು

ಇಲ್ಲಿ ದಾಖಲೆಯ ರೂಪದಲ್ಲಿ ಗಮನಿಸಬಹುದು. ಮತ್ತೊಂದು ನೆಲೆಯೆಂದರೆ, ಸಮೂಹ ಮಾಧ್ಯಮವೊಂದು ನಾಡಿನ ಸಾಂಸ್ಕೃತಿಕ ಬದುಕಿನ ರೂಪಣಕ್ಕೆ ಕಾರಣವಾದ ಚೇತನ ತನ್ನೊಂದಿಗೆ ಎಂಥ ಬಾಂಧವ್ಯ ಬೆಳೆಸಿಕೊಂಡಿತ್ತು ಎಂಬುದು. ಇದರಿಂದ ತನ್ನ ಕಾರ್ಯಕ್ರಮಗಳ ಆತ್ಮಾವಲೋಕನಕ್ಕೆ ಆತ್ಮಪ್ರತ್ಯಯಕ್ಕೆ ಪೂರಕ ದ್ರವ್ಯವಾಗಿ ಇದನ್ನು ಪರಿಭಾವಿಸಿರುವುದು. ಇಲ್ಲಿ ಹಿನ್ನೋಟದ ಜೊತೆಗೆ ವರ್ತಮಾನದ ಗಂಭೀರ ಪರಿಗಣನೆ ವಿಸ್ತರಿಸಿಕೊಂಡಿದೆ; ಶ್ರೋತೃ ಸಮೂಹದಿಂದ ಓದುಗ ಸಮೂಹದ ಕಡೆಗೆ ತನ್ನ ಕ್ರಿಯೆಯನ್ನು ವಿಸ್ತರಿಸಿಕೊಂಡಿದೆ. ಧ್ವನಿಮುದ್ರಣದಲ್ಲಿದ್ದ ಚಿಂತನೆ ಅಭಿಪ್ರಾಯ ಅನುಭವಗಳನ್ನು ಅಕ್ಷರ ರೂಪಕ್ಕೆ ತಂದು ಮತ್ತೊಂದು ರೀತಿಯಲ್ಲಿ ಕವಿಗೆ ಗೌರವ ಸಮರ್ಪಣೆ ಮಾಡುತ್ತಿದೆ. ಈ ಕಾರ್ಯಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದ ಸಹಭಾಗಿತ್ವವನ್ನು ಪಡೆದುಕೊಂಡಿರುವುದು ಮತ್ತೊಂದು ವಿಶೇಷ. ಸಂಸ್ಕೃತಿ ವರ್ಧನೆಯ ಕಾರ್ಯದಲ್ಲಿ ವ್ಯಕ್ತಿ ವ್ಯಕ್ತಿಗಳ ಸಹಕಾರವಷ್ಟೇ ಅಲ್ಲ, ಸಂಸ್ಥೆಗಳೂ ಕೂಡ ಪರಸ್ಪರ ಕೈಜೋಡಿಸುವುದು ಬಹಳ ಮುಖ್ಯ. ಇದರಿಂದ ಏಕಮುಖತ್ವ ತಪ್ಪಿ ಬಹುಮುಖೀ ಸಂಚಲನೆಯಲ್ಲಿ ವಿಚಾರಗಳ ಪ್ರಸರಣ ಕ್ರಿಯೆ ನಡೆಯುತ್ತದೆ. ಹೀಗಾಗಿ ಆಕಾಶವಾಣಿ ಕಾಲಮಾನಕ್ಕೆ ಸ್ಪಂದಿಸಿ ತನ್ನ ಕಾರ್ಯಕ್ಷೇತ್ರವನ್ನು ಹಿಗ್ಗಲಿಸಿಕೊಳ್ಳುತ್ತಿರುವುದು ಅಭಿನಂದನೀಯ ವಿಚಾರ.

ಈ ಕಲ್ಪನೆಯನ್ನು ಪುಸ್ತಕ ಪ್ರಾಧಿಕಾರದ ಮೂಲಕ ಆಗುಮಾಡಿಸಲು ಮನಸ್ಸು ಮಾಡಿದ ಆಕಾಶವಾಣಿಯ ಎಲ್ಲ ಗೆಳೆಯರಿಗೆ ವಿಶೇಷವಾಗಿ ಎಸ್.ಎಸ್. ಹಿರೇಮಠ, ಎ.ಎಸ್. ಶಂಕರನಾರಾಯಣ - ಇವರೆಲ್ಲರಿಗೆ ಪ್ರಾಧಿಕಾರದ ಪರವಾಗಿ ಆತ್ಮೀಯ ಕೃತಜ್ಞತೆಗಳು.

**ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು

೨೦-೩-೨೦೦೮

# ಒಂದು ಮಾತು

ಜಿ.ಎಸ್.ಎಸ್. ನನ್ನ ಪ್ರೀತಿಯ ಮೇಷ್ಟ್ರು, ನಮ್ಮ ಕಾಲದ ಪ್ರಭಾವಶಾಲಿ ಪ್ರಾಧ್ಯಾಪಕರಲ್ಲಿ ಒಬ್ಬರು. ಸಾವಿರಾರು ವಿದ್ಯಾರ್ಥಿಗಳ ಕನ್ನೆಮನದಲ್ಲಿ ಬೆಳಕಿನ ಬೀಜ ಬಿತ್ತಿದವರು; ಒಳಗೆ ಬೆಳಗುವ ಬೆಳಕನ್ನು ಅನಾವರಣಗೊಳಿಸಿದವರು. ಕನ್ನಡದ ಹುಡುಗರು ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಬೇಕೆಂದು ಪ್ರತಿಪಾದಿಸಿದವರು. ಬೆಳಕಿನರಮನೆಗೆ ದಾರಿ ನೂರಾರು; ಒಬ್ಬೊಬ್ಬರಿಗೆ ಒಂದೊಂದು ದಾರಿ. ಆಗ ತಾನೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಆರಂಭವಾದ 'ಸಂವಹನ' ವಿಭಾಗದತ್ತ ನನಗೆ ಬೆರಳುತೋರಿದರು. ಅವರ ಮುಂಗಾಣ್ಕೆ ಫಲ ನೀಡಿದೆ ಎಂದು ನನ್ನ ಭಾವನೆ. ವೈಯಕ್ತಿಕವಾಗಿ ನಾನು ಅವರಿಗೆ ಕೃತಜ್ಞ.

ಮೇಷ್ಟ್ರು 'ರಾಷ್ಟ್ರಕವಿ'ಯಾದಾಗ ನಮಗೆಲ್ಲ ಸಂತೋಷ, ಸಂಭ್ರಮ. ಅವರ ಬದುಕು-ಬರಹಗಳ ಬಗ್ಗೆ, ಅವರ ಸಾಹಿತ್ಯ ಸೃಷ್ಟಿಯ ವಿವಿಧ ಮಗ್ಗುಲಗಳ ಬಗ್ಗೆ ಹೆಸರಾಂತ ಬರಹಗಾರರಿಂದ ಭಾಷಣ ಮಾಲೆಯನ್ನು 'ಆಕಾಶವಾಣಿ'ಯಲ್ಲಿ ಏರ್ಪಡಿಸಿದೆವು. ಸತತವಾಗಿ ಒಂದು ವಾರ ಈ ಭಾಷಣಗಳು ಬಿತ್ತರವಾದದ್ದು ವೈಯಕ್ತಿಕವಾಗಿ ಹೆಮ್ಮೆಯ ವಿಷಯ. ಕಾರಣ : ಬೇರೆಯಾವ ಮಾಧ್ಯಮ ಅಥವಾ ಸಂಸ್ಥೆಯೂ ಇಂಥ ಒಂದು ಸಂಕಿರಣವನ್ನು ಯೋಜಿಸುವ ಮೊದಲು 'ಆಕಾಶವಾಣಿ' ಅದನ್ನು ಜನರಿಗೆ ತಲುಪಿಸಿದ್ದು. ಭಾಷಣಗಳ ಗುಣಮಟ್ಟವನ್ನು ಗಮನಿಸಿದ ಹಿರಿಯರನೇಕರು ಅದನ್ನು ಪುಸ್ತಕ ರೂಪದಲ್ಲಿ ತರಲು ಸೂಚಿಸಿದರು. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ನನ್ನ ಮಿತ್ರರೂ ಆದ ಪ್ರೊ: ಎಸ್.ಜಿ.ಸಿದ್ಧರಾಮಯ್ಯನವರು ಪುಸ್ತಕ ಪ್ರಕಟಿಸಲು ಮುಂದೆ ಬಂದರು. ಅವರಿಗೆ ನನ್ನ ಕೃತಜ್ಞತೆಗಳು. ಕ್ಷರವಾಗಿ ತೇಲಿ ಹೋಗಿದ್ದ ಧ್ವನಿತರಂಗಗಳು ಅಕ್ಷರವಾಗಿ ಮೂಡಿಬಂದವು. ಪುಸ್ತಕ ಸಿದ್ಧವಾಗತೊಡಗಿತು. ಗಾತ್ರ ಚಿಕ್ಕದೆನ್ನಿಸಿತು. ಜಿ.ಎಸ್.ಎಸ್. ಪ್ರಸಾರ ಮಾಡಿದ ಕವನಗಳನ್ನು ಬಿಟ್ಟು ಅವರು ನೀಡಿದ ಸಂದರ್ಶನಗಳು, ಮಾಡಿದ ಭಾಷಣಗಳಲ್ಲಿ ಅನೇಕ ಮುದ್ರಣ ರೂಪದಲ್ಲಿ ಬಂದಿಲ್ಲದ್ದು ಗಮನಕ್ಕೆ ಬಂತು. ಆದರೆ ಕಳೆದ ಸುಮಾರು ಐವತ್ತು ವರ್ಷಗಳ ಈ ಸಾಮಗ್ರಿ ಸಂಪೂರ್ಣವಾಗಿ ಲಭ್ಯವಾಗದೆ ಇದ್ದದ್ದು ಕೊರತೆ ಎನಿಸಿತು. ಸರಿ, ಇರುವುದಾದರು ಒಂದೆಡೆ ಬರಲಿ ಎಂದುಯೋಚಿಸಿ ಆಕಾಶವಾಣಿಯ ಪ್ರಸಾರದಲ್ಲಿ ಮಾತ್ರ ಸ್ಫುರಿಸಿದ ಅವರ ಅನೇಕ ವಿಚಾರಗಳು ಎಲ್ಲರಿಗೂ, ಎಲ್ಲಕಾಲಕ್ಕೂ ಸಿಗಲಿ ಎಂಬ ಉದ್ದೇಶದಿಂದ ಪುಸ್ತಕ ರೂಪ ಪಡೆಯಿತು. ಅವರ

ಬಗ್ಗೆ ಬರೆದ, ಸಂದರ್ಶನಗಳಲ್ಲಿ ಪಾಲ್ಗೊಂಡ, ಅವನ್ನು ಅಕ್ಷರ ರೂಪಕ್ಕಿಳಿಸುವಲ್ಲಿ ಸಹಕರಿಸಿದ ಎಲ್ಲರಿಗೂ ನಮ್ಮ ನಮನಗಳು.

ಡಾ. ಎ.ಎಸ್. ಶಂಕರನಾರಾಯಣ ಅವರು ಶ್ರದ್ಧೆಯಿಂದ ಶ್ರಮವಹಿಸಿ ಇದನ್ನು ಸಂಪಾದಿಸಿದ್ದಾರೆ; ಅವರಿಗೆ ನನ್ನ ಧನ್ಯವಾದಗಳು. ಜಿ.ಎಸ್.ಎಸ್. ಸಾಹಿತ್ಯಾಧ್ಯಯನಕ್ಕೆ ಇದೊಂದು ಪೂರಕ ಗ್ರಂಥವೆನಿಸಿದರೆ ನಮ್ಮ ಶ್ರಮ ಸಾರ್ಥಕ.

ಆಕಾಶವಾಣಿ
ಬೆಂಗಳೂರು

**ಎಸ್.ಎಸ್. ಹಿರೇಮಠ**
ನಿರ್ದೇಶಕರು

# ಬೆಳಕಿನರಮನೆಯೊಳಗೆ

ಕನ್ನಡದ ಮಹತ್ವದ ಕವಿ ಲೇಖಕ-ಚಿಂತಕರಾಗಿರುವ ಡಾ. ಜಿ.ಎಸ್.ಶಿವರುದ್ರಪ್ಪನವರು ಇಲ್ಲಿನ ಸಮಕಾಲೀನ ಸಾಹಿತ್ಯ ಸಂದರ್ಭವನ್ನು ವಿಶಿಷ್ಟವಾಗಿ ರೂಪಿಸಿದವರು. ಸಾಹಿತ್ಯ ಸೃಷ್ಟಿಗಷ್ಟೇ ಸೀಮಿತವಾಗದೆ, ಸಹೃದಯ ಮನಸ್ಸುಗಳನ್ನು ರೂಪಿಸಿದವರು. ಕನ್ನಡ ಸಾಹಿತ್ಯ ಪ್ರಭೆಯನ್ನು ಉಜ್ವಲಗೊಳಿಸಿದವರು. ಪ್ರತಿಭೆ-ಸೃಜನಶೀಲತೆಯನ್ನು ಗುರುತಿಸಿ, ಪೋಷಿಸಿ, ಬೆಳೆಸುವ ಮೂಲಕ ಕನ್ನಡ ಸಾರಸ್ವತ ಲೋಕದ ಪ್ರಭಾವಳಿಯನ್ನು ವಿಸ್ತರಿಸಿದವರು. ಅವರ ಗರಡಿಯಲ್ಲಿ ಪಳಗಿದ ಅನೇಕರು ಇಂದು ಇಲ್ಲಿನ ಹೆಸರಾಂತ ಬರಹಗಾರರು-ಚಿಂತಕರಾಗಿದ್ದಾರೆ. ಹೀಗಾಗಿ ನಾಡು ಅವರಿಗೆ ಅಭಿನಂದನೆ ಸಲ್ಲಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪಲ್ಲಟಗಳಿಗೂ ಕ್ರಿಯಾಶೀಲವಾಗಿ ಸ್ಪಂದಿಸಿರುವ ಮೇಷ್ಟ್ರು ತಮ್ಮ ಚಿಂತನೆ, ನೇರ ನಡೆ-ನುಡಿ ಹಾಗೂ ಆತ್ಮೀಯ ಬರಹಗಳ ಮೂಲಕ ಸಮಾಜದ ನಡಿಗೆಗೆ ಕೈದೀವಿಗೆಯಾದವರು. ಇವರ ಅಂತರ್‌ದರ್ಶನ ಹಾಗೂ ಸಮಾಜಮುಖಿ ನಿಲುವು ಇವರನ್ನು ವಿಶಿಷ್ಟವಾಗಿಸಿದೆ.

ಆಕಾಶವಾಣಿ ಹಾಗೂ ಜಿ.ಎಸ್.ಶಿವರುದ್ರಪ್ಪನವರ ಸಂಬಂಧ ಅತ್ಯಂತ ಗಾಢ, ಸುದೀರ್ಘ ಹಾಗೂ ಸುಮಧುರವಾದದ್ದು. ಕನ್ನಡದ ಎಲ್ಲಾ ಸಾಹಿತ್ಯಕ ಚಳುವಳಿಗಳ ಮೂಲಕವೂ ಹಾದು ಬಂದಿರುವ ಶಿವರುದ್ರಪ್ಪನವರ ಸಾಹಿತ್ಯ ಬಾನುಲಿಯ ಮೂಲಕವೂ ಕೇಳುಗ ಸಹೃದಯರಿಗೆ ಪರಿಣಾಮಕಾರಿಯಾಗಿಯೇ ಮುಟ್ಟಿದೆ. ಅವರ ಅನೇಕ ಚಿಂತನ, ಭಾಷಣ, ರೂಪಕ, ಸಂದರ್ಶನಗಳು ಆಕಾಶವಾಣಿಯಿಂದ ಬಿತ್ತರಗೊಂಡಿವೆ. ಕೇಳುಗರ ಮನಗೆದ್ದಿವೆ. ರೇಡಿಯೋ ದಿಂದ ಬಿತ್ತರವಾಗುವ ಅವರ ಭಾವಗೀತೆಗಳಂತೂ ಅತ್ಯಂತ ಜನಪ್ರಿಯ. ಇಂತಹ ಚೇತನಕ್ಕೆ ರಾಷ್ಟ್ರಕವಿ ಗೌರವ ಸಂದ ಸಂದರ್ಭದಲ್ಲಿ ಇಡೀ ನಾಡು ಸಂಭ್ರಮಿಸಿತು. ಆ ಸಂಭ್ರಮದಲ್ಲಿ ಆಕಾಶವಾಣಿ ಕೂಡಾ ಪಾಲ್ಗೊಂಡಿತು. ಆಗ ಮೂಡಿಬಂದಿದ್ದೇ "ರಾಷ್ಟ್ರಕವಿಗೆ ನಮನ" ಸರಣಿ. ಇದರಲ್ಲಿ ಮೇಷ್ಟ್ರ ಬದುಕು-ಬರಹದ ಸೂಕ್ಷ್ಮ ಅವಲೋಕನವಾಯಿತು. ಆ ಮಾತುಗಳು ಈ ಪುಸ್ತಕದ ಮೊದಲ ಭಾಗವಾಗಿದೆ. ಎರಡನೆಯ ಭಾಗ "ದೀಪಧ್ವನಿ" ಜಿ.ಎಸ್.ಎಸ್ ಅವರು ಬಾನುಲಿಯಲ್ಲಿ ಪ್ರಸ್ತುತಪಡಿಸಿರುವ ಕಾರ್ಯಕ್ರಮಗಳು, ಅವರ ಬಾನುಲಿ ಅಭಿವ್ಯಕ್ತಿ ಯಾಗಿದ್ದರೆ, ಮೂರನೆಯ ಭಾಗ "ದೀಪದರ್ಶನ"ದಲ್ಲಿ ವಿವಿಧ ಸಂದರ್ಭಗಳಲ್ಲಿ

ಧ್ವನಿಮುದ್ರಿಸಿಕೊಳ್ಳಲಾದ ಶಿವರುದ್ರಪ್ಪನವರ ಸಂದರ್ಶನಗಳಿವೆ. "ರಾಷ್ಟ್ರಕವಿಯನ್ನು ಕುರಿತು", "ರಾಷ್ಟ್ರಕವಿಯಿಂದ" ಹಾಗೂ "ರಾಷ್ಟ್ರಕವಿಯೊಡನೆ" ಹೀಗೆ ಮೂರು ಆಯಾಮಗಳು ಈ ಪುಸ್ತಕದಲ್ಲಿರುವುದು ಇದರ ವೈಶಿಷ್ಟ್ಯ. ಹೀಗೆ ಒಟ್ಟಾರೆಯಾಗಿ ಶಿವರುದ್ರಪ್ಪನವರ ಲಭ್ಯ ಬಾನುಲಿ ಬರವಣಿಗೆಗಳು ಇಲ್ಲಿ ದಾಖಲಾಗಿದ್ದು, ಇದರ ಮಹತ್ವ ಹಾಗೂ ಉಪಯುಕ್ತತೆಯನ್ನು ಹೆಚ್ಚಿಸಿದೆ. ನಮ್ಮ ಧ್ವನಿಮುದ್ರಣ ಭಂಡಾರದಲ್ಲಿರುವ ಜಿ.ಎಸ್.ಎಸ್. ಅವರ ಎಲ್ಲಾ ಕಾರ್ಯಕ್ರಮಗಳನ್ನು ಒಟ್ಟಾಗಿ ಸೇರಿಸಿ ಪ್ರಕಟಿಸುವ ಮಹತ್ಕಾರ್ಯಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರ ಮುಂದಾಗಿರುವುದಕ್ಕೆ ಅಧ್ಯಕ್ಷರಾದ ಪ್ರೊ. ಜಿ.ಎಸ್.ಸಿದ್ಧರಾಮಯ್ಯ ಹಾಗೂ ಪ್ರಾಧಿಕಾರದ ಸದಸ್ಯರಿಗೆ ಅಭಿನಂದನೆಗಳು ಸಲ್ಲುತ್ತವೆ. ಜಿ.ಎಸ್.ಎಸ್. ಅವರಂತೂ ಅಭಿಮಾನದಿಂದ, ಸಂತೋಷದಿಂದ ಈ ಪ್ರಕಟಣೆಗೆ ಒಪ್ಪಿಗೆ ಸೂಚಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ಪ್ರಸಾರವಾದ ಬಾನುಲಿ ಸಾಹಿತ್ಯವಾದರೋ ಧ್ವನಿಮುದ್ರಣ ಭಂಡಾರದಲ್ಲಿ ಮಾತುಗಳ ರೂಪದಲ್ಲಿ ಅಡಗಿ ಕುಳಿತಿರುತ್ತದೆ. ಪ್ರಕಟಣೆಗೆಂದರೆ ಅವುಗಳನ್ನು ಮೊದಲು ಬರಹದ ರೂಪಕ್ಕಿಳಿಸಬೇಕು. ಕಾರ್ಯಕ್ರಮವನ್ನು ಕೇಳುತ್ತಾ-ಕೇಳುತ್ತಾ ಬರೆದುಕೊಳ್ಳುವುದು ಶ್ರಮದಾಯಕ ಕೆಲಸ. ಜಿ.ಎಸ್.ಎಸ್. ಅವರ ಲಭ್ಯ ಬಾನುಲಿ ಕಾರ್ಯಕ್ರಮಗಳನ್ನು ಪಟ್ಟಿಮಾಡಿ, ಧ್ವನಿರೂಪ ದಲ್ಲಿರುವ ಅವುಗಳನ್ನು ಚಾಕ್ಷುಷ ರೂಪಕ್ಕಿಳಿಸಬೇಕಾಯಿತು. ಇದನ್ನು ಪ್ರೀತಿಯಿಂದ, ಶ್ರದ್ಧೆಯಿಂದ, ಅಚ್ಚುಕಟ್ಟಾಗಿ ನಿರ್ವಹಿಸಿದವರು ಉದ್ಘೋಷಕಿ ಶ್ರೀಮತಿ ಬಿ.ಕೆ.ಸುಮತಿ. ಕರಡಚ್ಚು ತಿದ್ದುವ ಸಮಯದಲ್ಲೂ ಅವರು ಶ್ರಮವಹಿಸಿದ್ದಾರೆ. ಜೊತೆಗೆ ಯು.ವಿ.ಸಿಂಧೂರ ಸಹ ನೆರವಾಗಿದ್ದಾರೆ. ಇಳಾ ಮುದ್ರಣದ ಗುರುಮೂರ್ತಿ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ.

ಈ ಕೃತಿ ಬಾನುಲಿ ಸಾಹಿತ್ಯ ಪ್ರಕಟಣೆಯ ಒಂದು ವಿಶಿಷ್ಟ ಮೈಲಿಗಲ್ಲು. ಏಕೆಂದರೆ, ಇದುವರೆಗೆ ಬಾನುಲಿ ಸಾಹಿತ್ಯದ ಅನೇಕ ಪುಸ್ತಕಗಳು ಪ್ರಕಟವಾಗಿದ್ದರೂ, ಲೇಖಕರೊಬ್ಬರ ಲಭ್ಯ ಸಮಗ್ರ ಬಾನುಲಿ ಸಾಹಿತ್ಯ ಆಕಾಶವಾಣಿಯ ಅಧಿಕೃತತೆಯೊಂದಿಗೆ ಪುಸ್ತಕ ಪ್ರಾಧಿಕಾರದಂತಹ ಸಂಸ್ಥೆಯ ಮೂಲಕ ಪುಸ್ತಕ ರೂಪದಲ್ಲಿ ಹೊರಬರುತ್ತಿರುವುದು ಇದೇ ಮೊದಲು. ಇದಕ್ಕೆ ಕಾರಣರಾದ ನಿಲಯ ನಿರ್ದೇಶಕರಾದ ಶ್ರೀ ಎಸ್.ಎಸ್. ಹಿರೇಮಠ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ತಮ್ಮ ಭಾಷಣಗಳನ್ನು ಪ್ರಕಟಿಸಲು ಅನುಮತಿಯನ್ನಿತ್ತ ಎಲ್ಲಾ ಲೇಖಕರು, ಭಾಷಣಗಳನ್ನು ಧ್ವನಿಮುದ್ರಿಸಿ, ಕಳುಹಿಸಿಕೊಟ್ಟ ಮೈಸೂರು, ಧಾರವಾಡ ಭದ್ರಾವತಿ ಹಾಗೂ ಬೆಂಗಳೂರು ವಿವಿದ ಭಾರತಿ ಕೇಂದ್ರಗಳ ನಿಲಯ ನಿರ್ದೇಶಕರು, ಬಾನುಲಿದ ಮಾತುಗಳನ್ನು ಬರಹಕ್ಕಿಳಿಸಿದ ಶ್ರೀಮತಿ ಬಿ.ಕೆ.ಸುಮತಿ, ಯು.ವಿ.ಸಿಂಧೂರ ಹಾಗೂ ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ಗುರುಮೂರ್ತಿ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ ಎಲ್ಲರಿಗೂ ಕೃತಜ್ಞತೆಗಳು.

ಆಕಾಶವಾಣಿ
ಬೆಂಗಳೂರು

ಡಾ॥ ಎ.ಎಸ್.ಶಂಕರನಾರಾಯಣ
ಕಾರ್ಯಕ್ರಮ ನಿರ್ವಾಹಕ

# ಬೆಳಕಿನ ಭಿತ್ತಿ

**ಭಿತ್ತಿ ೧**

**ರಾಷ್ಟ್ರಕವಿಗೆ ನಮನ (ಆಪ್ತರು ಕಂಡಂತೆ ಜಿ.ಎಸ್.ಎಸ್)**


೧. ಜಿ.ಎಸ್.ಎಸ್.ಅವರ ವ್ಯಕ್ತಿತ್ವ

–ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ... ೩

೨. ಗೆಳೆಯರಾಗಿ ಜಿ.ಎಸ್.ಎಸ್

–ಡಾ. ಚೆನ್ನವೀರ ಕಣವಿ ... ೯

೩. ನಮ್ಮ ಮೇಷ್ಟ್ರು

–ಪ್ರೊ. ಎಸ್.ಜಿ.ಸಿದ್ಧರಾಮಯ್ಯ ... ೧೫

೪. ಬೆಳಕಿನ ಹೆಜ್ಜೆ

–ಪ್ರೊ. ಜಿ. ಶ್ರೀನಿವಾಸರಾಜು ... ೨೨

೫. ಜಿ.ಎಸ್.ಎಸ್.ಕಾವ್ಯ

–ಡಾ. ಎಚ್.ಎಸ್.ರಾಘವೇಂದ್ರರಾವ್ ... ೨೮

೬. ಶಿವರುದ್ರಪ್ಪನವರ ವಿಮರ್ಶೆ

–ಪ್ರೊ. ಸಿ.ಎನ್.ರಾಮಚಂದ್ರನ್ ... ೩೩

೭. ಕಾವ್ಯಮೀಮಾಂಸಕರಾಗಿ ಜಿ.ಎಸ್.ಎಸ್.

–ಡಾ. ಸಿ.ಪಿ.ಕೃಷ್ಣಕುಮಾರ್ ... ೩೯

೮. ಕನ್ನಡ ಸಾಂಸ್ಕೃತಿಕ ವಕ್ತಾರರಾಗಿ ಜಿ.ಎಸ್.ಎಸ್

–ಡಿ.ಎಸ್. ನಾಗಭೂಷಣ ... ೪೬


**ಭಿತ್ತಿ ೨:**

**ದೀಪಧ್ವನಿ (ಜಿ.ಎಸ್.ಎಸ್. ಅವರ ಬಾನುಲಿ ಅಭಿವ್ಯಕ್ತಿ)**


೧. ಚಿಂತನ–೧ ... ೫೫

೨. ಚಿಂತನ–೨ ... ೫೭

೩. ಚಿಂತನ–೩ ... ೫೯

೪. ಚಿಂತನ–೪ ... ೬೧

೫. ಚಿಂತನ-೫ ೬೩

೬. ಚಿಂತನ-೬ ೬೫

೭. ಬದುಕು-ನನ್ನ ದೃಷ್ಟಿಯಲ್ಲಿ ೬೭

೮. ಭಾರತೀಯ ಕಾವ್ಯ ಮೀಮಾಂಸೆ-ಒಂದು ವಿವೇಚನೆ ೭೧

೯. ನಾನೇಕೆ ಬರೆಯುತ್ತೇನೆ? ೭೫

೧೦. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ-ಒಂದು ಅವಲೋಕನ ೮೦

೧೧. ಕವಿ ಪಂಪ-ನಮಗೆಷ್ಟು ಪ್ರಸ್ತುತ? ೮೬

೧೨. ಸ್ಮೃತಿ ಸುರುಳಿ ೯೬

**ಭಿತ್ತಿ ೩:**

**ದೀಪ ದರ್ಶನ (ಜಿ.ಎಸ್.ಎಸ್. ಅವರ ಬಾನುಲಿ ಸಂವಾದ/ಸಂದರ್ಶನಗಳು)**

ಸಂದರ್ಶನ ೧ : ಸಂದರ್ಶಕರು : ಡಾ.ಎಚ್.ಎಸ್.ವೆಂಕಟೇಶಮೂರ್ತಿ ... ೧೦೩

ಸಂದರ್ಶನ ೨ : ಸಂದರ್ಶಕರು : ಜಿ.ಪಿ.ಬಸವರಾಜು ... ೧೧೩

ಸಂದರ್ಶನ ೩ : ಸಂದರ್ಶಕರು : ಕಿ.ರಂ.ನಾಗರಾಜ ಹಾಗೂ ನರಹಳ್ಳಿ ಬಾಲಸುಬ್ರಹ್ಮಣ್ಯ ... ೧೩೮

ಸಂದರ್ಶನ ೪ : ಸಂದರ್ಶಕರು : ವೈ.ಕೆ.ಮುದ್ದುಕೃಷ್ಣ ... ೧೬೪

ಸಂದರ್ಶನ ೫ : ಸಂದರ್ಶಕರು : ಡಿ.ಎಸ್.ನಾಗಭೂಷಣ ... ೧೭೩

# ಭಿತ್ತಿ ೧

## ರಾಷ್ಟ್ರಕವಿಗೆ ನಮನ

(ಅಷ್ಟರು ಕಂಡಂತೆ ಜಿ.ಎಸ್.ಎಸ್)

# ಜಿ.ಎಸ್. ಶಿವರುದ್ರಪ್ಪನವರ ವ್ಯಕ್ತಿತ್ವ

●

## *ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ*

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲುಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ-ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ ?
ಮೋಡ ಕಟ್ಟೀತು ಹೇಗೆ ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ ?
ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ
ಅರ್ಥ ಹುಟ್ಟೀತು ಹೇಗೆ ?
ಬರೀ ಪದಕ್ಕೆ ಪದ ಜೊತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ ?

ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ
ಇದ್ದಷ್ಟು ನೆಲವ ಉತ್ತು ಬಿತ್ತಿ ನೀರೆರೆದು
ಮಲಗಿರುವ ಬೀಜಗಳ ಕಣ್ಣು ತೆರೆಸುತ್ತೇನೆ.
ನಾಳೆ ಈ ಸಸಿಗಳೆಲ್ಲಾ ವಟವೃಕ್ಷವಾಗಿ
ಸಾವಿರ ಜನಕ್ಕೆ ನೆರಳಾದಾವೆಂಬ ಮಹದಾಸೆ ಇರದಿದ್ದರೂ
ಒಂದೆರಡಾದರೂ ಬೀಜವಾಗುವಂಥ
ಹಣ್ಣು ಬಿಟ್ಟಾವೆಂದು, ನಂಬಿ ಕಾಯುತ್ತೇನೆ

ಈ ಎಲ್ಲವೂ ನಮ್ಮ ಪ್ರೀತಿಯ ಮೇಸ್ಟ್ರು, ಇತ್ತೀಚೆಗೆ 'ರಾಷ್ಟ್ರಕವಿ' ಗೌರವಕ್ಕೆ ಪಾತ್ರರಾದ ಜಿ.ಎಸ್. ಶಿವರುದ್ರಪ್ಪನವರ ಕವಿತೆಯ ಸಾಲುಗಳು–ಇವೆಲ್ಲ ಕೇವಲ ಕವಿತೆಯ ಸಾಲುಗಳಲ್ಲ, ಕವಿಯ ವ್ಯಕ್ತಿತ್ವವನ್ನು ಕಟ್ಟಿಕೊಡುವಂಥವು.

ಯಾವುದೇ ವ್ಯಕ್ತಿಗಾದರೂ ಅವರ ವ್ಯಕ್ತಿತ್ವದಲ್ಲಿ ಎರಡು ನೆಲೆಗಳಿರುತ್ತವೆ. ಒಂದು ವೈಯಕ್ತಿಕವಾದದ್ದು; ಮತ್ತೊಂದು ಸಾಮಾಜಿಕವಾದದ್ದು. ಇವೆರಡೂ ಒಂದೇ ಆಗಿರಬೇಕೆಂದಲ್ಲ; ಕೆಲವೊಮ್ಮೆ ಆಗಿರುವುದಿಲ್ಲ. ಹೊರಜಗತ್ತಿನಲ್ಲಿ ಸಾಮಾಜಿಕ ಬದುಕಿನಲ್ಲಿ ಅತ್ಯಂತ ಸಮಾಧಾನಿಯಾಗಿರುವ, ಪ್ರಶಾಂತ ವ್ಯಕ್ತಿತ್ವದ ವ್ಯಕ್ತಿ, ಮನೆಯೊಳಗಡೆ ವೈಯಕ್ತಿಕ ಬದುಕಿನಲ್ಲಿ ಕೆಂಡದುಂಡೆಯಾಗಿರುವುದುಂಟು. ಕೆಲವೊಮ್ಮೆ ಸಾಮಾಜಿಕವಾಗಿ ಅತ್ಯಂತ ಗಂಭೀರವಾಗಿರುವ, ಭಯ ಗೌರವ ಮೂಡಿಸುವ ವ್ಯಕ್ತಿ ವೈಯಕ್ತಿಕ ನೆಲೆಯಲ್ಲಿ ಹಸನ್ಮುಖಿಯಾಗಿ ತಮಾಷೆ ಮಾಡುತ್ತ, ಕಾಲ ಕಳೆಯಬಹುದು. ಲೇಖಕರಿಗೆ ಇವೆರಡರ ಜೊತೆಗೆ ಮತ್ತೂ ಒಂದು ವ್ಯಕ್ತಿತ್ವವಿರುತ್ತದೆ. ಅದು ಅವರ ಬರಹಗಳ ಮೂಲಕ ನಾವು ಕಟ್ಟಿಕೊಳ್ಳುವ ವ್ಯಕ್ತಿತ್ವ. ವೈಯಕ್ತಿಕ, ಸಾಮಾಜಿಕ ಸಂಪರ್ಕವಿಲ್ಲದೆಯೂ ಅವರ ಬರಹಗಳನ್ನು ಓದುವುದರ ಮೂಲಕವೇ ಅವರ ವ್ಯಕ್ತಿತ್ವವನ್ನು ನಾವು ರೂಪಿಸಿಕೊಳ್ಳುತ್ತೇವೆ.

ಜಿಎಸ್ಎಸ್ ಅವರನ್ನು ನಾನು ಈ ಮೂರೂ ನೆಲೆಗಳಲ್ಲಿ ಬಲ್ಲೆ. ಕಳೆದ ಮೂರು ದಶಕಗಳಿಂದಲೂ ಜಿಎಸ್ಎಸ್ ಅವರನ್ನು ನಾನು ವೈಯಕ್ತಿಕವಾಗಿ ಹತ್ತಿರದಿಂದ ಕಂಡಿದ್ದೇನೆ. ನನ್ನ ಅದೃಷ್ಟ–ಅವರ ನಿಕಟ ಒಡನಾಟ ನನಗೆ ಸಾಧ್ಯವಾಗಿದೆ. ಅನೇಕ ಆಪ್ತ ಗಳಿಗೆಗಳನ್ನು ಅವರೊಡನೆ ಕಳೆದಿದ್ದೇನೆ. ಶಿಷ್ಯನೆಂದು ವಾತ್ಸಲ್ಯದಿಂದಲೂ, ಗೆಳೆಯನಂತೆ ಗೌರವದಿಂದಲೂ ಅವರು ನನ್ನನ್ನು ನಡೆಸಿಕೊಂಡು ಅವರ ಬಗೆಗಿನ ನನ್ನ ಗೌರವ ಮತ್ತಷ್ಟು ಹೆಚ್ಚಾಗಲು ಕಾರಣರಾಗಿದ್ದಾರೆ. ಅವರೊಡನೆ ಅನೇಕ ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡಿದ್ದೇನೆ; ಸಾರ್ವಜನಿಕ ವ್ಯಕ್ತಿಯಾಗಿ ಅವರು ತಮ್ಮನ್ನು ಪ್ರಕಟಪಡಿಸಿಕೊಳ್ಳುವ ಕ್ರಮವನ್ನೂ ನಾನು ಬಲ್ಲೆ. ಸಮಕಾಲೀನ ಸಂದರ್ಭದಲ್ಲಿ ಆ ಗಾಂಭೀರ್ಯ ಜಿಎಸ್ಎಸ್ ಅವರಿಗೇ ವಿಶಿಷ್ಟವಾದದ್ದು. ಅವರ ಸಾಹಿತ್ಯವನ್ನು ಪ್ರೀತಿಯಿಂದ ಅಧ್ಯಯನ ಮಾಡಿದ್ದೇನೆ. ಆ ಮೂಲಕವೂ ಅವರ ವ್ಯಕ್ತಿತ್ವ ನನ್ನೊಳಗೆ ರೂಪುಗೊಂಡಿದೆ. ದಿಕ್ಕೆಟ್ಟ ಸ್ಥಿತಿಗೆ ವಿಷಾದಿಸುತ್ತಲೇ ಅದಮ್ಯ ಆಶಾವಾದ ಪ್ರಕಟಿಸುವ ಅವರ ಕಾವ್ಯವ್ಯಕ್ತಿತ್ವ ಬದುಕಿನಲ್ಲಿ ಭರವಸೆ ಮೂಡಿಸುವ ದನಿಯಾಗಿರುವುದನ್ನು ಗುರ್ತಿಸಿಕೊಂಡಿದ್ದೇನೆ.

ಹೀಗೆ ಜಿಎಸ್ಎಸ್ ಅವರು ವೈಯಕ್ತಿಕವಾಗಿ, ಸಾಮಾಜಿಕವಾಗಿ ಕವಿಯಾಗಿ ನನ್ನೊಳಗೆ ರೂಪುಗೊಂಡ ಬಗೆಯನ್ನು, ಅವರ ವ್ಯಕ್ತಿತ್ವದ ಕೆಲವು ಪ್ರಧಾನ ಗುಣಗಳನ್ನು ಹೀಗೆ ಗುರ್ತಿಸಬಹುದು :

ಶಿವರುದ್ರಪ್ಪನವರದು ಸಮಚಿತ್ತದ ವ್ಯಕ್ತಿತ್ವ. ಯಾವ ಪ್ರಭಾವ, ಪ್ರವಾಹಕ್ಕೂ ಅವರು ತಮ್ಮನ್ನು ಸುಲಭವಾಗಿ ಒಪ್ಪಿಸಿಕೊಳ್ಳುವುದಿಲ್ಲ. ಅಂತರವನ್ನು ಕಾಯ್ದುಕೊಳ್ಳುತ್ತ, ಬೇಕಾದ್ದನ್ನು ಸ್ವೀಕರಿಸುತ್ತ, ತನ್ನಂತರಂಗದ ಋಣತೆ ಆರದಂತೆ ಸದಾ ಎಚ್ಚರದಿಂದಿರುತ್ತಾರೆ. ಎಂತಹ ಒತ್ತಡದ ಸಂದರ್ಭದಲ್ಲೂ ಸಂಯಮ ಕಳೆದುಕೊಳ್ಳದೆ, ಲಘುವಾಗದೆ, ಸಾಮಾಜಿಕ ಬದುಕಿನ

ಘನತೆಯನ್ನು ಅವರು ಎತ್ತಿ ಹಿಡಿದಿದ್ದಾರೆ. ಹಾಗಾಗಿಯೇ ಅವರು ಗಂಭೀರವೆನ್ನಿಸುತ್ತಾರೆ. ಗಾಂಭೀರ್ಯ ಅವರ ಸಾಮಾಜಿಕ ವ್ಯಕ್ತಿತ್ವದ ಒಂದು ಪ್ರಧಾನ ಗುಣ. ಅದೊಂದು ರೀತಿ ಅವರಿಗೆ ಸುತ್ತಲಿನ ಸದ್ದುಗದ್ದಲದಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಉಪಾಯ ಸಾಧನವೂ ಹೌದು. ಇದು ತೋರಿಕೆಯದಲ್ಲ; ಸಹಜವಾಗಿ ಮೈಗೂಡಿರುವಂಥದು. ಕುವೆಂಪು ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿರುವುದೂ ಇದಕ್ಕೆ ಕಾರಣವಿರಬಹುದು. ಸುತ್ತಲೂ ಎಂತೆಂಥವೋ ವಿಜೃಂಭಿಸಿ ಮೀಸೆ ತಿರುವುದನ್ನು, ಏರಬಾರದ ಕಡೆಗೆ ಏರಿ ಇಳಿಯಬಾರದ ಕಡೆಗೆ ಇಳಿದು ಹೊಲಸೆಬ್ಬಿರುವುದನ್ನು ಅವರು ನೋಡಿದರೂ. ನೆರೆದಾಟಬಾರದ ಸಂಯಮವನ್ನು ಅವರು ಉದ್ದಕ್ಕೂ ಜತನದಿಂದ ಕಾಯ್ದುಕೊಂಡಿದ್ದಾರೆ. ಯಾವ ಸಂದರ್ಭದಲ್ಲೂ ಅವರು ತಾಳ್ಮೆ ತಪ್ಪಿ ದುಡುಕಿ ಮಾತನಾಡಿದ್ದನ್ನು ನಾನು ಕೇಳಿಲ್ಲ. ಸಾರ್ವಜನಿಕವಾಗಿ ಮಾತ್ರವಲ್ಲ, ವೈಯಕ್ತಿಕ ನೆಲೆಯಲ್ಲೂ ತಮಗೆ ಇಷ್ಟವಾಗದಿದ್ದರೆ ಅವರು ತಕ್ಷಣ ಪ್ರತಿಕ್ರಿಯಿಸುವುದಿಲ್ಲ. ಸುಮ್ಮನಾಗಿ ಬಿಡುತ್ತಾರೆ. ಮೌನವನ್ನು ಅವರು ಒಂದು ಪರಿಣಾಮಕಾರಿ ಅಸ್ತ್ರವಾಗಿ ಬಳಸಿಕೊಳ್ಳುತ್ತಾರೆ. ಮಾತನ್ನು ಹೀಗೆ ಎಚ್ಚರದಿಂದ ಬಳಸುವಂಥವರು ವಿರಳ. ಜಿಎಸ್‌ಎಸ್ ಹಿರಿಕಿರಿಯರೆನ್ನದೆ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿರುವುದಕ್ಕೆ ಇದೂ ಒಂದು ಮುಖ್ಯ ಕಾರಣ. ಒಂದು ಜವಾಬ್ದಾರಿಯಿಂದ, ಒಂದು ಎಚ್ಚರದಿಂದ ನಡೆದುಕೊಳ್ಳುವುದು ಸರಳವಾದುದೇನಲ್ಲ !

'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು' ಎಂಬ ಅಲ್ಲಮನ ಮಾತುಗಳು ಜಿಎಸ್‌ಎಸ್ ಅವರಿಗೆ ಅತ್ಯಂತ ಪ್ರಿಯವಾದುದು. ಪರಂಪರೆ ಮತ್ತು ಆಧುನಿಕತೆ–ಇವೆರಡರ ಬಗೆಗೂ ಅವರಿಗೆ ಸಮಾನ ಪ್ರೀತಿ, ಗೌರವ. ಹೀಗಾಗಿಯೇ ಜಿಎಸ್‌ಎಸ್ ಅವರ ವ್ಯಕ್ತಿತ್ವದಲ್ಲಿ ಹಿರಿಯರ ಬಗ್ಗೆ ಗೌರವ, ಕಿರಿಯರ ಬಗ್ಗೆ ಪ್ರೀತಿ ಸಹಜವೆಂಬಂತೆ ಸೇರಿಕೊಂಡಿದೆ. ನಮ್ಮ ಸಾಮಾಜಿಕ, ಸಾಂಸ್ಕೃತಿಕ ಬದುಕು ಕಳೆದ ಶತಮಾನದಲ್ಲಿ ಅನೇಕ ಬದಲಾವಣೆಗಳನ್ನು ಕಂಡಿತು; ಅನೇಕ ಬಗೆಯ ತಲ್ಲಣಗಳನ್ನುಂಟುಮಾಡಿತು. ಎಂತಹ ಸಂದರ್ಭದಲ್ಲೂ ಜಿಎಸ್‌ಎಸ್ ಪರಂಪರೆಯ ಬಗ್ಗೆ ಗೌರವ ಕಳೆದುಕೊಳ್ಳಲಿಲ್ಲ. ಎಲ್ಲವನ್ನೂ ಒಳಗೊಳ್ಳುತ್ತಲೇ, ಅರಗಿಸಿಕೊಳ್ಳುತ್ತಲೇ ಪರಂಪರೆಯ ಸತ್ವವನ್ನು ಬಲಗೊಳಿಸಲು ಪ್ರಯತ್ನಿಸಿದರು. ಹಿರಿಯರ ಅನುಭವ, ವಿವೇಕ, ಕಿರಿಯರ ಉತ್ಸಾಹ ಹೊಸ ಚಿಂತನೆ–ಇವೆರಡನ್ನೂ ಒಂದೇ ಕಡೆ ತರುವ ಅವರ ಪ್ರಯತ್ನ ನಮ್ಮ ಕಾಲದ ಒಂದು ಆದರ್ಶವಾಗಿದೆ. ಜಿಎಸ್‌ಎಸ್ ಇಂತಹ ಆದರ್ಶ ವ್ಯಕ್ತಿತ್ವದ ಮಾದರಿಯ ಹಾಗೆ ಕಾಣಿಸುತ್ತಾರೆ. ವಾಗ್ವಾದಗಳು ವೈಯಕ್ತಿಕ ಮಟ್ಟದ ನಿಂದೆ ಜಗಳಗಳಾಗಿ ಬಿಡುವ ಅಪಾಯದ ಸನ್ನಿವೇಶದಲ್ಲಿ ಭಿನ್ನ ವಿಚಾರಧಾರೆಯ, ಭಿನ್ನ ವ್ಯಕ್ತಿತ್ವದ, ಭಿನ್ನ ತಲೆಮಾರಿನ ವ್ಯಕ್ತಿತ್ವಗಳನ್ನ ಒಂದೆಡೆ ಸೇರಿಸಿ, ವಾಗ್ವಾದಕ್ಕೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿಕೊಡುವ ವ್ಯಕ್ತಿತ್ವಗಳು ನಮ್ಮಲ್ಲಿ ಅತ್ಯಂತ ವಿರಳ. ಅಂತಹ ವಿರಳರಲ್ಲಿ ವಿರಳರಾದವರು ಜಿ.ಎಸ್. ಶಿವರುದ್ರಪ್ಪನವರು. ಮನಸ್ಸು, ಬುದ್ಧಿ ಜಡವಾಗದ ಹಾಗೆ ನಿರಂತರ ಕ್ರಿಯಾಶೀಲವಾಗಿರುತ್ತ ಸೃಜನಶೀಲವಾಗಿರಬೇಕೆನ್ನುವ ಜಿಎಸ್‌ಎಸ್ ಅವರ ನಿಲವು–ಅವರ ವ್ಯಕ್ತಿತ್ವವನ್ನು ರೂಪಿಸಿದಂತೆ ತೋರುತ್ತದೆ. ಇದು ಅತ್ಯಂತ ಆರೋಗ್ಯಕರವಾದ ವ್ಯಕ್ತಿತ್ವದ ಲಕ್ಷಣ.

ಜಿಎಸ್‌ಎಸ್ ಅವರ ವ್ಯಕ್ತಿತ್ವದಲ್ಲಿ ಒಂದು ಶಿಸ್ತಿದೆ; ಶ್ರದ್ಧೆಯಿದೆ. ಎಲ್ಲವೂ ಅವರಿಗೆ ಅಚ್ಚುಕಟ್ಟಾಗಿ ಆಗಬೇಕು. ಅದಕ್ಕಾಗಿ ಬೇಕಾದ ಸಿದ್ಧತೆಯನ್ನು ಅವರು ಮಾಡಿಕೊಳ್ಳುತ್ತಾರೆ. ಒಂದು ಭಾಷಣವೆಂದರೆ ಎಂದೂ ಸಿದ್ಧತೆಯಿಲ್ಲದೆ ಅವರು ಹೋಗುವುದಿಲ್ಲ. ಸಂದರ್ಭ ಯಾವುದಾದರೂ ಆಗಿರಬಹುದು, ಆ ಬಗ್ಗೆ ಅವರು ಟಿಪ್ಪಣಿ ಮಾಡಿಕೊಂಡಿರುತ್ತಾರೆ. ವಿಷಯವನ್ನು ಕುರಿತು ಚಿಂತಿಸಿ, ಮಾಹಿತಿ ಸಂಗ್ರಹಿಸಿ, ಅಚ್ಚುಕಟ್ಟಾಗಿ ಮಂಡಿಸುತ್ತಾರೆ. ಎದುರಿಗಿರುವವರನ್ನು ಮೆಚ್ಚಿಸುವ, ಒಲಿಸಿಕೊಳ್ಳುವ ಗುಣ ಅವರದಲ್ಲ; ಹೀಗಾಗಿಯೇ ಕೆಲವೊಮ್ಮೆ ಅವರ ವ್ಯಕ್ತಿತ್ವ ನಿಷ್ಠುರವೆನ್ನಿಸುವುದೂ ಉಂಟು. ಆದರೆ ನಂಬಿದ್ದನ್ನ ಅವರು ಹೇಳುತ್ತಾರೆ; ಹೇಳುವುದನ್ನು ಜವಾಬ್ದಾರಿಯಿಂದ ಹೇಳುತ್ತಾರೆ. ಅವರ ಬರವಣಿಗೆಯ ಕ್ರಮವೂ ಹಾಗೆಯೇ. ಅವರ ಅಭಿಪ್ರಾಯಗಳನ್ನು ನೀವು ಒಪ್ಪದಿರಬಹುದು; ಆದರೆ ನಿರಾಕರಿಸುವುದು ಕಷ್ಟ.

ಅವರೊಡನೆ ಪ್ರವಾಸ ಹೋದಾಗ ನಾನು ಗಮನಿಸಿದ್ದೇನೆ; ಅವರ ಬ್ಯಾಗಿನಲ್ಲಿ ಒಂದು ವಿಶ್ವವೇ ಅಡಗಿ ಕೂತಿರುತ್ತದೆ–ಬೇಕಾದ ಯಾವುದನ್ನೂ ಅವರು ನಿರ್ಲಕ್ಷಿಸಿರುವುದಿಲ್ಲ. ಒಮ್ಮೆಯಂತೂ ಸ್ನಾನ ಮುಗಿಸಿ ಬಂದ ಮೇಷ್ಟ್ರು ಒಂದು ಪುಟ್ಟದಾದ ಬಾಟಲನ್ನು ಬ್ಯಾಗಿನಿಂದ ಹೊರತೆಗೆದರು. ನಾನು ಗಮನಿಸುತ್ತಿದ್ದೆ. ನಾಲ್ಕು ಹನಿ ಕೊಬ್ಬರಿ ಎಣ್ಣೆಯನ್ನು ಅಂಗೈಯಲ್ಲಿ ಹಾಕಿಕೊಂಡು ಇದ್ದ ಕೆಲವೇ ಕೂದಲಿಗೆ ಹಚ್ಚುತ್ತ, ನೀಟಾಗಿ ಬಾಚಿಕೊಂಡು, ಮತ್ತೆ ಆ ಪುಟ್ಟ ಸೀಸೆಯನ್ನು ಸ್ವಸ್ಥಾನ ಸೇರಿಸಿದರು. ಅವರ ಕೂದಲಿಗೆ ಬಾಚಣಿಗೆಯ ಅಗತ್ಯವೂ ಇರಲಿಲ್ಲ. ಅಂಥದರಲ್ಲಿ ಇಂಥ ಉಪಚಾರ!

ಅಂದರೆ ಯಾವ ಕೆಲಸದಲ್ಲೂ ಒಂದು ಶಿಸ್ತು, ಒಂದು ಅಚ್ಚುಕಟ್ಟು, ಒಂದು ಶ್ರದ್ಧೆ–ಜಿಎಸ್‌ಎಸ್ ಅವರ ವ್ಯಕ್ತಿತ್ವದಲ್ಲಿ ಪ್ರಧಾನವಾಗಿದೆ. ಈಗಲೂ ಒಂದು ಸಭೆ ಆಯೋಜಿಸಿದರೆ ಸಂಬಂಧಪಟ್ಟವರಿಗೆ ಆಹ್ವಾನಪತ್ರಿಕೆಯನ್ನು ತಾವೇ ಸ್ವತಃ ವಿಳಾಸ ಬರೆದು, ಅಂಚೆ ಡಬ್ಬಿಗೆ ಹಾಕುತ್ತಾರೆ; ಹಿಂದಿನ ದಿನ ನೆನಪಿಸುತ್ತಾರೆ; ಅತಿಥಿ ಚಿಕ್ಕವರಿರಬಹುದು, ಹಿರಿಯರಿರಬಹುದು ಆತಿಥ್ಯದಲ್ಲಿ ಲೋಪವಾಗದ ಹಾಗೆ ಎಚ್ಚರ ವಹಿಸುತ್ತಾರೆ. ಇದನ್ನೇ ನಾವು ಮಾದರಿ ವ್ಯಕ್ತಿತ್ವ ಎನ್ನುವುದು. ಜಿಎಸ್‌ಎಸ್ ಅವರದು ನಾನು ಕಂಡಂತೆ ಒಂದು ಮಾದರಿ ವ್ಯಕ್ತಿತ್ವ.

ಜಿಎಸ್‌ಎಸ್ ಅವರದು ಮೆಲುದನಿ. ಅಬ್ಬರ ಆರ್ಭಟಗಳಿಂದ ಅವರು ಸದಾ ದೂರ. ಪ್ರದರ್ಶನ ವ್ಯಕ್ತಿತ್ವ ಅವರದಲ್ಲ. ತಮ್ಮನ್ನು ತಾವು ಸ್ಥಾಪಿಸಿಕೊಳ್ಳಲು ಎಂದೂ ಅವರು ಪ್ರಯತ್ನಿಸುವಂಥವರಲ್ಲ. 'ನನ್ನ ಪಾಡಿಗೆ ನಾನು ಬದುಕುತ್ತೇನೆ ಎಂಬುದು ಅವರ ನಿಲುವು. ಆಕ್ರಮಣಕಾರಿ ನಿಲುವು ಎಂದಿಗೂ ಅವರ ವ್ಯಕ್ತಿತ್ವದ ಲಕ್ಷಣವಲ್ಲ. ಎಲ್ಲ ಬಗೆಯ ದಮನಕಾರಿ ಪ್ರವೃತ್ತಿಯನ್ನೂ ಅವರು ವಿರೋಧಿಸುತ್ತಾರೆ. 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮಂ ಧರ್ಮಮುಮಂ' ಎಂಬ ಕವಿರಾಜಮಾರ್ಗಕಾರನ ಚಿಂತನೆ ಅವರಿಗೆ ಪ್ರಿಯವಾದುದು. ಅಹಂ ಹಾಗೂ ಸ್ವಪ್ರತಿಷ್ಠೆಗಳೇ ಕಾರಣವಾಗಿ ವ್ಯಕ್ತಿ ವ್ಯಕ್ತಿಗಳ ನಡುವೆ ಎದ್ದಿರುವ ಗೋಡೆಗಳ ಬಗ್ಗೆ ಅವರಿಗೆ ನೋವಿದೆ; ವಿಷಾದವಿದೆ. ಆದರೆ ಹತಾಶೆಯಿಲ್ಲ. ಇಂತಹ ಸ್ಥಿತಿಯ ನಡುವೆಯೂ ಭರವಸೆಯ ಬೆಳ್ಳಿಗೆರೆಯನ್ನು ಅವರು ಕಾಣುತ್ತಾರೆ.

ಹಣತೆ ಹಚ್ಚುತ್ತೇನೆ ನಾನೂ
ಈ ಕತ್ತಲನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ
ಲೆಕ್ಕವೇ ಇರದ ದೀಪಾವಳಿಯ ಹಡಗುಗಳೆ
ಇದರಲ್ಲಿ ಮುಳುಗಿರುವಾಗ
ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ
ನನಗಿಲ್ಲ
ಹಣತೆ ಹಚ್ಚುತ್ತೇನೆ...
ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ
ಇರುವಷ್ಟು ಹೊತ್ತು ನನ್ನ ಮುಖ ನೀನು
ನಿನ್ನ ಮುಖ ನಾನು
ನೋಡಬಹುದೆಂಬ ಒಂದೇ ಒಂದು ಆಸೆಯಿಂದ

ಜಿಎಸ್‌ಎಸ್ ಅವರ ವ್ಯಕ್ತಿತ್ವ ರೂಪುಗೊಂಡದ್ದು ನವೋದಯದ ಆದರ್ಶಗಳ, ಕನಸುಗಳ ಸಂದರ್ಭದಲ್ಲಿ. ನವೋದಯದ ಮುಖ್ಯ ಲಕ್ಷಣವೇ ವ್ಯಕ್ತಿಯನ್ನು ಸಾಮಾಜಿಕವಾಗಿ ಗ್ರಹಿಸುವ ನೆಲೆ. ಜಿಎಸ್‌ಎಸ್ ಅವರದು ಆರೋಗ್ಯಕರ ಸಮಾಜವನ್ನು ಸಂಸ್ಕೃತಿಯನ್ನು ಕಟ್ಟುವ ವ್ಯಕ್ತಿತ್ವ. ತಾವು ರೂಪಿಸಿಕೊಂಡ ಆದರ್ಶದಿಂದಾಗಿಯೇ ಜಿ.ಎಸ್.ಎಸ್ ಅವರಲ್ಲಿ ವಿಷಾದವೂ ಇದೆ. ಆದರೆ ಈ ವಿಷಾದ ಸಿನಿಕತನವಾಗದ ಹಾಗೆ, ನೇತ್ಯಾತ್ಮಕವಾಗದ ಹಾಗೆ, ನಿರಾಶವಾದಕ್ಕೆ ಎಡೆಮಾಡಿ ಕೊಡದ ಎಚ್ಚರವೂ ಅವರ ವ್ಯಕ್ತಿತ್ವದಲ್ಲಿದೆ. ಬದುಕಿನ ಬಗೆಗಿನ ಭರವಸೆಯನ್ನೂ ಜಿಎಸ್‌ಎಸ್ ಎಂದೂ ಕಳೆದುಕೊಂಡವರಲ್ಲ.

ಜಿಎಸ್‌ಎಸ್ ಪ್ರವಾಸ ಪ್ರಿಯರು; ಈಗಲೂ ಅವರು ಸಭೆ ಸಮಾರಂಭಗಳಿಗೆಂದು ದೂರದೂರುಗಳಿಗೆ ಪ್ರಯಾಣ ಮಾಡುವುದನ್ನೂ, ಆ ಪ್ರಯಾಣ ಪ್ರಯಾಸವಾಗದ ಹಾಗೆ ಎಚ್ಚರ ವಹಿಸುವುದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಮೇಸ್ಟ್ರ ಜೊತೆ ಪ್ರವಾಸ ಹೋಗುವುದು ಒಂದು ಸುಖಕರ ಅನುಭವ. ಊಟ, ತಿಂಡಿ, ವಸತಿ–ಎಲ್ಲದರ ಬಗ್ಗೆಯೂ ಅವರು ಮೊದಲೇ ಯೋಚಿಸಿರುತ್ತಾರೆ. ನಿರ್ದಿಷ್ಟ ಯೋಜನೆಯಂತೆ, ಯಾವ ತೊಂದರೆಯೂ ಆಗದ ಹಾಗೆ ವ್ಯವಸ್ಥೆ ಮಾಡಿರುತ್ತಾರೆ. ಪ್ರಯಾಣದ ಸಂದರ್ಭದಲ್ಲಿ ನಡೆಯುವ ಆಪ್ತ ಮಾತುಕತೆ, ಸೂಕ್ಷ್ಮ ಚಿಂತನೆ, ಹೊಸ ಓದಿನ ವಿನಿಮಯ–ನಮ್ಮಂಥವರನ್ನು ಶ್ರೀಮಂತಗೊಳಿಸುತ್ತವೆ. ಕಾಲಹರಣಕ್ಕಾಗಿ ಎಂಥದೋ ಮಾತನಾಡುವುದು ಮೇಸ್ಟ್ರಿಗೆ ಒಗ್ಗದ ಸಂಗತಿ. ಹೀಗಾಗಿ ಅವರೊಡನೆ ಹರಟೆಯೆನ್ನುವುದು ಸುಲಭ ಸಾಧ್ಯವಲ್ಲ.

ಜಿಎಸ್‌ಎಸ್ ಅವರಲ್ಲಿ ನಾನು ಕಂಡ ಮತ್ತೊಂದು ಸಂಗತಿಯೆಂದರೆ ನಿರಂತರ ಓದು; ಪ್ರತಿಸಲ ಅವರನ್ನು ಭೇಟಿಯಾದಾಗಲೂ ಹೊಸ ಪುಸ್ತಕವೊಂದರ ಬಗ್ಗೆ ಅವರು ಪ್ರಸ್ತಾಪಿಸುತ್ತಾರೆ. ಓದಿದ್ದೀರಾ? ಎಂದು ಕೇಳುತ್ತಾರೆ. ಪುಸ್ತಕ ಕೊಟ್ಟು ಓದಿಸುತ್ತಾರೆ. ಸಮಕಾಲೀನ ಸಾಹಿತ್ಯದ ಬಗ್ಗೆ ಹೀಗೆ ಸಂಬಂಧವಿಟ್ಟುಕೊಂಡಿರುವ ಹಿರಿಯ ಲೇಖಕರು ಅಪರೂಪ.

'To Propagate the best that has been
thought and said in the world'

ಎಂದು ಆರ್ನಾಲ್ಡ್ ಹೇಳುತ್ತಾನೆ. ಜಿಎಸ್‌ಎಸ್ ತಾವು ಮೆಚ್ಚಿದ್ದನ್ನು, ತಮಗೆ ಒಳ್ಳೆಯದೆನ್ನಿಸಿದ್ದನ್ನು ನಾಲ್ಕು ಜನರೊಡನೆ ಹಂಚಿಕೊಳ್ಳುತ್ತಾರೆ. ಸಂಸ್ಕೃತಿ, ಸಮಾಜ, ಸಂವೇದನೆ ಜಡವಾಗದ ಹಾಗೆ, ಚಲನಶೀಲವಾಗಿರುವ ಹಾಗೆ ನೋಡಿಕೊಳ್ಳುತ್ತಾರೆ.

ಇಡಿಯಾಗಿ ಜಿಎಸ್‌ಎಸ್ ಅವರ ವ್ಯಕ್ತಿತ್ವವನ್ನು ಗಮನಿಸಿದಾಗ ಆದರ್ಶ ಮತ್ತು ಆಶಾವಾದ ಅವರ ವ್ಯಕ್ತಿತ್ವದ ಎರಡು ಪ್ರಧಾನ ಲಕ್ಷಣಗಳೆಂಬಂತೆ ತೋರುತ್ತದೆ. ವೈಯಕ್ತಿಕ ಹಿತಾಕಾಂಕ್ಷೆಗಳನ್ನು ಮೀರಿ ಸಮುದಾಯದ, ಸಮಷ್ಟಿಯ ಹಿತವನ್ನು ಅನುಲಕ್ಷಿಸಿ ನಡೆಯುವ ಆದರ್ಶ– ಶಿವರುದ್ರಪ್ಪನವರ ವ್ಯಕ್ತಿತ್ವವನ್ನು ರೂಪಿಸಿದೆ. ತಾವು ಮೆಚ್ಚಿದ್ದೇ ಶ್ರೇಷ್ಠ ಎನ್ನುವ ಹಟ ಅವರದಲ್ಲ; ಶ್ರೇಷ್ಠವಾದುದನ್ನು ಒಪ್ಪಿ ಗೌರವಿಸುವ ಮನೋಭಾವವನ್ನು ಅವರು ಎಚ್ಚರದಿಂದ ರೂಢಿಸಿ ಕೊಂಡಿದ್ದಾರೆ. ಹೀಗಾಗಿಯೇ ನವೋದಯ ಸಂದರ್ಭದಲ್ಲಿ ಅವರು ತಮ್ಮ ವ್ಯಕ್ತಿತ್ವದ ಆದರ್ಶಗಳನ್ನು ರೂಪಿಸಿಕೊಂಡರೂ ಪ್ರಗತಿಶೀಲ, ನವ್ಯ, ಬಂಡಾಯ ಮೊದಲಾದ ಎಲ್ಲ ಪಲ್ಲಟಗಳಿಗೂ ಮನತೆರೆದವರಾಗಿದ್ದಾರೆ. ಎಲ್ಲ ಪಂಥಗಳನ್ನು ಮೀರಿದ ಸಾಂಸ್ಕೃತಿಕ ವ್ಯಕ್ತಿತ್ವ ವೊಂದನ್ನು ಪಡೆದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಜಿ.ಎಸ್. ಶಿವರುದ್ರಪ್ಪನವರು ನಮ್ಮ Cultural Hero, ಸಾಂಸ್ಕೃತಿಕ ನಾಯಕರೆನ್ನಿಸುತ್ತಾರೆ. ಈ ಗೌರವಕ್ಕೆ ತಕ್ಕ ಜವಾಬ್ದಾರಿ, ಘನತೆ, ವಿದ್ವತ್ತು–ಅವರ ವ್ಯಕ್ತಿತ್ವಕ್ಕಿದೆ. ಎಂಭತ್ತು ಸಾರ್ಥಕ ವಸಂತಗಳನ್ನು ಕಳೆದಿರುವ ಜಿಎಸ್‌ಎಸ್ ನಾಡಿನ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗೆ ಸಾಕ್ಷಿಯಾಗಿ, ಎಲ್ಲವನ್ನೂ ಒಳಗೊಳ್ಳುತ್ತಲೇ ಎಚ್ಚರದ ಪ್ರಜ್ಞೆಯಾಗಿ ನಿಂತು ಪರಿಪಕ್ವ ವ್ಯಕ್ತಿತ್ವವಾಗಿ ರೂಪುಗೊಂಡಿದ್ದಾರೆ. ಈಗ ಅವರದು ನಮ್ಮ ಕಾಲದ ಮಾದರಿ ವ್ಯಕ್ತಿತ್ವ; ಮಾರ್ಗದರ್ಶಕ ವ್ಯಕ್ತಿತ್ವ

*ಪ್ರಸಾರ ದಿನಾಂಕ: ೨೦–೧೧–೦೬*

■■

# ಗೆಳೆಯರಾಗಿ ಜಿ.ಎಸ್.ಎಸ್.

•

*ಡಾ. ಚೆನ್ನವೀರ ಕಣವಿ*

**ಗೆ**ಳೆಯ ಜಿ.ಎಸ್. ಶಿವರುದ್ರಪ್ಪನವರು, ನಾನು, ಸನಿಹ ಭಾವದಲ್ಲಿ ಎಷ್ಟೊಂದು ಸಮರಸರಾಗಿದ್ದೇವೆ ಅಂದರೆ, ನಮ್ಮ ಇಬ್ಬರ ಮೊದಲ ಪರಿಚಯ ಎಂದು ಮತ್ತು ಹೇಗೆ ಆಯಿತು ಎಂಬುದನ್ನೂ ಕೂಡ ಅದು ಮರೆಸಿಬಿಟ್ಟಿದೆ. ಆದರೆ ಇಷ್ಟು ಮಾತ್ರ ನಿಜ. ನಾವಿಬ್ಬರೂ ಇದ್ದ ಮೈಸೂರು ಧಾರವಾಡಗಳ ದೂರವನ್ನು ಕಡಿಮೆ ಮಾಡಿ ಸ್ನೇಹ ಸೇತುವೆಯನ್ನು ನಿರ್ಮಿಸಿದ್ದು ಮಾತ್ರ ಕಾವ್ಯವೇ. ಇನ್ನೂ ಕಾಲೇಜು ವಿದ್ಯಾರ್ಥಿಗಳಾಗಿದ್ದಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ನಮ್ಮ ಕವಿತೆಗಳನ್ನು ಮೆಚ್ಚಿಕೊಂಡು ಪರಸ್ಪರ ಪತ್ರ ಬರೆಯಲು ಪ್ರಾರಂಭಿಸಿದೆವು ಎಂದು ತೋರುತ್ತದೆ. ೧೯೪೮ರಲ್ಲಿ ಜಯಂತಿಯಲ್ಲಿ ಪ್ರಕಟವಾದ ನನ್ನ "ಮೇಘೋಪಾಸನೆ" ಕವಿತೆ ಬಗ್ಗೆ ಅವರು ಅಂಥದೊಂದು ಪತ್ರ ಬರೆದದ್ದು ನನಗೆ ನೆನಪಿದೆ. ಮುಂದೆ ಅವರೊಮ್ಮೆ ಧಾರವಾಡಕ್ಕೆ ಬಂದಾಗ, ಒಂದು ದಿನ ನನ್ನ ರೂಮಿನಲ್ಲಿಯೇ ಇದ್ದರು. ನಾನು ಊಟ ಮಾಡುತ್ತಿದ್ದ ಖಾನಾವಳಿಯ ಜೋಳದ ರೊಟ್ಟಿ ಅವರಿಗೆ ರುಚಿ ಕೊಟ್ಟಿತು. ಈಗಲೂ ಧಾರವಾಡಕ್ಕೆ ಬಂದಾಗ ರೊಟ್ಟಿ ಪಲ್ಲೆ, ಚಟ್ನಿಯ ಊಟವನ್ನೇ ಅವರು ಹೆಚ್ಚು ಪ್ರೀತಿಸುತ್ತಾರೆ.

ದಾವಣಗೆರೆಯ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಜಿ.ಎಸ್.ಎಸ್. ಕೆಲಸ ಮಾಡುತ್ತಿರುವಾಗ ೧೯೫೦ರಲ್ಲಿ ಕಾಲೇಜಿನ ಸೂಪರಿಂಟೆಂಡೆಂಟ್ ಆಗಿದ್ದ ನಾ. ಕಸ್ತೂರಿ ಅವರೊಂದಿಗೆ ಅವರು ಧಾರವಾಡಕ್ಕೆ ಬಂದರು. ಕರ್ನಾಟಕ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಟ್ಟಡಕ್ಕೆ ಅಡಿಗಲ್ಲು ನೆಡುವ ಸಮಾರಂಭ ಅದೇ ಸಂದರ್ಭದಲ್ಲಿ ಡಾ. ರಾಜೇಂದ್ರ ಪ್ರಸಾದ್ ಅವರಿಂದ ನೆರವೇರಿತು. ಆ ಸಂದರ್ಭಕ್ಕಾಗಿಯೇ ನಾ ಕಸ್ತೂರಿಯವರು ಈ ಪ್ರವಾಸವನ್ನು ಯೋಜಿಸಿದ್ದರೆಂದು ತೋರುತ್ತದೆ. ಆಗ ಶಿವರುದ್ರಪ್ಪನವರು ತಮ್ಮ ಮಿತ್ರರೊಂದಿಗೆ ನನ್ನ ರೂಮಿಗೆ ಬಂದರು. ನಾನು ಸ್ಟವ್ ಹೊತ್ತಿಸಿ ಮಾಡಿಕೊಟ್ಟ ಚಹಾವನ್ನು ಎಲ್ಲರೂ ಕುಡಿಯುತ್ತ, ಜೊತೆಗಿದ್ದ ಜಿ. ಬ್ರಹ್ಮಪ್ಪನವರನ್ನು ನಿಮಿತ್ತ ಮಾಡಿಕೊಂಡು, ಪರಸ್ಪರರು ಹಾಸ್ಯದ ಚಟಾಕಿಗಳನ್ನು ಹಾರಿಸುತ್ತ ವಿನೋದವಾಡಿದ್ದು ಇನ್ನೂ ಚೆನ್ನಾಗಿ ನೆನಪಿದೆ. ಮರಳಿ ಹೋಗುವಾಗ ನನಗೂ ದಾವಣಗೆರೆಗೆ ಬರಲು ಆಮಂತ್ರಣ ನೀಡುವುದನ್ನು ಅವರು

ಮರೆಯಲಿಲ್ಲ. ಮುಂದೆ ೧೯೫೧ರಲ್ಲಿ ನಾನು ಮೊದಲ ವರ್ಷ ಎಂ.ಎ. ಮಾಡುವಾಗ ಹೆಚ್.ಎಸ್. ಯೋಗೀಶ್ ನನ್ನ ಜೊತೆಯೇ ಇದ್ದರು. ಅವರೊಡನೆ ನಾನು ದಾವಣಗೆರೆಗೆ ಹೋದಾಗ, ಶಿವರುದ್ರಪ್ಪನವರು ಅದೇ ತಾನೇ ಅಲ್ಲಿ ಸಂಸಾರ ಹೂಡಿದ್ದರು. ಆ ಚಿಕ್ಕ ಚೊಕ್ಕ ಮನೆಯಲ್ಲಿ ನಮಗೆಲ್ಲ ಸೊಗಸಾದ ಊಟವಾಯಿತು. ನಮ್ಮನ್ನು ಕಾಲೇಜಿಗೂ ಕರೆದುಕೊಂಡು ಹೋದದ್ದಲ್ಲದೆ, ತಮ್ಮ ವಿದ್ಯಾರ್ಥಿಗಳೆದುರು ನನ್ನಿಂದ ಒಂದು ಚಿಕ್ಕ ಭಾಷಣವನ್ನೂ ಮಾಡಿಸಿಬಿಟ್ಟರು. ಸಂಜೆ ಬಯಲಲ್ಲಿ ತಿರುಗಾಡಲು ಹೋಗಿ ಒಂದು ದಿಬ್ಬದ ಮೇಲೆ ಕುಳಿತಾಗ ತಾವೂ ಬ್ರಹ್ಮಪ್ಪನವರೂ ಪ್ರತಿ ಸಂಜೆ ಇದೇ ದಿಬ್ಬದ ಮೇಲೆ ಬಂದು ಕೂಡುತ್ತಿದ್ದುದಾಗಿ ಹೇಳಿದರು. ಅವರು ಬರೆದ ಹಾಸ್ಯ ಕವನಗಳಿಗೆ ದಿಬ್ಬಯ್ಯ ಎಂಬ ಕಾವ್ಯನಾಮವನ್ನು ನಾ ಕಸ್ತೂರಿ ಸೂಚಿಸಲು ಈ ದಿಬ್ಬವೇ ಕಾರಣವಂತೆ. ದಾವಣಗೆರೆಯಲ್ಲಿ ಶಿವರುದ್ರಪ್ಪನವರ ಆತ್ಮೀಯ ಗೆಳೆಯರಲ್ಲಿ ಜಯದೇವ್ ಸ್ಪುಡಿಯೋದ ಜಯದೇವ್ ಒಬ್ಬರಾಗಿದ್ದರು. ಆದರೆ ಆ ಸ್ಪುಡಿಯೋದ ನೆನಪು ನನಗೆ ಉಳಿದಿರುವುದು ಬೇರೆ ಕಾರಣದಿಂದ. ಅಲ್ಲಿ ಕುಳಿತಾಗ ತಾವು ಬರೆದ ಕೆಲವು ಕವಿತೆಗಳನ್ನು ಶಿವರುದ್ರಪ್ಪನವರು ಹಾಡಿ ತೋರಿಸಿದರು. "ಅಂಧಕಾರ ಮುತ್ತುತ್ತಿದೆ ಚೆಂದದ ಬೆಳಕಾರುತಿದೆ, ಜೀವ ಜಾತ್ರೆಯಲಿ ಪ್ರಾಣಪಾತ್ರೆಯಲಿ ತುಂಬಿ ಬಾ; ರಸತುಂಬಿ ಬಾ॥ ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ ನಾಲ್ಕು ಹನಿಯ ಚೆಲ್ಲಿ॥ ಇದಾವ ರಾಗ ಇದಾವ ರಾಗ ಎದೆಯಾಳದಿಂದೆದ್ದು ನಭ ನೀಲಿಗೇರುತಿದೆ; ಹೀಗೆ ತಮ್ಮದೇ ಆದ ರಾಗಧಾಟಿಯಲ್ಲಿ ಅಂದು ಅವರು ಹಾಡಿತೋರಿಸಿದ ಪದ್ಯಗಳ ಸಾಲುಗಳು ಇನ್ನೂ ನನ್ನ ಕಿವಿಯಲ್ಲಿ ಅನುರಣಿಸುತ್ತಿವೆ. ಈ ಕವಿತೆಗಳು ಅವರ ಪ್ರಥಮ ಕವನ ಸಂಕಲನದ ಸಾಮಗಾನದಲ್ಲಿ ಆಮೇಲೆ ಪ್ರಕಟವಾದವು. ದಾವಣಗೆರೆಯಿಂದ ಮೈಸೂರಿನ ಯುವರಾಜ ಕಾಲೇಜಿಗೆ ವರ್ಗವಾಗಿ ಅವರು ಹೋದ ಮೇಲೆ ನಮ್ಮ ನಡುವೆ ೭-೮ ವರ್ಷ ಪತ್ರ ವ್ಯವಹಾರ ನಿರಂತರವಾಗಿ ನಡೆಯಿತು. ಪತ್ರಗಳು ಆದಷ್ಟೂ ದೀರ್ಘವಾಗಿರುತ್ತಿದ್ದವು. ಹೊಸದಾಗಿ ಬರೆದ ಕವಿತೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಅಭಿಪ್ರಾಯ ಪಡೆಯುತ್ತಿದ್ದೆವು. ಆಗ ಜಯಂತಿ, ಜಯಕರ್ನಾಟಕದಲ್ಲಿ ಅವರ ಕವಿತೆಗಳು, ಪ್ರಬುದ್ಧ ಕರ್ನಾಟಕದಲ್ಲಿ ನನ್ನ ಕವಿತೆಗಳು ಪ್ರಕಟವಾಗಲು ಈ ಸಂಬಂಧ-ನೆರವು ಕಾರಣವಾಯಿತು. ೧೯೬೩ರಲ್ಲಿ ಶಿವರುದ್ರಪ್ಪನವರು ಉಸ್ಮಾನಿಯಾ ಯೂನಿವರ್ಸಿಟಿಗೆ ಹೋದಮೇಲೆ ನಮ್ಮ ಪತ್ರಗಳ ನಡಿಗೆ ನಿಧಾನವಾಯಿತು. ತಮ್ಮ ಅಂತರಂಗದ ಅನಿಸಿಕೆಗಳನ್ನು ಯಾವ ಸಂಕೋಚವಿಲ್ಲದೆ ಪತ್ರಗಳಲ್ಲಿ ಅವರು ವ್ಯಕ್ತಪಡಿಸಿರುವುದುಂಟು. ನಿಸರ್ಗ ಪ್ರೀತಿ, ಸೌಂದರ್ಯಾನುಭೂತಿ, ಕಾವ್ಯವಿಮರ್ಶೆ, ತತ್ತ್ವನಿಷ್ಠೆ, ವಿನೋದಪರತೆ ಹೀಗೆ ಹಲವಾರು ಅಂಶಗಳು ಅವುಗಳಲ್ಲಿ ವ್ಯಕ್ತಗೊಂಡಿದ್ದು ಇಂದಿಗೂ ಅದೇ ವ್ಯಕ್ತಿತ್ವ ಮತ್ತಷ್ಟು ದೃಢವಾಗಿ ಮೈದುಂಬಿಕೊಂಡು ಬೆಳೆದು ಪಕ್ವವಾಗಿರುವುದನ್ನು ಕಾಣಬಹುದು.

ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಳ್ಳುವುದು ಅವರ ಪ್ರಿಯವಾದ ಹವ್ಯಾಸಗಳಲ್ಲಿ ಒಂದು. ಮಾಸ್ಕೋದಲ್ಲಿ ೨೨ ದಿನ, ಅಮೆರಿಕದಲ್ಲಿ ಕನ್ನಡಿಗ ಇವೇ ಮೊದಲಾದ ಪ್ರವಾಸ ಕಥನಗಳಲ್ಲಿ ಕಾವ್ಯ ಸತ್ತ್ವಗಳಿಂದ ಕೂಡಿದ ಅವರ ಬರವಣಿಗೆಯ ಸೊಗಸನ್ನು ಸವಿಯಬಹುದು.

ಒಂದು ದಸರಾ ರಜೆಯಲ್ಲಿ ಕೊಡಗಿನ ರಸವಿಹಾರವನ್ನು ಮುಗಿಸಿಕೊಂಡು ಬಂದಿದ್ದನ್ನು ಅವರು ಒಂದು ಪತ್ರದಲ್ಲಿ ಬಣ್ಣಿಸುತ್ತ ಹೀಗೆ ಬರೆದಿದ್ದರು.

"ಹೊಸದಾಗಿ ಕಂಡವರಿಗೆ ಅದು ಅಲಕಾವತಿಯೇ. ಏಕೆಂದರೆ ನಮ್ಮ ಕಾಲು ನೆಲದಲ್ಲಿದ್ದರೆ, ತಲೆ ಅಷ್ಟು ಹತ್ತಿರ ಅಲ್ಲಿ ಆಕಾಶ ಅದೂ ಮೋಡವಾದಾಗ, ಮೋಡ ಚದುರಿ ಬಾನು ತಿಳಿಯಾದಾಗ, ಬಲು ದೂರ." ಪತ್ರದ ಜೊತೆಗೆ ಆಗ ಬರೆದ "ಮಡಿಕೇರಿಯ ರಾಜಾಸೀಟ್ ಮೇಲಿಂದ" ಎಂಬ ಕವಿತೆಯನ್ನೂ ನನಗೆ ಅವರು ಕಳಿಸಿಕೊಟ್ಟಿದ್ದರು. ಇದು ಬಹುಶಃ ಅವರ ಯಾವ ಕವನ ಸಂಕಲನದಲ್ಲಿಯೂ ಬಂದಹಾಗಿಲ್ಲ. ಮಾನವ ಸಂಬಂಧಗಳಲ್ಲಿ ಗುಣಗೌರವದ ಆಯ್ಕೆ ಇದ್ದೇ ಇರುತ್ತದೆ. ಪುತಿನ ಅವರ ಪ್ರಥಮ ದರ್ಶನದ ಬಗ್ಗೆ ಮುಂದಿನ ಪತ್ರದಲ್ಲಿ ಅವರು ಹೀಗೆ ಬರೆದರು. "ಮಡಿಕೇರಿಯಿಂದ ಬಂದವನೇ ಬೆಂಗಳೂರಿಗೆ ನನ್ನ ಗೆಳೆಯರೊಡನೆ ಹೋದೆ. ಅಲ್ಲಿ ಕವಿ ಪುತಿನ ಅವರ ದರ್ಶನವಾಯಿತು. ಅವರ ಮನೆಯಲ್ಲಿ ರಸದೂಟವೂ ಆಯಿತು ಒಂದು ದಿನ. ಎಂತೆಂಥ ಹಿರಿಯ ವ್ಯಕ್ತಿಗಳಿದ್ದಾರೆ ಅಲ್ಲಲ್ಲಿ ಎನಿಸಿತು. ಅವರು ಒಳಗೂ ಮೃದು, ಹೊರಗೂ ಮೃದು. ತರುಣ ಲೇಖಕರ ಮೇಲೆ ಅಮಿತ ವಾತ್ಸಲ್ಯ ಅವರಿಗೆ ನಮ್ಮನ್ನು ಕಂಡು ಏನೋ ಒಂದು ಭರವಸೆ. ನಿಮ್ಮ ಹೆಸರನ್ನೂ ಹೇಳಿದರು. ಧಾರವಾಡದಲ್ಲಿ ನಿಮ್ಮನ್ನು ನೋಡಿದ್ದರಂತೆ." ಹೌದು. ಪುತಿನ ಅವರನ್ನು ಮೊದಲ ಸಲ ಧಾರವಾಡದಲ್ಲಿ ಕಂಡಾಗ ನನಗೂ ಇದೇ ಅನುಭವವಾಯಿತು. ಶಿವರುದ್ರಪ್ಪನವರ ಸ್ನೇಹ ನನಗೆ ಸಾಹಿತ್ಯ ಲೋಕದ ಹಲವಾರು ಹಿರಿಯ ವ್ಯಕ್ತಿಗಳ ಮಧುರ ಬಾಂಧವ್ಯವನ್ನು ಕಲ್ಪಿಸಿಕೊಟ್ಟಿರುವುದುಂಟು. ನಮ್ಮ ಕವನ ಸಂಕಲನಗಳು ಪ್ರಕಟವಾದೊಡನೆಯೇ ಪರಸ್ಪರ ವಿನಿಮಯಗೊಳ್ಳುತ್ತಿದ್ದವು. ನಮ್ಮ ನಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಪತ್ರಗಳಲ್ಲಿ ಹಂಚಿಕೊಳ್ಳುತ್ತಿದ್ದೆವು. ಅವರ ಅನೇಕ ವಿಮರ್ಶಾತ್ಮಕ ನುಡಿಗಳಿಂದ ನಾನು ತುಂಬಾ ಪ್ರಯೋಜನ ಪಡೆದಿದ್ದೇನೆ. ಅವರ ಪ್ರಥಮ ಸಂಕಲನ ಸಾಮಗಾನದ ಬಗ್ಗೆ ಬರೆದ ನನ್ನ ಪತ್ರದಲ್ಲಿ ಕುವೆಂಪು ಪ್ರಭಾವದಿಂದ ಪಾರಾಗಲು ಪ್ರಯತ್ನಿಸಬೇಕೆಂದು ನಾನು ಸೂಚಿಸಿದ್ದೆ ಎಂದು ತೋರುತ್ತದೆ. ಅವರು ಕೂಡಲೇ ಉತ್ತರದಲ್ಲಿ ಬರೆದದ್ದು ಹೀಗೆ, "ಸನಿಹ ಪೂರ್ವವಾದ ನಿಮ್ಮ ನಿರ್ದೇಶನವಾಣಿಗೆ ಮಣಿದೆ. ನೀವು ಹೇಳುವುದೆಲ್ಲ ನಿಜ. ಮುಂದೆ, ಎಚ್ಚರಿಕೆಯಿಂದ ಅನ್ಯ ಪ್ರಭಾವದ ರಾಹುವಿನಿಂದ ಮುಕ್ತನಾಗಲು ಪ್ರಯತ್ನಿಸುತ್ತೇನೆ. ಮನಸ್ಸಿಗೂ ಒಂದು ಬೆಳವಣಿಗೆ ಉಂಟು. ಮಿತ್ರರ ಎಚ್ಚರಿಕೆಯಿಂದ, ಹಿರಿಯರ ಹರಕೆಯಿಂದ ಸೂಕ್ಷ್ಮವಾದ ಆತ್ಮನಿರೀಕ್ಷಣೆಯಿಂದ ತನ್ನ ವ್ಯಕ್ತತೆಯಲ್ಲಿ ತನ್ನ ಮುಕ್ತಿಯ ಕಂಡು ಈ ಜೀವ ಸಫಲತೆಯನ್ನು ಪಡೆಯಬಹುದು ಎಂಬ ಆಸೆಯುಂಟು. ನಮ್ಮ ಪ್ರಯತ್ನಗಳ ಹಿಂದೆ ನಮ್ಮ ಏಳುಬೀಳುಗಳ ಸೂತ್ರ ಹಿಡಿದ ಶಕ್ತಿಯೊಂದು ಉಂಟಲ್ಲ. ಯಾರು ಶಕ್ತಿಯೋ ಅದೇ ದಾರಿಯೂ ಆಗಿ ಬೆಳಕೂ ಆದೀತು." ಆಗಲೇ ಎಂತಹ ವಿವೇಕಪೂರ್ಣ ವಿವೇಚನೆ! "ಜೀವನದ ಕಹಿ ನನ್ನ ಅನುಭವಕ್ಕೆ ಧಾರಾಳವಾಗಿ ದಯಮಾಡಿಸಿದೆ. ಮೊದಲಿನಿಂದ ಇದುವರೆಗೂ ಸಿಹಿಗಿಂತ ಕಹಿಯನ್ನೇ ಹೆಚ್ಚಾಗಿ ಸವಿದರೂ, ನನ್ನ ಕವನಗಳಲ್ಲಿ ಆ ತುಮುಲ ಅಷ್ಟೊಂದು ಸ್ಪಷ್ಟವಾಗಿ ಮೂಡಿಬಂದಂತೆ ತೋರದೆ ಇರುವುದು ನನಗೇ ಆಶ್ಚರ್ಯ. ಬಹುಶಃ ಅದೆಲ್ಲವೂ "ಮುಂದೆ

ಕಟ್ಟುವುದು ಬುತ್ತಿ ಸರ್ವಜ್ಞ" ಎಂಬ ರೀತಿಯದೋ ಏನೋ.. ಇದು, ಶಿಳ ವರ್ಷಗಳ ಹಿಂದಿನ ಮಾತು. ಅವರ ಮುಂದಿನ ಕವನ ಸಂಗ್ರಹಗಳಲ್ಲಿ ಆ ಕಟ್ಟಿದ ಬುತ್ತಿಯನ್ನು ಧಾರಾಳವಾಗಿ, ಆದರೆ ಕಾವ್ಯದ ದೃಷ್ಟಿಯಿಂದ ರುಚಿಕರವಾಗಿ ಹಾಗೂ ಆರೋಗ್ಯಕರವಾಗಿ ಹಂಚಿಕೊಂಡಿದ್ದಾರೆಂಬುದನ್ನು ಕಾವ್ಯ ಪ್ರೇಮಿಗಳೆಲ್ಲರೂ ಬಲ್ಲರು. ಸಮಕಾಲೀನ ಬದುಕಿಗೆ ನಿರಂತರ ಸ್ಪಂದಿಸುತ್ತಾ ಮಾನವ ಸಂಬಂಧಗಳು ಶಿಥಿಲಗೊಂಡಿರುವುದನ್ನು ಕಂಡು ವಿಷಾದ ವ್ಯಕ್ತಪಡಿಸುತ್ತಲೇ ಹಣತೆ ಹಚ್ಚುತ್ತೇನೆ ನಾನೂ ಎಂಬ ಆಶಾವಾದವನ್ನು ಅವರು ಆರದಂತೆ ನೋಡಿಕೊಂಡಿದ್ದಾರೆ. ಕನ್ನಡ ಕಾವ್ಯದಲ್ಲಿ ನವ್ಯತೆ ಕಾಲಿಟ್ಟ ಕಾಲದಲ್ಲಿ ನಾವು ಪರಸ್ಪರ ಚರ್ಚಿಸಿದ್ದುಂಟು. ಅಂದು ಅವರು ಬರೆದ ಪತ್ರದಲ್ಲಿ "ನವ್ಯತೆಯ ಬಗ್ಗೆ ನನಗೆ ರೋಮಾಂಚಕತೆ ಇಲ್ಲ. ಏಕೆಂದರೆ, ನಿಜವಾದ ನವ್ಯತೆ ಒಂದು ರಚನೆಯಲ್ಲ ವಿಕಾಸ. ನನ್ನ ಒಳಗಿನ ನವ್ಯಕವಿ ತಾನೊಬ್ಬ ಭಾರತೀಯ ಎಂಬುದನ್ನು ಎಂಥ ಹೊತ್ತಿನಲ್ಲೂ ಮರೆಯುವುದಿಲ್ಲ" ಎಂಬ ಮಾತುಗಳಿವೆ. ಕುವೆಂಪು ಉನ್ನತ ಮಟ್ಟದ ಕವಿಯಾಗಿ, ಮಹಾಲೇಖಕರಾಗಿ ಮೊದಲಿನಿಂದಲೂ ನನ್ನ ಮನಸ್ಸನ್ನು ತುಂಬಿಕೊಂಡಿದ್ದುಂಟು. ರಾಮಾಯಣ ದರ್ಶನದ ರಚನೆ ಕಾಲದಲ್ಲಿಯೇ ಅದರ ಹಿರಿಮೆ ಹಾಗೂ ವೈಶಿಷ್ಟ್ಯದ ಬಗ್ಗೆ ಶಿವರುದ್ರಪ್ಪನವರಿಂದ ಪತ್ರಗಳ ಮೂಲಕ ಆಗಾಗ ಕೆಲವು ವಿಷಯಗಳನ್ನು ತಿಳಿದು, ಆ ಬಗ್ಗೆ ನನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೆ. ಅವರ ವಿಮರ್ಶಕ ಶಕ್ತಿ ಎಷ್ಟೊಂದು ಸೂಕ್ಷ್ಮತೆ ಪಡೆದುಕೊಂಡಿತ್ತು ಎಂಬುದನ್ನು ನಾನು ಕಂಡುಕೊಂಡಿದ್ದೆ. ಅತ್ತಲಾದ ಇತ್ತ ಸಭೆಯೋಳ್, ದಶಾನನ ಸ್ವಪ್ನಸಿದ್ಧಿ ಇವೇ ಮೊದಲಾದ ಅಧ್ಯಾಯಗಳನ್ನು ಕುವೆಂಪು, ಅವರೆದುರಿಗೆ ಓದಿ ಓದಿ ವಿವರಿಸಿದ್ದನ್ನು ಪತ್ರಗಳಲ್ಲಿ ಬರೆದಾಗ, ನಾನೂ ಅವರ ಜೊತೆಗೆ ಅಲ್ಲಿ ಭಾಗವಹಿಸಿದ್ದನೇನೋ ಎಂಬ ಭಾವನೆ ನನಗೆ ಉಂಟಾಗುತ್ತಿತ್ತು. "ಭಾಷೆ ಮತ್ತು ಭಾವಗಳ ಮೇಲೆ ಅವರಿಗೆ ಹತೋಟಿ ಇದೆ. ಚೆನ್ನಾಗಿ ಬರೆಯುತ್ತಾರೆ. ನವ್ಯತೆಯನ್ನು ಕೂಡಲೇ ತರಬೇಕೆಂಬ ಹಟವೇನೂ ಕಾಣುವುದಿಲ್ಲವಾದ್ದರಿಂದ ಅವರು ಮುಂದುವರೆದಂತೆ ಸಹಜವಾಗಿ ನವ್ಯತೆ ತಾನೇ ಬರುತ್ತದೆ." ಹೀಗೆ ನನ್ನ ಕಾವ್ಯದ ಬಗ್ಗೆ ಕುವೆಂಪು ಹೇಳಿದರು ಎಂದು ಶಿವರುದ್ರಪ್ಪನವರು ನನಗೆ ತಿಳಿಸಿದ್ದುಂಟು. ಅಂದಿನ ಸಂದರ್ಭದಲ್ಲಿ ಇಂತ ಮಾತುಗಳು ನನ್ನ ಕಾವ್ಯರಚನೆ ದೃಷ್ಟಿಯಿಂದ ನನಗೆ ತುಂಬಾ ಪ್ರೋತ್ಸಾಹದಾಯಕವಾಗಿ ಪರಿಣಮಿಸಿತು ಎಂಬುದನ್ನು ಹೇಳಬೇಕಿಲ್ಲ.

ಶಿವರುದ್ರಪ್ಪನವರು ಗಂಭೀರ ಪ್ರವೃತ್ತಿಯವರಂತೆ ತೋರಿದರೂ ಹಾಸ್ಯಕ್ಕೆ, ವಿನೋದಕ್ಕೆ ಅವರ ಮನಸ್ಸು ಅಷ್ಟೇ ತೆರೆದುಕೊಂಡಿರುತ್ತದೆ. ಈ ವಿಷಯದಲ್ಲಿಯೂ ನಮ್ಮದು ಸಮಾನ ಮನೋಧರ್ಮ. ಅವರ ಜೊತೆಗೆ ಆತ್ಮೀಯವಾಗಿ ಸಂಭಾಷಣೆಗೆ ತೊಡಗಿದವರೆಲ್ಲರಿಗೂ ಅದರ ಅನುಭವ ಆಗದೆ ಇಲ್ಲ. ನಾವಿಬ್ಬರೂ ಪರಸ್ಪರ ಭೇಟಿಯಾದಾಗ ಅನೇಕ ವೈಯಕ್ತಿಕ ಸಾಮಾಜಿಕ ಹಾಗೂ ಸಾಹಿತ್ಯಿಕ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುವುದುಂಟು. ಕೆಲವು ವಿಷಯಗಳ ಬಗ್ಗೆ ಒಂದು ಬಗೆಯ ತಳಮಳ, ಚಡಪಡಿಕೆ ಹಾಗೂ ಅನ್ಯಾಯಗಳ ಬಗ್ಗೆ ತೀವ್ರ ಪ್ರತಿಕ್ರಿಯೆ ಅವರು ವ್ಯಕ್ತಪಡಿಸಿದ್ದೂ ಉಂಟು. ಆದರೆ, ಮರುಕ್ಷಣದಲ್ಲೇ ಸಹಜವಾದ ಸಮುಚಿತವ ರೀತಿಗೆ ಅವರು ಬಂದುಬಿಡುತ್ತಾರೆ. ಒಳಗೊಂದು ಮುಖ ಹೊರಗೊಂದು

ಮುಖ ಎಂಬ ಮಾತೇ ನಮ್ಮಲ್ಲಿಲ್ಲ. ಇಬ್ಬರಲ್ಲೂ ಗುಣ ಸ್ವೀಕಾರ ದೃಷ್ಟಿ ಇರುವುದರಿಂದ ನಮ್ಮ ನಡುವೆ ಭಿನ್ನಾಭಿಪ್ರಾಯಗಳು ಬಹಳ ಕಡಿಮೆ.

ವಿಮರ್ಶೆ ಹಾಗೂ ಕಾವ್ಯಮೀಮಾಂಸೆ ಕ್ಷೇತ್ರಕ್ಕೂ ಅವರು ನೀಡಿದ ಕೊಡುಗೆಯು ಅಷ್ಟೇ ಮಹತ್ವದ್ದು. ಮೊದಲಿನಿಂದಲೂ ಅವರು ಒಂದು ಸಮಗ್ರ ದೃಷ್ಟಿಯನ್ನಿಟ್ಟುಕೊಂಡೇ ಬಂದವರು. ಅವರಿಗೆ ಇಡೀ ಕನ್ನಡ ಸಾಹಿತ್ಯದ ಕುರಿತು ಸಮಗ್ರ ಅಧ್ಯಯನವಿದೆ. ಜೊತೆಗೆ ಪಾಶ್ಚಾತ್ಯ ವಿಮರ್ಶೆ, ಪಾಂಡಿತ್ಯ ಹಾಗೂ ಕವಿತ್ವ ಈ ಮೂರು ಗುಣಗಳೂ ಅವರಲ್ಲಿ ಇರುವುದರಿಂದ ಅವರ ವಿಮರ್ಶೆಗೆ ಒಳ್ಳೆ ತೂಕ ಇರುವುದನ್ನು ನಾನು ಮೊದಲಿನಿಂದಲೂ ಕಂಡುಕೊಂಡಿದ್ದೇನೆ. ೧೯೯೧ರಲ್ಲಿ ನಮ್ಮಿಬ್ಬರ ಕಾವ್ಯದ ತೌಲನಿಕ ವಿವೇಚನೆಯ ಗೋಷ್ಠಿಯೊಂದರ ಮುಕ್ತಾಯ ಸಂದರ್ಭದಲ್ಲಿ ಶಿವರುದ್ರಪ್ಪನವರು ಆನುಸಂಗಿಕವಾಗಿ ಮಾತನಾಡುತ್ತಾ ಹೇಳಿದರು, "ನಾವಿಬ್ಬರೂ ಸಮಕಾಲೀನರು. ಉತ್ತರ ಕರ್ನಾಟಕದ ಕವಿ ಬೇಂದ್ರೆಯವರ ಕಾವ್ಯೋತ್ಸಾಹದ ಗಾಳಿಯಲ್ಲಿ ಅವರು, ಇತ್ತ ದಕ್ಷಿಣದ ಮೈಸೂರಿನ ಕವಿ ಕುವೆಂಪು ಅವರ ಪ್ರಭಾವ ಪರಿಸರದಲ್ಲಿ ನಾನು ನಮ್ಮ ಕಾವ್ಯ ಜೀವನವನ್ನ ಪ್ರಾರಂಭ ಮಾಡಿಕೊಂಡು ಬೆಳೆದವರು. ನಮ್ಮಿಬ್ಬರ ಕಾವ್ಯದಲ್ಲಿ ಸಾಕಷ್ಟು ಸಾಮ್ಯವಿದೆ ಎಂದು ಕೆಲವು ವಿಮರ್ಶಕರು ಹೇಳುತ್ತಾರೆ. ಆ ಸಾಮ್ಯದ ಮುಖ್ಯ ಲಕ್ಷಣವೆಂದರೆ ನನಗೆ ತೋರುವ ಮಟ್ಟಿಗೆ, ನಾವಿಬ್ಬರೂ ಹೊಸಗನ್ನಡ ಕಾವ್ಯದ ಹಲವು ಸಾಹಿತ್ಯ ಚಳುವಳಿಗಳನ್ನು ಹಾದು ಬಂದರೂ, ಆ ಯಾವ ಚಳುವಳಿಯೊಂದಿಗೂ ವೈಯುಕ್ತಿಕ ವಾದ ಗಾಢವಾದ ಸಂಬಂಧಗಳನ್ನು ಇರಿಸಿಕೊಳ್ಳಲಿಲ್ಲ ಎನ್ನುವುದು. ಹಾಗೆ ಸಂಬಂಧವನ್ನು ಇರಿಸಿಕೊಳ್ಳದೆ ನಮ್ಮದೇ ಆದ ಪ್ರತ್ಯೇಕ ನಿಲುವುಗಳನ್ನು ಉಳಿಸಿಕೊಂಡೆವು ಎನ್ನುವುದು. ನಮ್ಮ ಬರಹಗಾರರನ್ನು ಆಯಾ ಸಾಹಿತ್ಯ ಚಳುವಳಿಗಳ ಚೌಕಟ್ಟಿನಲ್ಲಿ ಇರಿಸಿ ಚರ್ಚೆ ಮಾಡುವುದನ್ನೇ ಇಷ್ಟಪಟ್ಟ ನಮ್ಮ ಸಾಹಿತ್ಯ ವಿಮರ್ಶೆ ಈ ಚಳುವಳಿಗಳಿಂದ ಆಚೆಗೆ ನಿಂತು ಬರೆದ ನಮ್ಮಂತಹವರ ಬಗೆಗೆ ಅಂತ ಉತ್ಸಾಹವನ್ನೇನೂ ತೋರಿಸಲಿಲ್ಲ. ಆದರೆ ಸಂಪೂರ್ಣ ನಿರ್ಲಕ್ಷಿಸಲೂ ಅದಕ್ಕೆ ಸಾಧ್ಯವಾಗದ ಕಾರಣ ಮತ್ತು ನಮ್ಮಂತಹವರ ಬರಹವನ್ನು ಯಾವ ಚೌಕಟ್ಟಿನಲ್ಲಿ ಇರಿಸಿ ಚರ್ಚಿಸಬಹುದು ಎಂಬುದನ್ನು ತಿಳಿಯದೆ ಗೊಂದಲಕ್ಕೆ ಬಿದ್ದ ಕಾರಣ, ನನ್ನ ಹಾಗೂ ಕಣವಿಯವರ ಕಾವ್ಯವನ್ನು ಸಮನ್ವಯ ಕಾವ್ಯ ಎಂದೂ, ನಮ್ಮನ್ನು ಸಮನ್ವಯ ಕವಿಗಳೆಂದೂ ಹಣೆ ಚೀಟಿ ಅಂಟಿಸಿ ಕೈತೊಳೆದುಕೊಂಡಿತು" ಎಂದು ಯಾವುದನ್ನು ನಾನು ಆ ಮೊದಲೇ ಸೌಮ್ಯವಾಗಿ ಹೇಳಿದ್ದೆನೋ ಅದನ್ನೇ ಶಿವರುದ್ರಪ್ಪನವರು ನಿಷ್ಠುರವಾಗಿ ನುಡಿದಿದ್ದರು. ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ಜಿ.ಎಸ್. ಆಮೂರ ಅವರು, ಅದನ್ನು ಸಮರ್ಥಿಸುತ್ತ "ಇದು ಬಹಳ ಯೋಗ್ಯವಾದ ಸಂಗತಿ. ಯಾಕೆಂದರೆ ಒಳ್ಳೆಯ ಕವಿಗೆ ಯಾವ ಹಣೆಚೀಟಿಯೂ ಬೇಡ. ಪಂಪ, ರನ್ನ, ಕುಮಾರವ್ಯಾಸ, ಹರಿಹರ, ಹಾಗೇ ಇವತ್ತು ಆಧುನಿಕ ಕನ್ನಡ ಕಾವ್ಯ ಸಂದರ್ಭದಲ್ಲಿ ಬೇಂದ್ರೆ, ಕುವೆಂಪು, ಕಣವಿ, ಶಿವರುದ್ರಪ್ಪ ಹೀಗೇ ಹೇಳಬಹುದೇ ಹೊರತು ಯಾವ ಒಂದು ಪಂಗಡವನ್ನಾಗಲೀ ಹಣೆ ಚೀಟಿ ಅಂಟಿಸಿಕೊಂಡಿರುವ ಒಬ್ಬ ಕವಿಯನ್ನು ಗುರುತಿಸಲು ಸಾಧ್ಯವಿಲ್ಲ. ಇಂತಹ ಕೆಲಸ ಯಾವ ಸಾಹಿತ್ಯದಲ್ಲೂ ನಡೆಯುವುದಿಲ್ಲ" ಎಂದು ಹೇಳಿದರು.

ಇಂದು, ಸುವರ್ಣ ಕರ್ನಾಟಕ ಉತ್ಸವದ ಸಂದರ್ಭದಲ್ಲಿ ರಾಷ್ಟ್ರಕವಿ ಪ್ರಶಸ್ತಿಗೆ ಅವರು ಭಾಜನರಾಗಿರುವುದು ಕನ್ನಡಿಗರಿಗೆಲ್ಲ ತುಂಬ ಸಂತೋಷವನ್ನುಂಟುಮಾಡಿದೆ. ಕನ್ನಡ ಪರಂಪರೆಯ ಶ್ರೇಷ್ಠ ಪ್ರತಿನಿಧಿಯಾಗಿ ನಾಡಿನ ಹಾಗೂ ದೇಶದ ಆಗುಹೋಗುಗಳಿಗೆ ಸಾಕ್ಷಿಪ್ರಜ್ಞೆಯಂತೆ ತಮ್ಮ ಬದುಕು ಬರಹಗಳನ್ನು ರೂಪಿಸಿಕೊಂಡ ಸಾಂಸ್ಕೃತಿಕ ಚೇತನವೊಂದಕ್ಕೆ ದೊರೆತ ಗೌರವ ಇದು ಎಂದು ನಾನು ಭಾವಿಸಿದ್ದೇನೆ. ಅವರೊಂದಿಗೆ ನನ್ನ ಸ್ನೇಹವನ್ನು ಹೀಗೆ ಆಪ್ತತೆಯಿಂದ ಮೆಲುಕು ಹಾಕುತ್ತಿರುವಾಗ ಎಸೀ ಅವರ ಕವಿತೆಯ ಸಾಲುಗಳು ನೆನಪಾಗುತ್ತವೆ.

ಸ್ವರ್ಗದೊಳಗೀ ಸ್ನೇಹ ದೊರೆವುದೇನು?
ಈ ಪರಿಯ ಸೌಹಾರ್ದಕ್ಕೆಳೆಯ ವೈಭವವು
ಇಲ್ಲಿದರೆ ಎನಗಿಲ್ಲೆ, ನೂರು ಜನ್ಮಗಳಿರಲಿ
ಎಲ್ಲ ಪರಿಮಮತೆಗಳ ಸತ್ಯ ಜೀವನವು.ಸ

*ಪ್ರಸಾರ ದಿನಾಂಕ: ೨೧-೧೧-೦೬*

■■

# ನಮ್ಮ ಮೇಷ್ಟ್ರು

●

## ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ ಕಾಲದಿಂದ ರೂಪಿತವಾದ ಒಂದು ಆಚಾರ್ಯ ಪರಂಪರೆ ಇದೆ. ವಿದ್ವತ್ತು, ವ್ಯುತ್ಪತ್ತಿ, ಜ್ಞಾನ, ಕಾಯಕನಿಷ್ಠೆಗಳ ಜೊತೆಗೆ ವೃತ್ತಿಪ್ರೇಮ, ಶಿಷ್ಯವಾತ್ಸಲ್ಯಕ್ಕೆ ಹೆಸರಾದ ಗುರುಪರಂಪರೆ ಅದು. ಬಿ.ಎಂ.ಶ್ರೀ., ತೀನಂಶ್ರೀ, ಕುವೆಂಪು, ಡಿ.ಎಲ್.ಎನ್. ರಾಜರತ್ನಂ ಮೊದಲಾಗಿ ಕನ್ನಡವನ್ನು ಕಟ್ಟಿ ಬೆಳೆಸಿದ ಮಹಾಚೇತನಗಳು ಆ ಪರಂಪರೆಯ ನಿರ್ಮಾತೃಗಳು ಹಾಗೂ ಪ್ರವರ್ತಕರು. ಕನ್ನಡವನ್ನು ಕನ್ನಡ ಸಾಹಿತ್ಯವನ್ನು ಬೋಧಿಸುವುದೆಂದರೆ ಅವರಿಗೆ ಕೇವಲ ಪಠ್ಯಕ್ಕೆ ಸೀಮಿತವಾಗಿ ಭಾಷೆ ಸಾಹಿತ್ಯವನ್ನು ಬೋಧಿಸುವುದಲ್ಲ; ಜಗತ್ತಿನ ಹಲವು ಸಾಹಿತ್ಯ ಪರಂಪರೆಗಳ ತೌಲನಿಕ ಅಧ್ಯಯನದ ವ್ಯಾಪ್ತಿಯಲ್ಲಿ ವಿಷಯವನ್ನು ವಿಸ್ತರಿಸುವುದು. ತನ್ಮೂಲಕ ವಿದ್ಯಾರ್ಥಿಗಳನ್ನು ಜ್ಞಾನಪಿಪಾಸುಗಳನ್ನಾಗಿ ಅಧ್ಯಯನಶೀಲರನ್ನಾಗಿ ರೂಪಿಸುವುದು ಅವರ ಗುರಿಯಾಗಿರುತ್ತಿತ್ತು. ಇಂದಿಗೂ ನಮಗೆ ಈ ಆಚಾರ್ಯ ಪರಂಪರೆ ಒಂದು ಆದರ್ಶ, ಒಂದು ಮಾದರಿ.

ನಾನು ಈ ಆಚಾರ್ಯ ಪರಂಪರೆಯ ಆದಿ ಗುರುಗಳಿಂದ ನೇರವಾಗಿ ಪಾಠ ಕಲಿತವನಲ್ಲ. ಅವರ ಆಪ್ತಶಿಷ್ಯರ ಶಿಷ್ಯನಾಗಿ ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡಿದವನು.

ಈ ಆಚಾರ್ಯ ಪರಂಪರೆಯಲ್ಲಿ ಕುವೆಂಪು ಬಹು ದೊಡ್ಡ ಹೆಸರು. ಕವಿಯಾಗಿ, ಸಂಸ್ಕೃತಿ ಚಿಂತಕರಾಗಿ, ವೈಚಾರಿಕ ಜಾಗೃತಿಯ ನೆಲೆಯಲ್ಲಿ ಪ್ರತಿಸಂಸ್ಕೃತಿ ನಿರ್ಮಾತೃವಾಗಿ ಕುವೆಂಪು ಅವರ ಸಾಧನೆ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಮೇರುಸದೃಶವಾದುದು. ಕನ್ನಡ ಸಾಹಿತ್ಯದ ಶೂದ್ರ ತಪಸ್ವಿಯಾಗಿ ಸಾಧನೆಗೈದ ಕುವೆಂಪು ಕನ್ನಡದ ಭಾವ ಪ್ರಪಂಚವನ್ನು ಜೀವಕೇಂದ್ರಿತ ವಿಸ್ತಾರದಲ್ಲಿ ಶ್ರೀಮಂತಗೊಳಿಸಿದವರು. ಹಾಗೆಯೇ ಕನ್ನಡದ ವೈಚಾರಿಕ ಪ್ರಜ್ಞೆಯನ್ನು ಸಾಮಾಜಿಕ ನ್ಯಾಯದ ತಕ್ಕಡಿಯಲ್ಲಿ ವಿವೇಚನೆಗೆ ಒಡ್ಡಿದಂತೆ ನಿರಂಕುಶಮತಿಯಾಗಿ ಬೆಳೆಸಿದರು. ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಒಂದು ವಿಶ್ವವಿದ್ಯಾಲಯದ ಕುಲಪತಿಯಾಗಿ ದಕ್ಷ ಆಡಳಿತ ನೀಡಿ ಶಿಕ್ಷಣ ಕ್ಷೇತ್ರವನ್ನು ವೈಜ್ಞಾನಿಕ, ವೈಚಾರಿಕ ಎಚ್ಚರದ ಸಂಸ್ಕೃತಿ ಕೇಂದ್ರವಾಗಿ ಮುನ್ನಡೆಸಿದರು. ಇಂಥ ಈ ಕನ್ನಡ ಗುರುವಿನ ಪರಮಾಪ್ತ ಶಿಷ್ಯರು ಡಾ. ಜಿ.ಎಸ್.

ಶಿವರುದ್ರಪ್ಪನವರು. ನನಗೆ ಕುವೆಂಪು ಶಿಷ್ಯನಾಗುವ ಭಾಗ್ಯ ಬರಲಿಲ್ಲ. ಆದರೆ ಕುವೆಂಪು ಪರಮಾಪ್ತ ಶಿಷ್ಯರಾದ ಜಿ.ಎಸ್.ಎಸ್. ಅವರ ಶಿಷ್ಯನಾಗಿ ಕಲಿಯುವ ಅವಕಾಶ ಒದಗಿಬಂದದ್ದು ನನ್ನ ಬಾಳಿನ ವಿಶೇಷವೆಂದೇ ಭಾವಿಸಿದ್ದೇನೆ.

ಸಿದ್ಧವನಹಳ್ಳಿ ಕೃಷ್ಣಶರ್ಮರು ಗಾಂಧೀಜಿಯವರನ್ನು ಕುರಿತುಬರೆದ 'ಪರ್ಣಕುಟಿ' ಎಂಬ ಪುಸ್ತಕದಲ್ಲಿ ಒಂದು ಪ್ರಸಂಗ ಬರುತ್ತದೆ. ಒಮ್ಮೆ ಭಾರತದ ಪಾದ್ರಿಯೊಬ್ಬ ಜರ್ಮನಿಗೆ ಹೋಗಿದ್ದಾಗ ನಡೆದ ಘಟನೆ ಇದು. ಅಲ್ಲಿ ಆ ಪಾದ್ರಿ ಚರ್ಚಿನ ರೆವರೆಂಡ್ ಫಾದರ್ ಅವರನ್ನು ಕಾಣಲು ಹೋಗುತ್ತಾನೆ. ದ್ವಾರಪಾಲಕ ಇವರು ನೀಡಿದ ವಿಸಿಟಿಂಗ್ ಕಾರ್ಡನ್ನು ನೋಡಿ Are you from Gandhinad?! ಎಂದು ವಿಸ್ಮಯಭಾವದಲ್ಲಿ ಪ್ರಶ್ನಿಸುತ್ತಾನೆ. ಈ ಪಾದ್ರಿಗೆ ಆಶ್ಚರ್ಯ ಹಾಗೂ ರೋಮಾಂಚನ. "ಇದೇನಿದು ಇವನು ಭಾರತವನ್ನು ಗಾಂಧೀನಾಡು ಎಂದು ಕರೆಯುತ್ತಿದ್ದಾನಲ್ಲ" ಎಂದು. ಆಗ ಪಾದ್ರಿ 'ಹೌದು ನಾನು ಗಾಂಧೀನಾಡಿನವನು. ನಾನು ಗಾಂಧಿಯನ್ನು ಕಂಡಿದ್ದೇನೆ. ಅಷ್ಟೇ ಅಲ್ಲ ಅವರ ಜೊತೆ ಮಾತೂ ಕೂಡ ಆಡಿದ್ದೇನೆ' ಎಂದು ಹೇಳುತ್ತಾನೆ. ತಕ್ಷಣ ಆ ದ್ವಾರಪಾಲಕ ಪಾದ್ರಿಯ ಕೈಗಳನ್ನು ಕಣ್ಣಿಗೊತ್ತಿಕೊಂಡು ಅವರನ್ನು ಅಪ್ಪಿಕೊಳ್ಳುತ್ತಾನೆ. 'ನಾನು ಈಗ ಧನ್ಯನಾದೆ. ಗಾಂಧಿಯನ್ನು ಕಂಡಿಲ್ಲದ ನಾನು ಗಾಂಧಿನಾಡಿನಿಂದ ಬಂದವನನ್ನು ಕಂಡೆ. ಗಾಂಧೀಜಿಯ ಜೊತೆ ಮಾತನಾಡಿದವರ ಕೂಡೇ ನಾನೂ ಮಾತನಾಡಿದೆ. ಧನ್ಯ ಧನ್ಯ' ಎಂದು ಭಾವುಕನಾಗಿ ಸಂಭ್ರಮಿಸುತ್ತಾನೆ. ಈ ಪ್ರಸಂಗದ ಹಿಂದಿನ ಭಾವನಾತ್ಮಕ ಸಂಭ್ರಮ ಒಂದು ಜೀವನ ನೀತಿಯನ್ನು ಗೌರವಿಸುವ ಸಂಭ್ರಮವೆಂದು ನಾನು ಭಾವಿಸುತ್ತೇನೆ. ಪರಂಪರೆಯೊಳಗಿನ ಜೀವನ ಮೌಲ್ಯವನ್ನು ನಿರಂತರವಾಗಿಸುವ ನಿತ್ಯವಾಗಿಸುವ ಆಶಯವನ್ನೊಳಗೊಂಡ ಭಾವಸಂಭ್ರಮವಿದು. ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಪಾತ್ರ ಅವರ ಬದುಕಿನ ರೀತಿ ನೀತಿ ಆ ಮೂಲಕ ಅವರು ಜಗತ್ತಿಗೆ ನೀಡಿದ ಜೀವನ ಸಂದೇಶ ಇವೆಲ್ಲವುಗಳ ಅವರ್ಣನೀಯ ಭಾವಕೋಶವೊಂದರ ಪ್ರತೀಕವಾಗಿ ಗಾಂಧೀಜಿ ಜಗತ್ತಿನೆದುರಿಗಿದ್ದಾರೆ. ಇಂಥ ಗಾಂಧಿ ಹುಟ್ಟಿದ ನಾಡನ್ನು ಗಾಂಧೀನಾಡು ಎಂದು ಜರ್ಮನಿಯ ಸಾಮಾನ್ಯ ಪ್ರಜೆಯೊಬ್ಬ ಕರೆದದ್ದು ವಿಶೇಷ. ತನ್ನ ಬಾಳಿನಲ್ಲಿ ಆ ವಿಶೇಷವನ್ನು ಒಂದು ಅನುಭವದ ಸಂಗತಿಯಾಗಿ ಪರಿಭಾವಿಸಿದ್ದು, ಸಂಭ್ರಮಿಸಿದ್ದು ಮತ್ತೂ ವಿಶೇಷ. ಆವೇಶಕ್ಕಿಂತ ಅರಿವಿನ ವಿಸ್ತರಣೆಯಲ್ಲಿ ಕ್ರಿಯಾಶೀಲವಾಗಬಹುದಾದ ಅಪೇಕ್ಷೆಯ ಭಾವಮೂಲದ ಸಂಭ್ರಮವಿದು.

ಈ ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಲು ಕಾರಣ ನಾನು ಕುವೆಂಪು, ತೀನಂಶ್ರೀ, ಡಿಎಲ್.ಎನ್. ಅವರ ಶಿಷ್ಯನಾಗುವ ಅವಕಾಶ ಪಡೆದವನಲ್ಲ. ಆದರೆ ಅವರ ಶಿಷ್ಯರ ಶಿಷ್ಯನಾಗಿ ಸಾಹಿತ್ಯವನ್ನು ಅಧ್ಯಯನ ಮಾಡಿದೆನೆಂಬುದು ನನ್ನ ಭಾವಸಂಭ್ರಮದ ವಿಶೇಷ.

ದಾರಿ ಸೂರಾರುವ ಬೆಳಕಿನರಮನೆಗೆ ಎಂಬ ಅರಿವಿನೆಚ್ಚರದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುತ್ತ ಅಭಿಪ್ರಾಯ ಭೇದಗಳಿಗೆ ಮಣೆಹಾಕುತ್ತಲೇ ಆರೋಗ್ಯಕರ ಚರ್ಚೆಗೆ ಮುಕ್ತ ಅವಕಾಶ ನೀಡುವ ನನ್ನ ಗುರು ಜಿ.ಎಸ್.ಎಸ್. ಎಂದೂ ಯಾವುದೇ ಪಟಾಲಂ ಕಟ್ಟಿಕೊಂಡವರಲ್ಲ.

ಶಿಷ್ಯರಲ್ಲಿ ವಿದ್ವತ್ತು, ಪ್ರತಿಭೆ, ಪರಿಶ್ರಮಗಳನ್ನು ಗುರುತಿಸಿ ಅವರಿಗೆ ಅವಕಾಶಕೊಟ್ಟು ಅವರ ಏಳಿಗೆಯನ್ನು ಕಂಡು ಪ್ರೋತ್ಸಾಹಿಸಿದವರು. ಕಿ.ರಂ. ನಾಗರಾಜ, ಕೆ.ವಿ. ನಾರಾಯಣ, ಡಿ.ಆರ್. ನಾಗರಾಜ್, ಸಿದ್ಧಲಿಂಗಯ್ಯ ಮೊದಲಾದ ಸೂಕ್ಷ್ಮ ಸಂವೇದನೆಯ ನಿಶಿತಮತಿಗಳು ಇವರ ಗರಡಿಯೊಳಗೋದಿದ ಮಾನಿಸರು.

ಜಿ.ಎಸ್.ಎಸ್. ಎಂದೇ ನಾಡಿನಾದ್ಯಂತ ಖ್ಯಾತನಾಮರಾಗಿರುವ ಡಾ. ಜಿ.ಎಸ್. ಶಿವರುದ್ರಪ್ಪ ನವರನ್ನು ನಾನು ಮೊದಲು ನೋಡಿದ್ದು ೧೯೬೬ರಲ್ಲಿ ಸೆಂಟ್ರಲ್ ಕಾಲೇಜಿನ ಪ್ರಸನ್ನಕುಮಾರ್ ಬ್ಲಾಕಿನಲ್ಲಿದ್ದ ಕನ್ನಡ ವಿಭಾಗದ ಅವರ ಕೊಠಡಿಯಲ್ಲಿ. ಬಿ.ಎ. ಮುಗಿದ ಮೇಲೆ ಮೊದಲ ಬಾರಿಗೆ ಬೆಂಗಳೂರಿಗೆ ಬಂದಿದ್ದ ನನಗೆ ಸೆಂಟ್ರಲ್ ಕಾಲೇಜು ಆವರಣ ಯಾವುದೋ ಯಕ್ಷಲೋಕದ ರೀತಿ ಭಾಸವಾಗಿ ತಬ್ಬಿಬ್ಬುಗೊಳಿಸಿತ್ತು. ಕನ್ನಡ ಐಚ್ಛಿಕ ವಿಷಯವನ್ನು ಓದಿಲ್ಲದ ನನಗೆ ಕನ್ನಡ ಎಂ.ಎ. ಮಾಡಬೇಕೆಂಬ ಆಸೆ ಅದಮ್ಯವಾಗಿತ್ತು. ಗುರುಗಳಾದ ಎಂ.ಎಸ್. ರಾಮಲಿಂಗಪ್ಪನವರು 'ಜಿ.ಎಸ್.ಎಸ್. ಅವರನ್ನು ಹೋಗಿ ಕಾಣು ಅವರು ನಿನಗೆ ದಾರಿತೋರಿಸುತ್ತಾರೆ' ಎಂದು ಕಳಿಸಿದ್ದರು. ಕೇಳಿಕೊಂಡು ಕನ್ನಡ ವಿಭಾಗಕ್ಕೆ ಹೋದಾಗ ಜಿ.ಎಸ್.ಎಸ್. ಅವರ ಭೇಟಿಯಾಯಿತು. ಕಚ್ಚೆಪಂಚೆ ಕೋಟು ಧರಿಸಿ ಸೌಮ್ಯ ಮುಖಭಾವದ ಜಿ.ಎಸ್.ಎಸ್. ಬರವಣಿಗೆಯಲ್ಲಿ ತಲ್ಲೀನರಾಗಿದ್ದರು. ನಮ್ಮ ಹಳ್ಳಿಗಾಡಿನ ಹಿರಿಯ ಜೀವವೊಂದು ಎದುರಾದಂತೆ ಆಪ್ತಭಾವ ಮೂಡಿತು. ನನ್ನ ಅಪೇಕ್ಷೆಯನ್ನು ಹೇಳಿಕೊಂಡಾಗ ಸಾವಧಾನವಾಗಿ ಆಲಿಸಿದರು. ನನ್ನ ಮಾರ್ಕ್ಸ್ ಕಾರ್ಡನ್ನು ಕೇಳಿದರು–ತೋರಿಸಿದೆ. 'ಹೆಚ್.ಇ.ಪಿ. ಓದಿದ್ದೀರಾ, ಕನ್ನಡಕ್ಕೆ ಪ್ರವೇಶ ಕೇಳುತ್ತಿದ್ದೀರ. ಕನ್ನಡ ಭಾಷೆಯಲ್ಲಾದರೂ ಹೆಚ್ಚಿನ ಅಂಕ ಬಂದಿದ್ದರೆ ಕನ್ನಡ ಎಂ.ಎ.ಗೆ ಪ್ರವೇಶ ಕೊಡಬಹುದಿತ್ತು. ನಮ್ಮ ವಿಭಾಗದ ಮುಖ್ಯಸ್ಥರಾದ ಪ್ರೊ. ಮುಗಳಿಯವರು ಈ ದಿನ ರಜೆ ಇದ್ದಾರೆ. ಅಲ್ಲದೆ ಎಂ.ಎ.ಗೆ ಪ್ರವೇಶ ಮುಗಿದು ಹೋಗಿದೆ. ಏನು ಮಾಡುವುದು' ಎಂದು ನನ್ನ ಮುಖ ನೋಡಿದರು. ನಾನು ನಿರುತ್ತರನಾಗಿ ಅವರ ಮುಖವನ್ನೇ ನೋಡುತ್ತಾ ನಿಂತೆ. ನನ್ನ ಮೌನದ ನಿಲುವಿನಲ್ಲೇ ನನ್ನ ಭಾವನೆಯನ್ನು ಅರ್ಥಮಾಡಿಕೊಂಡಿರಬೇಕು. 'ನಾನು ಪ್ರೊ. ಮುಗಳಿಯವರ ಹತ್ತಿರ ಮಾತನಾಡುತ್ತೇನೆ. ನಾಳೆ ಇದೇ ಹೊತ್ತಿಗೆ ಬನ್ನಿ' ಎಂದರು. ಮಾರನೆಯ ದಿನ ಹೋದಾಗ ಅಷ್ಟು ಹೊತ್ತಿಗಾಗಲೇ ಡಾ. ರಂ.ಶ್ರೀ. ಮುಗಳಿಯವರ ಹತ್ತಿರ ಮಾತನಾಡಿದ್ದರು. 'ಎಂ.ಎ.ಗೆ ಪ್ರವೇಶ ಮುಗಿದಿದೆ. ಈಗ ಮೂರನೇ ಬಿ.ಎ. ಆನರ್ಸ್‌ಗೆ ಸೇರಿ ಒಂದು ವರ್ಷ ಕನ್ನಡ ಆನರ್ಸ್ ಮಾಡಿ. ಸಹಜವಾಗಿ ಮುಂದಿನ ವರ್ಷ ಎಂ.ಎ. ಓದಬಹುದು' ಎಂದರು. ಅವರ ಮಾತಿನಂತೆ ಮೂರನೇ ಬಿ.ಎ. ಆನರ್ಸ್‌ಗೆ ಪ್ರವೇಶ ಪಡೆದೆ. ನನ್ನ ಈ ಆಪ್ತತೆ ಅಭಿಮಾನವಾಗಿ ಬೆಳೆದು ನನ್ನ ಹುಂಬತನದಿಂದಾಗಿ ತರಗತಿಯಲ್ಲಿ ಒಮ್ಮೆ ಒಂದು ವಿಚಿತ್ರ ಘಟನೆಗೆ ಕಾರಣವಾಯಿತು. ಆದಿನ ಜಿ.ಎಸ್.ಎಸ್. ಪಂಪಭಾರತ ಪಾಠ ಮಾಡುತ್ತಿದ್ದರು. ಕುರ್ಚಿಯಲ್ಲಿ ಕುಳಿತು ಪುಸ್ತಕ ತೆರೆದು ಹಳಗನ್ನಡ ಕಾವ್ಯವನ್ನು ಅವರು ವಾಚನ ಮಾಡತೊಡಗಿದರೆ ಇಡೀ ತರಗತಿಯಲ್ಲಿ ಅವರ ವಾಚನದ ಲಯ ಮಾಧುರ್ಯವೇ ತುಂಬು ಗಾಂಭೀರ್ಯದಲ್ಲಿ ಅನುರಣಿತವಾಗುತ್ತಿತ್ತು. ಕೃಷ್ಣ ಸಂಧಾನದ ಭಾಗ "ಅಂಜನಾಪರ್ವತದ ಪೋಲ್ ಬರ್ಪ ಅಂಬುಜೋದರನಂ ಕಂಡು

ಎಂತಾನುಂ ಎಳ್ದು..." ಈ ವೃತ್ತವನ್ನು ಅವರು ವಾಚಿಸತೊಡಗಿದಂತೆ ಇಡೀ ಸನ್ನಿವೇಶ ಕಣ್ಣಿಗೆ ಕಟ್ಟಿದಂತೆ ಭಾಸವಾಗತೊಡಗಿತು. ತಲ್ಲೀನರಾಗಿ ಅವರು ವಾಚನ ವಿವರಣೆ, ವಿಶ್ಲೇಷಣೆ ನೀಡುತ್ತಿದ್ದಾಗ ಮಧ್ಯ ನಾನು ಎದ್ದು "ಸರ್, 'ಕಾನೀನ' ಎಂದರೇನು?" ಎಂದು ಪ್ರಶ್ನೆ ಹಾಕಿದೆ. ಪಾಠದಲ್ಲಿ ತಲ್ಲೀನರಾಗಿದ್ದ ಜಿ.ಎಸ್.ಎಸ್. ನನ್ನ ಪ್ರಶ್ನೆ ಕೇಳಿದ ತಕ್ಷಣ ಗಂಭೀರರಾಗಿ ಮಾತು ನಿಲ್ಲಿಸಿದರು. ಅರೆಕ್ಷಣ ಇಡೀ ತರಗತಿ ನಿಶ್ಶಬ್ದ. 'ಕೂತ್ಕೊಳ್ಳಿ' ಅಂದರು. ಮತ್ತೆ ಕ್ಷಣ ಹೊತ್ತು ನೀರವ ಮೌನ. ನಂತರ 'ಕಾನೀನ ಅಂದರೆ ಕನ್ಯೆಯ ಮಗ' "ಕರ್ಣ" ಅಂದರು. ಮತ್ತೆ ಕ್ಷಣ ಕಾಲ ಅದೇ ನೀರವ ಮೌನ. ಈ ಅವಧಿಯಲ್ಲಿ ಯಾವ ವಿದ್ಯಾರ್ಥಿಯೂ ಕಿಸಕ್ ಎಂದದ್ದಾಗಲೀ, ಪಿಸುಗುಟ್ಟಿದ್ದಾಗಲೀ ಕೇಳಲಿಲ್ಲ. ಮತ್ತೆ ಯಥಾರೀತಿ ಗುರುಗಳ ಪಾಠ ಮುಂದುವರೆಯಿತು. ತರಗತಿ ಮುಗಿದಾದ ಮೇಲೆ ನನ್ನನ್ನು ಸ್ವಲ್ಪ ಬನ್ನಿ ಎಂದು ಕೊಠಡಿಗೆ ಕರೆದುಕೊಂಡು ಹೋದ ಗುರುಗಳು ಅಲ್ಲಿ 'ತರಗತಿಗೆ ಬರುವ ಮುಂಚೆ ಮೂಲ ಪಠ್ಯವನ್ನು ಓದಿಕೊಂಡು ಗೊತ್ತಾಗದ ಪದಗಳಿಗೆ ಪ್ರತಿಪದಾರ್ಥಗಳನ್ನು ಶಬ್ದಾರ್ಥಕೋಶದಲ್ಲಿ ನೋಡಿಕೊಂಡು ಬರಬೇಕು. ಇದು ಆನರ್ಸ್ ತರಗತಿ, ಶಬ್ದಾರ್ಥಗಳನ್ನು ವಿದ್ಯಾರ್ಥಿಗಳು ತರಗತಿಯಲ್ಲಿ ಕೇಳುವಂತಿರಬಾರದು. ವಿಶ್ಲೇಷಣೆ, ವಿಮರ್ಶೆಯ ಕಡೆ ಗಮನಹರಿಸುವಂತೆ ಬೆಳೆಯಬೇಕು ನೀವು' ಎಂದು ತಿಳುವಳಿಕೆ ಹೇಳಿದರು. ಅಂದಿನಿಂದ ನನ್ನ ಅಧ್ಯಯನದ ಗತಿ ಬದಲಾಯಿತು. ಎರಡು ಮೂರು ತಿಂಗಳಲ್ಲಿ ಸಾಹಿತ್ಯಾಭ್ಯಾಸದ ನನ್ನ ಗ್ರಹಿಕೆಯ ಕ್ರಮವನ್ನು ಹಾಗೂ ಸೆಮಿನಾರುಗಳಲ್ಲಿ ನನ್ನ ಪ್ರಶ್ನೋತ್ತರಗಳ ರೀತಿಯನ್ನು ಗಮನಿಸಿದ ನನ್ನ ಗುರುಗಳು ಅಭಿನಂದಿಸಿದ್ದು, ಮರೆಯಲಾರದ ಒಂದು ಅನುಭವ.

ನಾವು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಒಂದು ಪಿ.ಪಿ. ಗ್ರೂಪ್ ಕಟ್ಟಿಕೊಂಡಿದ್ದೆವು. ಟಿ. ಶ್ರೀನಿವಾಸರಾಜು, ಎಚ್.ಎಸ್. ರಾಘವೇಂದ್ರರಾವ್, ವೆಂಕಟರಾಜು, ದೊಡ್ಡರಂಗೇಗೌಡ, ನಾನು, ಕೆ.ವಿ. ನಾರಾಯಣ, ಎಚ್.ಎಸ್. ಶಿವಪ್ರಕಾಶ್, ಪ್ರಸನ್ನ, ಕೋದಂಡರಾಂಶೆಟ್ಟಿ, ಶೂದ್ರ ಶ್ರೀನಿವಾಸ, ಡಿ.ವಿ. ರಾಜಶೇಖರ, ಕ.ನಂ. ನಾಗರಾಜು ಹೀಗೆ ಹಲವು ಜನ ಗೆಳೆಯರು ಈ ಪಿ.ಪಿ. ಬಳಗದವರು. ತರಗತಿಗಳಲ್ಲಿ ನಡೆದ ಸಾಹಿತ್ಯದ ವಿಚಾರದಿಂದ ಮೊದಲ್ಗೊಂಡು ರಾಜಕೀಯ, ಸಂಸ್ಕೃತಿ ಕುರಿತು ಚರ್ಚೆ ಹಾಗೂ ಪ್ರತಿವಾರವೂ ತರಗತಿಗಳ ಸೆಮಿನಾರುಗಳಲ್ಲಿ ನಡೆಯುತ್ತಿದ್ದ ಚರ್ಚೆ, ಹೊಸ ಓದಿನ ಪುಸ್ತಕ ಕುರಿತ ಚರ್ಚೆ, ಹೀಗೆ ಈ ಪಿ.ಪಿ. ಬಳಗದಲ್ಲಿ ವಾಗ್ವಾದಗಳು ಬಿಸಿಬಿಸಿಯಾಗಿ ನಡೆಯುತ್ತಿದ್ದವು. ಈ ಎಲ್ಲ ಆರೋಗ್ಯಕರ ಬೆಳವಣಿಗೆಯ ಹಿಂದೆ ಸಾಹಿತ್ಯಕ ವಾತಾವರಣವನ್ನು ಬೆಳೆಸಿದ್ದ ಜಿ.ಎಸ್.ಎಸ್. ಅವರ ಪ್ರಭಾವಳಿ ಇತ್ತು ಎಂಬುದು ಬಹುಮುಖ್ಯ ವಿಚಾರ. ಈ ಪಿ.ಪಿ. ಬಳಗದ ಸದಸ್ಯರಿಂದ ಶೂದ್ರ, ಅಂಕಣ, ಸಂಕೀರ್ಣ, ಅಕಾವ್ಯ ಎಂಬ ನಾಲ್ಕು ಸಾಹಿತ್ಯ ನಿಯತ ಕಾಲಿಕೆಗಳು ಹೊರಟವು ಎಂಬುದು ಗಮನಾರ್ಹ ವಿಚಾರ.

ನಾನು ಹೋದ ಕೆಲವೇ ತಿಂಗಳಿಗೆ ಡಾ. ರಂ.ಶ್ರೀ. ಮುಗಳಿಯವರು ನಿವೃತ್ತರಾಗಿ ಡಾ. ಜಿ.ಎಸ್.ಎಸ್. ಅವರು ವಿಭಾಗದ ಮುಖ್ಯಸ್ಥರಾದರು. ಅವರ ಅವಧಿಯಲ್ಲಿ ಕನ್ನಡ ವಿಭಾಗ ನಡೆಸುತ್ತಿದ್ದ ವಿಚಾರ ಸಂಕಿರಣಗಳು ರಾಜ್ಯಮಟ್ಟದಲ್ಲಿ ಎಲ್ಲರ ಗಮನವನ್ನು ಸೆಳೆದಿದ್ದವು.

ಜಿ.ಎಸ್.ಎಸ್. ನವೋದಯ ಪರಂಪರೆಗೆ ಸೇರಿದವರಾದರೂ "ಬೇಡೆನೆಗೆ ಸಿದ್ಧಾಂತಗಳ ರಾದ್ಧಾಂತ। ನನಗಿಲ್ಲ ಇದೇ ಸರಿ ಇಷ್ಟೇ ಸರಿ ಎನ್ನುವ ಪಂಥ। ನಾ ಬಲ್ಲೆ ಇವೆಲ್ಲ ಏರುವೆಯ ಒಂದೊಂದು ಹಂತ" ಎಂಬ ತಿಳುವಳಿಕೆಯಲ್ಲಿ ಕಾವ್ಯ ರಚಿಸಿದವರು. ಕನ್ನಡವನ್ನು ಕಟ್ಟಿ ಬೆಳೆಸಿದವರು. ಕನ್ನಡ ವಿಭಾಗದ ಪ್ರತಿಯೊಂದು ಕಾರ್ಯಚಟುವಟಿಕೆಗಳ ಅಂತರ್ಯದಲ್ಲಿ ಅವರ ಈ ನಿಲುವು ಎದ್ದು ಕಾಣುವ ಶಕ್ತಿಯಾಗಿತ್ತು. ಆಗ ನವ್ಯದ ಉಚ್ಛ್ರಾಯ ಕಾಲ. ನಾಡಿನ ಬೇರೆ ವಿಶ್ವವಿದ್ಯಾಲಯಗಳಲ್ಲಿ ನವ್ಯವೆಂದರೆ ಮೂಗು ಮುರಿಯುವ ಪಂಡಿತರುಗಳದ್ದೇ ಕಾರುಬಾರು. ಆದರೆ ಜಿ.ಎಸ್.ಎಸ್. ಎಲ್ಲ ಸೈದ್ಧಾಂತಿಕ ವಿಚಾರಗಳ ಚರ್ಚೆಗೂ ವೇದಿಕೆ ಕಲ್ಪಿಸಿದರು. ಅವರು ನಡೆಸಿದ ವಿಚಾರ ಸಂಕಿರಣಗಳಲ್ಲಿ ಹಳಗನ್ನಡದಿಂದ ಆಧುನಿಕ ಕನ್ನಡದ ಎಲ್ಲ ಕಾಲಘಟ್ಟಗಳ ಸಾಹಿತ್ಯವೂ ಚರ್ಚೆಗೆ ಒಳಗಾಗುತ್ತಿದ್ದವು. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಕುವೆಂಪು, ಬೇಂದ್ರೆ ಕುರಿತ ವಿಚಾರ ಸಂಕಿರಣಗಳು ಹಾಗೂ ನಾಡಿನ ಖ್ಯಾತ ಸಾಹಿತಿಗಳನ್ನು ಕರೆದು ನಡೆಸುತ್ತಿದ್ದ ಪ್ರಚಾರೋಪನ್ಯಾಸ, ಸಂವಾದಗೋಷ್ಠಿಗಳು ನಮಗೆ ಮರೆಯಲಾರದ ಅನುಭವಗಳು. ಅವು ವಿದ್ಯಾರ್ಥಿಗಳನ್ನು ಮಾತ್ರ ಬೆಳೆಸಿದ ಭೂಮಿಕೆಗಳಾಗಿರಲಿಲ್ಲ. ನಾಡಿನ ಸಾಹಿತ್ಯಕ ಪರಿಧಿಯನ್ನು ಆರೋಗ್ಯಕರವಾಗಿ ವಿಸ್ತರಿಸಿದ ವೇದಿಕೆಗಳೂ ಆಗಿದ್ದವು. ಇಂಥ ವಿಚಾರ ಸಂಕಿರಣಗಳಲ್ಲಿ ಬೇಂದ್ರೆ, ಕಾರಂತ, ವಿ.ಸೀ., ಅ.ನ.ಕೃ. ರಾಜರತ್ನಂ, ಅಡಿಗ ಹಾಗೂ ಗೋಪಾಲಗೌಡರು ಮುಂತಾಗಿ ಹಿರಿಯ ತಲೆಮಾರಿನ ಜೊತೆಗೆ ಆಗ ಪ್ರವರ್ಧಮಾನ ರಾಗಿದ್ದ ಕುರ್ತಕೋಟಿ, ಲಂಕೇಶ, ಅನಂತಮೂರ್ತಿ, ತೇಜಸ್ವಿ, ಕಂಬಾರ, ಚಂಪಾ, ಗಿರಡ್ಡಿ ಇವರುಗಳು ಭಾಗವಹಿಸುತ್ತಿದ್ದುದು ನಮಗೆಲ್ಲ ಒಂದು ಅವಿಸ್ಮರಣೀಯ ಅನುಭವ.

ಜಿ.ಎಸ್.ಎಸ್. ಅವರ ತರಗತಿಗಳಲ್ಲಿ ಕುಳಿತು ಪಾಠ ಕೇಳುವುದೆಂದರೆ ಅದೊಂದು ಹೊಸ ಅನುಭೂತಿ. ಹಳಗನ್ನಡ ಕಾವ್ಯ, ಕಾವ್ಯಮೀಮಾಂಸೆ, ಆಧುನಿಕ ಕಾವ್ಯ ಹೀಗೆ ಯಾವುದೇ ವಿಷಯದ ಉಪನ್ಯಾಸವಾದರೂ ಅದರ ವಿಶ್ಲೇಷಣೆಯಲ್ಲಿ ಜಿ.ಎಸ್.ಎಸ್. ವ್ಯಕ್ತಿತ್ವದ ಅಸ್ಮಿತೆ ಢಾಳಾಗಿ ನಮ್ಮ ಮೇಲೆ ಪ್ರಭಾವ ಬೀರುತ್ತಿತ್ತು. ಜಿ.ಎಸ್.ಎಸ್. ಅವರ ಬಾಯಲ್ಲಿ ಭಾರತೀಯ ಕಾವ್ಯ ಮೀಮಾಂಸೆಯನ್ನು ಕೇಳುವುದೆಂದರೆ ಜಾಗತಿಕ ಸಾಹಿತ್ಯ ಮೀಮಾಂಸೆಯ ಅರಿವಿನ ವಿಸ್ತರಣೆಯನ್ನು ಪಡೆದುಕೊಳ್ಳುವುದು. ಭಾರತೀಯ ಕಾವ್ಯಮೀಮಾಂಸೆಯ ವಿಚಾರಗಳನ್ನು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ತೌಲನಿಕ ನೆಲೆಯಲ್ಲಿ ಸಂಗತಿಸಿ ವಿವರಿಸುತ್ತಿದ್ದ ರೀತಿ ಭಾವಗೀತೆಯನ್ನು ಆಸ್ವಾದಿಸುವ ಧ್ಯಾನರೂಪಿ ಅನುಭವವನ್ನು ನೀಡುತ್ತಿತ್ತು.

ಆಗ ಪ್ರತಿವರ್ಷವೂ ವಿದ್ಯಾರ್ಥಿಗಳನ್ನು ರಾಜ್ಯದ ಐತಿಹಾಸಿಕ ಸಾಂಸ್ಕೃತಿಕ ಕೇಂದ್ರಗಳಿಗೆ ಪ್ರವಾಸ ಕರೆದುಕೊಂಡು ಹೋಗುತ್ತಿದ್ದರು. ಪ್ರವಾಸದ ಸಂದರ್ಭದಲ್ಲಿ ರಾತ್ರಿ ಎಲ್ಲಿಯಾದರೂ ತಂಗಿದ್ದಾಗ ಎಲ್ಲ ವಿದ್ಯಾರ್ಥಿಗಳನ್ನು ಸುತ್ತ ಕೂರಿಸಿಕೊಂಡು ಅವರು ಸ್ವತಃ ಭಾವಗೀತೆಗಳನ್ನು ಹಾಡುತ್ತಿದ್ದರು. ಹಾಡಬಲ್ಲ ವಿದ್ಯಾರ್ಥಿಗಳಿಂದ ಹಾಡಿಸುತ್ತಿದ್ದರು. ಆಗ ಅವರು ಆಡುತ್ತಿದ್ದ ಮಾತುಗಳು ಒಂದು ಕೌಟುಂಬಿಕ ವಾತಾವರಣವನ್ನು ಸೃಷ್ಟಿಸುತ್ತಿತ್ತು. ತರಗತಿಗಳಲ್ಲಿನ ಆ ಗಾಂಭೀರ್ಯ ಇಲ್ಲಿಯೂ ಎಲ್ಲೆ ದಾಟದ ಭಾವದೊಳಗಿನ ಆಪ್ತತೆಯನ್ನು ಆರ್ದ್ರಗೊಳಿಸಿ ಅರಳುತ್ತಿತ್ತು. ಜಿ.ಎಸ್.ಎಸ್. ಅವರ ಪ್ರಕಾರ ಪ್ರವಾಸವೆಂದರೆ ಆತುರಾತುರದಲ್ಲಿ ಓಡುತ್ತ

ನೋಡುವುದಲ್ಲ. ಸಾವಧಾನವಾಗಿ ಪರಿಭಾವಿಸುತ್ತ, ಅನುಭವಿಸುವುದು. ಪ್ರಯಾಣಿಸುವಾಗಲೂ ಸುತ್ತಲಿನ ನಿಸರ್ಗದ ಕಡೆಗೆ ಅವರ ಕಣ್ಣು ನೆಟ್ಟಿರುತ್ತಿತ್ತು. ಬಸ್ಸಿನ ಪ್ರಯಾಣದಲ್ಲಿ ಓದುತ್ತ ಪ್ರಯಾಣಿಸುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಪ್ರವಾಸವೆಂದರೆ ಕಣ್ಣುಂಡು ತಣಿಯುವ ಅನುಭವ. ಕುತೂಹಲಿತ ಹಸಿವು ನಮ್ಮೆದೆಯಾಳದ ಎಚ್ಚರವಾಗಬೇಕು ಇದು ಅವರ ನಿಲುವು.

ನಾನು ಮಡಕೇರಿಯಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದ ಕಾಲ ೧೯೮೨. ನನ್ನ ಜೊತೆ ಸಹೋದ್ಯೋಗಿಯಾಗಿ ಚಂದ್ರಶೇಖರ ನಂಗಲಿ ಇದ್ದರು. ಆಗ ನಡೆದ ಒಂದು ಘಟನೆ ನನ್ನ ನೆನಪಿನಲ್ಲಿ ಮತ್ತೆ ಮತ್ತೆ ಮೆಲುಕು ಹಾಕುವ ಸುಂದರ ಅನುಭವ. ಜಿ.ಎಸ್.ಎಸ್. ಅವರು ಕಾಸರಗೋಡಿಗೆ ಹೋಗಬೇಕಾಯಿತು. ಮಡಕೇರಿಯ ಮುಖಾಂತರವೇ ಹೋಗುವ ಇರಾದೆ ಅವರದಾಗಿತ್ತು. ಆಗ ಅವರನ್ನು ಒಂದು ದಿನ ನಮ್ಮ ಮನೆಯಲ್ಲಿ ಇದ್ದುಹೋಗುವಂತೆ ಕೋರಿಕೊಂಡೆವು. ಅವರು ಸಂತೋಷದಿಂದ ಒಪ್ಪಿ ಬಂದರು. ಅಂದು ಸಂಜೆ ಜಿ.ಎಸ್.ಎಸ್. ನಮ್ಮನ್ನು ತಿರುಗಾಡಲು ಕರೆದುಕೊಂಡು ಹೊರಟರು. ಊರಾಚೆ ಕೂಟುಹೊಳೆಯ ಕಡೆ ನಡೆದೆವು. ಅದೊಂದು ಸುಂದರ ತಾಣ. ಹರಿಯುವ ಹೊಳೆಗೆ ಅಡ್ಡಲಾಗಿ ಸಣ್ಣ ಅಣೆಕಟ್ಟನ್ನು ಕಟ್ಟಿದ್ದಾರೆ. ಹೊಳೆ ತುಂಬ ತಿಳಿಯಾದ ನೀರು. ಬಹುದೂರದವರೆಗೆ ಚಾಚಿ ನಿಂತಿದೆ. ಹೊಳೆಯ ಒಂದು ದಡದಲ್ಲಿ ಬಯಲು ಬಯಲಾದರೂ ಹಸಿರ ಹುಲ್ಲಿನಹಾಸುಹೊದ್ದ ಸುಂದರವಾದ ಬಾಣೆ. ಮತ್ತೊಂದು ದಡದಲ್ಲಿ ದಟ್ಟವಾಗಿ ಬೆಳೆದ ಮರಗಿಡಗಳ ಸಾಲು. ಪಶ್ಚಿಮದ ಕಡೆಗೆ ಸೂರ್ಯ ಸಾಗಿದ್ದಾನೆ. ಕೂಟುಹೊಳೆಯ ಆ ಸುಂದರ ತಾಣವನ್ನು ನೋಡಿ ಜಿ.ಎಸ್.ಎಸ್. ಅವರು ಬಹಳ ಸಂತೋಷಗೊಂಡರು. ಅಣೆಯ ಮೇಲೆ ಹಾದು ಬಲದಂಡೆಗೆ ನಡೆದು ಬಾಣೆಯ ಮೇಲೆ ಕೂತರೆ ಎದುರಿಗೆ ಹೊಳೆಯ ನೀರು. ಅದರಾಚೆ ಕಿಕ್ಕಿರಿದ ಕಾಡು. ಸಂಜೆಯ ಸೂರ್ಯ. ಜಿ.ಎಸ್.ಎಸ್. ಅವರ ಹಿತಮಿತ ಮಾತುಗಳ ಮಧ್ಯೆ ಆ ಸುಂದರ ಸಂಜೆ ಸಾಗುತ್ತಿತ್ತು. ಮಬ್ಬು ಆವರಿಸಿದಂತೆ ಎಲ್ಲೆಡೆ ನೀರವ ಮೌನ. ಜಿ.ಎಸ್.ಎಸ್. ಇನ್ನು ಮಾತು ನಿಲ್ಲಿಸೋಣ ಎಂದರು. ನೋಡಿ, ಇದುವರೆಗೂ ಕಣ್ಣಿನಿಂದ ಸೌಂದರ್ಯವನ್ನು ಆನಂದಿಸಿದೆವು. ಈಗ ನಿಸರ್ಗದ ಆರ್ಕೆಸ್ಟ್ರಾ ಪ್ರಾರಂಭವಾಗುವ ಸಮಯ. ಮೈಯೆಲ್ಲಾ ಕಿವಿಯಾಗೋಣ ಎಂದರು. ಕುವೆಂಪು ಪ್ರಕೃತಿಯ ನಡುವೆ ಮೌನವನ್ನು, ನಿಸರ್ಗ ಸಂಗೀತವನ್ನು ಸವಿಯುತ್ತಿದ್ದ ರೀತಿ ಹೇಗೆ ಎಂಬುದನ್ನು ಈಗ ಅನುಭವಿಸಿ ಅಂದರು. ಅವರ ನಿರ್ದೇಶನದಂತೆ ಮಾತು ನಿಲ್ಲಿಸಿದೆವು. ನೀರವತೆ ಮೈದುಂಬಿ ಮನದುಂಬಿ, ಗಾಳಿಯ ಅಲುಗು ಕಿವಿಗೆ ಅಪ್ಪಳಿಸುವ ಮೌನ. ಆಗ ಎಷ್ಟೋ ಹೊತ್ತಾದ ಮೇಲೆ ಎಲ್ಲೋ ದೂರದಲ್ಲಿ ಹಕ್ಕಿಯ ಕೂಗು. ಅದಕ್ಕೆ ಮರುದನಿ ನೀಡಿದಂತೆ ದೂರದಲ್ಲಿ ಮತ್ತೊಂದು ಕೂಜನ. ಹೀಗೆ ಕ್ಷಣಕ್ಷಣ ಸಾಗಿದಂತೆ ಹಕ್ಕಿಗಳ ಆ ಕೂಗು ಹಾಗೆಯೇ ಮೌನದಲ್ಲಿ ಕರಗಿಹೋಯಿತು. ಬೇರೆಯದೇ ಆದ ದನಿ, ಅದು ಜೀರುಂಡೆಯ ದನಿಯೋ ಗೊತ್ತಿಲ್ಲ. ಅದನ್ನು ಅನುಸರಿಸಿ ಇನ್ನೊಂದು ಮೂಲೆಯಲ್ಲಿ ಮತ್ತೊಂದು ಬೀತಿಯ ದನಿ. ಅದು ಶಿಳ್ಳೊ, ಕಂಚಿನ ತಾಳವೋ. ಹೀಗೆ ಕ್ಷಣಕ್ಷಣ ಕಳೆದಂತೆ ಒಂದು ಮತ್ತೊಂದು. ಮಗದೊಂದು ನಿಧನಿಧಾನವಾಗಿ ಸ್ವರಕ್ಕೆ ಸ್ವರ ಕೂಡಿ ನಿಸರ್ಗದ

ಆರ್ಕೆಸ್ಟ್ರಾ ಆ ನಿಶ್ಶಬ್ದವನ್ನು ತುಂಬಿ ಮೊಳಗಿತು. ಇದು ಆಗುತ್ತಿರುವಾಗ ಜಿ.ಎಸ್.ಎಸ್. ಇದು ಹಕ್ಕಿಯ ದನಿ. ಇದು ಹುಳುವಿನ ಸಿಳ್ಳು, ಇದು ಜೀರುಂಡೆ, ಹೀಗೆ ದನಿ ವಿಶೇಷತೆಗಳನ್ನು ಪರಿಚಯಿಸುತ್ತಿದ್ದರು. ಕುವೆಂಪು ಅವರ ಕಾವ್ಯದಲ್ಲಿ, ಕಾದಂಬರಿಗಳಲ್ಲಿ, ವರ್ಣಿತವಾದ ಈ ನಿಸರ್ಗ ಸಂಗೀತದ ಅನುಭವವನ್ನು ಅಂದು ನಮಗೆ ಒಂದು ಅನುಭೂತಿಯಾಗಿಸಿ ಕೇಳಿಸಿದರು. ಅದನ್ನು ಈಗಲೂ ನಾನು ಮತ್ತು ನಂಗಲಿ ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತೇವೆ.

ನಾನು ಅಧ್ಯಾಪಕನಾಗಿ ಕನ್ನಡ ಪಾಠ ಮಾಡುವಾಗ ಅದರಲ್ಲೂ ಹಳಗನ್ನಡ ಕಾವ್ಯವನ್ನು ವಾಚಿಸುವಾಗ ಈಗಲೂ ನನ್ನ ಮನದುಂಬಿದಂತೆ ನನ್ನೊಳಗೇ ಮೊಳಗಿ ಅನುರಣಿಸುವ ವಾಚನ ದನಿ ಜಿ.ಎಸ್.ಎಸ್. ಅವರದು. ಸಮಯ ಪಾಲನೆ, ವೃತ್ತಿ ನಿಷ್ಠೆ, ಪೂರ್ವಸಿದ್ಧತಾ ಗುಣ ಇವೆಲ್ಲವೂ ನನ್ನ ವೃತ್ತಿ ಜೀವನದಲ್ಲಿ ಕಾಯಕ ಧರ್ಮವಾಗಿ ಉಳಿದು ಬೆಳೆದು ಬರಲು ಕಾರಣ ನನ್ನ ಗುರು ನನ್ನ ಮೇಲೆ ಬೀರಿದ ಆರೋಗ್ಯಕರ ಪ್ರಭಾವ ಎಂಬುದನ್ನು ಅಭಿಮಾನದಿಂದ ನೆನೆಯುತ್ತೇನೆ. ರಾಷ್ಟ್ರಕವಿ ಕುವೆಂಪು ಅವರ ಪರಮಾಪ್ತ ಶಿಷ್ಯರಾಗಿ ರಾಷ್ಟ್ರಕವಿ ಭಾಜನರಾಗಿರುವ ನನ್ನ ಗುರುವಿಗೆ ಆತ್ಮೀಯ ನಮನಗಳು.

*ಪ್ರಸಾರ ದಿನಾಂಕ: ೨೨-೧೧-೦೬*

■■

# ಬೆಳಕಿನ ಹೆಜ್ಜೆ

●

## ಪ್ರೊ. ಟಿ. ಶ್ರೀನಿವಾಸರಾಜು

**ಡಾ.** ಜಿ.ಎಸ್. ಶಿವರುದ್ರಪ್ಪನವರು ಕರ್ನಾಟಕ ಸಂಸ್ಕೃತಿ ನಿರ್ಮಾಪಕರಲ್ಲಿ ಒಬ್ಬರು. ಅವರು ಸಾಮಾಜಿಕ ವಿವೇಕದಿಂದ ಕವಿಯಾಗಿ, ವಿಮರ್ಶಕರಾಗಿ, ಪ್ರವಾಸಿಗರಾಗಿ, ಶಿಷ್ಯವತ್ಸಲ ರಾಗಿ, ರಸಿಕರಾಗಿ, ಆಡಳಿತಗಾರರಾಗಿ ಚಿರಪರಿಚಿತರಾಗಿದ್ದಾರೆ. ಕುವೆಂಪು ಅವರ ಕನ್ನಡ ವಿಚಾರ, ತೀ.ನಂ.ಶ್ರೀ ಅವರ ಅಚ್ಚುಕಟ್ಟುತನ ಮತ್ತು ತ.ಸು. ಶ್ಯಾಮರಾಯರ ಮಾನವೀಯತೆ ಜಿ.ಎಸ್.ಎಸ್. ವ್ಯಕ್ತಿತ್ವ ನಿರ್ಮಿತಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಐದು ದಶಕಗಳಿಂದ ತಮ್ಮ ಪ್ರಜ್ಞಾವಂತಿಕೆಯನ್ನು ಜೀವಂತವಾಗಿರಿಸಿಕೊಂಡಿದ್ದಾರೆ. ಇವರು ಕಾರ್ಯದಕ್ಷತೆ, ಸಮತೋಲನ, ದೂರದೃಷ್ಟಿಗೆ ಹೆಸರಾದ 'ಶಿಸ್ತಿನ ಸಿಪಾಯಿ'.

ಜಿ.ಎಸ್.ಎಸ್. ಅವರ ಆಡಳಿತ ಮತ್ತು ಸಂಘಟನೆಯನ್ನು ಮೂರು ಮಜಲುಗಳಲ್ಲಿ ಗುರುತಿಸಬಹುದು.

೧) ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ
೨) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ
ಮತ್ತು
೩) ಪು.ತಿ.ನ. ಟ್ರಸ್ಟ್‌ನ ಪ್ರಸ್ತುತ ಅಧ್ಯಕ್ಷರಾಗಿ

ಜಿ.ಎಸ್.ಎಸ್. ದೈವದ ಹಂಗಿಲ್ಲದ ಸೂಕ್ಷ್ಮ ಸಂವೇದನೆಯ ಕವಿ. ಮಾನವನ ಏರಿಳಿತಗಳಿಗೆ ಅವನೇ ಹೊಣೆ ಎಂದು ನಂಬಿರುವ ಕವಿ. ಆದ್ದರಿಂದಲೇ ಮೇಷ್ಟ್ರು ತಾವು ವಹಿಸಿಕೊಂಡ ಕಾರ್ಯವನ್ನು ಪ್ರೀತಿಯಿಂದ, ಶ್ರದ್ಧೆಯಿಂದ, ಸಂಯಮದಿಂದ ನಿರ್ವಹಿಸುತ್ತಾರೆ.

> 'ಬಾಳನು ಶೋಧಿಸಿ ಶುಚಿಯನು ಬೆಳೆದರೆ
> ಇಹವೇ ಅರಳದೆ ಪರವಾಗಿ ?'
>
> *(ವಿಶ್ವಾಸ, ದೀಪಗಳು: ೭.೩೯)*

ಜಿ.ಎಸ್.ಎಸ್. ಆಡಳಿತದಲ್ಲಿ ಪ್ರದರ್ಶನಪ್ರಿಯತೆ, ಅಧಿಕಾರದಾಹ ಕಂಡು ಬರುವುದಿಲ್ಲ. ಯಾವುದೇ ಕೆಲಸ ಮಾಡುವ ಮುನ್ನ ಅದರ ನೀಲನಕ್ಷೆಯನ್ನು ತಯಾರಿಸಿ, ಕಾರ್ಯ ನಿರ್ವಹಿಸಬಲ್ಲವರಿಗೆ ಹಂಚುತ್ತಿದ್ದರು. ಹೆಚ್ಚಿನ ಕೆಲಸವಿದ್ದಾಗ ಎಲ್ಲರೂ ಒಟ್ಟಾಗಿ ಸೇರಿ ಮಾಡುವಂತೆ ಸೂಚಿಸುತ್ತಿದ್ದರು. ಕಾಲಕಾಲಕ್ಕೆ ಪ್ರಗತಿಯ ಪರಿಶೀಲನೆಯನ್ನು ಮಾಡುತ್ತಿದ್ದರು.

ಮೇಷ್ಟ್ರು ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಹೃದಯ ಸಂಪನ್ನತೆಯಿಂದ ಕಾರ್ಯನಿರ್ವಹಿಸಿದರು. ಇಂದಿನಂತೆ ಅಂದು 'ರೊಟೇಶನ್'ಗಳ ಕಾಲವಲ್ಲ. ಸೆಂಟ್ರಲ್ ಕಾಲೇಜಿನ 'ಕರ್ನಾಟಕ ಸಂಘ'ದ ಚಿನ್ನದ ಹಬ್ಬದಿಂದ ಪ್ರಾರಂಭವಾದ ವಿಚಾರ ಸಂಕಿರಣಗಳು ಇಪ್ಪತ್ತು ವರ್ಷಗಳು ನಿರಂತರವಾಗಿ ನಡೆದುವು. ವಿಚಾರ ಸಂಕಿರಣದ ಲೇಖನಗಳು ಮುಂದಿನ ವರ್ಷದ ವಿಚಾರ ಸಂಕಿರಣದ ವೇಳೆಗೆ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿತ್ತು. ಈ ವಿಚಾರ ಸಂಕಿರಣಗಳಿಗೆ ಕನ್ನಡ ನಾಡಿನ ವಿವಿಧ ಭಾಗಗಳಿಂದ ವಿದ್ವಾಂಸರು ಹಾಗೂ ಸಾಹಿತಿಗಳು ಆಗಮಿಸುತ್ತಿದ್ದರು. ಈ ಸಾಹಿತ್ಯದ ಬೌದ್ಧಿಕ ಹಬ್ಬಗಳಲ್ಲಿ ಸಾಹಿತ್ಯ ಸ್ಪಂದನಕ್ಕೆ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲಿನಲ್ಲಿ ಸಾಹಿತ್ಯಾಸಕ್ತರು ಕಿಕ್ಕಿರಿದು ಸೇರುತ್ತಿದ್ದರು. ನಮಗೆ ಅಂದಿನ ಬರಹಗಾರರನ್ನು ಕಣ್ತುಂಬ ನೋಡುವ; ಅವರ ಮಾತುಗಳನ್ನು, ಜಗಳಗಳನ್ನು ಕೇಳುವ; ಅವರೊಂದಿಗೆ ಮಾತನಾಡುವ ಅವಕಾಶ ದೊರೆಯುತ್ತಿತ್ತು. ಈ ಸಂದರ್ಭದಲ್ಲಿ, ಮೇಷ್ಟ್ರು ಯುವಕರಿಗೆ ಪ್ರಬಂಧಗಳನ್ನು ಮಂಡಿಸಲು ಅವಕಾಶ ಕಲ್ಪಿಸುತ್ತಿದ್ದರು. ಸಹದ್ಯೋಗಿಗಳನ್ನು ಬೆಸೆಯುವ, ಬೆಳೆಸುವ ಮನೋಭಾವ ಅವರಲ್ಲಿತ್ತು. ಅವರು ಎಲ್ಲಿ ಹೊಸದನ್ನು ಜೀವಂತಿಕೆಯನ್ನು ಕಂಡರೂ ಅದನ್ನು ಗುರುತಿಸುತ್ತಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವನ್ನು ಮಠದ ಮನೋಧರ್ಮದಿಂದ ಕಟ್ಟಲಿಲ್ಲ. ಭಿನ್ನ ಮನೋಧರ್ಮಗಳ ಗರಡಿಮನೆಯನ್ನಾಗಿ ಮಾಡಿದರು.

ಕಾರ್ಯಬಾಹುಳ್ಯದ ಒತ್ತಡದಲ್ಲಿ ಉದ್ವೇಗದಿಂದ, ಆತಂಕದಿಂದ ಆಗಾಗ ಮುಂಗೋಪಕ್ಕೆ ಒಳಗಾಗುತ್ತಿದ್ದರು. ಅವರ ಕಾಲದಲ್ಲಿ ಪ್ರಕಟವಾಗುತ್ತಿದ್ದ 'ಸಾಹಿತ್ಯ ವಾರ್ಷಿಕ'ಕ್ಕೆ ನಿಗದಿತ ಅವಧಿಯಲ್ಲಿ ಲೇಖನಗಳು ಬಾರದಿದ್ದಾಗ ಮೊದಲು ಜ್ಞಾಪಿಸುತ್ತಿದ್ದರು. ತಡವಾದರೆ ಮುಖದಲ್ಲಿ ಅಸಹನೆ ತಾಂಡವವಾಡುತ್ತಿತ್ತು. ಇನ್ನೂ ತಡವಾದರೆ ತಮ್ಮ ಮುನಿಸನ್ನು ಪ್ರಕಟಿಸಿಬಿಡುತ್ತಿದ್ದರು.

ಜನಪ್ರೀತಿಯ 'ಸಾಹಿತ್ಯ ವಾರ್ಷಿಕ'ಕ್ಕೆ ವಿಭಾಗದ ಲೇಖಕರನ್ನೇ ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದರು. ಒಮ್ಮೆ ಬರಗೂರು ರಾಮಚಂದ್ರಪ್ಪನವರು 'ಟೈಫಾಯಿಡ್'ನಿಂದ ನಿಶ್ಶಕ್ತರಾಗಿ ಸಕಾಲದಲ್ಲಿ ಲೇಖನವನ್ನು ಕೊಡಲಾಗಲಿಲ್ಲ. ಆಗ ಮೇಷ್ಟ್ರು ಅವರನ್ನು ತಮ್ಮ ಕೋಣೆಗೆ ಕರೆಸಿಕೊಂಡು ತರಾಟೆಗೆ ತೆಗೆದುಕೊಂಡರು. ಕಾಯಿಲೆಯ ತೀವ್ರ ಸ್ವರೂಪವನ್ನು ಬರಗೂರರು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು. ಕೇಳುವ ಸ್ಥಿತಿಯಲ್ಲಿ ಮೇಷ್ಟ್ರು ಇರಲಿಲ್ಲ. "ಏನ್ರಿ, ನೀವೆಲ್ಲ ಸೇರಿ, ನನ್ನ ವಿರುದ್ಧ Conspiracy ಮಾಡ್ತಾ ಇದ್ದೀರಾ?" ಎಂದು ಹುಬ್ಬುಗಂಟಿಕ್ಕಿದರು. ಬರಗೂರರು ಬೇಸರದಿಂದ ಹೊರಬಂದಾಗ ಸಹೋದ್ಯೋಗಿಗಳು ಸಮಾಧಾನ ಪಡಿಸಿದರು. ಮತ್ತೆ ಮುಂದಿನವಾರ ಬುಲಾವ್ ಬಂತು. ಬರಗೂರರಿಗೆ ಲೇಖನ ಬರೆಯಲು ಸಾಧ್ಯವಾಗಿರಲಿಲ್ಲ.

ಸಿಟ್ಟಿನಿಂದ ಮುಂದಿನ ವಾರದೊಳಗೆ ಲೇಖನ ಕೊಡುವಂತೆ ಕಟ್ಟಪ್ಪಣೆ ಮಾಡಿದರು. ಮುಂದಿನವಾರ ಲೇಖನದೊಂದಿಗೆ ಬರಗೂರರು ಒಂದು ಪ್ರತಿಭಟನಾ ಪತ್ರವನ್ನು ನೀಡಿದರು. ಬರಗೂರರ ಲೇಖನ ಜಿ.ಎಸ್.ಎಸ್. ಕೈಸೇರಿದ ಕೂಡಲೆ ಕೋಪ ತಾಪಗಳೆಲ್ಲಾ ತಣ್ಣಗಾಯಿತು. ಪತ್ರವನ್ನು ನೋಡಿ "ಇದೆಲ್ಲ ಏನು? ಸಮಯಕ್ಕೆ ಸರಿಯಾಗಿ 'ಸಾಹಿತ್ಯ ವಾರ್ಷಿಕ' ಬರಬೇಕೆಂದು ಆತಂಕದಿಂದ ಮಾತನಾಡಿದೆ. ಆ ಶಬ್ದಗಳಿಗೆ ವಿಶೇಷ ಅರ್ಥಗಳನ್ನು ಹಚ್ಚಬೇಡಿ. ನಿಮ್ಮ ಪತ್ರವನ್ನು ನೀವು ಹರಿದುಹಾಕಿ ನನ್ನ ಮಾತಿನ್ನು ನಾನು ಹಿಂದಕ್ಕೆ ಪಡೆಯುತ್ತೇನೆ." ಎಂದರು. ತಪ್ಪುಗ್ರಹಿಕೆಯ ಮಂಜು ಕರಗಿದ ಕೂಡಲೆ ಮಾನವೀಯ ಅಂತಃಕರಣ ಪ್ರಸನ್ನವಾಯಿತು.

ಜಿ.ಎಸ್.ಎಸ್. ನಿರ್ದೇಶಕರಾಗಿದ್ದಾಗ ಪ್ರಕಟಗೊಂಡ ಪುಸ್ತಕಗಳ ಗುಣಮಟ್ಟವನ್ನು ಗಮನಿಸಿದರೆ ಅವರ ಕಾರ್ಯದಕ್ಷತೆಯ ಅರಿವಾಗುತ್ತದೆ.

೧. ಜನಪ್ರಿಯ ಸಾಹಿತ್ಯದ ಹತ್ತು ಸಂಪುಟಗಳು
೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು
೩. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು
೪. ಪಂಪ; ಒಂದು ಅಧ್ಯಯನ
೫. ಕರ್ನಾಟಕ ಜಾನಪದ
೬. ದಶವಾರ್ಷಿಕ ಸಾಹಿತ್ಯ
೭. ಕವಿ ಬೇಂದ್ರೆ
೮. ಶ್ರೀ ಕುವೆಂಪು
೯. ಕಾದಂಬರಿಕಾರ ಕಾರಂತ

ಈ ದಿಬ್ಬ ಬೆಳೆಯುತ್ತಲೇ ಹೋಗುತ್ತದೆ. ಇವರು ಪ್ರಾರಂಭಿಸಿದ ತ್ರೈಮಾಸಿಕ ಪತ್ರಿಕೆ 'ಸಾಧನೆ', ಅಧ್ಯಯನದ ಆಕಾಂಕ್ಷಿಗಳಿಗೆ ಆಸರೆಯಾಗಿತ್ತು. ಮೌಲ್ಯಮಾಪನ ಕೇಂದ್ರಗಳಿಗೆ ತಾವೇ ಬಂದು ಚಂದಾ ವಸೂಲುಮಾಡುತ್ತಿದ್ದರು. ಗುಣಪಕ್ಷಪಾತಿಗಳಾದ ಜಿ.ಎಸ್.ಎಸ್. ವಿವಿಧ ಮನೋಧರ್ಮದ ಪ್ರತಿಭಾಶಾಲಿ ಯುವಕರನ್ನು ಎಲ್ಲೆಡೆಯಿಂದ ಆಯ್ಕೆ ಮಾಡಿದ್ದರಿಂದ ಅಂದಿನ ಕನ್ನಡ ಅಧ್ಯಯನ ಕೇಂದ್ರ ಅತ್ಯುತ್ತಮ ಕೇಂದ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು, ಜೀವಂತವಾಗಿತ್ತು. 'ಭಿನ್ನವಿದ್ದರೂ ಬೆರೆಯಬಹುದು' ಎಂಬುದರಲ್ಲಿ ಅಚಲ ನಂಬಿಕೆ.

ಆಡಳಿತ ನಿರ್ವಹಣೆ ಮತ್ತು ಸಂಘಟನೆಯಲ್ಲಿ ಮೂರು ವಿಧ–

(೧) ತಾವು ವಹಿಸಿಕೊಂಡ ಕಾರ್ಯವನ್ನು ಪ್ರೀತಿಯಿಂದ, ಕೆಲಸವನ್ನು ವಿಕೇಂದ್ರೀಕರಣಗೊಳಿಸಿ, ಎಲ್ಲರನ್ನು ತೊಡಗಿಸಿಕೊಂಡು, ಹತ್ತುಜನಕ್ಕೆ ಹಿತವಾಗುವಂತೆ ಕೆಲಸ ಮಾಡುವುದು.

(೨) ತಾವು ವಹಿಸಿಕೊಂಡ ಕಾರ್ಯವನ್ನು ಉದಾಸೀನದಿಂದ, ಸ್ವಜನ ಪಕ್ಷಪಾತದಿಂದ, ಉಡಾಫೆಯಿಂದ, ಕಾರ್ಯಕ್ರಮದ ಹದವನ್ನು ಹಾಳುಗೆಡಹುವುದು.

(೩) ತಾವು ವಹಿಸಿಕೊಂಡ ಕಾರ್ಯವನ್ನು ನಿರುತ್ಸಾಹದಿಂದ, ಅನಾದರದಿಂದ, ಯಾಂತ್ರಿಕವಾಗಿ ಕಾರ್ಯನಿರ್ವಹಿಸಿ ಹಾಗೂ ಹೀಗೂ ದಡ ಸೇರಿಸುವುದು.

ಜಿ.ಎಸ್.ಎಸ್. ಇವುಗಳಲ್ಲಿ ಮೊದಲನೆಯ ವರ್ಗಕ್ಕೆ ಸೇರಿದವರು. ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಮೇಷ್ಟ್ರು ಮದುವೆ ಮನೆಯಲ್ಲಿನ, ಹೆಣ್ಣಿನ ತಂದೆಯಂತೆ ಉತ್ಸಾಹ, ಸಡಗರ, ಪ್ರೀತಿ, ಆತಂಕಗಳಿಗೆ ಒಳಗಾಗುತ್ತಿದ್ದುದು ಸಾಮಾನ್ಯ.

ಜಿ.ಎಸ್.ಎಸ್. ಅಧ್ಯಯನ ಕೇಂದ್ರದ ನಿರ್ದೇಶಕರಾದ ಮೇಲೆ ಎಂ.ಎ., ತರಗತಿಗಳ ಪಠ್ಯಕ್ರಮವನ್ನು ಹೊಸ ಅಗತ್ಯಗಳಿಗೆ ತಕ್ಕಂತೆ ಪರಿಷ್ಕರಿಸಿದರು. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಭಾರತೀಯ ಭಾಷೆಗಳ ಪಾಶ್ಚಾತ್ಯ ಸಾಹಿತ್ಯದ ಪರಿಚಯದ ಅವಕಾಶವನ್ನು ಕಲ್ಪಿಸಿದರು. ಕನ್ನಡ ವಿದ್ಯಾರ್ಥಿಗಳ ಅರಿವಿನ ಸೇವೆಯನ್ನು ವಿಸ್ತರಿಸಿದರು. ಪದವಿ ತರಗತಿಗಳಲ್ಲಿ ಸಮಕಾಲೀನ ಕನ್ನಡ ಕವಿತೆ, ವಿಮರ್ಶೆಯ ದಾರಿ, ವಿಚಾರ ಸಾಹಿತ್ಯ ಮುಂತಾದುವು ಬಂದುವು. ಸಮಕಾಲೀನ ಸನ್ನಿವೇಶಗಳಿಗೆ ತಕ್ಕಂತೆ ಔಚಿತ್ಯಪೂರ್ಣ ಪಠ್ಯಗಳನ್ನು ಗೊತ್ತುಪಡಿಸಿದರು. ಇವರ ಸಮಗ್ರ ಕಾರ್ಯದಕ್ಷತೆಯನ್ನು ಕಂಡ ಧಾರವಾಡದ ಡಾ. ಆರ್.ಸಿ. ಹಿರೇಮಠ ಅವರು "ಶಿವರುದ್ರಪ್ಪನವರ ಅವಧಿಯಲ್ಲಿ ಕನ್ನಡ ಅಧ್ಯಯನ ಕೇಂದ್ರ ಆನೆಯ ಶಕ್ತಿ ಪಡೆದು, ಅನೇಕ ಹಸ್ತಿಗಳುಳ್ಳ ಐರಾವತವಾಯಿತು" ಎಂದಿದ್ದಾರೆ.

ಕನ್ನಡ ಅಧ್ಯಯನ ಕೇಂದ್ರವಾಗಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಾಗಲಿ, ಅವರ ಕಾರ್ಯವೈಖರಿ ಬದಲಾಗಲಿಲ್ಲ. ಪ್ರತಿದಿನ ಅಕಾಡೆಮಿಗೆ ಬರುತ್ತಿದ್ದರು. ಕಾರ್ಯಕ್ರಮಗಳನ್ನು ಉಪಸಮಿತಿ ಸದಸ್ಯರೊಂದಿಗೆ ಚರ್ಚಿಸಿ, ಯೋಜಿಸುತ್ತಿದ್ದರು. ಅಂಚೆಗೆ ಸಿದ್ಧವಾದ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ಪರಿಶೀಲಿಸುತ್ತಿದ್ದರು. ಸಮಾರಂಭದ ಹಿಂದಿನ ದಿನ, ಸಮಾರಂಭ ನಡೆಯುವ ಸ್ಥಳವನ್ನು ಪರಿಶೀಲಿಸಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಹಿರಿಯರಿರಲಿ, ಕಿರಿಯರಿರಲಿ ಒಂದೇ ರೀತಿಯ ಪ್ರೀತಿ ವಿಶ್ವಾಸಗಳನ್ನು ತೋರುತ್ತಿದ್ದರು. ಯುವ ಲೇಖಕರಿಗೆ, ಕವಿಗಳಿಗೆ ಹಿರಿಯರ ಮಧ್ಯೆ ಅವಕಾಶ ಕಲ್ಪಿಸುತ್ತಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಇಪ್ಪತ್ತೈದು ವರ್ಷಗಳ ಚರಿತ್ರೆಯಲ್ಲಿ ಪ್ರಕಟವಾದ ಪುಸ್ತಕಗಳ ಸಂಖ್ಯೆ ಮೂವತ್ತು. ಜಿ.ಎಸ್.ಎಸ್. ಅವಧಿಯ ಮೂರು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳ ಸಂಖ್ಯೆ ಐವತ್ತಮೂರು. ಇವರ ಅವಧಿಯಲ್ಲಿ ಅಕಾಡೆಮಿಯು ಉಪ ನಿಬಂಧನೆಗಳ (Bye-law)ನ್ನು ರೂಪಿಸಿತು. ಬೆಂಗಳೂರಿನಲ್ಲೇ ನಡೆಯುತ್ತಿದ್ದ ಗೌರವ ಪ್ರಶಸ್ತಿ ಪ್ರದಾನ ಸಮಾರಂಭಗಳು ಮೈಸೂರು, ಉಡುಪಿ, ಧಾರವಾಡಗಳಲ್ಲಿ ನಡೆಯುವಂತಾದುವು. ಏಕರೂಪ ಮುದ್ರಣದರ ಮತ್ತು ಪುಸ್ತಕ ಆವರ್ತಕ ನಿಧಿ ಪ್ರಾರಂಭವಾದುವು. ಡಾ. ಕೆ.ಎಂ. ಜಾರ್ಜ್ ಸಂಪಾದಿತ 'ಭಾರತೀಯ ಸಾಹಿತ್ಯ ಸಮೀಕ್ಷೆ'ಯ ಎರಡು ಬೃಹತ್ ಅನುವಾದಿತ ಸಂಪುಟಗಳು ಪ್ರಕಟಗೊಂಡವು; ಸಾಹಿತ್ಯದ ವಿದ್ಯಾರ್ಥಿಗಳಿಗೆ ಕಣಜವಾಗಿರುವ 'ಸಾಲು ದೀಪಗಳು' ಪ್ರಕಟವಾಯಿತು. ಜೊತೆಗೆ ಸಾಹಿತ್ಯ ಪಾರಿಭಾಷಿಕ ಮಾಲೆ; ವಿಚಾರ ಸಂಕಿರಣ ಮಾಲೆ;

ಪ್ರವಾಸ ಸಾಹಿತ್ಯ ಮಾಲೆ; ಯುವ ಕಾವ್ಯ ಹಾಗೂ ವಾರ್ಷಿಕ ಸಂಕಲನ ಕೃತಿಗಳು ಪ್ರಕಟಗೊಂಡವು. ಸಾಂಸ್ಕೃತಿಕ ಚಟುವಟಿಕೆಗಳು, ನಿರಂತರವಾಗಿ ನಡೆದುವು.

ಅಕಾಡೆಮಿಯ ಸಿಬ್ಬಂದಿಯೊಂದಿಗೆ ಆಗಾಗ ಕೋಪ ಮಾಡಿಕೊಳ್ಳುತ್ತಿದ್ದರು. ಆದರೆ ಬಿಂಕ ಬಿಗುಮಾನಗಳಿಂದ ಅಮಾನವೀಯವಾಗಿ ನಡೆದುಕೊಂಡವರಲ್ಲ. ಮೊದಲ ಬಾರಿಗೆ ಅಕಾಡೆಮಿಯ ಸಿಬ್ಬಂದಿಯನ್ನು ಖಾಯಂಗೊಳಿಸುವ ನಿರ್ಣಯವನ್ನು ತೆಗೆದುಕೊಂಡು ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಿದರು. ಜಿ.ಎಸ್.ಎಸ್. ಆಡಳಿತದ ನಿರ್ಭೀತಿ ಮತ್ತು ಕಾರ್ಯದಕ್ಷತೆಯನ್ನು ಸೂಚಿಸಲು ಆಗ ಒಂದು ಅಪರೂಪದ ಘಟನೆ ನಡೆಯಿತು.

ಅಕಾಡೆಮಿ ಪ್ರಕಟಿಸುವ ಇಂಗ್ಲಿಷ್ 'ಅನಿಕೇತನ'ಕ್ಕೆ ಕೆ. ನರಸಿಂಹಮೂರ್ತಿ, ಬಿ.ಸಿ. ರಾಮಚಂದ್ರಶರ್ಮ ಮತ್ತು ಡಿ.ಆರ್. ನಾಗರಾಜ್ ಸಂಪಾದಕರಾಗಿದ್ದರು. ಏಕೋ ಏನೋ ಸಂಪಾದಕತ್ವದ ಬೇಜವಾಬ್ದಾರಿ ಮತ್ತು ಅನಾವಶ್ಯ ವಿಳಂಬ ಜಿ.ಎಸ್.ಎಸ್.ಗೆ ಹಿಡಿಸಲಿಲ್ಲ. 'ಅನಿಕೇತನ' ಸಕಾಲಕ್ಕೆ ಪ್ರಕಟವಾಗಬೇಕೆನ್ನುವ, ಆಡಳಿತಾತ್ಮಕ ದೃಷ್ಟಿಯಿಂದ ಸಂಪಾದಕರನ್ನು ವಜಾಮಾಡಿದರು. ಆಗ ಅಕಾಡೆಮಿ ರಿಜಿಸ್ಟ್ರಾರ್ ಆಗಿದ್ದ ಡಿ.ಕೆ. ಶ್ಯಾಮಸುಂದರ್ ಅವರು "ಸಂಪಾದಕರ ಅವಧಿ ಮುಗಿಯಿತು ಎಂದು ದಾಖಲಿಸೋಣವೆ ?" ಎಂದಾಗ, ಜಿ.ಎಸ್.ಎಸ್. "ವಜಾ ಪದವೇ ಇರಲಿ ಬಿಡಿ" ಅಂದರಂತೆ. ಆಗ ಒತ್ತಡಗಳು, ಒಡಕು ನುಡಿಗಳು, ಪ್ರತಿಭಟನೆಗಳು ಎದುರಾದರೂ ಜಿ.ಎಸ್.ಎಸ್. ಜಗ್ಗಲಿಲ್ಲ. ಅನಂತರ ಎಸ್. ರಾಮಸ್ವಾಮಿ, ಕೆ.ಎಸ್. ರಾಧಾಕೃಷ್ಣ ಮತ್ತು ಎಚ್.ಎಸ್. ಶಿವಪ್ರಕಾಶ್ ಸಂಪಾದಕರಾದರು. ಶಿವರುದ್ರಪ್ಪನವರು ಆತ್ಮೀಯತೆ, ಸೌಮ್ಯತೆಗಳಿಂದ 'ಶಿವ'ನಾಗಿಯೇ ಕಾಣಿಸಿಕೊಂಡರು. ಒಮ್ಮೊಮ್ಮೆ ಕಾರ್ಯಬಾಹುಳ್ಯದ ಒತ್ತಡದಿಂದ, ಆತಂಕದಿಂದ 'ರುದ್ರ' ಸ್ವರೂಪವನ್ನು ಪ್ರಕಟಿಸುತ್ತಿದ್ದರು.

ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಜನಪರವಾಗಿ, ಜನಪ್ರೀತಿಯಿಂದ ಮುನ್ನಡೆಯಬೇಕಾದರೆ ಮೂರು ಗುಣಗಳು ಅವಶ್ಯಕ.

(ಅ) ಪ್ರೀತಿ
(ಆ) ಪ್ರಾಮಾಣಿಕತೆ ಮತ್ತು
(ಇ) ಸಾಮರ್ಥ್ಯ

ಪ್ರೀತಿಯಿಲ್ಲದ ಮೇಲೆ ಯಾವುದೇ ಕೆಲಸ ಕೈಗೂಡುವುದಿಲ್ಲ. ಆತ್ಮೀಯತೆ ಕಂಡು ಬರುವುದಿಲ್ಲ. ಪ್ರೀತಿಯ ಜೊತೆಗೆ ಪಾರದರ್ಶಕ ಪ್ರಾಮಾಣಿಕತೆ ಕೂಡಿ ಬಂದರೆ ಒಳ್ಳೆಯದು. ಅಲ್ಲಿ ಮಾನವೀಯ ಸ್ಪರ್ಶ ಕಂಡು ಬರುತ್ತದೆ. ನಮ್ಮ ಸಾಮರ್ಥ್ಯದ ಇತಿಮಿತಿಗಳನ್ನು ಅರಿತುಕೊಂಡು ಕ್ರಿಯಾಶೀಲರಾದರೆ ಇನ್ನೂ ಒಳ್ಳೆಯದು. ಆಗ ಮಹತ್ವಾಕಾಂಕ್ಷೆಯಿಂದ ಮುಗ್ಗರಿಸುವುದಿಲ್ಲ. ಜಿ.ಎಸ್.ಎಸ್. ಅವರಲ್ಲಿ ಈ ಮೂರು ಗುಣಗಳು ಮುಪ್ಪುರಿಗೊಂಡಿವೆ. ಅವರು ಇಂದಿಗೂ ಸ್ಪಂದಿಸುವ ಗುಣವನ್ನು ಉಳಿಸಿಕೊಂಡಿದ್ದಾರೆ. ಸದಾ ಸವಿಮರ್ಶೆಯಿಂದಲೇ ಕ್ರಿಯಾಶೀಲನಾಗುವ ಕವಿ.

ಪ್ರಸ್ತುತ ಪು.ತಿ.ನ. ಟ್ರಸ್ಟ್‌ನ ಅಧ್ಯಕ್ಷರಾಗಿರುವ ಜಿ.ಎಸ್.ಎಸ್. ಟ್ರಸ್ಟ್‌ನ ಹಣಕಾಸಿನ ಮುಗ್ಗಟ್ಟಿನಲ್ಲೂ ಅಚ್ಚುಕಟ್ಟಾದ ಕೆಲಸವನ್ನು ಮಾಡಿದ್ದಾರೆ.

ಮೊದಲನೆಯದಾಗಿ, ಪು.ತಿ.ನ. ಹುಟ್ಟಿ ಬೆಳೆದ ಮೇಲುಕೋಟೆಯ ಮನೆಯನ್ನು ಪುನರ್‌ರಚಿಸಿ ನಾಡಿನ ಸಾಂಸ್ಕೃತಿಕ ಸ್ಮೃತಿಗೆ ಅರ್ಪಿಸಿದ್ದಾರೆ.

ಎರಡನೆಯದಾಗಿ ಪು.ತಿ.ನ. ಅವರ ಸಮಗ್ರಕಾವ್ಯ, ಸಮಗ್ರ ಗದ್ಯ, ಸಮಗ್ರ ನಾಟಕಗಳ ಪ್ರಕಟಣೆಗಳ ಜೊತೆಗೆ ಅವರ ಸಾಹಿತ್ಯದ ಮೇಲಿನ ವಿಮರ್ಶೆಯನ್ನು 'ಭೃಂಗ ಮಾರ್ಗ'ದ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಮೂರನೆಯದಾಗಿ ಪು.ತಿ.ನ. ಅವರ ಬದುಕು-ಬರಹಗಳನ್ನು ಕುರಿತು ವಿಚಾರ ಸಂಕಿರಣ ಗಳನ್ನು ಮತ್ತು ಸಂಗೀತ ಉತ್ಸವಗಳನ್ನು ಏರ್ಪಡಿಸುತ್ತಿದ್ದಾರೆ. ಪು.ತಿ.ನ. ಕಾವ್ಯ ಪ್ರಶಸ್ತಿಯನ್ನು ಅರ್ಹಕವಿಗಳಿಗೆ ಪ್ರತಿ ವರ್ಷ ನೀಡುತ್ತಿದ್ದಾರೆ.

ಇದು ಕವಿಗೆ ಕವಿ ಮುನಿವನ್ ಅಲ್ಲ, ಕವಿಗೆ ಕವಿ ಮಣಿವನ್.

ನಮ್ಮ ಮೇಷ್ಟರ ಆಡಳಿತ ಮತ್ತು ಸಂಘಟನೆಯ ಕಾಯಕವನ್ನು ಕಂಡಾಗ ವಿ. ಸೀತಾರಾಮಯ್ಯನವರ 'ಅಭೀಃ' ಕವನದ ಕೆಲವು ಸಾಲುಗಳು ನೆನಪಾಗುತ್ತವೆ.

'ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜದ ನೇರಕೆ ನಡೆಯುವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು'

ಇದು ಅವರ ವ್ಯಕ್ತಿತ್ವದ ಬುನಾದಿ; ಇದು ಅವರ ಸಾಧನೆಯ ಹಾದಿ; ಇದು ಅವರ ಬೆಳಕಿನ ಹೆಜ್ಜೆ ಗುರುತು.

*ಪ್ರಸಾರ ದಿನಾಂಕ: ೨೬-೧೧-೦೬*

■■

# ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯ

●

***ಡಾ. ಹೆಚ್.ಎಸ್. ರಾಘವೇಂದ್ರರಾವ್***

ರಾಷ್ಟ್ರಕವಿ ಕುವೆಂಪುರವರ ಕಮ್ಮಟದಲ್ಲಿ ಮೂಡಿಬಂದ ನಾಣ್ಯಗಳಲ್ಲಿ ಒಬ್ಬರಾದ ಡಾ. ಜಿ.ಎಸ್. ಶಿವರುದ್ರಪ್ಪನವರು ಎಲ್ಲಿಯಾದರೂ ಸಲ್ಲುವ ಸಾಮರ್ಥ್ಯವನ್ನು ಪಡೆದವರು. ಆದರೆ ಅವರ ಹೃದಯಕ್ಕೆ ಹತ್ತಿರವಾಗಿ, ಅಂತರಂಗದ ಆತಂಕಗಳಿಗೆ ಆಕಾರಕೊಟ್ಟದ್ದು ಮಾತ್ರ ಕಾವ್ಯವೇ. ಅವರದು ಜನರನ್ನು ಕುರಿತು, ಜನರಿಗೆ ತಲುಪುವಂತೆ ರಚಿಸಿದ ಕಾವ್ಯ. ಜನರ ದಿನದಿನದ, ಕ್ಷಣಕ್ಷಣದ ಪಾಡುಗಳನ್ನು ಗ್ರಹಿಸುವುದು, ಅವುಗಳಿಗೆ ಮದ್ದನ್ನು ಅರೆಯಬಲ್ಲ ದಿವ್ಯತೇಜಗಳನ್ನು ಅರಸುವುದು, ಅಂಥ ಪರಿಹಾರಗಳ ಅಸಹಾಯಕತೆಯು ಮನದಟ್ಟಾದಾಗ 'ಯಾವ ಹಾಡು ಹಾಡಲಿ?' ಎಂದು ಕೊರಗುವುದು ಅವರ ಕಾವ್ಯದ ದಂದುಗವಾಗಿದೆ. ಅವರ ಕವಿತೆಗಳು ಕಟ್ಟಿಕೊಡುವುದು ವರ್ಗ, ವರ್ಣ ಮತ್ತು ಲಿಂಗಗಳ ನೆಲೆಯಲ್ಲಿ ಒಡಮೂಡುವ, ಸಾಮಾಜಿಕವಾದ ಯಾತನೆ ಮತ್ತು ಶೋಷಣೆಗಳನ್ನು ಮಾತ್ರ ಅಲ್ಲ. ಬದಲಾಗಿ, ಯಂತ್ರನಾಗರಿಕತೆಯ ಫಲವಾಗಿ ಮುರಿದು ಬೀಳುತ್ತಿರುವ ಮನುಷ್ಯ ಸಂಬಂಧಗಳೂ ಅವರ ಮನಸ್ಸನ್ನು ಕಲಕಿವೆ. ಹಾಗೆಂದು ನಾಡಿನ ಇತಿಹಾಸದ ಕಳೆದುಹೋದ ಪುಟಗಳಲ್ಲಿ ಚಿನ್ನದ ಯುಗವೊಂದನ್ನು ಹುಡುಕುವ ಜಾಣತನದ ಹುನ್ನಾರಗಳು ಅವರದಲ್ಲ. ಮೊದಮೊದಲ ದಿನಗಳ ರಾಮಕೃಷ್ಣ ಪರಮಹಂಸರ ಪ್ರಭಾವಲಯದಿಂದ ಬಹುಬೇಗ ಹೊರಬಂದ ಈ ಕವಿ "ಇಲ್ಲದ ದೇವರನ್ನು" ಹುಡುಕುವ ಹಂಬಲದಲ್ಲಿ ಕಳೆದುಹೋಗದೆ, ಇಲ್ಲೇ ಇರುತಿಹ ಪ್ರೀತಿ ಸ್ನೇಹಗಳನ್ನು ಗುರುತಿಸಿದವರು. ಅವರು ಸನ್ನಿವೇಶದ ಜಟಿಲತೆಯನ್ನು ಗ್ರಹಿಸದ ಮುಗ್ಧ ಆಶಾವಾದಿಯೂ ಅಲ್ಲ. ಅವರದು 'ದಟ್ಟ ಕತ್ತಲಿನ ಅಟ್ಟಹಾಸದ ನಡುವೆ ದೀಪ ಹಚ್ಚುವ ಕೆಲಸ'. ಆದ್ದರಿಂದಲೇ ಅವರು ನಮ್ಮ ಕಾಲದ ಸಾಮಾನ್ಯ ಮನುಷ್ಯನ ಜೀವನಕ್ಕೆ ಕನ್ನಡಿ ಹಿಡಿದಿರುವ ಕೆಲವೇ ಕವಿಗಳಲ್ಲಿ ಒಬ್ಬರು. ಸದಾಸರ್ವದಾ ದೀನಾನಾಥರ ದುಃಖಿ ದರಿದ್ರರ ಪರವಾದರೂ ಅವರು ರಾಜಕೀಯ ಪರಿಹಾರಗಳ ರಭಸಮತಿಗೆ ಮನತೆತ್ತವರಲ್ಲ. ಅವರ ಕವಿತೆಯು ಕನ್ನಡಿಯೂ ಹೌದು. ಓದಿದಾಗ, ಹಾಡಿದಾಗ ನೆಮ್ಮದಿ ನೀಡುವ ಔಷಧಿಯೂ ಹೌದು.

ತನ್ನ ಮತ್ತು ಅದರ ನಂತರದ ಎರಡು ಪೀಳಿಗೆಗಳು ಅನುಭವಿಸಿದ ಆಧುನಿಕತೆಯನ್ನು

ಆದರ ತಾರಕ ಮತ್ತು ಮಾರಕ ಮುಖಗಳಲ್ಲಿ ಕಂಡವರು ಜಿ.ಎಸ್.ಎಸ್. ಮನೆ ಮನಗಳ ಕೊಚ್ಚಿಕೊರೆದು, ಬುಸುಗುಟ್ಟುವ ಈ ಪ್ರವಾಹದ ಪ್ರಭಾವವನ್ನು ಅವರು

"ಗುಡಿ-ಗೋಪುರ ಉರುಳುತಿವೆ
ಹಳೆಯ ಪ್ರತಿಮೆ ತೇಲುತಿವೆ
ದೀಪವಾರಿ ತಂತಿಹರಿದು
ವಾದ್ಯ-ವೃಂದ ನರಳುತಿದೆ
ಎದೆ ಎದೆಗಳ ನಡುವೆ ಇದ್ದ
ಸೇತುವೆಗಳು ಮುರಿದಿವೆ
ಭಯ ಸಂಶಯ ತಲ್ಲಣಗಳ
ಕಂದರಗಳು ತೆರೆದಿವೆ
ಮುಖಮುಖವೂ ಮುಖವಾಡವ
ತೊಟ್ಟು ನಿಂತ ಹಾಗಿದೆ
ಆಡುತಿರುವ ಮಾತಿನೊಳಗೆ
ಹೃದಯ ಕಾಣದಾಗಿದೆ"

ಎಂದು ವರ್ಣಿಸಿದ್ದಾರೆ. ಆದರೆ ಇದು ಸಾಮಾಜಿಕ ಬದಲಾವಣೆಗಳ ಪರಿಣಾಮವಾಗಿ, ಅಲಕ್ಷಿತ ಸಮುದಾಯಗಳಿಗೆ ತೆರೆದ ಅವಕಾಶಗಳ ಬಾಗಿಲುಗಳನ್ನು ಗಮನಿಸದ ಹಳಹಳಿಕೆಯಲ್ಲ. 'ಎಲ್ಲೋ ಒಂದೇ ಸಮನೆ ಅಳುತ್ತಿರುವ ಮಗು', 'ಕಾಡಿನ ಕತ್ತಲಲ್ಲಿ, ಏಟು ಬೀಳುವ ಭಯಕ್ಕೆ ನಡುಗುತ್ತ ಕುಳಿತಿರುವ ಕಡ್ಡಿ ಕಾಲಿನ, ಜೋಲು ಮೋರೆಯ ಹುಡುಗ', 'ಸಾಧು-ಸಂತ-ಮಠ ದೇಗುಲ ವರ್ಗದ ಅಜಗರಪೀಡಿತ ಜನರು' ಅವರ ಕವಿತೆಗಳ ಶಾಶ್ವತ ನಿವಾಸಿಗಳು. ಆದರೆ ಸ್ವಾಗತಾರ್ಹವಾದ ಈ ಪರಿವರ್ತನೆಯ ಸಂಗಡವೇ ನೈತಿಕ ಅಧಃಪತನವೂ ಬಂದಿದೆಯಲ್ಲಾ ಎಂಬ ನೋವು ಅವರ ಕವಿತೆಯದು. ಎರಡನೆಯದು ಮೊದಲನೆಯದರ ಪರಿಣಾಮವೆಂದು ಅವರು ತಿಳಿದಿಲ್ಲ. ಆದರೂ ಇದು ಏಕೆ, ಹೇಗೆ ಎಂಬ ಚಿಂತೆ ಅವರನ್ನು ಕಾಡಿದೆ. ಹಾಗೆ ನೋಡಿದರೆ ವೈಯಕ್ತಿಕವಾದ ಮನುಷ್ಯ ಸಂಬಂಧಗಳಲ್ಲಿ ಇರಬಹುದಾದ ನೈತಿಕತೆಯು ಸಾಮುದಾಯಿಕ ಸತ್ವಗಳ ವಿಷಮ ಸಂಬಂಧಗಳಲ್ಲಿ ಕಾಣಿಸಲಾರದು, ಕಾಣಿಸ ಬಾರದು. ಸಮಾಜವು ಒಪ್ಪಿಕೊಂಡ ನೈತಿಕತೆಯ ಗಡಿಗೆರೆಗಳನ್ನು ಮುರಿದು, ಹೊಸ ನೈತಿಕತೆ ಯೊಂದು ಸದಾ ಒಡಮೂಡುತ್ತಿರುತ್ತದೆ. ಅದು ಸಾಮಾಜಿಕ ಸನ್ನಿವೇಶದಲ್ಲಿಯೇ ಆಗಿರುವ ಚಲನೆಗಳ ಪರಿಣಾಮ. ಆದರೆ ಜೀವನಕ್ರಮದಲ್ಲಿ ಅಂತೆಯೇ ಮೌಲ್ಯವ್ಯವಸ್ಥೆಯಲ್ಲಿ ಆಗಿರುವ ಪರಿವರ್ತನೆಗೆ ಇರುವ ಕಾರಣಗಳು ಭಿನ್ನವಾದವು. ಅವು ಹಣಕೇಂದ್ರಿತ, ವ್ಯಾಪಾರಕೇಂದ್ರಿತ ಸಂಸ್ಕೃತಿಗೆ ಅಂಟಿಕೊಂಡ ರೋಗಗಳು. ಜಿ.ಎಸ್.ಎಸ್. ಅವರ ಕಾವ್ಯವು ಇವೆಲ್ಲವನ್ನೂ ಒಂದೇ ಬೀಸಿನಲ್ಲಿ ಹಿಡಿಯಲು ಪ್ರಯತ್ನಿಸುತ್ತದೆ. ದಿಗ್ಭ್ರಾಂತವಾದ ಕವಿಮನಸ್ಸು

"............ ಎಲ್ಲ ಪಾಠಗಳೂ ಮರೆತು
ಮತ್ತೆ ಚಿತ್ತವಿಕಾರ. ಈ ಮಾನವತೆಯ
ಹೃದಯದ ಮೇಲೆ ಎಷ್ಟೊಂದು ಗಾಯಗಳ ಗುರುತು'

ಎಂದು ಉದ್ಗರಿಸುತ್ತದೆ.

ಜಿ.ಎಸ್.ಎಸ್. ಅವರ ಕವಿತೆಗೆ ಅದರದೇ ಆದ ವಿಕಸನದ ದಾರಿ ಇದೆ. ಅದು 'ಸಾಮಗಾನ'ದಿಂದ ಹಿಡಿದು 'ವ್ಯಕ್ತಮಧ್ಯ'ದವರೆಗೆ, ಆರು ದಶಕಗಳ ಹರಹಿನಲ್ಲಿ ಮಾಗುವ ಹಾದಿಯಲ್ಲಿ ನಡೆದುಬಂದಿದೆ. ಆ ಹಾದಿಯಲ್ಲಿ ಅವರ ಎಡೆಬಿಡದ ಸಂಗಾತಿಗಳೆಂದರೆ ಒಂಟಿತನ, ವಿಷಾದಗಳು ಮತ್ತು ಅವುಗಳಿಗೆ ಅವರು ಕಂಡುಕೊಂಡ ಮತ್ತು ಇತರರಿಗೆ ತೋರಿಸಿಕೊಟ್ಟ ಪರಿಹಾರಗಳು. ಅವರ ಜೀವನ ಮತ್ತು ಸಾಧನೆಗಳು ಯಾವಾಗಲೂ ಲೋಕಮುಖಿಯಾಗಿವೆ. ಸಾರ್ವಜನಿಕ ವಲಯಗಳಲ್ಲಿ ಬೆಲೆಬಾಳುವ ಕೆಲಸ ಮಾಡುವುದು ಹೇಗೆಂದು ತೋರಿಸಿಕೊಟ್ಟ ಅವರು, ನಮ್ಮ ಕಾಲದ ಕನ್ನಡ ಸಂಸ್ಕೃತಿಯ ನಿರ್ಮಾಪಕರಲ್ಲಿ ಒಬ್ಬರು. ಆದರೆ ಅವರ ಒಳಬದುಕಿನ ಕೇಂದ್ರ ತಬ್ಬಲಿತನದ ವಿಷಾದ ಬಹು ಬೇಗ ತಾಯಿಯನ್ನು ಕಳೆದುಕೊಂಡರೂ ಅವರ ಕವಿತೆಯು ತಾಯಿತನದ ಆರ್ದ್ರತೆ ಮತ್ತು ತಂದೆತನದ ಧೀರತೆಗಳನ್ನು ರೂಢಿಸಿಕೊಂಡಿದೆ. ಉಡುಗಣವೇಷ್ಟಿತ ಆಕಾಶ ಮತ್ತು ಕಣ್ಣ ನೀರು, ಮಣ್ಣು ಧೂಳುಗಳ ಭೂಮಿ ಎರಡೂ ಅವರಿಗೆ ಬಾಹಿರವಲ್ಲ. ಈ ವಿಷಾದಕ್ಕೆ ಆಧ್ಯಾತ್ಮದ ಸಾಂತ್ವನ ಸಿಕ್ಕಲಿಲ್ಲ. ಅದು ಸುತ್ತಮುತ್ತಲಿನವರ ದುಷ್ಟವರ್ತನೆಯ ಗುಡುಗು ಸಿಡಿಲು ಮಿಂಚುಗಳಿಂದ ನೊಂದರೂ ಅದರಾಚೆಗಿರುವ ಮನುಷ್ಯಚೇತನದ ಅಚಂಚಲವಾದ ನೀಲಿಯಲ್ಲಿನ ನಂಬಿಕೆಯನ್ನು ಕಳೆದುಕೊಳ್ಳಲಿಲ್ಲ. ಅವರ ಕವಿತೆಯು ತನ್ನ ಮೊದಲ ಹಂತಗಳಲ್ಲಿ ಭಾವನೆಗಳ ಹಿಡಿತದಲ್ಲಿರುವ ವಿಚಾರಗಳ ಅಭಿವ್ಯಕ್ತಿಯಾದರೆ, ನಂತರದ ದಿನಗಳಲ್ಲಿ ಅದು ವಿಚಾರಗಳ ನಿಯಂತ್ರಣದಲ್ಲಿರುವ ಭಾವನೆಗಳ ಲೋಕವಾಗಿದೆ. ಗಂಭೀರ ಚಿಂತನೆಯು ಈಚಿನ ಸಂಕಲನಗಳ ಪ್ರಮುಖ ಲಕ್ಷಣ. ಸಹಜವಾಗಿಯೇ ಇಲ್ಲಿ ಕವಿತೆಯ ಶಿಲ್ಪವು ಗೇಯತೆ ಹಾಗೂ ನಿಯತಲಯಗಳಿಗೆ ವಿದಾಯ ಹೇಳಿ ಆಲೋಚನೆಗೆ ಸಹಜವಾದ ಲಯಗಳನ್ನು ಬಳಸಿಕೊಂಡಿದೆ.

ಯಾವುದೇ ಮಹತ್ವದ ಕವಿಯನ್ನು ಸಾಹಿತ್ಯಕ ಚಳುವಳಿಗಳ ಅಳತೆ ಪಟ್ಟಿಯಿಂದ ಕಟ್ಟಿಹಾಕುವುದು ಸಾಧ್ಯವಿಲ್ಲ. ಆದರೆ, ತನ್ನ ಭಾಷೆಯ ಕಾವ್ಯದ ಸಮಕಾಲೀನ ಚಲನವಲನಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದು ತಾನು ಈಗಾಗಲೇ ಸವೆಸಿದ ದಾರಿಯಲ್ಲಿ ನಡೆಯುವ ಮೊಂಡು ಕವಿಗಳು ಬಹು ಬೇಗ ಬದಿಗೆ ಸರಿಯುತ್ತಾರೆ. "ದಾರಿ ನೂರಾರಿವೆ ಬೆಳಕಿನರಮನೆಗೆ ಎಂದು ನಂಬಿದ ಶಿವರುದ್ರಪ್ಪನವರು, ಆ ಪದದ ಅರ್ಥದಲ್ಲಿಯೂ ಸಮನ್ವಯ ಕವಿಯಲ್ಲ. ಅವರು ಸಾಹಿತ್ಯಕ, ಸಾಮಾಜಿಕ ಆಗುಹೋಗುಗಳಿಗೆ ತೆರೆದಮನದ ಪರಿಭಾವನೆಯನ್ನು ನೀಡಿ, ತಮ್ಮದೇ ಕಾವ್ಯಮಾರ್ಗವನ್ನು ಕಟ್ಟಿಕೊಂಡವರು. 'ದೀಪದ ಹೆಜ್ಜೆ' ಸಂಕಲನದ ಹೊರಚಹರೆಗಳು ನವ್ಯವೆನಿಸಿದರೂ ಒಳತುಡಿತಗಳು ಮೊದಲಿನಿಂದ ಇದ್ದಂಥವೇ. ಈ ವಿಷಯದಲ್ಲಿ ಜಿ.ಎಸ್.ಎಸ್. 'ಶಿಲಾಲತೆ'ಯಿಂದ 'ತೆರೆದ ಬಾಗಿಲು' ಮೂಲಕ 'ನವಪಲ್ಲವ'ದ ಕಡೆಗೆ ಚಲಿಸಿದ ನರಸಿಂಹಸ್ವಾಮಿಯವರ ಹಾಗೆ. ಇಬ್ಬರೂ ಪಕ್ಷಾಂತರಿಗಳಲ್ಲ. ಇಬ್ಬರೂ ಮುಕ್ತಮನಸ್ಕರು ಹಾಗೂ ಪ್ರಯೋಗಪರರು. ತಮ್ಮ ಮನೆಯ ಕಿಟಕಿ ಬಾಗಿಲುಗಳನ್ನು ಬೆಳಕಿಗಾಗಿ ತೆರೆದರೂ, ಅವು ಬಿರುಗಾಳಿಯಿಂದ ಕುಸಿಯದಂತೆ ಕಾಪಾಡಿಕೊಂಡವರು. ದಲಿತ ಮತ್ತು ಬಂಡಾಯ ಚಳುವಳಿಗಳ ಆಶಯಗಳ ಮಾತೂ ಹಾಗೆಯೇ. ಅವುಗಳಿಲ್ಲದೆ ಯಾವ ಕಾಲದ ಕವಿಯೂ ನಿಜವಾದ ಕವಿಯಾಗಲಾರ. ಹಾಗೆಂದು ಅವರ ಶಿಲ್ಪ, ಶೈಲಿಗಳನ್ನು ಅನಾಮತ್ತಾಗಿ ಅನುಕರಿಸುವವನೂ

ಎಂದೆಂದಿನ ಪ್ರಕೃತಿ, ಇಂದಿನ ಬದುಕು, ಮನುಷ್ಯಸಂಬಂಧಗಳು, ಆದರ್ಶಪರತೆ, ನೈತಿಕ ಕಾಳಜಿ ಮತ್ತು ನಮ್ಮೆಲ್ಲರ ದೊಡ್ಡತನ ಮತ್ತು ದುಷ್ಟತನಗಳ ದ್ವಂದ್ವ ಮತ್ತು ಲೋಕವ್ಯವಹಾರಗಳ ಬಗೆಗಿನ ತಾತ್ವಿಕ ಕುತೂಹಲ ಇವು ಶಿವರುದ್ರಪ್ಪನವರ ಕಾವ್ಯದ ಪ್ರಮುಖ ಆಶಯಗಳು. ಇವುಗಳ ಸಂಗಡ ಚರಿತ್ರೆ ಮತ್ತು ಕಾಲಗತಿಗಳ ಬಗೆಗಿನ ಕುತೂಹಲವೂ ಸೇರಿಕೊಳ್ಳುತ್ತದೆ. ಮರೆಯಬಾರದ ಮಾತೆಂದರೆ, ಅವರು ಇವೆಲ್ಲವನ್ನು ಬಿಡಿಬಿಡಿಯಾಗಿ ನೋಡಿ, ಪ್ರತ್ಯೇಕ ಕವನಗಳನ್ನು ಬರೆಯಲಿಲ್ಲ. ಬದಲಾಗಿ ಅವರ ಅನೇಕ ಸಾರ್ಥಕ ಕವನಗಳು ಮತ್ತು ಒಟ್ಟು ಕಾವ್ಯ ಇವೆಲ್ಲದರ ಸಂಕೀರ್ಣ ಹೆಣಿಗೆಯನ್ನು ಸಾಧಿಸಿವೆ. ಚರಿತ್ರೆ, ಪುರಾಣ, ಪ್ರಕೃತಿ, ಪ್ರಾಣಿಲೋಕ, ತನಗಿಂತ ಹಿಂದಿನವರು ಬರೆದ ಕವಿತೆಗಳು ಎಲ್ಲವೂ ಅವರಿಗೆ ತಮ್ಮ ಕಾಳಜಿಗಳನ್ನು ಕಟ್ಟಿಕೊಡುವ ಕೆಲಸದಲ್ಲಿ ನೆರವಾಗುತ್ತವೆ. ಅವು ಕವಿತೆಯ ಶಿಲ್ಪದ ಇಟ್ಟಿಗೆಗಳಾಗುತ್ತವೆ. ಉದಾಹರಣೆಗೆ 'ನನ್ನ ನಿನ್ನ ನಡುವೆ' ಕವಿತೆಯು ಪ್ರಕೃತಿಯಿಂದ ಹೆಕ್ಕಿತೆಗೆದ ಚಿತ್ರಗಳ ಮೂಲಕವೇ ಅಂತರಂಗದ ಬಿರುಗಾಳಿಯನ್ನು ರೂಪಿಸುತ್ತವೆ. ಅನೇಕ ಬಾರಿ ಅವರು ಒಂದು ಘಟನೆ ಅಥವಾ ದೃಷ್ಟಾಂತ ಕಥೆಗಳ ಮೂಲಕ, ಕವಿತೆಯ ಆಶಯವನ್ನು ರೂಪಿಸಿಕೊಡುತ್ತಾರೆ. ವ್ಯಕ್ತಮಧ್ಯದಲ್ಲಂತೂ ಇದು ವಿಪುಲವಾಗಿದೆ. 'ನಟ್ಟಿರುಳಲ್ಲಿ', 'ಒಂದು ಹಳೆಯ ಕಥೆ', 'ಒಂದು ನೆನಪು' ಮುಂತಾದವು ಇದಕ್ಕೆ ನಿದರ್ಶನಗಳು. 'ಪೂರ್ಣಾ ನದಿಯ ಮೊಸಳೆ' ಕವಿತೆಯಲ್ಲಿ ಕಾಲಡಿಯ ನೆಲದಲ್ಲಿ ಕಂಡ ನಿಜವಾದ ಮೊಸಳೆಯು ಬಾಲಶಂಕರನನ್ನು ನೀರಿಗೆಳೆದ ಮೊಸಳೆಯಾಗಿ, ಕ್ರಮೇಣ

> "ನೋಡುತ್ತೇನೆ : ಇಡೀ ನದಿ ಭಾರೀ ಮೊಸಳೆ
> ಯೊಂದರ ನಾಲಿಗೆಯಂತೆ ನಿಡಿದಾಗಿ ಚಾಚ
> ಕೊಂಡಿದೆ. ಮೇಲೆ ತೆರೆದಾಕಾಶ, ಕೆಳಗೆ
> ಹಾಸಿದ ಭೂಮಿ, ನಿಜವಾಗಿಯೂ ನಾವೆಲ್ಲ
> ಮೊಸಳೆಯೊಂದರ ಬಾಯೊಳಗೆ ಇದ್ದೇವೆ
> ಎಂದಿನಿಂದಲೂ ಏನೊ, ನಮಗೆ ಬಿಡುಗಡೆಯಿಲ್ಲ."

ಎಂಬ ತಿಳಿವಳಿಕೆಯಾಗಿ ಮುಕ್ತಾಯವಾದಾಗ ಅದು ಕೇವಲ ಕವಿಯ ಅನುಭವವಾಗಿ ಉಳಿಯದೆ ನಮ್ಮೆಲ್ಲರ ಅರಿವಾಗುತ್ತದೆ. ಗೊತ್ತಿರುವ ಸತ್ಯವೇ ಹೊಸದೆಂಬಂತೆ ಭಾಸವಾಗಿ ಎದೆ ಝಲ್ ಎನ್ನುತ್ತದೆ. ಅವರು ಸತತವಾಗಿ ಕವಿತೆಯ ಕಟ್ಟೋಣ ಮತ್ತು ಕಾವ್ಯಭಾಷೆಯ ಲಯಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಅವರ ಕವಿತೆಯು ಹಾಡು ಮತ್ತು ಗದ್ಯಗಳೆಂಬ ಎರಡು ದಡಗಳ ನಡುವೆ ಚಲಿಸುವ ತುಂಬಿದ ಹೊಳೆ.

ಜಿ.ಎಸ್.ಎಸ್. ಅವರು ತಮ್ಮ ಬದುಕಿನಲ್ಲಿ, ವಿಚಾರಗಳಲ್ಲಿ, ಅಂತೆಯೇ ಕವಿತೆಯಲ್ಲಿ ನಿಗೂಢತೆಯ ಆರಾಧಕರಲ್ಲ. ಅಸ್ಪಷ್ಟತೆ, ಸಂದಿಗ್ಧತೆಗಳು ಅವರಿಗೆ ಹಿತವೆನಿಸುವುದಿಲ್ಲ. ಅನುಭಾವದ ಲೋಕವು ಅವರಿಂದ ಮಾರು ದೂರದಲ್ಲಿ ಉಳಿದಿದೆ. ಈ ಸಂಗತಿಗಳು ಅವರ ಕವಿತೆಯ ಆಕೃತಿ, ನಿರೂಪಣೆ ಮತ್ತು ಶಿಲ್ಪಗಳನ್ನು ತೀರ್ಮಾನಿಸಿವೆಯೆಂದು ತೋರುತ್ತದೆ. ಅವರದು ಕವಿತೆಯ ಮೂಲಕವೇ ನಿಲುಕದುದನ್ನು ಕಂಡುಕೊಳ್ಳುವ ಹಾದಿಯಲ್ಲ ಅದು ಒಳಗೆ ಹುದುಗಿರುವ ತಿಳಿವಳಿಕೆಗೆ ಶಬ್ದಚಿತ್ರಗಳ, ಭಾಷಿಕ ತಂತ್ರಗಳ ಮೂಲಕ, ಅಪ್ರಯತ್ನಪೂರ್ವಕವಾಗಿ ಆಕಾರಕೊಡುವ ದಾರಿ. ಕವಿತೆಯ ಭಾಷಿಕಲಯ ಮತ್ತು ಭಾವನಾತ್ಮಕ ಸಹಯೋಗಗಳು ಒಂದು ಕವಿತೆಯ ಒಡಲಿನಲ್ಲಿ ಮೂಡಿಬರುವ ಚಿತ್ರಮಾಲೆಯನ್ನು ನಿರ್ಧರಿಸುತ್ತವೆ.

ಸಹಜವಾಗಿಯೇ ಕವಿತೆಯ ಅರ್ಥವು ನಿಶ್ಚಿತವೂ ಒಂದು ಆಯಾಮವುಳ್ಳದ್ದೂ ಆಗುತ್ತದೆ. ಇಂಥ ಕಡೆ ಕವಿಯು ಓದುಗನಿಗೆ ಮಾರ್ಗದರ್ಶಿಯೇ ವಿನಾ, ಹುಡುಕಬೇಕಾದ ಹತ್ತು ಹಲವು ನೆಲೆಗಳನ್ನು ಹೊಂದಿರುವ ಕವಿತೆಯನ್ನು ರಚಿಸಿ ಅವನ ಗ್ರಹಿಕೆಗೆ ಸವಾಲುಹಾಕಿ ವಿರಮಿಸುವ ಕಲಾವಿದನಲ್ಲ. ಬೇಂದ್ರೆ ಮತ್ತು ಅಡಿಗರ ಕವಿತೆಗಳು ತಮ್ಮದೇ ಆದ ವಿಶಿಷ್ಟ ಬಗೆಗಳಲ್ಲಿ ಇಂಥ ನಿಗೂಢ ಶಿಲ್ಪಗಳನ್ನು ಹೊಂದಿರುವುದನ್ನು ನಾವು ಬಲ್ಲೆವು ಆದ್ದರಿಂದಲೇ ಜಿ.ಎಸ್.ಎಸ್.ಗೆ ಬಸವಣ್ಣನವರ ಪಾರದರ್ಶಕ ಕವಿತೆಯ ಜನಮುಟ್ಟುವ ಲಕ್ಷಣಗಳು ಹಿಡಿಸುವಂತೆ, ಅಲ್ಲಮನ ವಚನಗಳ ಅಪಾರದರ್ಶಕ ಆಳಗಳು ಹಿಡಿಸಲಾರವು. ಜಿ.ಎಸ್.ಎಸ್. ಕವಿತೆಗಳು ನಮ್ಮೆಲ್ಲರಿಗೂ ನಿಲುಕುವುದರಿಂದಲೇ, ನಮ್ಮ ನುಡಿಯಲ್ಲೇ ಬಣ್ಣಿಸುವುದರಿಂದಲೇ ಅವರು ಜನತೆಯ ಕವಿಯಾಗಿದ್ದಾರೆ. ಅದರ ಸಂಗಡವೇ ಅವರ ಹಲವು ಕವಿತೆಗಳು ತಮ್ಮ ಒಡಲಿನಲ್ಲಿಯೇ ಗೇಯತೆಯ ಸಾಧ್ಯತೆಗಳನ್ನು ತುಂಬಿಕೊಂಡಿದ್ದು, ಹಾಡದಿದ್ದರೂ ಹಾಡುಗಳಾಗಿ ನಮ್ಮ ಅಂತರಂಗವನ್ನು ತಲುಪುತ್ತವೆ. ಹಾಡಿದಾಗಲಂತೂ ಅವು ಕಾಡುವ ಕವಿತೆಗಳು. ಬಾಳಿನಾಸೆಗೆ ಹಾಲನೆರೆಯುವ ಭಾವಗೀತೆಗಳು.

ಅವರಿಗೆ ರಾಷ್ಟ್ರಕವಿ ಪ್ರಶಸ್ತಿಯನ್ನು ನೀಡಿದ್ದು ಸರ್ಕಾರವೇ ಆದರೂ ಅವರು ಯಾವ ಅರ್ಥದಲ್ಲಿಯೂ ಆಸ್ಥಾನಕವಿಗಳಲ್ಲ. 'ಕವಿಗರಸುಗಿರಸುಗಳ ಋಣವಿಲ್ಲ' ಎಂದು ಘರ್ಜಿಸಿದ ಕುವೆಂಪು ಅವರ ಶಿಷ್ಯನಾದ ಜಿ.ಎಸ್.ಎಸ್. ಆ ಮಾತಿನ ನಿಜವಾದ ಅರ್ಥದಲ್ಲಿ ಜನತೆಯ ಕವಿ. ಹಾಗೆಂದರೆ ಜನರೆಲ್ಲರೂ ಅವುಗಳನ್ನು ಕಿವಿಕೊಟ್ಟು ಕೇಳುತ್ತಿರುವರೆಂದು ಅರ್ಥವಲ್ಲ. ಕವಿತೆಯು ಯಾವಾಗಲು ಆ ಭಾಗ್ಯವನ್ನು ಪಡೆದಂತೆ ತೋರುವುದಿಲ್ಲ. ಕವಿತೆಯು ಇರುತ್ತದೆ. ಅಷ್ಟೆ. ಸರಳವಾಗಲಿ, ಸಂಕೀರ್ಣವಾಗಲಿ ಅದು ಒಟ್ಟು ಸಮುದಾಯದ ಅನುಭೋಗದ ಸರಕು ಆಗಲಾರದು. ಆದರೆ ಅದು ಸಮುದಾಯದ ನೆನಪುಗಳ, ತಲ್ಲಣಗಳ ಮತ್ತು ನಿರೀಕ್ಷೆಗಳ ಉಗ್ರಾಣವೆನ್ನುವುದು ನಿಜ. ಕನ್ನಡ ಕವಿತೆಯ ಅಂಥ ಉಗ್ರಾಣದಲ್ಲಿ ಜಿ.ಎಸ್.ಎಸ್. ಅವರು ಕೂಡಿಹಾಕಿರುವ ಕವಿತೆಗಳು, ಅರಳಲು ಬೇಕಾದ ಮನೋಭೂಮಿಕೆಗಳಿಗಾಗಿ ಅನವರತವೂ ಕಾಯುವ ಬೀಜಗಳು. ಎಂಬತ್ತರ ಈ ಹೊತ್ತಿನಲ್ಲಿಯೂ ಅವರು ಲೋಕಾಸಕ್ತರೇ, ಕಾವ್ಯಾಸಕ್ತರೇ, 'ವ್ಯಕ್ತಮಧ್ಯದ ಬದುಕು' ಎಂಬ ಕವಿತೆಯಲ್ಲಿ ಹೇಳುವ ಹಾಗೆ,

> "ದತ್ತವಾಗಿದೆ ಮತ್ತೆ ವ್ಯಕ್ತಮಧ್ಯದ ಬದುಕು ;
> ಮೊದಲಿಗಿಂತಲೂ ಹೊಸದಾಗಿ ಕಂಡಿದೆ ಲೋಕ
> ಈವರೆಗು ಮಹಾವಿಸ್ಮೃತಿಯಲ್ಲಿ ಕರಗಿ, ಹೊರಬಂದ
> ಅಸ್ತಿತ್ವಕ್ಕೆ ಎಲ್ಲವನ್ನೂ ತಬ್ಬಿಕೊಳ್ಳುವ ತವಕ"

ಈ ತವಕ, ಈ ತಲ್ಲಣ ಮತ್ತು ಈ ವಿವೇಕಗಳು ಶಿವರುದ್ರಪ್ಪನವರ ಕವಿತೆಯನ್ನು ಕನ್ನಡ ಮನಸ್ಸಿನ ತಂಗುದಾಣಗಳಲ್ಲಿ ಒಂದಾಗಿ ಮಾಡಿವೆ. ಅದು ಪಂಡಿತರು ಮತ್ತು ವಿವಿಧ ಕಲಾಪಂಡಿತರು ಮಾತ್ರ ಓದಬೇಕಾದ ಕಾವ್ಯವಲ್ಲ. ನಾನು, ನೀವು ಮತ್ತು ನಮ್ಮ ನಿಮ್ಮ ನೆರೆಮನೆಯವರು ಓದಬಹುದಾದ ಈ ಕವಿತೆಗಳಿಗೆ ವಯಸ್ಸಾಗಿಲ್ಲ. ಕವಿಗೆ ವಯಸ್ಸಾಗಿದೆ. ಅವರಿಗೆ ವಂದನೆಗಳು. ಕವಿತೆಗಳಿಗೆ ಸದಾ ತೆರೆದೆದೆಯ ಸ್ವಾಗತ.

*ಪ್ರಸಾರ ದಿನಾಂಕ: ೨೩-೧೧-೦೬*

# ಡಾ. ಜಿ.ಎಸ್. ಶಿವರುದ್ರಪ್ಪನವರ ವಿಮರ್ಶೆ

●

ಪ್ರೊ. ಸಿ.ಎನ್. ರಾಮಚಂದ್ರನ್

೨೦೦೬ರ ಮಧ್ಯ ಭಾಗದಲ್ಲಿ, ತಮ್ಮ ೮೦ನೆಯ ವಯಸ್ಸಿನಲ್ಲಿ ಜಿಎಸ್ಎಸ್ ಎಂದೇ ಎಲ್ಲರಿಗೂ ಪರಿಚಿತರಾಗಿರುವ ಡಾ. ಜಿ.ಎಸ್. ಶಿವರುದ್ರಪ್ಪನವರು ಪ್ರಕಟಿಸಿದ "ಕುವೆಂಪು ಪುನರಾವಲೋಕನ" ಎಂಬ ವಿಮರ್ಶನ ಕೃತಿಯ ಒಂದು ಸಂದರ್ಭದಲ್ಲಿ ಅವರು ಹೀಗೆ ಹೇಳುತ್ತಾರೆ: "..... ಒಬ್ಬ ಪ್ರತಿಭಾವಂತನಾದ ಕವಿ, ಸಾಹಿತ್ಯವನ್ನು, ಸಾಹಿತ್ಯ ನಿರ್ಮಿತಿಯ ಸ್ವರೂಪವನ್ನು ಕುರಿತು ಮಾತನಾಡುವ ರೀತಿಗೂ, ಅದೇ ವಿಷಯವನ್ನು ಕುರಿತು ಒಬ್ಬ ಶಾಸ್ತ್ರಕೋವಿದನಾದವನು ಮಾತನಾಡುವ ರೀತಿಗೂ ವ್ಯತ್ಯಾಸವಿದೆ" (ಪು. ೧೫೬). ಕಾರಣವೇನೆಂದರೆ, ಜಿಎಸ್ಎಸ್ ಅವರ ದೃಷ್ಟಿಯಲ್ಲಿ "ಪ್ರತಿಭಾವಂತನಾದ ಕವಿಗೆ ಮಾತ್ರ ಗೋಚರವಾಗುವ ಕಲಾರಹಸ್ಯ ಮತ್ತು ಹೊಳಹುಗಳು" ಕವಿಯಲ್ಲದವನಿಂದ ದೂರವುಳಿಯುತ್ತವೆ. ಈ ಹೇಳಿಕೆ ಚರ್ಚಾಸ್ಪದ, ನಿಜ. ಆದರೆ ನಮ್ಮ ದೇಶದಲ್ಲಿ ಸಂಸ್ಕೃತ, ಕನ್ನಡ, ಇತ್ಯಾದಿ ಭಾಷೆಗಳಲ್ಲಿ ಕವಿ–ವಿಮರ್ಶಕರ ಒಂದು ಮಹಾನ್ ಪರಂಪರೆಯೇ ಇದೆ; ಈ ಪರಂಪರೆ ಸಂಸ್ಕೃತದಲ್ಲಿ ದಂಡಿ, ಅಭಿನವ ಗುಪ್ತ, ರಾಜಶೇಖರ ಮುಂತಾದವರನ್ನು ಒಳಗೊಂಡರೆ, ಕನ್ನಡದಲ್ಲಿ ನಾಗವರ್ಮನಿಂದ ಪ್ರಾರಂಭವಾಗುವ ಈ ಪರಂಪರೆ ಕುವೆಂಪು, ಬೇಂದ್ರೆ, ತೀನಂಶ್ರೀ ಮುಂತಾದವರನ್ನು ಒಳಗೊಳ್ಳುತ್ತದೆ. ಇಂತಹ ಕವಿ–ವಿಮರ್ಶಕರ ಪರಂಪರೆಯಲ್ಲಿ ಒಂದು ಎತ್ತರದ ಶಿಖರವೆಂದರೆ ಜಿಎಸ್ಎಸ್.

ಡಾ. ಜಿ.ಎಸ್. ಶಿವರುದ್ರಪ್ಪನವರು ಶ್ರೇಷ್ಠ ಕವಿಗಳೂ ಅಹುದು, ಶ್ರೇಷ್ಠ ವಿಮರ್ಶಕರೂ ಅಹುದು. ಇದುವರೆಗೆ ಅವರು ಹದಿಮೂರು ಕವನಸಂಕಲನಗಳು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಾವ್ಯಾರ್ಥ ಚಿಂತನವೂ ಸೇರಿದಂತೆ ಹದಿನಾಲ್ಕು ವಿಮರ್ಶನ ಕೃತಿಗಳನ್ನೂ ಹೊರತಂದಿದ್ದಾರೆ. ಇಷ್ಟು ವಿಪುಲವಾದ ಈ ವಿಮರ್ಶನ ಸಾಹಿತ್ಯದಲ್ಲಿ ಸಾಹಿತ್ಯ ಚರಿತ್ರೆಗಳಿವೆ, ಕಾವ್ಯ ಮೀಮಾಂಸೆಯಿದೆ, ತೌಲನಿಕ ವಿಮರ್ಶೆಯಿದೆ ಮತ್ತು ಓರ್ವ ಸಾಹಿತಿಯ ಸಂಪೂರ್ಣ ವಾಙ್ಮಯದ ಬಗ್ಗೆ ಒಟ್ಟಾರೆ ಜಿಜ್ಞಾಸೆಯಿದೆ. ಇಂತಹವರ ಇಡೀ ವಾಙ್ಮಯದ ಬಗ್ಗೆ ದೀರ್ಘವಾಗಿ

ಈ ಲೇಖನದಲ್ಲಿ ಚರ್ಚೆ ಮಾಡುವುದು ಅಸಾಧ್ಯ. ಆದ್ದರಿಂದ ಈಗ ನಾನು ಅವರ ವಿಮರ್ಶೆಯಲ್ಲಿ ನನಗೆ ಮುಖ್ಯವೆಂದು ಕಂಡ ಕೆಲವೇ ಕೆಲವು ಅಂಶಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ.

(೧) ಮೊದಲನೆಯದಾಗಿ ಜಿಎಸ್‌ಎಸ್ ಅವರ ಯಾವ ಬರವಣಿಗೆಯಲ್ಲಿಯೂ ಎದ್ದು ಕಾಣುವುದು ಅವರ ವ್ಯುತ್ಪತ್ತಿ, ಅವರ ಅಸಾಧಾರಣ ಬಹುಜ್ಞತೆ. ಇದು ಕಾವ್ಯಸೃಷ್ಟಿಗೆ ಹೇಗೋ ವಿಮರ್ಶೆಗೂ ಹಾಗೆ ಅತ್ಯವಶ್ಯಕವಾದ ಗುಣ. ಜಿಎಸ್‌ಎಸ್ ಅವರಿಗೆ ಪ್ರಾಚೀನ ಹಾಗೂ ಅರ್ವಾಚೀನ ಕನ್ನಡ ಸಾಹಿತ್ಯ ಮತ್ತು ಕಾವ್ಯಮೀಮಾಂಸೆಯ ಆಳವಾದ ಪಾಂಡಿತ್ಯವಿದೆ; ಅಷ್ಟೇ ಆಳವಾದ ಪಾಂಡಿತ್ಯ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆ-ವಿಮರ್ಶೆಗಳಲ್ಲಿದೆ. ಪರಿಣಾಮತಃ ಇವರು ಅಧಿಕಾರಯುತವಾಗಿ ಪಂಪ-ರನ್ನ-ಕುವೆಂಪು ಇವರುಗಳ ಬಗ್ಗೆ ಚರ್ಚೆ ಮಾಡುವಂತೆಯೇ ಆನಂದವರ್ಧನ-ರಾಜಶೇಖರ-ಮಿಲ್ಟನ್ ಬಗ್ಗೆಯೂ ಚರ್ಚೆ ಮಾಡಬಲ್ಲರು.

(ಆಧುನಿಕ ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಈ ಅಂಶವನ್ನು ಒತ್ತಿ ಹೇಳಬೇಕು. ಏಕೆಂದರೆ ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ವಿಮರ್ಶೆಯನ್ನು ಗಂಭೀರವಾಗಿ ಕೈಗೆತ್ತಿಕೊಂಡ ಇಂಗ್ಲಿಷ್ ಪ್ರಾಧ್ಯಾಪಕರಿಗೆ ಸಾಧಾರಣವಾಗಿ ಪ್ರಾಚೀನ ಕನ್ನಡ-ಸಂಸ್ಕೃತ ಕಾವ್ಯ ಹಾಗೂ ಕಾವ್ಯಮೀಮಾಂಸೆಯ ಆಳವಾದ ಜ್ಞಾನವಿರಲಿಲ್ಲ. ಹಾಗೆಯೇ ಕನ್ನಡ ಪ್ರಾಧ್ಯಾಪಕರಿಗೆ ಇಂಗ್ಲಿಷ್ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಬಗ್ಗೆ ಪ್ರಭುತ್ವವೇನೂ ಇರಲಿಲ್ಲ. ಈ ಹೇಳಿಕೆಗೆ ಅನೇಕ ಅಪವಾದಗಳಿವೆ; ಇಂಗ್ಲಿಷ್ ಪ್ರಾಧ್ಯಾಪಕರಾದ ಕುರ್ತುಕೋಟಿ ಮತ್ತು ಕನ್ನಡ ಪ್ರಾಧ್ಯಾಪಕರಾದ ತೀನಂಶ್ರೀ ಇತ್ಯಾದಿ. ಜಿಎಸ್‌ಎಸ್ ಈ ವಿಶಿಷ್ಟ ವರ್ಗಕ್ಕೆ ಸೇರುತ್ತಾರೆ.)

(೨) ಎರಡನೆಯದಾಗಿ ಜಿಎಸ್‌ಎಸ್ ಅವರ ವಿಮರ್ಶನ ವಾಙ್ಮಯದ ಮುಖ್ಯ ಗುಣವೆಂದರೆ 'ಸಮತೋಲನ ದೃಷ್ಟಿಕೋನ.' ಒಂದು ಕಡೆ ಕನ್ನಡ ಪ್ರಾಧ್ಯಾಪಕರಾಗಿದ್ದೂ ಮತ್ತು ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅಪಾರ ಪ್ರೀತಿ-ಗೌರವಗಳಿದ್ದೂ ಅವರು ಅನೇಕ 'ಉಗ್ರ ದೇಶಿವಾದಿ'ಗಳಂತೆ ಕನ್ನಡದ 'ಮುಗ್ಧ ಭಜನೆ' ಮಾಡುವುದಿಲ್ಲ. ಆಧುನಿಕ ನೆಲೆಯಿಂದ ಆಧುನಿಕ ಹಾಗೂ ಪ್ರಾಚೀನ ಕನ್ನಡ ಸಾಹಿತ್ಯವನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಲು ಸಾಧ್ಯವಾಗುವ 'ದೂರ'ವನ್ನು ಅವರು ಉಳಿಸಿಕೊಂಡಿದ್ದಾರೆ. ಉದಾಹರಣೆಗೆ; "ಹಿಂದಿನ ಕನ್ನಡ ಕಾವ್ಯಪರಂಪರೆಯನ್ನು ನೋಡಿದರೆ ವಸ್ತುವಿನಲ್ಲಿ ಹೇಗೆ ಅಂಥ ವೈವಿಧ್ಯತೆ ಇಲ್ಲವೋ ಹಾಗೆಯೇ ವಸ್ತುವಿನ್ಯಾಸದಲ್ಲಿ ಅಥವಾ ತಂತ್ರ (technique)ದಲ್ಲಿಯೂ ಅಷ್ಟಾಗಿ ವೈವಿಧ್ಯತೆ ಕಾಣಿಸುವುದಿಲ್ಲ." (ಸಮಗ್ರ ಗದ್ಯ, ೩:೬೩); "ಆದರೆ ಧರ್ಮದ ಅತಿಯಾದ ಅನುಸರಣದಿಂದಾಗಿ ಕನ್ನಡ ಸಾಹಿತ್ಯ ಎಷ್ಟು ಮಟ್ಟಿಗೆ ಕಳಪೆಯಾಗಿದೆ ಎನ್ನುವುದನ್ನು ನಾವು ಮರೆಯುವಂತಿಲ್ಲ" (ಸ. ಗ., ೨:೩೩) ಇಂತಹ ಗಂಭೀರ ತೀರ್ಮಾನಗಳನ್ನು ಜಿಎಸ್‌ಎಸ್ ಮಾತ್ರ ಕೊಡಬಲ್ಲರು.

ಇದಕ್ಕೆ ವಿರುದ್ಧವಾಗಿ ಪಶ್ಚಿಮದ ಅತಿ ವ್ಯಾಮೋಹವೂ ಅವರಿಗಿಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಎಲ್ಲವೂ ಇಂಗ್ಲಿಷ್‌ನಿಂದ ಬಂದುದು ಎಂಬ ನಿಲುವನ್ನು ಇವರು ಆಧಾರ ಸಹಿತವಾಗಿ ಖಂಡಿಸಬಲ್ಲರು. ನವೋದಯ ಕಾವ್ಯದ ಮೇಲೆ ಆಗಿರುವ ಇಂಗ್ಲಿಷ್ ಕಾವ್ಯದ ಪ್ರಭಾವವನ್ನು ಉತ್ಪ್ರೇಕ್ಷಿಸುವ ವಿಮರ್ಶಕನನ್ನು ಲಕ್ಷಿಸಿ ಜಿಎಸ್‌ಎಸ್ ಹೀಗೆ ಹೇಳುತ್ತಾರೆ : "ಎಷ್ಟೋ ವೇಳೆ ಪಾಶ್ಚಾತ್ಯ ರೊಮ್ಯಾಂಟಿಕ್ ಕಾವ್ಯದ ಪ್ರಚೋದನೆಯಿಂದ ನವೋದಯ ಕನ್ನಡ ಕಾವ್ಯ ಮೊದಲಾಯಿತೆಂಬ ಮಾತನ್ನು ಇಟ್ಟುಕೊಂಡು ಹೊಸಗನ್ನಡ ಕವಿತೆ ಸಾಧಿಸಿರುವುದೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಇಂಗ್ಲಿಷ್ ಕವಿಗಳ ನೆರಳು ಎನ್ನುವಂಥ ಪ್ರಮಾದ ವಿಮರ್ಶೆಯ ಮಾತುಗಳನ್ನು ಕೆಲವರು ಆಡಿರುವುದುಂಟು.... ಸಾಮ್ಯದಿಂದ ಸ್ವಾಮ್ಯವನ್ನೇ ಶಂಕಿಸುವುದು ಸರಿಯಲ್ಲ" (ಸ. ಗ., ೩:೩೫೯).

(೩) ಜಿಎಸ್‌ಎಸ್ ಅವರ ವಿಮರ್ಶೆಯ ವ್ಯಾಪ್ತಿ ಅಪಾರ. ಅವರ ವಿಮರ್ಶಾ ಕೃತಿಗಳು ಕನ್ನಡ ಕಾವ್ಯಪರಂಪರೆ, ಕನ್ನಡ ಸಾಹಿತ್ಯಕ ಚಳುವಳಿಗಳು, ವಿಮರ್ಶೆಯ ಸ್ವರೂಪ, ಭಾರತೀಯ–ಪಾಶ್ಚಿಮಾತ್ಯ ಮಹಾಕಾವ್ಯಗಳು, ಇವೆಲ್ಲವುಗಳ ಬಗ್ಗೆ ಕೂಲಂಕುಶ ಚರ್ಚೆಯ ನಂತರ ಮಹತ್ವಪೂರ್ಣ ತೀರ್ಮಾನಗಳನ್ನು ಮತ್ತು ಒಳನೋಟಗಳನ್ನು ನಮಗೆ ನೀಡುತ್ತವೆ. ಈ ಹೇಳಿಕೆಯನ್ನು ವಿವರಿಸಬೇಕಾದರೆ;

ಇವರ ಮೊದಲನೆಯ ಕೃತಿ ವಿಮರ್ಶೆಯ ಪೂರ್ವ–ಪಶ್ಚಿಮ (೧೯೬೧) ವಿಮರ್ಶೆಯ ಸ್ವರೂಪ, ವಿಮರ್ಶಕನಲ್ಲಿರಬೇಕಾದ ಗುಣಗಳು, ವಿಮರ್ಶಾ ಮಾರ್ಗಗಳು ಇತ್ಯಾದಿ ಸಂಗತಿಗಳನ್ನು ಚರ್ಚಿಸುತ್ತದೆ. ಮಹಾಕಾವ್ಯ ಸ್ವರೂಪ (೧೯೭೬) ಭಾರತೀಯ ಹಾಗೂ ಪಾಶ್ಚಿಮಾತ್ಯ ಮಹಾಕಾವ್ಯಗಳ ತೌಲನಿಕ ವಿಮರ್ಶೆಯನ್ನು ಸಮರ್ಥವಾಗಿ ಮಾಡುತ್ತದೆ. ಇವರ ಪ್ರಸಿದ್ಧ ಕಾವ್ಯಾರ್ಥ ಚಿಂತನ (೧೯೮೩) ಭಾರತೀಯ–ಪಾಶ್ಚಿಮಾತ್ಯ ವಿಮರ್ಶಾ ತತ್ವಗಳ ಹಾಗೂ ಪರಿಕಲ್ಪನೆಗಳ ಪ್ರಬುದ್ಧ ತೌಲನಿಕ ವ್ಯಾಖ್ಯಾನವನ್ನು ನೀಡುತ್ತದೆ. ಕನ್ನಡ ಸಾಹಿತ್ಯ ಸಮೀಕ್ಷೆ (೧೯೭೫), ಕನ್ನಡ ಕವಿಗಳ ಕಾವ್ಯಕಲ್ಪನೆ (೧೯೮೯) ಇತ್ಯಾದಿ ಕೃತಿಗಳು ವಿಶಿಷ್ಟ ಕನ್ನಡ ಸಾಹಿತ್ಯ ಚರಿತ್ರೆಗಳೇ ಆಗಿವೆ. ಅರ್ಥಾತ್ ಜಿಎಸ್‌ಎಸ್ ಅವರ ವಿಮರ್ಶನ ವಾಙ್ಮಯ ಕಾವ್ಯಮೀಮಾಂಸೆ, ಸಾಹಿತ್ಯ ಚರಿತ್ರೆ, ತೌಲನಿಕ ಅಧ್ಯಯನ, ಇವೆಲ್ಲವನ್ನೂ ಒಳಗೊಳ್ಳುತ್ತದೆ. ಆಧುನಿಕ ಕನ್ನಡ ವಿಮರ್ಶೆಯಲ್ಲಿ ಇಷ್ಟು ವ್ಯಾಪಕ ಮತ್ತು ವೈವಿಧ್ಯಪೂರ್ಣ ವಿಮರ್ಶೆ ಮತ್ತೊಬ್ಬರಿಂದ ಆಗಿಲ್ಲ ಎಂದರೆ ಅದೇನೂ ಅತಿಶಯೋಕ್ತಿಯಲ್ಲ.

ಈ ಸಂದರ್ಭದಲ್ಲಿ ಮತ್ತೂ ಒಂದು ಮಾತನ್ನು ದಾಖಲಿಸಬೇಕು. ಭಾರತೀಯ ಸಂದರ್ಭದಲ್ಲಿ ಟ್ಯಾಗೋರ್ ಮತ್ತು ಕನ್ನಡ ಸಂದರ್ಭದಲ್ಲಿ ಬಿಎಂಶ್ರೀ ಹಾಗೂ ಕುವೆಂಪು ತೌಲನಿಕ ಅಧ್ಯಯನವನ್ನು ಕೈಗೊಂಡರು. ಆದರೆ, ವ್ಯಾಪಕವಾಗಿ ಮತ್ತು ತೌಲನಿಕ ಅಧ್ಯಯನವನ್ನು ಒಂದು ಶಿಸ್ತಾಗಿ ಕೈಗೊಂಡವರು ಮತ್ತು ಬೆಳೆಸಿದವರು ಜಿಎಸ್‌ಎಸ್. ಹಾಗೆಯೇ ತೌಲನಿಕ ವಿಮರ್ಶೆಯ ಪ್ರಪ್ರಥಮ ವ್ಯಾಖ್ಯಾನವನ್ನು ಕನ್ನಡದಲ್ಲಿ ಕೊಟ್ಟವರೂ ಅವರೇ. ೧೯೬೧ರಷ್ಟು ಹಿಂದೆಯೇ ತೌಲನಿಕ ಅಧ್ಯಯನದ ಪರಿಮಾಣಗಳನ್ನು ಅವರು

ಹೀಗೆ ಗುರುತಿಸುತ್ತಾರೆ : "ತೌಲನಿಕ ವಿಮರ್ಶೆಗೆ ತೊಡಗುವ ವಿಮರ್ಶಕ ಈ ವಿಮರ್ಶನ ಕ್ರಮವನ್ನು ನಾಲ್ಕು ಘಟ್ಟಗಳಾಗಿ ಮಾಡಿಕೊಳ್ಳಬಹುದು" ಎಂದು ಹೇಳುತ್ತಾ, ಸಮಾನ ವಸ್ತು, ಸನ್ನಿವೇಶ, ವರ್ಣನೆ, ಪಾತ್ರಚಿತ್ರಣ ಮತ್ತು ಸಮಕಾಲೀನತೆ, ಈ ನೆಲೆಗಳಲ್ಲಿ ತೌಲನಿಕ ವಿಮರ್ಶೆ ನಡೆಯಬಹುದೆಂದು ಅವರು ಸೂಚಿಸುತ್ತಾರೆ; ಮತ್ತು ಪ್ರತಿಯೊಂದು ಬಗೆಯ ವಿಮರ್ಶೆಯನ್ನೂ ನಿದರ್ಶನಗಳ ಆಧಾರದ ಮೇಲೆ ವಿವರಿಸುತ್ತಾರೆ.

(೪) ವಿಮರ್ಶೆಯನ್ನು ಅಥವಾ ತಾತ್ವಿಕ ಚಿಂತನೆಯನ್ನು ನಾವು ಒಂದು ರಿಲೇ ರೇಸ್‌ಗೆ ಹೋಲಿಸಬಹುದು. ಪ್ರತಿಯೊಬ್ಬ ವಿಮರ್ಶಕನೂ ತನ್ನದೇ ಆದ ಹೊಸ ಮಾರ್ಗವನ್ನು ಸಾಧ್ಯವಿದ್ದಷ್ಟೂ ಕ್ರಮಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ. ಈ ನೆಲೆಯಲ್ಲಿ, ಜಿಎಸ್‌ಎಸ್ ಅವರ ಪ್ರತಿಯೊಂದು ಕೃತಿಯೂ/ಲೇಖನವೂ ನಮಗೆ ಕವಿ-ಕಾವ್ಯ-ಸಮಾಜಗಳನ್ನು ಕುರಿತು ಹೊಸ ಅರಿವನ್ನು ಮೂಡಿಸುತ್ತದೆ, ನೂತನ ವೈಚಾರಿಕ ಪರಿಪ್ರೇಕ್ಷ್ಯವನ್ನು ಕಟ್ಟಿಕೊಡುತ್ತದೆ. ಇಲ್ಲಿ ಒಂದೆರಡು ನಿದರ್ಶನಗಳನ್ನಾದರೂ ಪ್ರಸ್ತಾಪಿಸಬೇಕು :

ಅ) ಕನ್ನಡ ಸಾಹಿತ್ಯ ಸಮೀಕ್ಷೆ ಒಂದು ಹೊಸ ಬಗೆಯ ಸಾಹಿತ್ಯ ಚರಿತ್ರೆ, ಕನ್ನಡ ಕವಿಗಳ ವಿಶ್ವದೃಷ್ಟಿ ಮತ್ತು ಕಾವ್ಯ ಮಾಧ್ಯಮ ಇವುಗಳ ನೆಲೆಯಲ್ಲಿ, ಕನ್ನಡ ಸಾಹಿತ್ಯ ತನ್ನ ದೀರ್ಘ ಇತಿಹಾಸದಲ್ಲಿ ಆಗಾಗ್ಗೆ ಪಡೆದುಕೊಂಡ 'ತಿರುವು'ಗಳಿಗೆ ಒತ್ತುಕೊಟ್ಟು, ಅವುಗಳನ್ನು 'ಕ್ರಾಂತಿ ಘಟ್ಟ'ಗಳೆಂದು ಪರಿಗಣಿಸಿ, ಸುಮಾರು ಸಾವಿರ ವರ್ಷಗಳ ಇತಿಹಾಸವನ್ನು ಈ ಕೃತಿಯಲ್ಲಿ ಜಿಎಸ್‌ಎಸ್ ದಾಖಲಿಸುತ್ತಾರೆ. ಇಂತಹ ಐತಿಹಾಸಿಕ ಸಮೀಕ್ಷೆಯ ನಂತರ ಅವರು ಕೊಡುವ ಮೌಲಿಕ ತೀರ್ಮಾನವೆಂದರೆ "ಕನ್ನಡ ಸಾಹಿತ್ಯ ನಿಜವಾಗಿ ಬದಲಾದದ್ದು, ಪಂಪನ ನಂತರ ಎರಡೇ ಸಲ-ಮೊದಲನೆಯ ತಿರುವು ವಚನಕಾರರ ಕಾಲದಲ್ಲಿ; ಎರಡನೆಯ ತಿರುವು ಆಧುನಿಕ ಸಾಹಿತ್ಯದಲ್ಲಿ" (ಸ. ಗ., ೩:೧೦೧).

ಆ) ಇದೇ ಕೃತಿಯಲ್ಲಿ ಜಿಎಸ್‌ಎಸ್ ಇತರ ವಿಮರ್ಶಕರು ಇಲ್ಲಿಯವರೆಗೆ ಎತ್ತದಿರುವ ಮತ್ತೊಂದು ಗಂಭೀರ ಪ್ರಶ್ನೆಯನ್ನೆತ್ತುತ್ತಾರೆ. ಪಂಪ-ರನ್ನಾದಿ ಕವಿಗಳು ಜೈನರು ಮತ್ತು ಜೈನ ಧರ್ಮದ ಅಸ್ತಿಭಾರವೇ ಅಹಿಂಸೆ. ಹಾಗಿದ್ದೂ ಪಂಪ-ರನ್ನರು "ಅಂತರಂಗದಲ್ಲಿ ಅತ್ಯಂತ ಶ್ರದ್ಧೆಯಿಂದ ಒಪ್ಪಿಕೊಂಡ ಜೈನ ಧಾರ್ಮಿಕ ತತ್ವಗಳಿಗೆ ಬದ್ಧರಾಗಿಯೂ 'ವೀರ ಕಾವ್ಯ'ಗಳನ್ನು ಬರೆದದ್ದು ಯಾಕೆ ? ಹಾಗೆ ಬರೆಯುವಾಗ ಯುದ್ಧ ಮೊದಲಾದವುಗಳನ್ನು ವೈಭವಿಸುವ ಅವರ ಬರವಣಿಗೆಯ ಮನಃಸ್ಥಿತಿಗೂ ಅದಕ್ಕೆ ಸಂಪೂರ್ಣ ವಿರುದ್ಧವಾದ ಅದೇ ಮನಸ್ಸಿನ ಧಾರ್ಮಿಕ ತತ್ವ ಪ್ರಣಾಲಿಗೂ ಘರ್ಷಣೆಯಾಗಿದ್ದಿರಲಾರದೆ?" (ಸ. ಗ., ೩:೧೦೧)

ಈ ಪ್ರಶ್ನೆಗೆ ಜಿಎಸ್‌ಎಸ್ ಕೊಡುವ ಉತ್ತರವೆಂದರೆ ಪಂಪ-ರನ್ನರು ರೂಢಿಸಿಕೊಂಡ 'ಸಮನ್ವಯ ದೃಷ್ಟಿ' - ಆಗಮ - ಲೌಕಿಕ ಕಾವ್ಯಗಳ, ದೈಹಿಕ ಭೋಗ-ಪಾರಮಾರ್ಥಿಕ

ಯೋಗ ಇವುಗಳ, ಇಹ-ಪರಗಳ 'ಸಮನ್ವಯ'. ಈ ಉತ್ತರವನ್ನು ನಾವು ಒಪ್ಪಬಹುದು ಅಥವಾ ಬಿಡಬಹುದು; ಆದರೆ, ಧರ್ಮ-ಕಾವ್ಯಗಳ ಘರ್ಷಣೆಯನ್ನು ಕುರಿತ ಈ ಪ್ರಶ್ನೆ ಅತ್ಯಂತ ರೋಚಕವಾದದ್ದು.

ಇ) ಪ್ರತಿಯೊಂದು ಪ್ರಾಚೀನ ಕನ್ನಡ ಮಹಾಕಾವ್ಯದ ಪ್ರಾರಂಭದಲ್ಲಿ ದೇವತಾ ಸ್ತುತಿ, ಕುಕವಿನಿಂದೆ, ಸತ್ಕವಿ-ಸ್ವಕಾವ್ಯ ಪ್ರಶಂಸೆ, ಕಾವ್ಯ ಪ್ರಯೋಜನ, ಇತ್ಯಾದಿಗಳನ್ನೊಳಗೊಂಡ 'ಪೀಠಿಕಾ ಪ್ರಕರಣ'ವಿರುವುದು ಎಲ್ಲರಿಗೂ ಗೊತ್ತು. ಸಾಮಾನ್ಯವಾಗಿ ಆಧುನಿಕ ಓದುಗರು ಈ ಭಾಗವನ್ನು ಕಾವ್ಯ ಸಂಪ್ರದಾಯವೆಂದು ಕಂಡು ಅದನ್ನು ಅಲಕ್ಷಿಸುತ್ತಾರೆ. ಆದರೆ ಅಂತಹ ಪೀಠಿಕಾ ಪ್ರಕರಣಗಳ ಬಗ್ಗೆ ಜಿಎಸ್‌ಎಸ್ ನೀಡುವ ಒಳನೋಟ ಮತ್ತು ವ್ಯಾಖ್ಯಾನ ಮೌಲಿಕವಷ್ಟೇ ಅಲ್ಲ, ಮಹತ್ವಪೂರ್ಣ ಕೂಡಾ.

ಜಿಎಸ್‌ಎಸ್ ಅವರ ವಾದವೇನೆಂದರೆ, ಕನ್ನಡ ಮಹಾಕಾವ್ಯಗಳ ಪೀಠಿಕಾ ಪ್ರಕರಣಗಳು "ಕೇವಲ ಲಾಕ್ಷಣಿಕರ ಕೃತಿಗಳಲ್ಲಿನದಕ್ಕಿಂತ ಭಿನ್ನವಾದ ಹಾಗೂ ತೀರಾ ಲವಲವಿಕೆಯ ಕಾವ್ಯ ಚರ್ಚೆಯೊಂದನ್ನು ಮಂಡಿಸುತ್ತವೆ" (ಸ. ಗ., ೩:೨೨೯). ಅರ್ಥಾತ್, ಇಂತಹ ಪೀಠಿಕಾ ಪ್ರಕರಣಗಳು ಕನ್ನಡ ಕಾವ್ಯದ 'ಸ್ವಾಭಿಮುಖತೆ'ಯ ನಿದರ್ಶನಗಳು. ಈ ಭಾಗದಲ್ಲಿ ಇವರು ಕಾವ್ಯ ಸ್ವರೂಪವನ್ನು ಪಂಪನ "ಇದು ನಿಚ್ಚಂ ಪೊಸತು ಅರ್ಣವಂಬೊಲತಿ ಗಂಭೀರಂ ಕವಿತ್ವಂ" ಎಂಬ ಹೇಳಿಕೆಯನ್ನು "ಪ್ರಜ್ಞಾ ನವನವೋನ್ಮೇಷಶಾಲಿನಿ" ಎಂಬ ಸಂಸ್ಕೃತ ಅಲಂಕಾರಿಕರ ಉಕ್ತಿಯೊಡನೆ ಹೋಲಿಸುತ್ತಾ, ಪಂಪನದು "ವಿಶೇಷಾರ್ಥವನ್ನು ಧ್ವನಿಸುವ ಕಾವ್ಯಸೂತ್ರವಾಗಿದೆ. ನಿಜವಾದ ಕಾವ್ಯದ ಲಕ್ಷಣ ಎಂದರೆ ಅದು ಸದಾ ಹೊಸತಾಗಿರುವುದು" (ಸ. ಗ., ೩:೨೪೩) ಎಂದು ವ್ಯಾಖ್ಯಾನಿಸುತ್ತಾರೆ. ಇದೇ ನೆಲೆಯಲ್ಲಿ ನಾಗಚಂದ್ರ ಮತ್ತು ನೇಮಿಚಂದ್ರರ ಉಕ್ತಿಗಳೂ ಕಾವ್ಯಚಿಂತನೆಯನ್ನು ಕುರಿತು ಎಷ್ಟು ಅರ್ಥಪೂರ್ಣವಾಗಿವೆ ಎಂಬುದನ್ನು ವಿವರಿಸುತ್ತಾರೆ. ಲೀಲಾವತಿಯಲ್ಲಿ ಬರುವ ನೇಮಿಚಂದ್ರನ "ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ" ಎಂಬ ಪದ್ಯ ಹೇಗೆ ಕಾವ್ಯಮೀಮಾಸೆಯಲ್ಲಿ ಅತಿ ಮುಖ್ಯವಾಗುವ 'ಕಾವ್ಯ ಸತ್ಯ ಮತ್ತು ವಾಸ್ತವ ಸತ್ಯಗಳ ನಡುವೆ ಇರುವ ಭೇದ'ವನ್ನು ದಾಖಲಿಸುತ್ತದೆ ಎಂದು ಜಿಎಸ್‌ಎಸ್ ಮಂಡಿಸುತ್ತಾರೆ. ಸ್ವಲ್ಪದರಲ್ಲಿಯೇ ಹೇಳ ಬೇಕಾದರೆ, ಕನ್ನಡ ಕವಿಗಳ ಕಾವ್ಯ ಕಲ್ಪನೆ ಎಂಬ ೭೫ ಪುಟಗಳ ಪ್ರೌಢ ಪ್ರಬಂಧ ಜಿಎಸ್‌ಎಸ್ ಅವರ ಸ್ವೋಪಜ್ಞ ಚಿಂತನೆಗೂ ಮತ್ತು ವಿಶ್ಲೇಷಣಾ ಸಾಮರ್ಥ್ಯಕ್ಕೂ ಶ್ರೇಷ್ಠ ನಿದರ್ಶನವಾಗುತ್ತದೆ.

ಕೊನೆಯಲ್ಲಿ ಮತ್ತೊಂದು ಅಂಶವನ್ನು ಗಮನಿಸಿ, ಈ ಪರಿಚಯಾತ್ಮಕವಾದ ಚರ್ಚೆಯನ್ನು ಮುಗಿಸಬಹುದು. ಕಾವ್ಯಸೃಷ್ಟಿಯಾಗಲಿ ವಿಮರ್ಶೆಯಾಗಲಿ ಜಿಎಸ್‌ಎಸ್ ಎಂದೂ ಅವನ್ನು ಲಘುವಾಗಿ ಕಾಣುವುದಿಲ್ಲ. ಕಾವ್ಯಕ್ಕೆ ಹಾಗೂ ಸಾಹಿತ್ಯ ವಿಮರ್ಶೆಗೆ ಜಿಎಸ್‌ಎಸ್ ಏಕೆ ಇಷ್ಟು ಮಹತ್ವವನ್ನು ಕೊಡುತ್ತಾರೆಂದರೆ, ಅವರ ದೃಷ್ಟಿಯಲ್ಲಿ ನಮ್ಮಲ್ಲಿ ಜೀವನಪ್ರೀತಿಯನ್ನು ಉಳಿಸುವುದು

ಕಾವ್ಯ ಅಥವಾ ಒಟ್ಟಾರೆಯಾಗಿ ಸಾಹಿತ್ಯ ತಮ್ಮ ಕಾವ್ಯ ಸಂವಾದ ಎಂಬ ಕೃತಿಯ ಒಂದು ಲೇಖನದಲ್ಲಿ ಅವರು ಹೀಗೆ ಹೇಳುತ್ತಾರೆ; "... ನಿಷ್ಠುರ ಹಾಗೂ ವಾಸ್ತವ ಜಗತ್ತಿನ ಪ್ರಾಯೋಜನಿಕ ಏಕತಾನಕ್ಕೆ ಸಿಕ್ಕಿಕೊಳ್ಳದ ಹಾಗೆ, ತುಕ್ಕು ಹಿಡಿಯದ ಹಾಗೆ, ಜೀವನ ಪ್ರೀತಿಯಲ್ಲಿ ನಮ್ಮನ್ನು ತೊಡಗಿಸುತ್ತ ನಮ್ಮನ್ನು ಸೃಜನಾತ್ಮಕವಾಗಿ ಉಳಿಸುವುದು ಕಾವ್ಯ" (ಕಾವ್ಯ ಸಂವಾದ, ಪು. ೧೦೪-೧೦೫). ಕಾವ್ಯದಲ್ಲಿಯಾಗಲಿ ವಿಮರ್ಶೆಯಲ್ಲಾಗಲಿ ಜಿಎಸ್‌ಎಸ್ ಎತ್ತಿ ಹಿಡಿಯುವುದು ಈ ಬಗೆಯ 'ಜೀವನ ಪ್ರೀತಿ'.

*ಪ್ರಸಾರ ದಿನಾಂಕ: ೨೪-೧೧-೦೬*

■■

# ಕಾವ್ಯಮೀಮಾಂಸಕರಾಗಿ ಜಿ.ಎಸ್.ಎಸ್.

●

**ಡಾ. ಸಿ.ಪಿ. ಕೃಷ್ಣಕುಮಾರ್**

**ಡಾ.** ಜಿ.ಎಸ್. ಶಿವರುದ್ರಪ್ಪನವರು ಒಂದು ಚತುರ್ಮುಖ ಚೇತನ. ಅವರು ಕವಿ, ವಿಮರ್ಶಕ, ಸೌಂದರ್ಯಮೀಮಾಂಸಕ ಹಾಗೂ ಕಾವ್ಯಮೀಮಾಂಸಕರಾಗಿ ಕನ್ನಡಕ್ಕೆ ಬಹುಮೌಲಿಕವಾದ ಕೊಡುಗೆಯನ್ನಿತ್ತಿದ್ದಾರೆ.

ಪ್ರಕೃತ ಜಿಎಸ್ಎಸ್ ಅವರ 'ಕಾವ್ಯಾರ್ಥ ಚಿಂತನ'ವೊಂದು ವಿಶಿಷ್ಟವಾದ ಗ್ರಂಥ; ಕಾವ್ಯಮೀಮಾಂಸೆಯ–ಅದರಲ್ಲೂ ತೌಲನಿಕ ಕಾವ್ಯಮೀಮಾಂಸೆಯ–ಕ್ಷೇತ್ರಕ್ಕೆ ಸಂಬಂಧಿಸಿದ್ದು. ಅದನ್ನು ಅವರು 'ತೌಲನಿಕ ಕಾವ್ಯಮೀಮಾಂಸೆಗಳ ಕೆಲವು ವಿಚಾರಗಳು" ಎಂದು ಕರೆದುಕೊಂಡಿದ್ದಾರೆ. ಅದು ಭಾರತೀಯ ಅಥವಾ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಚರಿತ್ರೆಯಲ್ಲ; ಕೆಲವು ಪ್ರಮುಖ ತತ್ತ್ವ, ಪರಿಕಲ್ಪನೆಗಳನ್ನೆತ್ತಿಕೊಂಡು, ಒಂದೊಂದನ್ನೂ, ತೌಲನಿಕವಾಗಿ, ತಲಸ್ಪರ್ಶಿಯಾಗಿ ಚರ್ಚಿಸುವ ಕೃತಿ. ಹೀಗಾಗಿ ಅದು ಕಡೆಗಣಿಸದ ಹದಿಮೂರು ಬಿಡಿ ಲೇಖನಗಳ ಸಂಕಲನವಾಗಿದೆ.

ಜಿಎಸ್ಎಸ್ ಅವರ ಪ್ರತಿಭೆ, ಅಪಾರ ಪಾಂಡಿತ್ಯ, ಒಳನೋಟಗಳ ಮುಪ್ಪುರಿಯಾಗಿ ಪರಿಣಮಿಸಿದೆ. 'ಕಾವ್ಯಾರ್ಥ ಚಿಂತನ' ಅದರ ವೈಶಿಷ್ಟ್ಯವೆಂದರೆ ಸಮನ್ವಯ ಮತ್ತು ಸಮತೋಲನ. ಅವರದು ಮುಕ್ತ ಮನಸ್ಸಿನ ಯುಕ್ತ ವಿಚಾರಧಾರೆ ಹಾಗೂ ಧೋರಣೆ. ಅವರಲ್ಲಿ ಅತಿರೇಕಗಳಿಗೆ ಅವಕಾಶವಿಲ್ಲ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ಕಾವ್ಯಜಿಜ್ಞಾಸೆಯನ್ನು ಅನುಸಂಧಾನಮಾಡುವಲ್ಲಿ ಅವರು ವಿಸ್ತರಣ ಮತ್ತು ಪರಿಷ್ಕರಣ ಪ್ರವೃತ್ತಿಗಳನ್ನು ವಿಶೇಷವಾಗಿ ಪ್ರಕಟಿಸುತ್ತಾರೆ; ನಿರಾಕರಣದ ಕೆಲಸವನ್ನು ಅಷ್ಟಾಗಿ ಮಾಡುವುದಿಲ್ಲ. ಒಟ್ಟಿನಲ್ಲಿ ಅವರು ಭಾರತೀಯ ಕಾವ್ಯಮೀಮಾಂಸೆಗೆ ಕೆಲವು ಹೊಸ ಆಯಾಮಗಳನ್ನು ತಂದುಕೊಟ್ಟಿದ್ದಾರೆ.

ಕಾವ್ಯಮೀಮಾಂಸೆ ಇತರ ಶಾಸ್ತ್ರಗಳಂತಲ್ಲ; ಪ್ರತಿಭಾ ಮೂಲವಾದ ಕಾವ್ಯ ಹೇಗೊ ಹಾಗೆ. ಅದನ್ನು ಕುರಿತ ಚರ್ಚೆಯೂ, ಸರ್ವತೋ ಲೇಖನಶಾಲಿನಿಯಾಗಿರುವುದು ಶಕ್ಯ ಅಂಥ ಚಿಂತನದ ಪರಿ, ಪರೀಕ್ಷೆಗಳನ್ನು ಜಿಎಸ್ಎಸ್ ಅವರಲ್ಲಿ ಕಾಣುತ್ತೇವೆ. ಅವರಲ್ಲಿ ಪರಂಪರೆಯ ಪ್ರಜ್ಞೆಯಂತೋ ಅಂತೇ ಸ್ವೋಪಜ್ಞತೆಯೂ ಗೋಚರಿಸುತ್ತದೆ.

ಕನ್ನಡದಲ್ಲಿ ತೌಲನಿಕ ಅಧ್ಯಯನದ ಪ್ರಯತ್ನಗಳನ್ನು ಮೊದಲು ಮಾಡಿದವರು ಆಚಾರ್ಯ 'ಶ್ರೀ' ಆನಂತರ, ಕಾವ್ಯಮೀಮಾಂಸೆಯ ತೌಲನಿಕ ಅಧ್ಯಯನದ ಉಜ್ವಲ ಪ್ರಯತ್ನಗಳು ಕುವೆಂಪು ಅವರ ಬೋಧನೆ, ಬರಹಗಳಲ್ಲಿ ಕಂಡುಬರುತ್ತವೆ. (ಈ ನಿಟ್ಟಿನಲ್ಲಿ ಅವರಲ್ಲಿ ರಸೋವೈಸಃ ಒಂದು ಅನನ್ಯ ಕೃತಿ) ತೀನಂಶ್ರೀ ಅವರ ಭಾರತೀಯ ಕಾವ್ಯಮೀಮಾಂಸೆಯಲ್ಲಿ ತೌಲನಿಕ ವ್ಯಾಸಂಗದ ಅತ್ಯುಪಯುಕ್ತ ಸೂಚನೆಗಳಿವೆ. ಇಂತಹ ಪೂರ್ವಸೂರಿಗಳ ಮಾರ್ಗದಲ್ಲೆ ಜಿಎಸ್‌ಎಸ್ ಅವರು ಸ್ವಂತಿಕೆಯನ್ನು ಕಳೆದುಕೊಳ್ಳದೆ ಮುನ್ನಡೆದಿದ್ದಾರೆ.

ಪುಸ್ತಕದ ಮುನ್ನುಡಿಯಲ್ಲಿ ಜಿಎಸ್‌ಎಸ್ ಆಡುವ ಮಾತುಗಳು ಅವರ ಉದ್ದೇಶದ ಮೇಲೆ ಬೆಳಕು ಚೆಲ್ಲುತ್ತವೆ. ಇದೊಂದು ಹೇಳಿಕೆ : "…. ಭಾರತೀಯ ಕಾವ್ಯಮೀಮಾಂಸೆಯ ತಿಳಿವಿನ ಜೊತೆಗೆ, ನಮ್ಮ ಇಂದಿನ ವಿಮರ್ಶೆಯ ನಿಲುವುಗಳನ್ನು ರೂಪಿಸಿರುವ ಪಾಶ್ಚಾತ್ಯ ವಿಮರ್ಶೆಯ ಒಂದು ಮುಖ್ಯ ಭಾಗವಾಗಿರುವ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಪರಿಜ್ಞಾನವೂ ಅತ್ಯಂತ ಅಗತ್ಯವಾಗಿದೆ. ಜತೆಗೆ ಈ ಎರಡೂ ಕಾವ್ಯಮೀಮಾಂಸೆಗಳ ಗಾಢವಾದ ಅಧ್ಯಯನದಿಂದ ನಿಷ್ಪನ್ನಗೊಳ್ಳುವಂಥ ತೌಲನಿಕ ದೃಷ್ಟಿಕೋನವೊಂದು ಇನ್ನೂ ಮುಖ್ಯವಾದದ್ದು'. ಇದು ಮತ್ತೊಂದು ಹೇಳಿಕೆ : "… ಪೂರ್ವ ಹಾಗೂ ಪಶ್ಚಿಮದ ಚಿಂತನೆಗಳಲ್ಲಿರುವ ಸಾಮ್ಯ ಹಾಗೂ ವೈಶಿಷ್ಟ್ಯಗಳನ್ನು ಗುರುತಿಸುತ್ತ, ಈ ತೌಲನಿಕ ವಿಧಾನದಿಂದ ಹೊರಡುವ ಕೆಲವು ಹೊಸ ಅರ್ಥ ಬೇರೆಯೇ ಆದ ವಿಚಾರಗಳನ್ನು ಪ್ರಸ್ತಾಪಿಸುವ ಕಡೆಗೆ ನನ್ನ ಗಮನವನ್ನು ಕೇಂದ್ರೀಕರಿಸಿದ್ದೇನೆ. ಮುಖ್ಯವಾಗಿ ಈ ಕೃತಿ ಇದುವರೆಗೂ ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನದಲ್ಲಿ ಪೂರಕವೂ ಅಧ್ಯಯನದ ಮುಂದುವರಿಕೆಯೂ ಆಗುವುದರ ಜೊತೆಗೆ, ಸ್ವರೂಪ ಹಾಗೂ ವೈಶಿಷ್ಟ್ಯಗಳಲ್ಲಿ ಬೇರೆಯದೇ ಆಗಬೇಕೆಂಬುದು ನನ್ನ ಉದ್ದೇಶ". ತಮ್ಮ ಆಲೋಚನೆಯ ಸ್ವರೂಪದ ಬಗೆಗೆ ಜಿ.ಎಸ್.ಎಸ್ ಹೀಗೆನ್ನುತ್ತಾರೆ: "ತೌಲನಿಕ ಕಾವ್ಯಮೀಮಾಂಸೆಯ ಚಿಂತನ ಕ್ರಮದಲ್ಲಿ ನಾನು ಉದ್ದಕ್ಕೂ ಸೃಜನಸಾಹಿತ್ಯವನ್ನು ಹಿನ್ನೆಲೆಗೆ ಇರಿಸಿಕೊಂಡೇ ನನ್ನ ಚರ್ಚೆಯನ್ನ ಮುಂದುವರೆಸಿದ್ದೇನೆ." ಈಗ ಒಂದೊಂದು ಲೇಖನವನ್ನೂ ಸಾರಾಂಶರೂಪದಲ್ಲಿ ಲಕ್ಷಿಸುತ್ತ ಹೋಗಬಹುದು.

ಕವಿತೆಗೆ ಆಕರ ಪ್ರತಿಭೆ ಆದ್ದರಿಂದ, ಮೊದಲನೆಯ ಲೇಖನವೇ ಪ್ರತಿಭೆಯನ್ನು ಕುರಿತದ್ದು. "ಕಲೆ ಎಂದರೇನು ಎಂಬ ಪ್ರಶ್ನೆಗೆ ಮೊದಲ ಉತ್ತರ ಅದೊಂದು ಅನುಕರಣೆ ಎನ್ನುವುದು" ಎಂದು ಪ್ರಾರಂಭಿಸುವ ಜಿಎಸ್‌ಎಸ್, "ಅನುಕರಣೆಯನ್ನು ಹಿಂದಿಕ್ಕಿ ಕಲಾವಿದನ ಕಾರ್ಯ ಬೇರೊಂದು ನಿರ್ಮಾಣದ ನಿಲುವಿಗೆ" ತರುವುದು ಹೇಗೆಂದು ವಿವರಿಸುತ್ತಾರೆ. ಗೋಚರಿಸುವ ವಸ್ತುಗಳ ಒಳಗೆ ಬೇರೊಂದು ಅರ್ಥವನ್ನು ಕಾಣುವ ಹಾಗೂ ಕಟ್ಟುವ ಈ ಸಾಮರ್ಥ್ಯವನ್ನೇ ನಾವು ಪ್ರತಿಭೆ ಎಂದು ಕರೆಯುತ್ತೇವೆ" ಎಂದು ನಿರ್ಣಯಿಸುತ್ತಾರೆ. "Poetry is something divine' ಮುಂತಾದ ಮಾತುಗಳ ಬಗೆಗೆ ಅವರ ಟೀಕೆಯಿದು : "… ಹೀಗೆ ಕಾವ್ಯಮೀಮಾಂಸೆ ಮಡಿ ಉಟ್ಟುಕೊಂಡು, ವೇದಾಂತವೋ ತಾತ್ತ್ವಿಕವೋ ಆದ ಪರಿಭಾಷೆಯಲ್ಲಿ ದಾರಿ ತಪ್ಪುತ್ತವೆ" ಅವರು ಮುಂದುವರೆದು ಹೇಳುತ್ತಾರೆ:" ಪ್ರತಿಭೆ ಎನ್ನುವುದು ಏನೋ ಒಂದು ಅಲೌಕಿಕ ಶಕ್ತಿ, ಅದರಲಿ ಮಾನವಮತಿಯ ಬೇರೆಯ ವ್ಯಾಪಾರಗಳಿಗೆ ಇಲ್ಲದ

ಏನೋ ಒಂದು ಗೂಢತೆ, ಪಾವಿತ್ರ್ಯತೆ ಇದೆ ಎನ್ನುವ ಭಾವುಕ ದೃಷ್ಟಿಯಾಗಲಿ, ಪ್ರತಿಭೆ ಎನ್ನುವುದರಲ್ಲಿ ಅಂತಹ ಗುಹ್ಯಾತ್ ಗುಹ್ಯತರವಾದದ್ದಾಗಲಿ ಅಲೌಕಿಕತೆಯಾಗಲಿ ಇಲ್ಲ, ಅದೊಂದು ಮಾನವಮತಿಯ ಹಲವು ವ್ಯಾಪಾರಗಳಲ್ಲಿ ಒಂದು ಎಂಬ ನಿರ್ಭಾವುಕ ದೃಷ್ಟಿಯಾಗಲಿ ಸಮರ್ಪಕ ಎಂದು ನಮಗೆ ತೋರುವುದಿಲ್ಲ... ಆದರೆ ಬಹುಶಃ ನಿಜಾಂಶ ಈ ಎರಡರ ನಡುವೆ ಇರಬೇಕು; ಇದೆ". ಪ್ರತಿಭೆ ಎಂಬುದು "ವಿಶೇಷ ಸಂವೇದನಶೀಲವಾದ ಮನಸ್ಸಿನ ಒಂದು ವಿಶೇಷ ಸಾಮರ್ಥ್ಯ ಎಂದು ಒಪ್ಪಬೇಕಾಗುತ್ತದೆ."

ಇದು ಇನ್ನೊಂದು ಹೇಳಿಕೆ: "ಕಾವ್ಯವು ಪ್ರಧಾನವಾಗಿ ಅನುಕರಣವೇ ಅಥವಾ ನಿರ್ಮಾಣವೇ ಎಂಬ ವಿಚಾರವಾಗಿ ಪಾಶ್ಚಾತ್ಯರಲ್ಲಿ ನಡೆದಷ್ಟು ಚರ್ಚೆ ನಮ್ಮಲ್ಲಿ ನಡೆಯಲಿಲ್ಲ. ಹಾಗೆಯೇ ನಮ್ಮ ಅಲಂಕಾರಿಕರಿಗೆ ಸಾಕಷ್ಟು ತತ್ತ್ವ-ವೇದಾಂತಾದಿಗಳ ಹಿನ್ನೆಲೆ ಇದ್ದರೂ, ಪ್ರತಿಭಾ ತತ್ತ್ವವನ್ನು ಕುರಿತು ಹೇಳುವಲ್ಲಿ, ಕೋಲ್‌ರಿಜ್ ಕವಿಯಂತೆ, ಈ ಲೋಕ ಕೂಡ ಕಾಲ್ಪನಿಕತೆ ಅಲ್ಲವೆ ಎನ್ನುವ ಚರ್ಚೆಗೆ ಇಳಿಯದೆ, ಅದನ್ನು ವೇದಾಂತಿಗಳಿಗೇ ಬಿಟ್ಟು ಕವಿಪ್ರತಿಭೆಯ ಸ್ವರೂಪವನ್ನು ಬಹು ಸೊಗಸಾಗಿ ವ್ಯಾಖ್ಯಾನಿಸಿದ್ದಾರೆ.'

ನಮ್ಮಲ್ಲಿ ಶಕ್ತಿ, ಪ್ರತಿಭಾನ, ಪ್ರತಿಭೆ, ಕಲ್ಪನೆ, ಊಹೆ, ಭಾವನೆ ಇತ್ಯಾದಿ ಪದಗಳಿದ್ದರೆ, ಪಾಶ್ಚಾತ್ಯರಲ್ಲಿ Genius, Imagination, Intuition, Fancy, Conception ಇತ್ಯಾದಿ ಪದಗಳಿದ್ದು ಗೊಂದಲಗೊಳಿಸುತ್ತವೆ. "ಭಾರತೀಯ ಕಾವ್ಯಮೀಮಾಂಸೆಯ ಯಾವ ಯಾವ ಪದಗಳು ಪಾಶ್ಚಿಮಾತ್ಯ ಕಾವ್ಯಮೀಮಾಂಸೆಯಲ್ಲಿ ಯಾವ ಯಾವ ಪದಗಳಿಗೆ ಸಂವಾದಿ ಯಾಗಬಲ್ಲುವೆಂಬುದನ್ನು ವಿಚಾರ ಮಾಡಬೇಕಾಗಿದೆ" ಎಂದು ಹೇಳಿ, ಆ ಕೆಲಸವನ್ನು ಮಾಡಿದ್ದಾರೆ ಜಿ.ಎಸ್.ಎಸ್. "ಯಾವುದನ್ನು 'ಜೀನಿಯಸ್' ಎಂದು ಗುರುತಿಸುತ್ತೇವೊ ಅದು, ಕೇವಲ ಕಲಾಭಿವ್ಯಕ್ತಿಗೆ ಮಾತ್ರ ಸೀಮಿತವಾದುದಲ್ಲ" ಎಂಬುದನ್ನು ಅವರು ಗಮನಿಸುತ್ತಾರೆ.

"ಪ್ರಜ್ಞಾ ನವನವೋನ್ಮೇಷಶಾಲಿನೀ', "ಪ್ರಜ್ಞಾ ನವನವೋಲ್ಲೇಖಶಾಲಿನೀ", "ಅಪೂರ್ವವಸ್ತು ನಿರ್ಮಾಣ ಕ್ಷಮಾ ಪ್ರಜ್ಞಾ" ಎಂಬ ಮೂರು ಹೇಳಿಕೆಗಳನ್ನೂ ಇಟ್ಟುಕೊಂಡು, ಪ್ರತಿಭೆಯ ಸ್ವರೂಪವನ್ನು ಸಂಗ್ರಹಿಸುತ್ತಾರೆ. ಜಿ.ಎಸ್.ಎಸ್. ಪ್ರಜ್ಞೆ, ಪ್ರತಿಭೆ ಎಂಬ ಪದಗಳು ಭಾರತೀಯ ದರ್ಶನಗಳಲ್ಲಿ, ಯೋಗಶಾಸ್ತ್ರದಲ್ಲಿ ಮತ್ತು ಬೌದ್ಧಧರ್ಮದಲ್ಲಿ ಕೂಡ ಬಳಕೆ ಗೊಂಡಿರುವುದನ್ನೂ ತಿಳಿಸುತ್ತಾರೆ. ಪ್ರತಿಭೆಯನ್ನು ಕುರಿತಂತೆ ರುದ್ರಟನ ಸಮಾಹಿತಕ್ಕೂ ವರ್ಡ್ಸ್‌ವರ್ತನ tranquilityಗೂ ಜಿಎಸ್‌ಎಸ್ ಸಂಬಂಧ ಕಲ್ಪಿಸುತ್ತಾರೆ. ಪ್ರತಿಭೆಯ ಬಗೆಗೆ ಭಾರತೀಯ ಅಲಂಕಾರಿಕರು ಏನೇನು ಹೇಳಿದ್ದಾರೊ ಅದರ ಜೊತೆಗೆ ಕೋಲ್‌ರಿಜ್, ಷೆಲ್ಲಿ, ರಿಚರ್ಡ್ಸ್ ಮುಂತಾದವರು ಹೇಳಿರುವುದನ್ನೆಲ್ಲ ಅವರು ಸಮೀಕ್ಷಿಸುತ್ತಾರೆ. ಪ್ರತಿಭೆಯಲ್ಲಿ ಸ್ಮರಣೀಯ ಪಾತ್ರವನ್ನು ಪೂರ್ವ, ಪಶ್ಚಿಮ ಎರಡೂ ಹೇಳುವುದನ್ನೂ ಲಕ್ಷಿಸುತ್ತಾರೆ.

ಭಾರತೀಯ ಕಾವ್ಯಮೀಮಾಂಸೆಯ ಒಂದು ಅರಕೆಯನ್ನು ಜಿಎಸ್‌ಎಸ್ ಹೀಗೆ ತಿಳಿಸುತ್ತಾರೆ: "ಪ್ರತಿಭೆ ಎಂದರೇನು ಎಂಬುದನ್ನು ಭಾರತೀಯ ಅಲಂಕಾರಿಕರೂ ಖಚಿತವಾದ ಮಾತುಗಳಲ್ಲಿ ವಿವರಿಸಿದ್ದರೂ, ಕಾವ್ಯನಿರ್ಮಾಣ ಸಮಯದ ಮನಃಸ್ಥಿತಿಯಲ್ಲಿ ವರ್ಣಿಸಿದ್ದರೂ, ಕವಿಪ್ರತಿಭೆ

ಹೇಗೆ ಕೆಲಸ ಮಾಡುತ್ತದೆ, ಅದರ ಪರಿಕರಗಳೇನು ಎನ್ನುವ ಮನಶ್ಶಾಸ್ತ್ರೀಯವಾದ ವಿವರಣೆಯನ್ನು ಕೊಡಲಾಗಿಲ್ಲ. ಅದರ ಸ್ವರೂಪವನ್ನು ವರ್ಣಿಸಿದ್ದಾರೆಯೇ ಹೊರತು. ಅದರ ಕಾರ್ಯ ವಿಧಾನವನ್ನು ವಿವರಿಸಿಲ್ಲ. ಆದರೆ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ Imagination ಅಥವಾ 'ಪ್ರತಿಭೆ'ಯ ಕಾರ್ಯವಿಧಾನವನ್ನು ಕವಿಮನೋಮಂದಿರದ ಪ್ರಯೋಗಶಾಲೆಯನ್ನು ಪ್ರವೇಶಮಾಡಿ, ಮನಶ್ಶಾಸ್ತ್ರೀಯವಾದ ರೀತಿಯಲ್ಲಿ ವಿವರಿಸಿದ್ದಾರೆ."

'ವ್ಯುತ್ಪತ್ತಿ', 'ಕವಿಸಮಯ' ಪರಿಕಲ್ಪನೆಗಳು ಪಾಶ್ಚಾತ್ಯಗಳಲ್ಲಿಲ್ಲ. ಆಯಾ ಶೀರ್ಷಿಕೆಯ ಲೇಖನಗಳಲ್ಲಿ ಅವುಗಳನ್ನು ವಿವೇಚಿಸಿದ್ದಾರೆ ಜಿಎಸ್‌ಎಸ್. ರಾಜಶೇಖರ "ಬಹುಜ್ಞತಾ ವ್ಯುತ್ಪತ್ತಿಃ" ಎಂದು ಹೇಳುವಂತೆಯೆ. "ಉಚಿತಾನುಚಿತ ವಿವೇಕೋ ವ್ಯುತ್ಪತ್ತಿ" ಎಂದೂ ಹೇಳುತ್ತಾನೆ; "ಕಾವ್ಯನಿರ್ಮಾಣ ಸಮರ್ಥವಾದ ಪ್ರತಿಭೆ ತನಗೆ ಉಪಯೋಗವಾಗುವ, ಸಮಸ್ತ ವಸ್ತುಗಳ ಪೂರ್ವಪರಗಳನ್ನು ವಿಮರ್ಶಿಸುವ ವಿಚಕ್ಷಣೆಯೇ ವ್ಯುತ್ಪತ್ತಿ" ಎಂಬುದು ಅಭಿನವಗುಪ್ತನ ಮತ. ಜಿಎಸ್‌ಎಸ್ ಹೀಗೆ ವಿವರಿಸುತ್ತಾರೆ; "ಭಾರತೀಯ ಲಾಕ್ಷಣಿಕರ ಈ ಮಾತುಗಳು ಕವಿಯ ಸೃಜನಕ್ರಿಯೆಯ ಜತೆಜತೆಗೆ ಹಾಗೂ ಆ ಸಂದರ್ಭದಲ್ಲಿ ಎಚ್ಚರವಿರುವ ವಿಮರ್ಶನ ಪ್ರಜ್ಞೆಯ ಸಂಗತಿಯನ್ನು ಬಹುಸ್ಪಷ್ಟವಾಗಿ ಹೇಳುತ್ತವೆ. ನವನವೋಲ್ಲೇಖ ಶಾಲಿನಿಯಾದ ಕವಿಪ್ರತಿಭೆ. ಅಭಿವ್ಯಕ್ತಿಯ ಸಂದರ್ಭದಲ್ಲಿ ಬಹುಜ್ಞತೆಯಿಂದ ದತ್ತವಾದ ಅನುಭವ ದ್ರವ್ಯವನ್ನು ಒಂದು ವ್ಯವಸ್ಥೆಗೆ ತರುತ್ತದೆ. ಹೀಗೆ ವ್ಯವಸ್ಥೆಗೆ ತರುವ ಕ್ರಿಯೆಯಲ್ಲಿ ಪ್ರವೃತ್ತವಾಗತಕ್ಕದ್ದು 'ಉಚಿತಾನುಚಿತ ವಿವೇಕ' ರೂಪದ ವಿಮರ್ಶನ ಪ್ರಜ್ಞೆಯೇ."

ಕವಿಸಮಯದ ಬಗೆಗೆ ಹೇಳುತ್ತ "ಕವಿಸಮಯವೂ ಕವಿಸಂಪ್ರದಾಯವೂ ಒಂದೇ ಎಂದು ಭ್ರಮಿಸಲು ಅವಕಾಶವುಂಟು ಆದರೆ ಕವಿಸಮಯ ಕವಿಸಂಪ್ರದಾಯ ಎರಡೂ ಸಮಾನಾರ್ಥಕ ಪದಗಳಲ್ಲ" ಎನ್ನುವ ಜಿಎಸ್‌ಎಸ್ ಮುಂದುವರಿದು ಹೇಳುತ್ತಾರೆ. "ಈ ಕವಿಸಮಯಗಳು ಉದ್ದಕ್ಕೂ ಕಾವ್ಯಗಳಲ್ಲಿ ಕೆಲವೆಡೆ ಕೇವಲ ಸಂಗತಿಗಳಾಗಿ, ಕೆಲವೆಡೆ ಸಂಕೇತಗಳಾಗಿ, ಕೆಲವೆಡೆ ಅಲಂಕಾರ ನಿರ್ಮಾಣದ ಉಪಮಾನ ಸಾಮಗ್ರಿಯಾಗಿ, ಇನ್ನು ಕೆಲವೆಡೆ ಧ್ವನಿ ವ್ಯಂಜಕವಾದ ಪ್ರತಿಮೆಗಳಾಗಿ ಬಳಸಲ್ಪಟ್ಟಿವೆ."

"ಸ್ಫೂರ್ತಿ"ಎಂಬ ಲೇಖನದಲ್ಲಿ ಜಿಎಸ್‌ಎಸ್ ಹೇಳುತ್ತಾರೆ; "ಸ್ಫೂರ್ತಿ (Inspiration) ಎನ್ನುವ ಪದ ನಮ್ಮಲ್ಲಿ ಹೊಳಹು. ಸ್ಪಂದನ, ಅಭಿವ್ಯಕ್ತಿ, ಎನ್ನುವ ಅರ್ಥಗಳಲ್ಲಿ ಬಳಕೆಯಲ್ಲಿದ್ದರೂ, ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅದು ಪ್ರತಿಭಾ ವ್ಯಾಪಾರಕ್ಕೆ ಸಂಬಂಧಿಸಿದ ಒಂದು ಪಾರಿಭಾಷಿಕ ಪದವಾಗಿ ಬಳಸಲ್ಪಟ್ಟಿಲ್ಲ... ಈಗ ನಾವು ಯಾವುದನ್ನು ಸ್ಫೂರ್ತಿ ಎಂದು ಕರೆಯುತ್ತೇವೆಯೋ ಆ ಒಂದು ವ್ಯಾಪಾರಕ್ಕೆ ನಮ್ಮ ಪ್ರಾಚೀನ ಅಲೆಮಾರಿಗಳು ಕೊಟ್ಟ ಹೆಸರು ರಸಾವೇಶ ಎಂಬುದು ಪಾಶ್ಚಾತ್ಯರು Imagination, Inspiration ಎರಡನ್ನೂ ಬೇರೆಬೇರೆಯಾಗಿಯೇ ಇಟ್ಟುಕೊಂಡು ಚರ್ಚಿಸಿದ್ದಾರೆ. ನಮಗೆ ತೋರುವ ಮಟ್ಟಿಗೆ ಈ ಎರಡಕ್ಕು ಸಂಬಂಧವೂ ಇದೆ, ವ್ಯತ್ಯಾಸವೂ ಇದೆ" ಎನ್ನುತ್ತಾರೆ, ಜಿಎಸ್‌ಎಸ್.

ಕಾವ.ಪಯೋಜನಕೆ ಸಂಬಂದಿಸಿದ ಲೇಖನ: ರಸಾನುಬವ ಮತು ನೈತಿಕ ನಿಲುವುಗಳು

ಈ ಬಗೆಗೆ ಪಾಶ್ಚಾತ್ಯ ಮತ್ತೂ ಭಾರತೀಯ ನಿಲುವುಗಳನ್ನು ಪ್ರಾಚೀನ ಕಾಲದಿಂದ ಇಂದಿನವರೆಗೆ ವ್ಯಕ್ತವಾದುವನ್ನು, ಸುದೀರ್ಘವಾಗಿ ಜಿಎಸ್‌ಎಸ್ ಚರ್ಚಿಸಿದ್ದಾರೆ. ಕಾವ್ಯ ಅಥವಾ ಸಾಹಿತ್ಯ ಒಂದು ಸಾಮಾಜಿಕ ಸಂದರ್ಭದ ಸೃಜನೆಯಾದುದರಿಂದ ಅದಕ್ಕೆ ಶ್ರೇಯಃ ಪರವಾದ ಸಾಮಾಜಿಕ ಜವಾಬ್ದಾರಿ ಉಂಟೆಂಬುದನ್ನು ನಮ್ಮ ಅಲಂಕಾರಿಕರು ಗುರುತಿಸಿದ್ದರು ಎಂಬುದು ಗಮನಾರ್ಹವಾದ ಉಕ್ತಿ.

ರೀತಿಯ ಸ್ವರೂಪ–ಶೈಲಿಯ ಸಮಸ್ಯೆ : ಲೇಖನದಲ್ಲಿ ಭಾರತೀಯರ ಪ್ರಕಾರ "ರೀತಿ" ಎನ್ನುವುದು ಕಾವ್ಯಭಾಷೆಯಲ್ಲಿನ ಗುಣವಿಶಿಷ್ಟವಾದ ಪದರಚನೆಯಾದರೆ, ಪಾಶ್ಚಿಮಾತ್ಯರ ಶೈಲಿ ಮುಖ್ಯವಾಗಿ ಕವಿಯ ವಿಶಿಷ್ಟ ವ್ಯಕ್ತಿತ್ವವೊಂದರ ಅಭಿವ್ಯಕ್ತಿಯಾಗಿದೆ ಎಂದೂ ಉದ್ದಕ್ಕೂ ಪಾಶ್ಚಿಮಾತ್ಯ ಕಾವ್ಯಮೀಮಾಂಸೆಯಲ್ಲಿ ಶೈಲಿಯನ್ನು ಕುರಿತು ಚರ್ಚೆ ಎಂದೂ ಅದರ ಹಿಂದಿರುವ ಕವಿಯ ವ್ಯಕ್ತಿತ್ವವನ್ನು ಮರೆಯುವುದಿಲ್ಲ ಎಂದೂ ಹೇಳಲಾಗಿದೆ. ಈ ದಿಶೆಯಲ್ಲಿ ಕುಂತಕನ ಕೊಡುಗೆಯ ಮಹತ್ವವನ್ನು ಹೀಗೆ ಎತ್ತಿ ಹಿಡಿಯುತ್ತಾರೆ. ಜಿಎಸ್‌ಎಸ್ ಕವಿಸ್ವಭಾವವನ್ನು ಮೂಲಮಾನವನ್ನಾಗಿಸಿಕೊಂಡು ಒಬ್ಬ ಕವಿಯ ರೀತಿಯನ್ನು ಪರಿಶೀಲಿಸಬೇಕೆನ್ನುವ ಕುಂತಕನ ಸಿದ್ಧಾಂತ, ಎಲ್ಲಾ ಬಗೆಯ ಕಾವ್ಯಗಳನ್ನು ರೀತಿಗಳನ್ನು ಅರ್ಥಮಾಡಿಕೊಳಲು ಉಪಯುಕ್ತವಾಗುವ, ಅತ್ಯಂತ ಆಧುನಿಕವೂ ಹಾಗೂ ಸಮಗ್ರವೂ ಆದ ಒಂದು ತತ್ತ್ವವಾಗಿದೆ; ಕುಂತಕನ ರೀತಿ ಸಿದ್ಧಾಂತ, ಆಶ್ಚರ್ಯಕರವಾಗಿ ಪಾಶ್ಚಿಮಾತ್ಯ ಶೈಲಿಸಿದ್ಧಾಂತಕ್ಕೆ ಅತ್ಯಂತ ಸಮೀಪದ್ದಾಗಿದೆ. ಇಷ್ಟಾಗಿಯೂ ಜಿ.ಎಸ್.ಎಸ್. ನಿರ್ಣಯಿಸುತ್ತಾರೆ. ಭಾಮಹನಿಂದ ಹಿಡಿದು ಕುಂತಕನವರೆಗೆ ಭಾರತೀಯ ಪರಿಸರದಲ್ಲಿ ರೀತಿ ಮತ್ತು ಮಾರ್ಗಗಳನ್ನು ಕುರಿತು ನಡೆದ ಚರ್ಚೆಯ ಅನೇಕ ಅಂಶಗಳು, ನಮ್ಮಲ್ಲಿನವರಿಗಿಂತ ಹೆಚ್ಚು ಖಚಿತವಾಗಿ ಪಾಶ್ಚಾತ್ಯ ಚಿಂತನೆಗಳಲ್ಲಿ ಕಾಣಿಸಿಕೊಂಡಿವೆ.

ವಾಸ್ತವವಾದ ಮತ್ತು ಸ್ವಭಾವೋಕ್ತಿ ಎಂಬ ಲೇಖನ ಕುತೂಹಲಕಾರಿಯಾಗಿದೆ. ಭಾರತೀಯ ಕಾವ್ಯಮೀಮಾಂಸೆಯ ಸ್ವಭಾವೋಕ್ತಿ ಪ್ರಕ್ರಿಯೆ ಪಾಶ್ಚಾತ್ಯ ವಾಸ್ತವವಾದಕ್ಕೆ (Realism)ಗೆ ಸಂವಾದಿಯಾಗಿದೆಯೆಂದೂ, ಸ್ವಭಾವೋಕ್ತಿ ನಮ್ಮಲ್ಲಿ ಒಂದು ವಾದವಾಗಿ ಅಥವಾ ಪಂಥವಾಗಿ ಪ್ರತಿಪಾದನೆಯಾಗಲಿಲ್ಲ ಎಂದೂ ಹೇಳುತ್ತಾರೆ, ಜಿಎಸ್‌ಎಸ್‌ಅವರ ಈ ಉಕ್ತಿಯು ಮನನ ಯೋಗ್ಯಕುಂತಕನ ಪ್ರಕಾರ ಕಾವ್ಯದಲ್ಲಿ ಎಲ್ಲೋ ಕೆಲವೆಡೆ ಇದ್ದುದನ್ನು ಇದ್ದ ಹಾಗೆ ಹೇಳಿದ್ದು ಮಾತ್ರ ಸ್ವಭಾವೋಕ್ತಿ ಅಲ್ಲ ಎಲ್ಲ ಕಾವ್ಯಾಭಿವ್ಯಕ್ತಿಯೂ ಸ್ವಭಾವೋಕ್ತಿಯೇ ಅದು ಅಲಂಕಾರಿಕವಾಗಿರಲಿ, ನಿರಲಂಕಾರಿಕವಾಗಿರಲಿ, ಏಕೆಂದರೆ, ಕುಂತಕನ ಪ್ರಕಾರ ಇದ್ದುದನ್ನು ಇದ್ದ ಹಾಗೆ ಹೇಳುವುದೇ ಕವಿಸ್ವಭಾವ. ಎಲ್ಲ ಕಾವ್ಯಭಿವ್ಯಕ್ತಿಯೂ ಕವಿ ತಾನು ಕಂಡದ್ದನ್ನು ಕಂಡಹಾಗೆ ಹೇಳಿದ್ದಲ್ಲದೆ ಮತ್ತೇನು? ಕುಂತಕನ ಈ ನಿಲುವು ಇದ್ದುದನ್ನು ಇದ್ದ ಹಾಗೆ ಹೇಳಿದರೆ ಮಾತ್ರ ಸಾಹಿತ್ಯವೆಂಬ ವಾಸ್ತವವಾದೀ ಧೋರಣೆಯನ್ನು ಒಳಗೊಂಡು ಇನ್ನು ಮುಂದೆ ಹೋಗುತ್ತದೆ.

ಉಪಮೆ–ರೂಪಕ–ಪ್ರತಿಮೆ ಲೇಖನದಲ್ಲಿ ಪ್ರತಿಮೆಯ (Image) ವಿಷಯ ರೀತಿ ಹೊಸದು; ಏಕೆಂದರೆ ಅದು ಭಾರತೀಯ ಕಾವ್ಯಮೀಮಾಂಸೆಯಲ್ಲಿಲ್ಲದ ಪರಿಕಲ್ಪನೆ. ಮನಶ್ಶಾಸ್ತ್ರದ ದೃಷ್ಟಿಯಿಂದಲೂ ಪ್ರತಿಮೆಯನ್ನಿಲ್ಲಿ ಪರಿಗಣಿಸಲಾಗಿದೆ. ಕಡೆಯಲ್ಲಿ ಜಿಎಸ್‌ಎಸ್ ಹೇಳುತ್ತಾರೆ,

ಕಾವ್ಯದಲ್ಲಿ ಪ್ರತಿಮೆಯೇ ಎಲ್ಲವೂ ಅಲ್ಲ, ಪ್ರತಿಮೆ ಕವಿಪ್ರತಿಭೆ ಕೃತಿನಿರ್ಮಾಣದಲ್ಲಿ ತೊಡಗುವಾಗ ನಿರ್ಮಿಸುವ ಒಂದು ಅಭಿವ್ಯಕ್ತಿ ಪ್ರಕಾರ. ಕವಿಪ್ರತಿಭೆ ವಸ್ತುವೊಂದನ್ನು ನಿರ್ವಹಿಸುವಾಗ, ಅದು ಸಂಕೇತಗಳಲ್ಲಿ ಸಂಚರಿಸಿ ಪ್ರತೀಕಗಳನ್ನು ಮಿಂಚಿ, ಪ್ರತಿಮೆಗಳನ್ನು ಮಡುಗಟ್ಟಿ ಅನೇಕಾರ್ಥಗಳನ್ನು ಪ್ರತಿಫಲಿಸುತ್ತಾ, ಅಭಿವ್ಯಕ್ತಿಗೆ ಸೊಗಸನ್ನೂ ಅರ್ಥದೀಪ್ತಿ ಹಾಗೂ ಧ್ವನಿಪ್ರಚುರತೆಗಳನ್ನು ತಂದುಕೊಡುತ್ತದೆ.

"ನಿಯತಿಕೃತ ನಿಯಮರಹಿತಾ" ಎಂದು ಮಮ್ಮಟ ಕಾವ್ಯದ ಬಗೆಗೆ ಹೇಳುತ್ತಾನೆ. ಅದನ್ನು ಒಂದು ಲೇಖನದಲ್ಲಿ ಅಸಾಂಭಾವತ್ಯಯೊಡನೆ ತಳುಕುಹಾಕಿ, ವಿವೇಚಿಸಿದ್ದಾರೆ ಜಿಎಸ್‌ಎಸ್. ಲೋಕವಾಸ್ತವದ ನೆಲೆಯಿಂದ ಮೇಲೇರುವ, ಲೋಕಾತಿಶಯ, ಲೋಕೋತ್ತರ, ಲೋಕಾತಿಕ್ರಾಂತಗಳೆಂದು ಗುರುತಿಸಬಹುದಾದ ಸಂಗತಿಗಳು ತಮ್ಮ ನಿಯತಿಕೃತ ನಿಯಮರಾಹಿತ್ಯದ ನೆಲೆಯಲ್ಲಿ ಒಂದು ದೃಷ್ಟಿಯಿಂದ ಸಂಭಾವ್ಯವಾದವುಗಳೇ ಎಂದು ಹೇಳಿ, ಕಡೆಯಲ್ಲಿ ಈ ಎಚ್ಚರದ ಮಾತನ್ನಾಡುತ್ತಾರೆ; ಕವಿ ವರ್ಣಿಸುವ ಸಂಗತಿಗಳು, ಕೇವಲ ನಿಯತಿಕೃತ ನಿಯಮರಾಹಿತ್ಯದ ನೆಲೆಗೆ ಸೇರಿದರೆ ಸಾಲದು, ಕಲೆಯಾಗುವುದಕ್ಕೆ ಅವುಗಳ ನಿರ್ವಹಣೆ ಅಸಂಭಾವ್ಯತೆಯ ದೋಷಕ್ಕೆ ಪಾತ್ರವಾಗದಂಥ ಕಲಾತ್ಮಕತೆಯನ್ನು ಪಡೆದುಕೊಂಡಿರುವುದೂ ಅಗತ್ಯ.

Psychical distance (ಮಾನಸಿಕ ದೂರ) ಎಂಬುದು ಎಡ್ವರ್ಡ್ ಬುಲೋ ಎಂಬಾತ ಪ್ರತಿಪಾದಿಸಿದ ತತ್ತ್ವ, ಅದಕ್ಕೂ ಭಾರತೀಯ ಕಾವ್ಯಮೀಮಾಂಸೆಯ ರಸಾನುಭವಕ್ಕೂ ಇರುವ ಸಂಬಂಧವನ್ನು ಜಿಎಸ್‌ಎಸ್ ಲೇಖನವೊಂದರಲ್ಲಿ ವಿಚಾರ ಮಾಡಿದ್ದಾರೆ. ಅಭಿನವಗುಪ್ತ ಹೇಳಿರುವ 'ಸಪ್ತವಿಘ್ನ'ಗಳಲ್ಲಿ ಕೆಲವು 'ದೂರಭಂಗ'ಕ್ಕೆ ಕಾರಣವಾಗುವುದನ್ನು ಅವರು ವಿವರಿಸುತ್ತಾರೆ.

ಪೌರ್ವಾತ್ಯ, ಪಾಶ್ಚಾತ್ಯ ಕಾವ್ಯಲಕ್ಷಣೀಕರಣಗಳನ್ನು ಕ್ರೋಢೀಕರಿಸುತ್ತದೆ, ಕಾವ್ಯಸ್ವರೂಪ ಎಂಬ ಲೇಖನಕಾವ್ಯಕ್ಕೆ ಛಂದಸ್ಸು ಅನಿವಾರ್ಯ ಎಂದು ಭಾರತೀಯ ಅಲಂಕಾರಿಕರು ಹೇಳಿಲ್ಲವೆಂಬುದನ್ನು ಅದಕ್ಕೆ ಕಾರಣಗಳನ್ನು ಚಿಂತಿಸುತ್ತಾರೆ. ಜಿಎಸ್‌ಎಸ್.

"ಭಾರತೀಯ ಕಾವ್ಯಮೀಮಾಂಸೆಯಲ್ಲಿ ಸಾಹಿತ್ಯ ವಿಮರ್ಶೆ" ಎಂಬ ಲೇಖನದಲ್ಲಿ ಜಿಎಸ್‌ಎಸ್ ಹೇಳುತ್ತಾರೆ. "ಭಾರತೀಯ ಪರಿಸರದಲ್ಲಿ, ಇಪ್ಪತ್ತನೆಯ ಶತಮಾನದಲ್ಲಿ, ಪಶ್ಚಿಮದ ಪ್ರೇರಣೆಯಿಂದ ಹುಟ್ಟಿಕೊಂಡ ಸಾಹಿತ್ಯ ವಿಮರ್ಶೆಯ ಪ್ರಯತ್ನಗಳನ್ನು ಬಿಟ್ಟರೆ, ಭಾಮಹನಿಂದ ಹಿಡಿದು, ಹತ್ತೊಂಭತ್ತನೆಯ ಶತಮಾನದವರೆಗೂ, ನಮ್ಮಲ್ಲಿ ನಡೆದ ಕಾವ್ಯ ಚರ್ಚೆ, ಅಲಂಕಾರ ಶಾಸ್ತ್ರ ಹಾಗೂ ಕಾವ್ಯಮೀಮಾಂಸೆಯ ಹಂತದಲ್ಲೇ ನಿಂತುಬಿಟ್ಟಿದೆ. ಭಾರತೀಯ ಕಾವ್ಯಮೀಮಾಂಸೆಯ ಪರಿಸರದಲ್ಲಿ ಸಾಹಿತ್ಯ ವಿಮರ್ಶೆಯ ದೃಷ್ಟಿಯಾಗಲಿ ಅಂಶಗಳಾಗಲಿ ಹೇಳಿಕೊಳ್ಳುವಂತೇನೂ ಇಲ್ಲ" ಇದು ಜಿಎಸ್‌ಎಸ್ ಅವರ ಕಡೆಯ ಮಾತು. (ಇಡೀ ಗ್ರಂಥದ ಕಡೆಯ ಮಾತು ಕೂಡ) "ಭಾರತೀಯ ಕಾವ್ಯಮೀಮಾಂಸೆ ನನ್ನ ಕಾವ್ಯಚರ್ಚೆಯನ್ನು ಕವಿಗಳಿಗಾಗಿ ಉದ್ದೇಶಿಸಿದೆ ಹೊರತು ಸಹೃದಯರಿಗಲ್ಲ.ಒಂದು ವೇಳೆ ಕಾವ್ಯಮೀಮಾಂಸೆ ಸಹೃದಯರ

ಗಾಗಿಯೂ ಉದ್ದೇಶಿತವಾದ ಸಾಹಿತ್ಯ ವಿಮರ್ಶೆಯ ಅಂಶಗಳನ್ನು ಒಳಗೊಂಡಿದ್ದರೆ, ಅದು ಬಹುಶಃ ಸಾಹಿತ್ಯದ ಸ್ವರೂಪವನ್ನೇ ಬದಲಾಯಿಸಬಹುದಾಗಿತ್ತು.

* * *

ಇದು ಜಿಎಸ್‌ಎಸ್ ಕಾವ್ಯಚಿಂತನದ ಒಂದು ದಿಕ್ಪ್ರದರ್ಶನ ಜಿಎಸ್‌ಎಸ್ ಅವರ ಪರಿಭಾವನೆಯಲ್ಲಿ ತುಸು ಅಸಮಗ್ರತೆಯ ಭಾವನೆಯನ್ನುಂಟುಮಾಡುವ ಸಂಗತಿಯೊಂದನ್ನು ಹೇಳಬೇಕು. ರಸ, ಧ್ವನಿ, ಔಚಿತ್ಯ–ಇವು ಭಾರತೀಯ ಕಾವ್ಯ ಜಿಜ್ಞಾಸೆಯ ಪ್ರಕಾರ ಕಾವ್ಯ ಗಾಯತ್ರಿ ಅಥವಾ ರತ್ನತ್ರಯ ತ್ತಾನೆ.? ಈ ಮೂರು ತತ್ತ್ವಗಳ ಪ್ರಸ್ತಾಪ ಪ್ರಾಸಂಗಿಕವಾಗಿ ಅಲ್ಲಲ್ಲಿ ಬಂದೇ ಇದೆ. ಆದರೂ ಇವುಗಳನ್ನು ಪ್ರತ್ಯೇಕ ಲೇಖನಗಳಲ್ಲಿ ಕೂಲಂಕಷವಾಗಿ ಪರಿಶೀಲಿಸಬಹುದಿತ್ತು ಎನಿಸುತ್ತದೆ. (ರಸತತ್ತ್ವದ ಬಗೆಗೆ ಒಂದು ಟಿಪ್ಪಣಿಯಷ್ಟೆ ಉಂಟು.)

ಕಡೆಯದಾಗಿ ಹೇಳಬಹುದಾದ ಮಾತು ಇದು; ಜಿಎಸ್‌ಎಸ್ ಅವರ ಹೇಳಿಕೆಗಳಿಗೆ ಅಲ್ಲಿ ಇಲ್ಲಿ ಪ್ರಶ್ನೆಚಿಹ್ನೆ ಹಾಕಬೇಕಾಗುವುದು; ಆದರೆ ಕೃತಿ ಒಟ್ಟಿನಲ್ಲಿ ಒಂದು ಆಶ್ಚರ್ಯ! ಸಂದೇಹವಿಲ್ಲ !!

*ಪ್ರಸಾರ ದಿನಾಂಕ: ೨೫–೧೧–೦೬*

■■

# ಕನ್ನಡ ಸಾಂಸ್ಕೃತಿಕ ವಕ್ತಾರರಾಗಿ ಡಾ. ಜಿ.ಎಸ್. ಶಿವರುದ್ರಪ್ಪ

●

*ಡಿ.ಎಸ್. ನಾಗಭೂಷಣ*

**ಜಿ**.ಎಸ್. ಶಿವರುದ್ರಪ್ಪ ಅವರನ್ನು ನಾನು ಮೊದಲ ಬಾರಿ ಕಂಡದ್ದು ಸುಮಾರು ೪೦ ವರ್ಷಗಳ ಹಿಂದೆ. ನಾನು ಪದವಿ ತರಗತಿಯ ವಿದ್ಯಾರ್ಥಿಯಾಗಿದ್ದಾಗ. ಆಗ ತಾನೇ ಅವರು ಉಸ್ಮಾನಿಯ ವಿಶ್ವವಿದ್ಯಾನಿಲಯದಿಂದ ಬಿಡುಗಡೆಗೊಂಡು, ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಬಂದಿದ್ದರು. ನಮ್ಮ ಕಾಲೇಜಿನ ಕನ್ನಡ ಸಂಘದ ಉದ್ಘಾಟನೆಗಾಗಿ ಅವರನ್ನು ಆಹ್ವಾನಿಸಲಾಗಿತ್ತು. ನಾನು ಆವರೆಗೆ ಯಾವ ಕವಿಯನ್ನು ಕಣ್ಣಾರೆ ನೋಡಿರಲಿಲ್ಲ. ಆದರೆ, ನಾನು ಶಿವರುದ್ರಪ್ಪನವರನ್ನು ನೋಡಿದಾಗ ನಾನು ಕವಿ ಎಂದರೆ ಹೇಗಿರಬಹುದೆಂದು ಕಲ್ಪಿಸಿಕೊಂಡಿದ್ದೆನೋ, ಯಥಾವತ್ತಾಗಿ ಹಾಗೇ ಇದ್ದು, ನನ್ನಲ್ಲಿ ಸೋಜಿಗ ಉಂಟು ಮಾಡಿದರು. ಧೀರ ಗಂಭೀರ ನಿಲುವಿನ, ಶುಭ್ರಶ್ವೇತವಸ್ತ್ರಧಾರಿಯಾಗಿದ್ದ ಅವರು, ಇನ್ನೂ ಸಾಹಿತ್ಯಕ್ಕೆ ಕಣ್ಣು ಬಿಡುತ್ತಿದ್ದ ನನ್ನಂಥ ಎಳೆಯರಿಂದಲೇ ತುಂಬಿದ್ದ, ಆದರೆ ತಾರುಣ್ಯ ಸಹಜವಾದ ತುಂಟತನದ ಪರಾಕಾಷ್ಠೆಯಲ್ಲಿದ್ದ, ಸಭೆಯನ್ನು ಸಮಕಾಲೀನ ಕನ್ನಡ ಸಾಹಿತ್ಯ ಕುರಿತ, ತಮ್ಮ ಸರಳ ಸುಂದರ ಕನ್ನಡ ಭಾಷಣದ ಮೂಲಕ, ಮೂಕ ವಿಸ್ಮಿತಗೊಳಿಸಿದರು. ಜಿ.ಎಸ್.ಎಸ್. ನೆನಪಾದಾಗಲೆಲ್ಲ, ನನಗೆ ನೆನಪಾಗುವುದು ಈ ಮೂರು ಶಬ್ದಗಳೆ. ಸರಳ, ಸುಂದರ ಮತ್ತು ಕನ್ನಡ. ಈ ಮೂರು ಶಬ್ದಗಳೇ ಅವರ ವ್ಯಕ್ತಿತ್ವವನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಕಟ್ಟಿ ನಿಲ್ಲಿಸಬಲ್ಲವು, ಎಂದು ನನ್ನ ಭಾವನೆ.

ಅವರ ಸಂಬಂಧಗಳ ಸರಳತೆ, ಅವರ ಕೆಲಸದ ಅಚ್ಚುಕಟ್ಟುತನ, ಹಾಗ ಅವರ ಪ್ರಜ್ಞೆಯ ಕನ್ನಡತನ ಇವು ಅವರ ಪರಿಚಯವಿರುವ ಎಲ್ಲರಿಗೆ ಅವರಲ್ಲಿ ಎದ್ದು ಕಾಣುವಂಥ ಗುಣಗಳಾಗಿವೆ. ನನಗೂ ಜಿ.ಎಸ್.ಎಸ್.ಗೂ ೩೦ ವರ್ಷಗಳ ವೈಯುಕ್ತಿಕ ಪರಿಚಯ. ನಾನು ಅವರ ವಿದ್ಯಾರ್ಥಿ ಅಲ್ಲದಿದ್ದರೂ, ಅವರ ಜೊತೆ ಗುರುತಿಸಿಕೊಳ್ಳಬಲ್ಲಷ್ಟು ದೊಡ್ಡ ಬರೆಹಗಾರನಲ್ಲದಿದ್ದರೂ, ಅವರೊಂದಿಗೆ ಕಳೆದ ೩೦ ವರ್ಷಗಳಿಂದ ಆತ್ಮೀಯ ಸಂಬಂಧವನ್ನು ಉಳಿಸಿಕೊಂಡು ಬಂದಿರುವುದು ನನ್ನ ಬದುಕಿನ ಮುಖ್ಯ ಸಂತೋಷಗಳಲ್ಲಿ ಒಂದು ಎಂದು ನಾನು ಭಾವಿಸಿದ್ದೇನೆ. ಉದ್ಯೋಗ ನಿಮಿತ್ತ ನಾನು ದೆಹಲಿಯಲ್ಲಿದ್ದಾಗ ಇನ್ನೊಬ್ಬ ಹಿರಿಯ ವಿದ್ವಾಂಸ ಹಾಗೂ ಕನ್ನಡದ ಕಟ್ಟಾಳು, ಡಾ. ಎಂ. ಚಿದಾನಂದಮೂರ್ತಿ ಅವರ ಮೂಲಕ ಪರಿಚಯಗೊಂಡ

ಜಿ.ಎಸ್.ಎಸ್. ಆಗ ಹೇಗಿದ್ದರೋ, ನನಗೆ ಈಗಲೂ ಹಾಗೇ ಕಾಣುತ್ತಾರೆ. ತಮ್ಮ ೮೧ನೇ ವಯಸ್ಸಿನಲ್ಲೂ ಅದೇ ಸರಳ ಸೌಜನ್ಯ, ಹಿತಮಿತವಾದ ವಿನೋದದಿಂದ ಕೂಡಿದ ಶುಚಿರುಚಿಯಾದ ಮಾತು, ಅತಿ ಬೌದ್ಧಿಕತೆಗಾಗಲೀ, ಅತಿ ತೀವ್ರವಾದ ನಿಲುವುಗಳಿಗಾಗಲೀ ಎಡಕೊಡದ ಸಾಹಿತ್ಯ ಸಲ್ಲಾಪ, ಹಾಗೂ ಕೊನೆಗೆ, ಹೊತ್ತಿಗೆ ತಕ್ಕ ಆಹಾರೋಪಚಾರದ ಆತಿಥ್ಯ, ಎಲ್ಲದರಲ್ಲೂ ಎದ್ದು ಕಾಣುವ ಸದಭಿರುಚಿ, ಹಾಗೂ ಅಚ್ಚು ಕಟ್ಟುತನ. ಇವೇ ೮೧ ವರ್ಷಗಳ ತನಕ ಅವರನ್ನು, ಅವರ ವಿವಿಧ ವಯೋಮಾನಗಳ ದೊಡ್ಡ ಗೆಳೆಯರ ಬಳಗದೊಂದಿಗೆ ಕಾಪಿಟ್ಟಿರುವ ರಹಸ್ಯವೂ ಆಗಿರುವಂತೆ ನನಗೆ ತೋರುತ್ತದೆ. ದೂರದಿಂದ ನೋಡಿದವರಿಗೆ ಹಾಗೂ ತಕ್ಕ ಮಟ್ಟಿನ ಪರಿಚಯವಿಲ್ಲದವರಿಗೆ ತುಂಬಾ ಖಾಸಗಿ ಮನುಷ್ಯರಂತೆ ಕಾಣುವ ಜಿ.ಎಸ್.ಎಸ್. ಒಮ್ಮೆ ವಿಶ್ವಾಸ ಕುದುರಿತೆಂದರೆ ಎಲ್ಲ ರೀತಿಯ ಅಂತರಗಳನ್ನೂ ಮೀರಿದ ಸಮಸ್ನೇಹಿತರಾಗಿ ಬಿಡುತ್ತಾರೆ. ಎಷ್ಟೊಂದು ಕಿರಿಯ ಸ್ನೇಹಿತರೊಂದಿಗೆ ಅವರು ಸಮಸ್ನೇಹಿತರಾಗಿ, ಸಮವಯಸ್ಕರಂತೆ ಮುಕ್ತವಾಗಿ, ಆತ್ಮೀಯತೆಯಿಂದ ಒಡನಾಡಿರುವುದನ್ನು ನಾನು ನೋಡಿಲ್ಲ !. ಹಾಗಾಗಿಯೇ ಕನ್ನಡ ಸಾಹಿತ್ಯ ಲೋಕದ ಮೂರು ತಲೆಮಾರುಗಳಿಗೆ ಅವರು ಗುರುಮಹಾರಾಜರು. ಆ ಶಿಷ್ಯ ಪ್ರಜಾ ಕೋಟಿಯೆ ಒಂದೊಂದೂ ಒಂದೊಂದು ಥರಹ. ಚಿದಾನಂದಮೂರ್ತಿಯವರಿಂದ ಹಿಡಿದು, ಡಿ.ಆರ್. ನಾಗರಾಜ್‌ರವರೆಗೆ ಚಿತ್ರ ವಿಚಿತ್ರ ಪ್ರತಿಭೆಗಳ, ಬಂಡುಕೋರರ ದಂಡು. ಅವರೆಲ್ಲರನ್ನೂ ಜಿ.ಎಸ್.ಎಸ್. ತಮ್ಮ ಗುರುತನದ ಪ್ರೀತಿವಿಶ್ವಾಸಗಳಲ್ಲಿ ಪೊರೆದು ಕನ್ನಡದ ಸೇವೆಗೆ ಕಾಣಿಕೆಗಳನ್ನಾಗಿ ನೀಡಿದ್ದಾರೆ. ಅಲ್ಲದೆ ಸಾಹಿತ್ಯ ಪರಿಧಿಯಾಚೆಯ ನನ್ನಂತಹ ಅನೇಕ ಸಾಹಿತ್ಯ-ಸಂಸ್ಕೃತಿ ಸಂವಾದಗಳಲ್ಲಿ ತೊಡಗಿಸಿಕೊಂಡು, ಈ ಸಂವಾದಕ್ಕೊಂದು ಅನೌಪಚಾರಿಕತೆಯ ಆಯಾಮ ಒದಗಿಸಲು ಕಾರಣರಾಗಿದ್ದಾರೆ. ಸ್ವತಃ ಜಿ.ಎಸ್.ಎಸ್. ಅವರೇ ಆಧುನಿಕ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಕಟ್ಟಿದ, ನವೋದಯ ದಿಂದ ಹಿಡಿದು ದಲಿತ, ಬಂಡಾಯ, ನವೋತ್ತರ ಪಂಥಗಳ ನಡುವೆ ನಡೆದ ಅನೇಕ ಸ್ತರಗಳ ಸಂವಾಧ್ಗಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪಾಲ್ಗೊಂಡು ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಸಂಪನ್ನಗೊಳಿಸಿದ್ದಾಗ ಅವರ ಕಾವ್ಯ ಹಾಗೂ ವಿಮರ್ಶೆಗಳಲ್ಲಿ ಈ ಬಗ್ಗೆ ಅನೇಕ ಸಾಕ್ಷಿಗಳು ಸಿಗುತ್ತವೆ. "ಉಡುಗಣವೇಷ್ಠಿತ ಚಂದ್ರಸುಶೋಭಿತ ದಿವ್ಯಾಂಬರ ಸಂಚಾರಿ, ಕಣ್ಣ ನೀರಿನಲಿ ಮಣ್ಣ ಧೂಳಿನಲಿ, ಹೊರಳುತ್ತಿರುವ ಸಹಚಾರಿಯಾದ ಶಿವ, ಅವರ ಕಾವ್ಯದ ಹಲವು ಘಟ್ಟಗಳಲ್ಲಿ ರೂಪಾಂತರ ಹೊಂದುತ್ತ ಕೊನೆಯ ಘಟ್ಟದಲ್ಲಿ, ನಿಶ್ಶಬ್ದ, ಕಾನನದೊಳಗೆ ಹಸಿರ ಹೆಡೆ ಬಿಚ್ಚಿದ ಅಶ್ವತ್ಥ ವೃಕ್ಷದ ಕೆಳಗೆ ಮಂದಹಾಸದ ಮೂರ್ತಿ, ಕಾಲನಿನ್ನೊಂದು ಕಾಲಿನ ಮೇಲೆ ನವಿಲುಗರಿಯಂತಿರಿಸಿ, ಮಲಗಿದ ಮೌನದ ಕೃಷ್ಣನಾಗಿ ಪ್ರಸ್ತುತಗೊಳ್ಳುವ ಪರಿಯೇ, ಜಿ.ಎಸ್.ಎಸ್. ಅವರ ವ್ಯಕ್ತಿತ್ವದಲ್ಲಿನ ಸೃಜನಶಕ್ತಿಯ ರೂಪಾಂತರಗಳ ಕಥೆಯನ್ನು ಹೇಳುತ್ತದೆ. ಅವರು ಕಳೆದ ೬೦ ವರ್ಷಗಳಲ್ಲಿ ಕನ್ನಡ ಸಂಸ್ಕೃತಿ ಕಂಡ ಅತ್ಯುತ್ತಮ ಮನಸ್ಸುಗಳೊಂದಿಗೆ ಒಡನಾಡಿದರು. ಸಂಘರ್ಷಗಳ ಮಧ್ಯೆ ಸಮನ್ವಯದ ಹರಿಕಾರರಾದರು. ಸಮನ್ವಯ ಸಾಧ್ಯವೂ ಅಲ್ಲ. ಸಾಧುವೂ ಅಲ್ಲ ಎನಿಸಿದಾಗ, ಹಿರಿಯರೊಂದಿಗೆ ಹಿರಿಯರಾಗಿ, ಕಿರಿಯರೊಂದಿಗೆ ಕಿರಿಯರಾಗಿ ಅವರಿಬ್ಬರ ನಡುವೆ ಸಂವಾದಗಳನ್ನು ಏರ್ಪಡಿಸಿ, ತಾವು ಮಾತ್ರ ವಸ್ತು ನಿಷ್ಠ ದೂರದಲ್ಲಿ ನಿಂತು, ಅದರ ಪರಿಣಾಮಗಳನ್ನು ಕನ್ನಡ ಸಾಹಿತ್ಯದ ಜಡತೆ ನೀಗುವ ಮುಖ್ಯ ವಾಗ್ವಾದಗಳನ್ನಾಗಿ ಪ್ರಸ್ತುತ ಪಡಿಸಿದರು.

ಇದರ ಅತ್ಯುತ್ತಮ ಉದಾಹರಣೆಗಳು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸಂಘಟಿಸಿದ ಹಲವು ವಿಚಾರ ಸಂಕಿರಣಗಳು, ಪುಸ್ತಕ ರೂಪದಲ್ಲಿ ಈಗಲೂ ಲಭ್ಯವಿರುವ ಈ ವಿಚಾರ ಸಂಕಿರಣಗಳು, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿಜವಾಗಲೂ ದಾಖಲಾಗಲೇಬೇಕಾದ ಐತಿಹಾಸಿಕ ಸಂಗತಿಗಳು. ಹಾಗೇ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಿದ್ಧಗೊಂಡ ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಾಹಿತ್ಯವನ್ನೂ ಜನಸಾಮಾನ್ಯರನ್ನೂ ಒಟ್ಟಿಗೆ ತರುವ ಕನ್ನಡ ಸಂಸ್ಕೃತಿಯ ಹೊಚ್ಚ ಹೊಸ ಪ್ರಯತ್ನ. ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಅವರು ರೂಪಿಸಿದ ಭಾರತೀಯ ಸಾಹಿತ್ಯ ಸಮೀಕ್ಷೆಯ ಅನುವಾದ ಯೋಜನೆ ಹಾಗೂ ಸಾಲುದೀಪಗಳು ಸಂಪುಟ, ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ಬಹುಕಾಲ ಉಳಿಯಬಲ್ಲ ಅಮೂಲ್ಯ ಆಕರಗ್ರಂಥಗಳು ಜಿ.ಎಸ್.ಎಸ್. ಅಧ್ಯಕ್ಷರಾಗಿದ್ದ ಅವಧಿಯಲ್ಲಿ. ಅಕಾಡೆಮಿಯ ಪ್ರಶಸ್ತಿ, ಬಹುಮಾನ ಪಡೆಯುವುದೆಂದರೆ, ನಿಜವಾಗಿಯೂ ಹೆಮ್ಮೆಯ ವಿಷಯವಾಗಿತ್ತು. ಸಾಹಿತ್ಯದಲ್ಲಿ ಅಗಿನ್ನೂ ಅಲಿಖಿತ ಮೀಸಲಾತಿ ಜಾರಿಗೆ ಬಂದಿರಲಿಲ್ಲ. ಆದರೂ ಸಾಮಾಜಿಕ, ಭೌಗೋಳಿಕ ಹಾಗೂ ಲಿಂಗ ನ್ಯಾಯಗಳಿಗೇನೂ ಕೊರತೆ ಇರಲಿಲ್ಲ. ಜಿ.ಎಸ್.ಎಸ್. ಅವರ ಕಾರ್ಯಶೈಲಿಯೇ ಹಾಗೆ. ಈ ಎಲ್ಲ ನ್ಯಾಯಗಳೂ ಅವರ ವ್ಯಕ್ತಿತ್ವದಲ್ಲೇ ಅಂತರ್ಗತವಾಗಿದ್ದವು. ಅವರು ಹಾದು ಬಂದ ವಿವಿಧ, ವಿಚಾರ ಹಾಗೂ ಚಳವಳಿಗಳ ಹಿನ್ನೆಲೆಯಿಂದಾಗಿ. ಅವರು ಸಾಹಿತ್ಯದ ಮೌಲೀಕರಣದ ಮಾನದಂಡಗಳನ್ನು ಪರಿಷ್ಕರಿಸುವ ಒತ್ತಾಯಕ್ಕೇನೂ ಈಡಾಗಲಿಲ್ಲ. ಸಾಹಿತ್ಯೇತರ ಆಶಯಗಳ ಮೇಲೆ ಬೆಳೆದಿದ್ದ ಬಂಡಾಯ ಸಾಹಿತ್ಯದ ಜೊತೆಗೂ ಅವರ ಸಂಬಂಧ ಹಾಗೇ, ಹೊಸ ನೋಟದ ಬಗ್ಗೆ ಸಹಾನುಭೂತಿ. ಆದರೆ ವಿಮರ್ಶಾತ್ಮಕ ದೂರ ಕಾಯ್ದುಕೊಂಡೇ! ಹಾಗಾಗಿಯೇ ಅವರು ಹಲವಾರು ಬಾರಿ ಗಾಳಿ ಬೀಸಿದ ಕಡೆ ಹಾರುವ ಅಪಾಯದಿಂದ ಸ್ವಲ್ಪದರಲ್ಲಿ ಪಾರಾಗಿ, ಅಸ್ತಮಾನದ ಕೃಷ್ಣನನ್ನು, ನವಿಲುಗಿರಿಯ ರೂಪದಲ್ಲಿ ಕಂಡರಿಸಿಕೊಳ್ಳುವ ಕಾವ್ಯದ ಕಣ್ಣನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಅವರ ಕಾವ್ಯ ಮೀಮಾಂಸೆ ಅಧ್ಯಯನವೂ ಹಾಗೇ. ಅವರ ಕಾವ್ಯಾರ್ಥ ಚಿಂತನ ಭಾರತೀಯ ಹಾಗೂ ಪಾಶ್ಚಿಮಾತ್ಯ ಕಾವ್ಯಮೀಮಾಂಸೆಗಳನ್ನು ತುಲನಾತ್ಮಕವಾಗಿ ನೋಡುವಾಗ ಸಂಪ್ರದಾಯವಾದಿಯೂ ಆಗದೆ, ಅತ್ತ ನವ್ಯವೂ ಆಗದೆ, ಎರಡನ್ನೂ ಒಟ್ಟಿಗೆ ಹೇಗೆ ಹೆಚ್ಚಿನ ಕಾವ್ಯಾಸ್ವಾದನೆಗೆ ಬಳಸಿಕೊಳ್ಳಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಜಿ.ಎಸ್.ಎಸ್. ಅವರನ್ನು ಕೆಲವರು ಈಗಲೂ ಸಮನ್ವಯವಾದಿ ಎಂದೇ ಕರೆಯುತ್ತಾರೆ. ಅವರನ್ನು ಬದಲಿಗೆ ಮಧ್ಯಮಮಾರ್ಗಿ ಎಂದೇ ಕರೆಯುವುದು ಹೆಚ್ಚು ಸೂಕ್ತ ಹಾಗೂ ಅವರ ಸಾಹಿತ್ಯ ವ್ಯಕ್ತಿತ್ವಕ್ಕೆ ನ್ಯಾಯ ಒದಗಿಸುವಂಥದ್ದು ಎಂದು ನಾನು ಭಾವಿಸಿದ್ದೇನೆ. ಅವರು, ಹೊಸಬರೇನನ್ನು ಬರೆದರೂ ಗುರುತಿಸಿ, ಬೆನ್ನು ತಟ್ಟುತ್ತಾರೆ. ಅವರ ದೋಷಗಳನ್ನು ಮಾತ್ರ ಹೇಳಲು ಹೋಗುವುದಿಲ್ಲ. ಅವರಿಗೆ ಯಾರೇ ಪುಸ್ತಕ ಕಳಿಸಿದರೂ, ಗಮನಿಸಿ ನಾಲ್ಕು ಸಾಲು ಬರೆಯುತ್ತಾರೆ. ಅಥವಾ ದೂರವಾಣಿಯಲ್ಲಿ ಮೆಚ್ಚುಗೆ ಮಾತುಗಳನ್ನಾಡುತ್ತಾರೆ. ಒಪ್ಪಿಕೊಂಡ ಸಭೆ, ಸಮಾರಂಭಗಳಿಗೆ ಹೊತ್ತಿಗೆ ಸರಿಯಾಗಿ ಬಂದು ಆಸೀನರಾಗುತ್ತಾರೆ. ಬರುವ ಮುನ್ನವೇ ಸಾಕಷ್ಟು ಪೂರ್ವಸಿದ್ಧತೆ ಮಾಡಿಕೊಂಡು ಟಿಪ್ಪಣಿಗಳೊಂದಿಗೆ ಭಾಷಣಕ್ಕೆ ನಿಲ್ಲುತ್ತಾರೆ. ಸರಳ ಗನ್ನಡದಲ್ಲಿ, ಸರಳ ವಾಕ್ಯಗಳಲ್ಲಿ, ಅತ್ಯಂತ ಸಂಕೀರ್ಣವಾದ ಸಂಗತಿಗಳನ್ನೂ ವ್ಯವಧಾನದೊಂದಿಗೆ

ಬಿಡಿಸಿಡುತ್ತಾರೆ. ಜಿ.ಎಸ್.ಎಸ್.ಕವಿಯೋ, ವಿದ್ವಾಂಸರೋ ಎಂದು ಬಿಡಿಸಿ ಹೇಳಲಾಗದಷ್ಟು ಗದ್ಯಪದ್ಯಗಳ ಒಂದು ಅತ್ಯುತ್ತಮ ಹದದಲ್ಲಿ, ವಿಚಾರಗಳನ್ನು ಮಂಡಿಸುವ ಕಲೆ ಅವರಿಗೆ ಕರಗತವಾಗಿದೆ. ದೀರ್ಘ ಅಧ್ಯಾಪನ ವೃತ್ತಿಯೂ ಇದಕ್ಕೆ ನೆರವಾಗಿರಬಹುದು. ಇವೆಲ್ಲವೂ ಜಿ.ಎಸ್.ಎಸ್. ಅವರ ವ್ಯಕ್ತಿತ್ವದ ಆಂತರಿಕ ಸೌಂದರ್ಯವನ್ನು ನಿರೂಪಿಸುವ ಸಂಗತಿಗಳೇ ಆಗಿವೆ. ಇದೆಲ್ಲವೂ ಬೇರೆಯವರು ಏರ್ಪಡಿಸಿದ ಸಮಾರಂಭಗಳ ಮಾತಾಯಿತು. ಅವರೇ ವಿವಿಧ ಹುದ್ದೆಗಳಲ್ಲಿ ಸಂಘಟಿಸಿದ್ದ ವಿಚಾರ ಸಂಕಿರಣಗಳು, ಸಮಾರಂಭಗಳು ಎಷ್ಟೊಂದು ಅಚ್ಚುಕಟ್ಟಾಗಿ ಆಯೋಜಿತವಾಗುತ್ತಿದ್ದವೆಂದರೆ, ಅವುಗಳಲ್ಲಿ ಅವರ ಛಾಪು ಎದ್ದು ಕಾಣುತ್ತಿತ್ತು. ವೇದಿಕೆ ವಿನ್ಯಾಸ ಅದನ್ನು ಹೇಗೆ ಸಿಂಗರಿಸಬೇಕು, ಮೇಜಿನ ಮೇಲೆ ಎಂತಹ ಬಟ್ಟೆ ಹಾಕಬೇಕು, ಯಾವ ಹೂ ಕುಂಡಗಳು ಎಲ್ಲಿರಿಸಬೇಕು, ಊಟ ಉಪಹಾರಗಳಲ್ಲಿ ಏನೇನು ಇರಬೇಕು ಎಂಬುದರ ಬಗ್ಗೆಯೂ ಅವರು ವೈಯುಕ್ತಿಕ ಗಮನ ನೀಡುತ್ತಾರೆ. ಇನ್ನು ವಿಚಾರ ಸಂಕಿರಣ ಹಾಗೂ ಅತಿಥಿಗಳ ವಿಷಯದಲ್ಲೂ ವಿಶೇಷ ಎಚ್ಚರ ವಹಿಸುವ ಅವರು ಸಾಕಷ್ಟು ಮುಂಗಡವಾಗಿ ಅತಿಥಿಗಳಿಗೆ ಆಹ್ವಾನ ಕಳಿಸಿ, ಮಂಡಿಸಬೇಕಾದ ವಿಷಯದ ಚೌಕಟ್ಟನ್ನು ನೀಡುವ ಮೂಲಕ, ವಿಚಾರ ಸಂಕಿರಣ ಹಾದಿ ತಪ್ಪಿಹೋಗದಂತೆ, ನೋಡಿಕೊಂಡಿದ್ದಾರೆ. ಅವರು ಕನ್ನಡ ಅಧ್ಯಯನ ಕೇಂದ್ರದಲ್ಲಿ ಹಾಗೂ ಸಾಹಿತ್ಯ ಅಕಾಡೆಮಿ ಪರವಾಗಿ ಏರ್ಪಡಿಸಿದ್ದ ಸಂಕಿರಣ, ಸಮಾರಂಭಗಳಲ್ಲಿ ಭಾಗವಹಿಸಿದ ಅನೇಕರು ಜಿ.ಎಸ್.ಎಸ್. ಅವರ ಸಂಘಟನಾ ಸಾಮರ್ಥ್ಯವನ್ನು ಕಂಡು ಬೆರಗಾಗಿ ಹೋಗಿದ್ದಾರೆ.

ಜಿ.ಎಸ್.ಎಸ್. ಅವರಲ್ಲಿ ಎದ್ದು ಕಾಣುವ ವಿಶಿಷ್ಟ ಗುಣವೆಂದರೆ, ಅವರ ಪ್ರವಾಸ ಪ್ರಿಯತೆ, ಅವರ ಮನೆಯವರು ಅವರನ್ನು ಕಾಲಿಗೆ ಚಕ್ರ ಕಟ್ಟಿಕೊಂಡವರು ಎಂದೇ, ಪ್ರೀತಿ ಆತಂಕಗಳಿಂದ ವರ್ಣಿಸುವುದುಂಟು. ಜಗತ್ತಿನ ವಿವಿಧ ಭಾಗಗಳಲ್ಲಿ ಶಿಷ್ಯರನ್ನೋ, ಸ್ನೇಹಿತರನ್ನೋ, ಬಂಧುಗಳನ್ನೋ ಹೊಂದಿರುವ ಅವರು ಪೂರ್ವ ಪಶ್ಚಿಮಗಳೆನ್ನದೆ ೫ ಬಾರಿ ಒಂಟಿಯಾಗಿ ವಿದೇಶ ಪ್ರವಾಸ ಮಾಡಿದ್ದಾರೆ. ಯಾವುದೇ ಸಾಹಿತ್ಯಿಕ ಉದ್ದೇಶದಿಂದಲ್ಲ. ಜಗತ್ತಿನ ವಿದ್ಯಮಾನಗಳ ಬಗ್ಗೆ ಇರುವ ಸಹಜ ಕುತೂಹಲದಿಂದ, ಪ್ರತಿ ವಿದೇಶ ಪ್ರವಾಸದ ನಂತರವೂ ಕನ್ನಡಿಗರಿಗೆ ವಿಶಿಷ್ಟ ಪ್ರವಾಸಕಥನಗಳನ್ನು ನೀಡಿದ್ದಾರೆ. ತಮ್ಮ ೮೦ನೇ ವಯಸ್ಸಿನಲ್ಲೂ, ಒಂಟಿಯಾಗಿ ದೆಹಲಿಗೆ ಹೋಗಿ ಬಂದಿದ್ದಾರೆ. ದಕ್ಷಿಣ ಕನ್ನಡದ ಒಂದು ಸಣ್ಣ ಊರಿನಲ್ಲಿ, ಏರ್ಪಾಡಾಗಿದ್ದ, ಪುತಿನ ಪ್ರಶಸ್ತಿ ಸಮಾರಂಭಕ್ಕೆ ಸಕಾಲಕ್ಕೆ ಹಾಜರಾಗಲು, ದೆಹಲಿಯಿಂದ ಗೋವಾಕೆ ಹಾರಿ, ಅಲ್ಲಿ ವಿಮಾನ ತಪ್ಪಿದ್ದರಿಂದ, ಆಗಲೇ ಹೊರಟಿದ್ದ ಬಸ್ ಹಿಂಬಾಲಿಸಿ ನಿರ್ಜನ ಪ್ರದೇಶದಲ್ಲಿ ನಿಂತು, ಬಸ್ ಹಿಡಿದು, ಸಂಬಂಧಪಟ್ಟ ಊರಲ್ಲಿ ಕಾರ್ಯಕ್ರಮ ಸಂಘಟಿಸಿದ್ದಾರೆ ಇದನ್ನು ಬರೀ, ಶಿಸ್ತೆಂದು ಕರೆಯಲಾದೀತೇ? ಅಥವಾ ಬರೀ ಶ್ರದ್ಧೆಯೆಂದು?

ಈಗಾಗಲೇ ಹೇಳಿದಂತೆ ಜಿಎಸ್‌ಎಸ್ ಆಧುನಿಕ ಕನ್ನಡ ಸಾಹಿತ್ಯ ಕಂಡ, ಅನೇಕ ವಾದ ವಿವಾದಗಳ ಹಾಗೂ ಚಳುವಳಿಗಳ ಮಧ್ಯೆ ಬೆಳೆದವರು. ಅದು ನವೋದಯ ಇರಬಹುದು, ನವ್ಯ ಇರಬಹುದು, ಒಕ್ಕೂಟ ಇರಬಹುದು, ಬಂಡಾಯ ದಲಿತಪಂಥಗಳು ಇರಬಹುದು ಆದರೆ ಎಂದೂ ಅವರು ಈ ವಿವಾದ ಹಾಗೂ ಚಳವಳಿಗಳು ಬೆಳೆಸಿದ ಅತಿ ನಿಲುವುಗಳನು

ಒಪ್ಪಿಕೊಂಡವರಲ್ಲ. ಜಾತಿ-ವರ್ಗಗಳ ಹೆಸರಿನಲ್ಲಿ, ಸ್ನೇಹ ಕಳೆಕೊಂಡವರಲ್ಲ. ಹಾಗಾಗಿಯೇ ಪುತಿನ ತಮ್ಮ ಹೆಸರಿನಲ್ಲಿ ಸ್ಥಾಪಿತವಾದ trustಗೆ, "ಶಿವರುದ್ರಪ್ಪ ಗಟ್ಟಿಗ ಕಣಪ್ಪ" ಎಂದು ಅಧ್ಯಕ್ಷರನ್ನಾಗಿ ಮಾಡಿದರು. ಅದನ್ನು ಜಿ.ಎಸ್.ಎಸ್. ಎಷ್ಟು ನಿಯಮಿತವಾಗಿ ಶ್ರದ್ಧೆಯಿಂದ ನಡೆಸಿಕೊಂಡು ಹೋಗುತ್ತಿದ್ದಾರೆ ಎಂಬುದನ್ನು ಬಲ್ಲವರೇ ಬಲ್ಲರು. ಪ್ರತಿವರ್ಷ, ಕನ್ನಡದ ಒಬ್ಬ ಒಳ್ಳೆಯ ಕವಿಯನ್ನು ಪುತಿನ ಪ್ರಶಸ್ತಿ ಮೂಲಕ ಗೌರವಿಸುವ ಈ trust ನಂತೆಯೇ ಜಿ.ಎಸ್.ಎಸ್, ತಮಗೆ ಬಂದ ಪಂಪ ಪ್ರಶಸ್ತಿ ಹಣವನ್ನು ಹೂಡಿ, ತಮ್ಮದೇ ಹೆಸರಿನ ಪುದುವಟ್ಟನ್ನು ಸ್ಥಾಪಿಸಿದ್ದಾರೆ. ಅದರ ಮೂಲಕ ಪ್ರತಿವರ್ಷ ಒಬ್ಬ ಒಳ್ಳೆ ವಿಮರ್ಶಕನನ್ನು ಜಿ.ಎಸ್.ಎಸ್. ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಹೀಗಾಗಿ ಅಧ್ಯಾಪಕರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ, ನಂತರ ಹಿರಿಯ ಸಾಹಿತಿಗಳಾಗಿ, ಒಂದು ನಿರಂತರ ಸಂಸ್ಥೆರೂಪದಲ್ಲಿ, ಕನ್ನಡ ಸಂಸ್ಕೃತಿ ಕಟ್ಟುವ ಕೆಲಸದಲ್ಲಿ ತೊಡಗಿಕೊಂಡು ಬಂದಿದ್ದಾರೆ. ಜಿ.ಎಸ್.ಎಸ್ ಮಧ್ಯಮ ಮಾರ್ಗಿಯಾದರೂ, ಸಾಹಿತ್ಯ-ಸಂಸ್ಕೃತಿಗಳ ರುಚಿ ಕೆಡಿಸುವ ಪ್ರಯತ್ನಗಳಾದಾಗಲೆಲ್ಲ ಪ್ರತಿಭಟನೆಗೆ ಹಿಂಜರಿದಿಲ್ಲ. ಮಾಸ್ತಿಯವರಿಗೆ ಸಂಬಂಧಪಟ್ಟಂತೆ, ಚೆನ್ನಬಸವನಾಯಕ ಹಾಗೂ ಚಿಕ್ಕವೀರರಾಜೇಂದ್ರ ಕೃತಿ ಕುರಿತು ವಿವಾದ ಇರಬಹುದು. ಗೋಕಾಕ್ ಚಳವಳಿ ಆಗಿರಬಹುದು ಮಹಾಚೈತ್ರ ಹಾಗೂ ದರ್ಬಾರಾವಡ ಕೃತಿಗಳಾಗಿರಬಹುದು. ಅವರು ಯಾವ ದಾಕ್ಷಿಣ್ಯಕ್ಕೂ ಒಳಗಾಗದ ತಮ್ಮ ಜಾತ್ಯಾತೀತ, ಸಾಹಿತ್ಯಪರ, ಕನ್ನಡಪರ ನಿಲುವುಗಳನ್ನು ಎತ್ತಿ ಹಿಡಿದಿದ್ದಾರೆ. ಇದರ ಭಾಗವಾಗಿ ಒಮ್ಮೆ ಸೆರೆಮನೆಗೂ ಹೋಗಿ ಬಂದದ್ದುಂಟು.

ಈಗ ಬಹು ಚರ್ಚಿತವಾಗುತ್ತಿರುವ ಕನ್ನಡ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ೧ನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ, ಸರ್ಕಾರದ, ಇತ್ತೀಚಿನ ಆಜ್ಞೆ, ಬಗ್ಗೆ ಕೂಡ ಅವರು ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಪರಿಸರನಾಶ ಹಾಗೂ ಕೋಮು ಹಿಂಸಾಚಾರ ಕುರಿತ ಅವರ ನಿಲುವುಗಳು ಪ್ರಗತಿಪರ ಆಂದೋಲನಕ್ಕೆ ಸ್ಥೈರ್ಯ ನೀಡಿವೆ. ಜಿ.ಎಸ್.ಎಸ್. ವ್ಯಕ್ತಿತ್ವ ಕುವೆಂಪು ಅವರ ಪ್ರಭಾವಲಯದಲ್ಲಿ ಮಾಡಿದಂಥದು ಎಂದು ಹೇಳಲಾಗುತ್ತದೆ. ಹಾಗಾಗಿಯೇ ಅವರು ಪ್ರಭುತ್ವದ ಜೊತೆ, ತಾವು ನಂಬಿಕೊಂಡ ಮೌಲ್ಯಗಳು, ಹಾಗೂ ನಿಲುವುಗಳ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಂಡವರಲ್ಲ. ಆದರೆ ಜಿ.ಎಸ್.ಎಸ್. ಕುವೆಂಪು ಅವರ ವ್ಯಕ್ತಿತ್ವದ ಪಡಿಯಚ್ಚಿನಲ್ಲಿ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡವರಲ್ಲ. ಕುವೆಂಪು ವ್ಯಕ್ತಿತ್ವದ ಕೇಂದ್ರ ಕಾಳಜಿ ಲೋಕೋತ್ತರತೆ, ಅವರೇ ಹೇಳಿಕೊಂಡಂತೆ. ಆಧ್ಯಾತ್ಮ, ಅನಿಕೇತನ, ಆದರೆ, ಜಿ.ಎಸ್.ಎಸ್. ವ್ಯಕ್ತಿತ್ವದ ಕೇಂದ್ರ ಕಾಳಜಿ, ಈ ಲೋಕ, ಈ ಲೋಕದ ಬದುಕು. ಅನಿಕೇತನತ್ವ, ಪ್ರತಿನಿಧಿಸುವ ಆಕಾಶ ಹಾಗೂ ಲೋಕವನ್ನು ಪ್ರತಿನಿಧಿಸುವ ಭೂಮಿ, ಇವೆರಡರ ದ್ವಂದ್ವಾತ್ಮಕ ಚಲನೆ. ಆಧುನಿಕ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಕಟ್ಟಿದೆ. ಜಿ.ಎಸ್.ಎಸ್. ಈ ಕಟ್ಟೋಣದ ನಮ್ಮ ಮಧ್ಯದ ಜೀವಂತ ಪ್ರತೀಕ. ಜಿ.ಎಸ್.ಎಸ್. ವ್ಯಕ್ತಿತ್ವವನ್ನು ಬಹುಶಃ ನನ್ನ ಈ ಮಾತುಗಳಿಗಿಂತ ಹೆಚ್ಚಾಗಿ, ಗೆಳೆಯ ಹೆಚ್. ದುಂಡಿರಾಜ್ ಅವರು ಜಿ.ಎಸ್.ಎಸ್.ಗೆ ಪಂಪ ಪ್ರಶಸ್ತಿ ಬಂದಾಗ ಬರೆದ ಈ ಕವನ ಪರಿಚಯ ಮಾಡಿಕೊಡುತ್ತದೆ ಎಂದು ಕಾಣುತ್ತದೆ.

"ಮರಗಳಲ್ಲಿ ತೆಂಗಿನ ಮರ
ಕವಿಗಳಲ್ಲಿ ಇವರು ಅದೇ ಥರ
ಎತ್ತರ, ಸರಳ, ನೇರ
ನೆಲದ ಸಾರವನ್ನೆಲ್ಲ ಹೊಟ್ಟೆ ಬಾಕನಂತೆ ಹೀರಿ
ಅಡ್ಡಾದಿಡ್ಡಿ ಬೆಳೆದು ಎಲ್ಲ ಕಡೆಗೂ ಗೆಲ್ಲು ಚಾಚಿದವರಲ್ಲ
ಗಾಳಿ ಬೆಳಕು ತಾವಷ್ಟೆ ಕುಡಿದು ಬೇರೆ ಕುಡಿ ಚಿಗುರದ
ನೆರಳು ಚಾಚಿದವರಲ್ಲ
ಬೆಳೆಯುವಂತೆ ತೆಂಗಿನ ತೋಟದಲ್ಲಿ ಬಾಳೆ, ಕೋಕೋ
ಅಡಿಕೆ ವೀಳೇದೆಲೆ, ಬೆಳೆಸಿದರು ನೂರಾರು
ಸಾಹಿತಿಗಳನ್ನು, ತಮ್ಮ ಜೊತೆ ಜೊತೆಯಲ್ಲೇ
ಕೆಂಗೇರಿಯ ಬೆಂಗಾಡಿನಲ್ಲೂ ಮುಡಿಸಿದರು
ಮಲೆನಾಡ ಫಸಲು!
ನವೋದಯ, ನವ್ಯ, ನವ್ಯೋತ್ತರ ಎಲ್ಲವನೂ
ತೂಗಿ ಅಳೆದು, ವಿಮರ್ಶೆಯ ನಿಕಷಕ್ಕೆ ಎಳೆದು
ಎಲ್ಲೂ ನಿಲ್ಲದೆ ಬೆಳೆದರು ಮುಗಿಲೆತ್ತರ
ರಕ್ಷಿತ ಅರಣ್ಯದ ತೇಗ ಬೀಟೆ ಶ್ರೀಗಂಧ
ಚಂದನದ ಒಣಗಾಂಭೀರ್ಯ ಮೆರೆಸಿದವರಲ್ಲ
ಅರಿಸಿದರು ನಮ್ಮ ನಿಮ್ಮ ಮನೆ ಅಂಗಳ
ಎದೆ ತುಂಬಿ ಹಾಡಿದರು, ನೀಡಿದರು, ಕೊನೆಗೊನೆ
ಎಳನೀರು! ಸಾಹಿತ್ಯಲೋಕದ ಕಲ್ಪವೃಕ್ಷ
ಕವಿವಿಮರ್ಶಕ ನಿಷ್ಠಪ್ರಾಧ್ಯಾಪಕ ಮಾತ್ರವಲ್ಲ
ಆಡಳಿತದಲ್ಲೂ ದಕ್ಷ, ಮಾಜಿಯಾದರೂ ಮರೆತು
ಹೋಗದ ಅಕಾಡೆಮಿ ಅಧ್ಯಕ್ಷ, ಕಟಕಿ, ಟೀಕೆ
ಕಾಟಕ್ಕೆ ಬಾಡಿದವರಲ್ಲ.
ಪ್ರಶಸ್ತಿ ಪ್ರಚಾರ ಕೃತಕ ಗೊಬ್ಬರ ಬೇಡಿದವರಲ್ಲ
ಮೂಡಿ ಬಂದಿದೆ ತಾನಾಗಿ ತೆಂಗಿಗೆ ಈಗ
ಪಂಪ ಪ್ರಶಸ್ತಿಯ ಗರಿ
ಅಭಿನಂದನೆಗಳು ಸರ್! ಬರೆಯುತ್ತಲೇ ಇರಿ
ರೋಗಗ್ರಸ್ತ ಸಮಾಜಕ್ಕೆ ಬೇಕು, ಎಳನೀರು, ನೀವು,
ನಿಮ್ಮಂತಹವರು!!

ಜಿ.ಎಸ್.ಎಸ್. ಅವರ ಈ ಜೀವನ ಪ್ರೀತಿ ಹಾಗೂ ಈ ಜನಪ್ರಿಯತೆಗಳೇ ಅವರ ವ್ಯಕ್ತಿತ್ವಕ್ಕೆ ರಾಷ್ಟ್ರಕವಿ ಪ್ರಶಸ್ತಿ ಒಪ್ಪುವಂತೆ ಮಾಡಿವೆ. ಅವರು ರಾಷ್ಟ್ರಕವಿಯಾಗಿ, ಇನ್ನಷ್ಟು ಕಾಲ ಬದುಕಿ ಬಾಳಿ, ಕನ್ನಡ ಸಾರಸ್ವತ ಲೋಕದ ಹಿರಿಯ ಅಜ್ಜನಂತೆ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುವಂತಾಗಲಿ.

*ಪ್ರಸಾರ ದಿನಾಂಕ: ೨೭-೧೧-೦೬*

■■

# ಚಿಂತನ–೧

*ಧ್ವನಿ ಮುದ್ರಿತವಾದದ್ದು : ೨೬-೪-೯೧*
*ಪ್ರಸಾರ : ೩-೫-೯೧*

●

ಯೌವ್ವನ ಎನ್ನುವುದು ಉತ್ಸಾಹಕ್ಕೆ, ಕ್ರಿಯಾಶೀಲತೆಗೆ, ಕಲ್ಪನಾ ಸಾಮರ್ಥ್ಯಕ್ಕೆ ಒಂದು ಸಂಕೇತವಾಗಿದೆ. ಆದರೆ ಈ ಹೊತ್ತಿನ ನಮ್ಮ ಯುವಕರ ನಡವಳಿಕೆಗಳನ್ನು ನೋಡಿದಾಗ, ಈ ಮಾತು ಅವರ ವಿಚಾರದಲ್ಲಿ ನಿಜವಾಗುತ್ತಿಲ್ಲವಲ್ಲ ಯಾಕೆ? ಎಂಬ ಪ್ರಶ್ನೆ ವಿಚಾರವಂತರನ್ನು ಆಗಾಗ ಕಾಡುತ್ತದೆ. ಏನಾಗಿದೆ ನಮ್ಮ ಯುವಶಕ್ತಿಗೆ? ಯಾಕೆ ನಮ್ಮ ಯುವಕರು ಇಷ್ಟೊಂದು ಅಸ್ವಸ್ಥರಾಗಿದ್ದಾರೆ? ಯಾವ ಯುವಕರಿಂದ ಹೊಸ ಉತ್ಸಾಹಪೂರ್ಣವಾದ ಜಗತ್ತು ನಿರ್ಮಾಣವಾಗಬೇಕಾಗಿದೆಯೋ ಆ ಜಗತ್ತು ಈಗ, ಅದರೊಳಗಿನ ಅತೃಪ್ತಿಗಳಿಂದ, ಅಸ್ವಸ್ಥತೆಗಳಿಂದ ಅಲ್ಲೋಲ ಕಲ್ಲೋಲವಾಗಿದೆಯಲ್ಲ ಯಾಕೆ? ಯುವಕರು ಮಾತ್ರ ಯಾಕೆ, ಅವರನ್ನೂ ಒಳಗೊಂಡ ನಮ್ಮ ಈ ದೇಶವೇ ಈ ದಿನ ಅಸ್ವಸ್ಥಗೊಂಡಂತೆ, ಗೊಂದಲಮಯವಾದಂತೆ ತೋರುತ್ತದೆ.

ಮೂಲಭೂತವಾಗಿ ನಾವೀಗ ಒಂದು ಸಂಧಿಕಾಲದಲ್ಲಿದ್ದೇವೆ. ಸಂದಿಗ್ಧತೆಯ ಕಾಲದಲ್ಲಿದ್ದೇವೆ. ಸುಪ್ರಸಿದ್ಧ ಇತಿಹಾಸಕಾರ ಟಾಯಿಮ್ ಬಿ. ಹೇಳುತ್ತಾನೆ ಒಂದು ದೇಶದ ಚರಿತ್ರೆಯಲ್ಲಿ ಅತ್ಯಂತ ಮುಖ್ಯವಾದ ಕಾಲವೆಂದರೆ ಇಂಥಾ ಸಂದಿಗ್ಧತೆಗಳ ಕಾಲವೇಎಂದು. ಏಕೆಂದರೆ, ಇಂಥ ಕಾಲಗಳಲ್ಲಿ ವಿಚಾರವಂತರಾದ ಜನ ತಮ್ಮ ತಮ್ಮ ಪರಿಸರದ ಅಸ್ವಸ್ಥತೆಗಳನ್ನು ಕುರಿತು ಅಸಾಂಗತ್ಯಗಳನ್ನು ಕುರಿತು, ಯೋಚನೆ ಮಾಡತೊಡಗುತ್ತಾರೆ. ಮತ್ತು ಅದಕ್ಕೆ ಅಗತ್ಯವಾದ ಪರಿಹಾರ ಮಾರ್ಗಗಳನ್ನೂ ಹುಡುಕುತ್ತಾರೆ. ಜಗತ್ತಿನಲ್ಲಿ ಯಾವುದೇ ಬದಲಾವಣೆಗಳು ಆಗಿರುವುದು. ಯುವ ಸಮುದಾಯದಿಂದ. ಯಾಕೆಂದರೆ ಯುವ ಮನಸ್ಸು ಯಾವಾಗಲೂ ತನ್ನ ಕಾಲದ ಅಗತ್ಯಗಳಿಗೆ ತೀವ್ರವಾಗಿ ಸ್ಪಂದಿಸುವಂತದ್ದು. ಸರಿಯಾದ ಮಾರ್ಗದರ್ಶನ ದೊರೆತರೆ ಅದು ಸುಸಂಘಟಿತವಾಗಿ, ಕ್ರಿಯಾಶೀಲವಾಗಬಹುದು. ಸ್ವಾತಂತ್ರ್ಯಪೂರ್ವದ ರಾಷ್ಟ್ರೀಯ ಆಂದೋಲನದ ಸಂದರ್ಭದಲ್ಲಿ ಇಡೀ ದೇಶದ ಯುವಶಕ್ತಿ ಹೋರಾಟಕ್ಕೆ ಧುಮುಕಿದ್ದರಿಂದಲೇ ಅದು ಯಶಸ್ವಿಯಾಯಿತು ಎಂಬುದನ್ನು ಮರೆಯುವಂತಿಲ್ಲ. ಆದರೆ ಸ್ವಾತಂತ್ರ್ಯೋತ್ತರ ಪರಿಸ್ಥಿತಿಯಲ್ಲಿ ನಮ್ಮ ಯುವಶಕ್ತಿಗೆ ಸ್ವತಂತ್ರ್ಯ ಪೂರ್ವದಲ್ಲಿದ್ದಂಥ ಮಾರ್ಗದರ್ಶಕ ಸತ್ವಗಳಾಗಲೀ,

ನಿರ್ದಿಷ್ಟವಾದ ಗುರಿಯಾಗಲೀ, ನಿಜವಾದ ಮೌಲ್ಯಪ್ರಜ್ಞೆಯಿಂದ ಗಟ್ಟಿಗೊಳ್ಳಬಹುದಾದ ವ್ಯಕ್ತಿತ್ವ ವಾಗಲೀ ಇಲ್ಲದಿರುವುದು ಈ ಅಸ್ವಸ್ಥ ಪರಿಸ್ಥಿತಿಗೆ ಬಹು ಮುಖ್ಯವಾದ ಕಾರಣ ಎಂದು ತೋರುತ್ತದೆ. ಹೀಗಾಗಿ ಈ ಶಕ್ತಿ ಪಟ್ಟಭದ್ರ ಹಿತಾಸಕ್ತಿಗಳ ಕೈಯೊಳಗಿನ ಸ್ಫೋಟಕ ಸಾಮಗ್ರಿಯಂತೆ, ತೋರುತ್ತಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ.

ನಮಗೆ ತೋರುವ ಮಟ್ಟಿಗೆ, ಈ ದೇಶದ ಯುವಶಕ್ತಿಯನ್ನು ನಿಯಂತ್ರಿಸುವ ಪ್ರಭಾವಗಳು, ಮುಖ್ಯವಾಗಿ ಮೂರು ತೆರನಾದವುಗಳು. ನಮ್ಮ ಯುವ ಜನಾಂಗದ ರುಚಿ, ಅಭಿರುಚಿಗಳನ್ನು ನಮ್ಮ ಈ ದೇಶದ ದೃಶ್ಯಮಾಧ್ಯಮಗಳಾದ ಚಲನಚಿತ್ರ, ದೂರದರ್ಶನಾದಿಗಳು ನಮ್ಮ ಯುವಜನಾಂಗದ ವೈಚಾರಿಕತೆಯನ್ನು ಈ ದೇಶದ ಧಾರ್ಮಿಕ ಸಂಸ್ಥೆಗಳು, ನಮ್ಮ ಯುವಜನಾಂಗದ ಮೌಲ್ಯ ಪ್ರಜ್ಞೆಯನ್ನು ಈ ದೇಶದ ರಾಜಕಾರಣವು ನಿಯಂತ್ರಿಸುತ್ತಾ ಇರುವಾಗ, ಈ ಮೂರರ ಪ್ರಭಾವದಿಂದ ಕಲುಷಿತಗೊಂಡ ಯುವ ಮನಸ್ಸುಗಳನ್ನು ತಿದ್ದಿ, ಅವುಗಳನ್ನು ಸಮಾಜದ ಶ್ರೇಯಸ್ಸಿಗಾಗಿ ಬಳಸುವುದು ಹೇಗೆ ಎಂಬುದೇ ಇವತ್ತಿನ ಬಹುದೊಡ್ಡ ಸವಾಲಾಗಿದೆ. ನಮ್ಮ ಯುವಕರಿಗೆ ಗೊತ್ತಾಗಬೇಕು. ನಮ್ಮದು ಹಳ್ಳಿಗಳ ದೇಶ. ಬಡವರ ದೇಶ. ಅನಕ್ಷರಸ್ತರು ಬಹು ಸಂಖ್ಯೆಯಲ್ಲಿರುವ ದೇಶ. ಈ ದೇಶದ ಒಂದು ಭಾಗವಾಗಿರುವ ಯುವಕರು ಅನಕ್ಷರತೆ, ಬಡತನ ಹಾಗೂ ಅವಿಚಾರದ ನಂಬಿಕೆಗಳಿಂದ ಸ್ಥಗಿತಗೊಂಡಿರುವ ಪರಿಸರವನ್ನು ತಮ್ಮ ಉತ್ಸಾಹದಿಂದ, ಕ್ರಿಯಾಶೀಲತೆಯಿಂದ, ಚಲನಶೀಲರನ್ನಾಗಿ ಮಾಡ ಬೇಕಾಗಿದೆ. ಈ ಹಿಂದೆಯೇ ಸ್ವಾಮಿ ವಿವೇಕಾನಂದರು, ಯುವಶಕ್ತಿಯಿಂದ ಸಾಧ್ಯವಾಗಬಹುದಾದ ರಾಷ್ಟ್ರನಿರ್ಮಾಣದ ಕನಸೊಂದನ್ನು ಕಂಡರು. "ನನಗೆ ಶ್ರದ್ಧಾಳುಗಳಾದ ಸೇವಾ ಮನೋಧರ್ಮದ ಜೀವನ ಪ್ರೀತಿಯಿಂದ ತುಡಿಯುತ್ತಿರುವ ಒಂದು ಹಿಡಿಯಷ್ಟು ಯುವಕರನ್ನು ಕೊಡಿ ನಾನು ಜಗತ್ತನ್ನೇ ಬದಲಾಯಿಸುತ್ತೇನೆ" ಎಂದರು. ಈಗ ಅಂಥಹ ಯುವಶಕ್ತಿಯ ಅಗತ್ಯವಿದೆ.

■■

# ಚಿಂತನ–೨

*ಧ್ವನಿ ಮುದ್ರಿತವಾದದ್ದು : ೨೭–೪–೯೧*
*ಪ್ರಸಾರ: ೧೩.೦೫.೯೧*

●

**ಒಂ**ದು ದೇಶದ ನಿಜವಾದ ಸಂಪತ್ತು ಎಂದರೆ ಯಾವುದು ಎನ್ನುವುದನ್ನು ಕುರಿತು ಸುಪ್ರಸಿದ್ಧ ಇಂಗ್ಲಿಷ್ ಲೇಖಕ ರಸ್ಕಿನ್ ಹೇಳುತ್ತಾನೆ. ಒಂದು ದೇಶದ ಸಂಪತ್ತೆಂಬುದು ಅದು ಸಂಚಯಿಸುವ ಚಿನ್ನ ಬೆಳ್ಳಿಗಳ ಪರಿಮಾಣವನ್ನು ಅವಲಂಬಿಸಿಲ್ಲ. ಅದು ಎಂಥ ವಜ್ರಸದೃಶ ವ್ಯಕಿಗಳನ್ನು ಹೊಂದಿದೆ ಎಂದು ಆದರೆ ಇದೇ ಪ್ರಶ್ನೆಗೆ, ಕನ್ನಡ ಸಾಹಿತ್ಯ ಪರಂಪರೆಯ ಮೊಟ್ಟ ಮೊದಲ ಲಕ್ಷಣ ಗ್ರಂಥವಾದ ಕವಿರಾಜ ಮಾರ್ಗದಲ್ಲಿ ದೊರೆತಿರುವ ಉತ್ತರ ಇದಕ್ಕಿಂತ ಗಮನಾರ್ಹವೂ, ಅರ್ಥಪೂರ್ಣವೂ ಆದುದಾಗಿದೆ. ೯ನೇ ಶತಮಾನದಷ್ಟು ಪ್ರಾಚೀನವಾದ ಮತ್ತು ಉಪಲಬ್ಧವಾಗಿರುವ ಮೊಟ್ಟಮೊದಲ ಈ ಕೃತಿಯಲ್ಲಿ ಕವಿರಾಜ ಮಾರ್ಗಕಾರ ಹೇಳುತ್ತಾನೆ. "ಕಸವರವೆಂಬುದು ನೆರೆಸೈರಿಸಲಾರ್ಪೊಡೆ ಪರವಿಚಾರಮಂ, ಪರಧರ್ಮವಮಂ." ಹಾಗೆ ನೋಡಿದಲ್ಲಿ ಕಸವರ ಎಂದರೆ ಚಿನ್ನ ಎಂದು ಅರ್ಥ. ಚಿನ್ನ ಅಥವಾ ಸಂಪತ್ತು ಯಾವುದೆಂದರೆ ಪರವಿಚಾರಗಳನ್ನು ಪರಧರ್ಮಗಳನ್ನು ಚೆನ್ನಾಗಿ ಅಥವಾ ಮನಃಪೂರ್ವಕವಾಗಿ ಸಹಿಸುವುದು ಎನ್ನುತ್ತಾನೆ ಕವಿರಾಜಮಾರ್ಗಕಾರ. ಕನ್ನಡ ಸಾಹಿತ್ಯ ಪರಂಪರೆಯ ಮೊದಲ ಕೃತಿಯಲ್ಲಿ ಬರುವ ಈ ಮಾತುಗಳು ನಿಜವಾಗಿಯೂ ಒಂದು ಚಿನ್ನದಂಥ ಮಾತೇ ಸರಿ. ಈ ಮೊದಲ ಚಿನ್ನದಂತಹ ಹೇಳಿಕೆ ಕನ್ನಡ ಜನದ ಸಂಸ್ಕೃತಿಯನ್ನು ರೂಪಿಸುವುದರಲ್ಲಿ ಮತ್ತು ನಿರ್ದೇಶಿಸುವುದರಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದೆ.

ಕನ್ನಡ ನಾಡು ಮೊದಲಿನಿಂದಲೂ ಅನೇಕ ಧರ್ಮಗಳ ನೆಲೆವೀಡಾಗಿ ಮೊದಲಿನಿಂದಲೂ ಸ್ಥಾಯಿಯಾಗಿರುವ ವೈದಿಕ ಧರ್ಮ ಆನಂತರದ ಬೌದ್ಧಧರ್ಮ, ಜೈನಧರ್ಮ, ವೀರಶೈವ ಧರ್ಮ, ಶ್ರೀ ವೈಷ್ಣವ ಧರ್ಮ ಹೀಗೆ ಅನೇಕ ಪ್ರಮುಖ ಧರ್ಮಗಳು ಇಲ್ಲಿ ವರ್ಧಿಸಿವೆ. ಪ್ರತಿಯೊಂದು ಧರ್ಮಗಳೂ ತಮ್ಮ ತಾತ್ತ್ವಿಕ ಸ್ವರೂಪಗಳಲ್ಲಿ ಬೇರೆ ಬೇರೆಯಾಗಿದ್ದರೂ, ಈ ಎಲ್ಲ ಧರ್ಮಗಳೂ ಒಂದು ಮತ್ತೊಂದಕ್ಕೆ ತೋರಿದ ಪ್ರತಿಕ್ರಿಯೆಗಳಲ್ಲಿ, ಒಂದು–ಮತ್ತೊಂದು ಧರ್ಮದ ಮೇಲಾಟದಲ್ಲಿ ಹಾಗೂ ಪಾರಸ್ಪಾರಿಕ ವಿಮರ್ಶಾ ವಿಧಾನಗಳಲ್ಲಿ ಸಾಕಷ್ಟು ವೈಪರೀತ್ಯಗಳಿದ್ದರೂ ಪ್ರತಿಯೊಂದು ಧರ್ಮವೂ ಮತ್ತೊಂದು ಧರ್ಮದ ನಿಲುವುಗಳನ್ನು,

ವಿಚಾರಗಳನ್ನು ಸಹಿಸಿಕೊಳ್ಳುತ್ತ ಸಹಬಾಳ್ವೆಯಲ್ಲಿ ತೊಡಗಿ ಕವಿರಾಜಮಾರ್ಗಕಾರನ ಮಾತನ್ನು ನಿಜ ಮಾಡಿವೆ ಎಂಬುದು ಬಹು ಮುಖ್ಯವಾದ ಸಂಗತಿಯಾಗಿ, ಕರ್ನಾಟಕದ ಜನ ಜೀವನದಲ್ಲಿ ಧರ್ಮ ಎನ್ನುವುದು ಯಾವತ್ತೂ ವ್ಯಕ್ತಿತ್ವವನ್ನು ಸುತ್ತುವರಿಯುವ ಅಭೇದ್ಯ ಕೊಂಡಿ ಆಗಿರಲಿಲ್ಲ. ಅದು ವ್ಯಕ್ತಿಯ ಆಂತರಿಕವಾದ ಅವಶ್ಯಕತೆ ಮಾತ್ರವಾಗಿತ್ತು. ಮತ್ತು ವೈಯುಕ್ತಿಕ ವ್ಯವಹಾರ ಹಾಗೂ ಬಾಂಧವ್ಯಗಳಿಗೆ ಅವರು ಹುಟ್ಟಿ ಬೆಳೆದ ಧರ್ಮ ಎಂದೂ ಒಂದು ಆತಂಕವಾಗಿರಲಿಲ್ಲ. ಯಾವತ್ತೂ ಧರ್ಮಾಂತರಗಳು ಧರ್ಮಾಂಧತೆಯಾಗಿ ಪರಿಣಮಿಸಲಿಲ್ಲ. ಯಾಕೆಂದರೆ ಅನ್ಯಧರ್ಮಗಳನ್ನು ಅನ್ಯವಿಚಾರಗಳನ್ನು ಸಹಿಸುವುದೇ ನಿಜವಾದ ಚಿನ್ನ ಎಂಬ ಪ್ರಜ್ಞೆಯಲ್ಲಿ ವೈಚಾರಿಕತೆಯನ್ನು ನಿಯಂತ್ರಿಸಿದಂತೆ ಇರುತ್ತದೆ.

ಧರ್ಮಶ್ರದ್ಧೆ ಎನ್ನುವುದು ಕರ್ನಾಟಕದಲ್ಲಿ ಉತ್ತಮಾಂಶಗಳ ಕೊಡು ಪಡೆಗಳ ಕ್ರಮವಾಗಿದೆಯೇ ಹೊರತು ವೈಯುಕ್ತಿಕ ಸಂಬಂಧಗಳ ಅಡ್ಡಗೋಡೆಯಾಗಿಲ್ಲ. ಈ ನಾಡಿನ ಬದುಕನ್ನು ನಿಯಂತ್ರಿಸಿದ ಪ್ರಭುಶಕ್ತಿಗಳಾಗಲೀ, ಸಾಹಿತ್ಯಿಕ ಸತ್ವಗಳಾಗಲೀ ಮತ್ತು ಒಟ್ಟಾರೆಯಾಗಿ ಜನರ ನಡವಳಿಕೆಗಳಾಗಲೀ ಪರಧರ್ಮಗಳನ್ನು, ಪರವಿಚಾರಗಳನ್ನು ಸಹಿಸಿಕೊಳ್ಳುವುದೇ ನಿಜವಾದ ಸಂಪತ್ತು ಎಂಬಂತೆ ನಡೆದು ಕೊಂಡಿವೆ. ಒಟ್ಟಿನಲ್ಲಿ ಹೇಳುವುದಾದರೆ ಕನ್ನಡ ಸಂಸ್ಕೃತಿಯಲ್ಲಿ ಧಾರ್ಮಿಕ ಅಸಹಿಷ್ಣುತೆ ತೀರ ವಿರಳ. ಧಾರ್ಮಿಕ ಸಹನೆಯ ನಿದರ್ಶನಗಳೇ ವಿಶೇಷ. ಇಷ್ಟೊಂದು ಮುಂದುವರೆದ ಈ ದಿನಗಳಲ್ಲಿ ಮತಧರ್ಮಗಳ ಹೆಸರಿನಲ್ಲಿ ನಮ್ಮ ಬದುಕು ಛಿದ್ರವಾಗುತ್ತಿರುವುದನ್ನು ನೋಡಿದಾಗ ಈ ನಮ್ಮ ಜನ ಚರಿತ್ರೆಯಿಂದ ಕಲಿತ ಪಾಠ ಏನೇನೂ ಇಲ್ಲವೇ ಎಂದು ಆಶ್ಚರ್ಯವಾಗುತ್ತದೆ. ಒಂದು ಜನಾಂಗದ ನಿಜವಾದ ಸಂಪತ್ತೆಂದರೆ, ಪರವಿಚಾರಗಳನ್ನೂ ಪರಧರ್ಮಗಳನ್ನೂ ಸಹಿಸಿಕೊಳ್ಳುವುದೇ ಆಗಿದೆ ಎಂಬುದನ್ನು ಕವಿರಾಜಮಾರ್ಗಕಾರನ ಮಾತುಗಳನ್ನು ನಮ್ಮ ಜನ ಇನ್ನೂ ಅರ್ಥ ಮಾಡಿಕೊಳ್ಳಬೇಕಾಗಿದೆ.

■■

# ಚಿಂತನ–೩

*ಧ್ವನಿ ಮುದ್ರಣ: ೨೬–೦೪–೯೧*
*ಪ್ರಸಾರ: ೨೩–೦೫–೯೧*

●

ಮಹಿಳೆಯರನ್ನು ಕುರಿತು, ಈ ದೇಶದ ಸುಪ್ರಸಿದ್ಧ ಧರ್ಮಶಾಸ್ತ್ರವೊಂದು ಹೇಳುವ ೨ ಸೂತ್ರಗಳು ಹೀಗಿವೆ. ಒಂದು; ಎಲ್ಲಿ ನಾರಿಯರನ್ನು ಪೂಜ್ಯಭಾವದಿಂದ ಕಾಣಲಾಗುತ್ತದೆಯೋ ಅಲ್ಲಿ ದೇವತೆಗಳು ಸಂತೋಷಪಡುತ್ತಾರೆ. ಇನ್ನೊಂದು ಸೂತ್ರ ಹೇಳುತ್ತದೆ, ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ. ಎಳೆಯಂದಿನಲ್ಲಿ ತಂದೆ–ತಾಯಂದಿರಿಗೆ, ಯೌವ್ವನದಲ್ಲಿ ಕೈ ಹಿಡಿದ ಗಂಡನಿಗೆ, ಮುಪ್ಪಿನಲ್ಲಿ ಮಕ್ಕಳಿಗೆ ಆಕೆ ಅಧೀನಳಾಗಿರತಕ್ಕದ್ದು. ಈ ಎರಡೂ ಮಾತುಗಳನ್ನು ಒಬ್ಬನೇ ಧರ್ಮಶಾಸ್ತ್ರಕಾರ ಹೇಳಿದ್ದಾನೆ ಎಂಬುದು ಅತ್ಯಂತ ವಿಪರ್ಯಾಸದ ಸಂಗತಿಯಾಗಿದೆ. ಸ್ವಾತಂತ್ರ್ಯ ಹಾಗೂ ಗೌರವ ಈ ಎರಡೂ ಪರಸ್ಪರ ಪೂರಕವಾದ ಮೌಲ್ಯಗಳೆಂಬುದನ್ನು ಅರಿಯದ, ವಿಕ್ಷಿಪ್ತ ಮನಸ್ಸೊಂದು, ಹೀಗೆ ವಿರೋಧಾಭಾಸದ ನಿಲುವನ್ನು ಮಂಡಿಸುತ್ತಿದೆ. ಯಾಕೆಂದರೆ ಮಹಿಳೆಗೆ ಯಾವುದೇ ಸ್ವಾತಂತ್ರ್ಯ ಅಸ್ತಿತ್ವವೇ ಇಲ್ಲವೆಂದ ಮೇಲೆ, ಅವರಿಗೆ ಇನ್ನು ಯಾವ ಗೌರವ ಸಂದಂತಾಯಿತು? ಇಡೀ ಜಗತ್ತಿನಾದ್ಯಂತವೂ, ಮಾನವ ಪ್ರಪಂಚದ ಬಹುಶಃ ಅರ್ಧಭಾಗದಷ್ಟಿರುವ ಮತ್ತು ಒಂದೇ ಬದುಕಿನ ಇನ್ನೊಂದು ಹೋಳಾಗಿರುವ, ಮಹಿಳೆಯರನ್ನು ಕುರಿತು, ಈಗ ಹೇಳಿದ ಭಾವನೆ, ಧರ್ಮಶಾಸ್ತ್ರಕಾರನ ವಿರೋಧಾಭಾಸದ ನಿಲುವಿಗಿಂತ, ಬೇರೆಯಾಗಿದೆ ಎಂದೇನೂ ತೋರುವುದಿಲ್ಲ.

ಮೂಲತಃ ಪುರುಷ ಪ್ರಾಬಲ್ಯದ ಈ ಜಗತ್ತಿನಲ್ಲಿ, ಹೆಣ್ಣನ್ನು ಯಾಕೋ ತನಗೆ ಸಮಾನವೆಂಬಂತೆ, ನಡೆಯಿಸಿಕೊಳ್ಳದ ಧೋರಣೆಯೊಂದು ಪ್ರಚಲಿತವಾಗಿದೆ. ಹೊರ ಜಗತ್ತಿನ ಮೇಲೆ, ನಿಯಂತ್ರಣವನ್ನು ಸಾಧಿಸುವ, ತೀರಾ ತ್ರಾಸದಾಯಕವಾದ ಕಾರ್ಯಕ್ರಮಗಳನ್ನು ನಿರ್ವಹಿಸುವ, ದೈಹಿಕ ಶಕ್ತಿ ಸಾಮರ್ಥ್ಯಗಳು ಪುರುಷನಿಗೆ ಇದ್ದು, ಮನೆಯೊಳಗಣ ಕೆಲಸಗಳನ್ನೂ ನೋಡಿಕೊಳ್ಳುತ್ತ ಸಂತಾನದ ಅಮೂಲ್ಯ ಜವಾಬ್ದಾರಿಯನ್ನು ಹೊರುವ ತಾಯಂದಿರ, ಕಾರ್ಯಭಾರಗಳು, ಸಹಜವಾಗಿಯೇ ಆಕೆಗೆ ಪ್ರಾಪ್ತವಾದುದರಿಂದ, ಒಂದು ಬಗೆಯ ಕಾರ್ಯ ವಿಭಜನೆ ರೂಢಿಯಾದದ್ದೇ, ಬಹುಶಃ ಈ ಅಸಮಾಧಾನ ಧೋರಣೆಗೆ ಕಾರಣವಾಗಿರಬಹುದು. ಇದಕ್ಕೂ ಮಿಗಿಲಾಗಿ, ಪುರುಷನಿಗೆ ಒಂದು ಬಗೆಯ ಒರಟುತನ ಹಾಗೂ ಪೌರುಷುವನ್ನೂ,

ಸ್ತ್ರೀಗೆ ಒಂದು ಬಗೆಯ ಸುಕುಮಾರತೆ ಹಾಗೂ ದುರ್ಬಲತೆಯನ್ನೂ ನಿಸರ್ಗವೇ ನೀಡಿದೆ ಎಂಬುದನ್ನು ಮರೆಯಬಾರದು. ಇದರ ಅರ್ಥ, ಈ ದೈಹಿಕ ರಚನೆ, ಅವರಿಬ್ಬರೂ ಬದುಕಿನಲ್ಲಿ ನಡೆಯಿಸಬೇಕಾದ, ಪೂರಕವೂ, ಭಿನ್ನವೂ ಆದ ಕಾರ್ಯಗಳಿಗೆ, ಅನುಗುಣವಾಗಿದೆ ಎನ್ನುವುದನ್ನು, ಸೂಚಿಸುತ್ತದೆಯೇ ಹೊರತು, ಅವರಿಬ್ಬರಲ್ಲಿ ಯಾರೊಬ್ಬರ ಪಾತ್ರವೂ ಒಬ್ಬರು ಮತ್ತೊಬ್ಬರದಕ್ಕಿಂತ, ಮೇಲಾದದ್ದಾಗಲೀ, ಕೀಳಾದದ್ದಾಗಲೀ ಆಗಿದೆ ಎಂದು ಸೂಚಿಸುವುದಿಲ್ಲ. ಜಗತ್ತಿನ ಎಲ್ಲ ಪ್ರಮುಖ ಧರ್ಮಗಳೂ, ಮಹಿಳೆಯರ ವಿಚಾರದಲ್ಲಿ ಅಧಾರ್ಮಿಕ ನಿಲುವನ್ನೇ ತಳೆದಿವೆ ಎಂದರೆ ತಪ್ಪೇನಲ್ಲ. ಧರ್ಮ ಎನ್ನುವುದು, ಸಮಸ್ತ ವರ್ಗದವರನ್ನೂ ಸಮಾನರನ್ನಾಗಿ ಕಾಣುವ ಒಂದು ನಿಲುವು ಎಂದು ವರ್ಣಿಸುವುದಾದರೆ, ಅದೇ ಧರ್ಮಗಳು, ಹೆಣ್ಣಿನ ವಿಚಾರದಲ್ಲಿ ಈ ನಿಲುವನ್ನು ವಿಸ್ತರಿಸಿದಂತೆ ತೋರುವುದಿಲ್ಲ. ಇಡೀ ಇತಿಹಾಸವನ್ನು ಆಧುನಿಕ ಕಾಲದವರೆಗೆ ಗಮನಿಸಿದರೆ, ಸಮಸ್ತ ಸ್ತ್ರೀ ಸಮುದಾಯವೂ ಒಟ್ಟಾರೆಯಾಗಿ, ವಿದ್ಯೆ ಸವಲತ್ತುಗಳಿಂದ ವಂಚಿತವಾಗಿ, ಸದಾ ಎರಡು ಮೂರು ಹಂತಗಳಲ್ಲಿ ಇರಿಸಲ್ಪಟ್ಟಿತೆಂದು ಹೇಳುವುದು ಅನಿವಾರ್ಯ ವಾಗಿದೆ.

ಚರಿತ್ರೆಯ ಚಕ್ರ ಈಗ ಬಹುದೂರ ಉರುಳಿ ಬಂದಿದೆ. ಮಹಿಳೆಯ ವಿಚಾರದಲ್ಲಿ, ಪುರುಷರ ದೃಷ್ಟಿ ಮೊದಲಿಗಿಂತಲೂ ಮಾರ್ಪಾಡು ಹೊಂದಿದೆ. ಶಿಕ್ಷಣದ ಸವಲತ್ತುಗಳು, ಅಭಿವ್ಯಕ್ತಿಯ ಸ್ವಾತಂತ್ರ್ಯಗಳು, ಮಹಿಳೆಯರಿಗೂ ಲಭಿಸುತ್ತಿದೆ. ಬದುಕಿನ ವಿವಿಧ ಕಾರ್ಯಕ್ಷೇತ್ರ ಗಳಲ್ಲಿ, ಗಂಡಿನ ಜೊತೆಗೆ ಹೆಣ್ಣು, ಸಮಾನಳಾಗಿ ಹೆಜ್ಜೆ ಇಡತೊಡಗಿದ್ದಾಳೆ. ಪ್ರಜಾಪ್ರಭುತ್ವವಾದ ನಿಲುವುಗಳು, ಸಾಮಾಜಿಕ, ಧಾರ್ಮಿಕ, ರಾಜಕೀಯ ಚಿಂತನೆಗಳು, ಮಹಿಳೆಯರಲ್ಲಿ ಸಾಕಷ್ಟು ವೈಚಾರಿಕ ಜಾಗೃತಿಯನ್ನು ನಿರ್ಭಯತೆಯನ್ನು ಆತ್ಮ ಪ್ರತ್ಯಯವನ್ನೂ ತಂದುಕೊಡುತ್ತಿವೆ. ಆದರೂ, ಮಹಿಳೆಯರಲ್ಲಿಯೇ ತಮ್ಮ ವಿಚಾರದಲ್ಲಿರುವ ಕೀಳರಿಮೆಯ ಭಾವನೆಗಳು, ಸಾಂಪ್ರದಾಯಿಕ ನಂಬಿಕೆಗಳ ಹಿಡಿತಗಳು, ನಿರೀಕ್ಷೆ ಮಾಡಿದಷ್ಟು ಮಟ್ಟಿಗೆ ಕಡಿಮೆಯಾಗಿಲ್ಲ. ಹಾಗೆಯೇ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳೂ ಕಡಿಮೆಯಾಗಿಲ್ಲ. ಗಂಡು ಹೆಣ್ಣು, ಬೇರೊಂದು ಹೊಸ ಬೆಳಕಿಗೆ ಎಚ್ಚರಗೊಳ್ಳುವ ಹೊಸದೊಂದು ಕಾಲಕ್ಕೆ ನಾವಿಂದು ಕಾಯಬೇಕಾಗಿದೆ.

■■

# ಚಿಂತನ-೪

*ಧ್ವನಿ ಮುದ್ರಣ: ೨೬-೦೪-೯೧*

●

**ಕ**ಣ್ಣು ಬಿಟ್ಟು ನೋಡಿದರೆ ಕಾಣುವ ವಾಸ್ತವವೆಂದರೆ ಈ ನಾವೆಲ್ಲ ಒಂದಲ್ಲ ಒಂದು ಮತಧರ್ಮಕ್ಕೆ ಸೇರಿದವರಾಗಿದ್ದೇವೆ. ಆದರೆ ನಾವು ಇರುವುದು ನಮ್ಮ ಆಯ್ಕೆಯ ಪರಿಣಾಮವಲ್ಲ. ನಮ್ಮನ್ನು ಇಂತಿಂಥಾ ಮತಧರ್ಮಗಳ ಮನೆಯಲ್ಲಿ ಹುಟ್ಟಿಸು ಎಂದು ಆ ಸೃಷ್ಟಿಕರ್ತನಿಗೆ ನಾವು ಅರ್ಜಿಯನ್ನೇನೂ ಸಲ್ಲಿಸಿರುವುದಿಲ್ಲ. ಹೀಗೆ ಆಕಸ್ಮಿಕವಾಗಿ ಒಂದು ಮತಧರ್ಮದವರ ಮನೆಯಲ್ಲಿ ಹುಟ್ಟಿ ಬೆಳೆದ ನಾವು, ಒಂದು ಮತಧರ್ಮದ ಆಚಾರ, ವಿಚಾರ, ನಂಬಿಕೆಗಳ ಪರಂಪರೆಯೊಳಕ್ಕೆ ಬಂದ ನಾವು ಇದೇ ರೀತಿ ನಮ್ಮ ಪರಿಸರದ ಹಾಗೂ ಅದರಾಚೆಯ ನೆಲೆಗಳಲ್ಲಿ ಜನ ಸಮುದಾಯಗಳು ಯಾವುದೋ ಒಂದು ಧರ್ಮಕ್ಕೆ ಸೇರಿದವರಾಗಿದ್ದಾರೆ ಎಂಬುದನ್ನು ಗುರುತಿಸುತ್ತೇವೆ. ಹಾಗೆಯೇ ಈ ಜಗತ್ತಿನ ಸಮುದಾಯಗಳಿಗೂ ಅವುಗಳ ಧರ್ಮದ ಕಲ್ಪನೆಗೂ ಇರುವ ಸಂಬಂಧವನ್ನು ಕುರಿತು ಯೋಚಿಸುತ್ತೇವೆ. ಧರ್ಮ ಎಂದ ಕೂಡಲೇ ನಮಗೆ ಗೋಚರವಾಗುವ ಕೆಲವು ಲಕ್ಷಣಗಳು ಇವು. ಅದನ್ನು ಸ್ಥಾಪಿಸಿದ ಅಥವಾ ಅದನ್ನು ಪ್ರವರ್ತನೆಗೊಳಿಸಿದ ಒಬ್ಬ ವ್ಯಕ್ತಿ ಆತ ಪ್ರವಾದಿಯೋ, ಅವತಾರ ಪುರುಷನೋ, ಸಂತನೋ, ಬುದ್ಧನೋ, ಕ್ರಿಸ್ತನೋ, ಮೊಹಮದನೋ, ಬಸವಣ್ಣನೋ ?

ಕ್ರೈಸ್ತರಿಗೆ ಬೈಬಲ್, ಬೌದ್ಧರಿಗೆ ತ್ರಿಪಿಟಕಗಳು, ಹಿಂದೂಗಳಿಗೆ ಭಗವದ್ಗೀತೆ, ವೀರಶೈವರಿಗೆ ವಚನಗಳು, ಮಹಮದೀಯರಿಗೆ ಖುರಾನ್, ಸಿಖ್ಖರಿಗೆ ಗ್ರಂಥಸಾಹೇಬ್ ಹೀಗೆ ಎಲ್ಲಕ್ಕೂ ಮಿಗಿಲಾಗಿ ಒಂದು ದೇವರ ಕಲ್ಪನೆ ಇರುತ್ತದೆ. ಎಲ್ಲ ದೇವರ ಕಲ್ಪನೆಯನ್ನು ಸಾಕಾರಗೊಳಿಸುವ ಗುಡಿಗಳು, ಮಠಗಳೂ ಇವೆ. ಈ ಗುಡಿ ಮಠಗಳನ್ನು ಆಶ್ರಯಿಸಿಕೊಂಡ ಪೂಜಾರಿಗಳು, ಪುರೋಹಿತರು, ಪುರಾಣಕಾರರು, ವಿವಿಧ ಪೂಜೆ ಆಚರಣೆ ಉತ್ಸವಗಳು ಮತ್ತು ಆಯಾ ದೈವವನ್ನು ನಂಬಿದ ಆರಾಧನೆಗಳನ್ನು ಒಪ್ಪಿಕೊಂಡ ಭಕ್ತಾದಿಗಳೂ ಇದ್ದಾರೆ. ಧರ್ಮ ಎಂದರೆ ಈ ಎಲ್ಲವುಗಳ ಹೆಣಿಗೆಯ ಒಂದು ಮೂರ್ತ ರೂಪ. ಇಂಥ ಯಾವುದಾದರೂ ಒಂದು ಧರ್ಮವನ್ನು ಒಪ್ಪಿಕೊಂಡು ಅನುಸರಿಸುವ ಜನ ಸಮುದಾಯ ಅಥವಾ ಆಯಾ ಧರ್ಮದ ನಿಯಂತ್ರಣ ಹಾಗೂ ನಿರ್ದೇಶನಕ್ಕೆ ಅನುಗುಣವಾಗಿ ತನ್ನ ಜೀವನ ಕ್ರಮವೊಂದನ್ನು ರೂಪಿಸಿಕೊಳ್ಳುತ್ತದೆ. ಮನುಷ್ಯನ ಅಸ್ತಿತ್ವಕ್ಕೆ ಒಂದು ನೆಮ್ಮದಿಯ ನೆಲೆಯನ್ನು ಸಾಮಾಜಿಕ

ಸ್ವಾಸ್ಥ್ಯವನ್ನು ಕಲ್ಪಿಸುವ ಧರ್ಮ ಎನ್ನುವುದು ಮೂಲತಃ ಮನುಷ್ಯನ ಸಾಮಾಜಿಕ, ಅಧ್ಯಾತ್ಮಿಕ ಅವಶ್ಯಕತೆಯ ಪರಿಣಾಮವಾಗಿದೆ. ಒಂದು ಕುಟುಂಬದ ವ್ಯಕ್ತಿಯಾಗಿ, ಒಂದು ಸಮಾಜದ ಸದಸ್ಯನಾಗಿ ಬದುಕಬೇಕಾದರೆ ಯಾವ ಯಾವ ಲೌಕಿಕ, ನೈತಿಕ ಹಾಗೂ ಸಾಮಾಜಿಕ ಮತ್ತು ಅಧ್ಯಾತ್ಮಿಕ ವಿಚಾರಗಳನ್ನು, ನಿಲುವುಗಳನ್ನು ರೂಢಿಸುವುದರ ಮೂಲಕ ಒಂದು ಸಮಾಜದ ಎಲ್ಲರನ್ನು ಒಂದು ಗೂಡಿಸುವ ಅಥವಾ ವ್ಯವಸ್ಥೆಗೆ ತರುವ ಒಂದು ವಿಧಾನವೇ ಧರ್ಮ. ಯಾವುದು ಈ ಸಮಾಜಕ್ಕೆ ಒಂದು ಧಾರಣ ಶಕ್ತಿಯನ್ನು ತಂದು ಕೊಡುತ್ತದೋ ಅದೇ ಧರ್ಮ. ಹೀಗಿದ್ದೂ ಜಗತ್ತಿನ ಎಲ್ಲ ಧರ್ಮಗಳೂ ಮನುಷ್ಯನು ತನಗಿಂತ ದೊಡ್ಡದು ಎಂದು ಭಾವಿಸಿದ ಪರಾತ್ಪರ ಅಥವಾ ದೇವರು ಒಬ್ಬನೇ ಎಂದು ಹೇಳುತ್ತವೆ. ಮನುಷ್ಯರೆಲ್ಲರೂ ಸಮಾನರು ಎಂದು ಹೇಳುತ್ತದೆ. ಶಾಂತಿಯನ್ನು, ಕರುಣೆಯನ್ನು, ಪ್ರೀತಿಯನ್ನು ಪ್ರತಿಪಾದಿಸುತ್ತವೆ. ಆದರೆ ಯಾವ ಧರ್ಮವೂ ಸಹಜೀವಿಗಳನ್ನು ಹಿಂಸಿಸಬೇಕೆಂದಾಗಲೀ, ದ್ವೇಷಿಸಬೇಕೆಂದಾಗಲೀ ಹೇಳುವುದಿಲ್ಲ. ಅದರ ಬದಲು ಎಲ್ಲರೂ, ಎಲ್ಲರನ್ನೂ ಪ್ರೀತಿಸಬೇಕೆಂದು ಹೇಳುತ್ತದೆ. ಆದರೂ ಧರ್ಮದ ಹೆಸರಿನಲ್ಲಿ ಈ ಜಗತ್ತಿನಲ್ಲಿ ಯಾಕೆ ಇಷ್ಟು ಸಂಘರ್ಷಗಳಾಗಿವೆ? ಯಾಕೆ ಇಷ್ಟು ರಕ್ತಪಾತವಾಗಿದೆ? ಮನುಷ್ಯ-ಮನುಷ್ಯರ ಹೃದಯಗಳನ್ನು ಬೆಸೆಯಬೇಕಾದ ಧರ್ಮಗಳು ಯಾಕೆ ಆಗಾಗ ಧುತ್ತೆಂದು ಅಸಹನೆಯ ಗೋಡೆಗಳಾಗಿವೆ? ಕಾರಣ ಮನುಷ್ಯನ ಸ್ವಾರ್ಥ, ಅವೈಚಾರಿಕತೆ, ಹಾಗೆಯೇ ಆ ಮೂಲಕ ಧರ್ಮದ ಸ್ವರೂಪವನ್ನು ಕುರಿತ ಹ್ರಸ್ವಬುದ್ಧಿಯನ್ನು ಕುರಿತ ಅಪವ್ಯಾಖ್ಯಾನಗಳೇ.

ಒಂದು ವಿಷಯವನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಅದೇನೆಂದರೆ ದೇವರಾಗಲಿ, ಧರ್ಮವಾಗಲೀ, ದೇವಸ್ಥಾನವಾಗಲೀ, ಇರುವುದು ಮನುಷ್ಯರಿಗಾಗಿ, ಮನುಷ್ಯರಿಂದ. ಯಾವುದೇ ಒಂದು ಧರ್ಮ ತನ್ನ ಸಮುದಾಯದ ಶ್ರೇಯಸ್ಸನ್ನು ಸಾಧಿಸಬೇಕಾದರೆ ಮೊದಲು ಅದು ತನ್ನ ಸಮಾಜದ ಎಲ್ಲರನ್ನೂ ಸಮಾನರೆಂದು ಪರಿಗಣಿಸುವುದು. ಆ ಧರ್ಮಕ್ಕೆ ಇರುವ ಸಾಮಾಜಿಕ ಜವಾಬ್ದಾರಿಗಳಲ್ಲಿ ಮೊದಲನೆಯದು. ಮನುಷ್ಯ ಸಮಾನತೆಗಾಗಿ ನೀತಿಯೊಂದನ್ನು ಕಲ್ಪಿಸಿದ ಕ್ರಿಸ್ತ, ಗುರುನಾನಕ್, ಕಬೀರ, ಬಸವಣ್ಣ ಇವರು ಈ ಪಂಕ್ತಿಗೆ ಸೇರುತ್ತಾರೆ. ಒಂದು ಧರ್ಮಕ್ಕಿರುವ ಸಾಮಾಜಿಕ ಜವಾಬ್ದಾರಿಯ ಮತ್ತೊಂದು ಲಕ್ಷಣವೆಂದರೆ ಸಮಾಜದ ಮೂಲಘಟಕವಾದ ಕುಟುಂಬದೊಳಗಿನ ಹೆಣ್ಣು-ಗಂಡುಗಳಿಬ್ಬರ ಸಮಾನತೆಯನ್ನು ಪ್ರತಿಪಾದಿಸುವುದು. ಅಧ್ಯಾತ್ಮದಲ್ಲಿ ಇಬ್ಬರಿಗೂ ಸಮಾನವಾದ ಅವಕಾಶ ಮತ್ತು ಅಧಿಕಾರಗಳಿವೆ ಎಂಬಂತೆ ನಡೆಯಿಸಿಕೊಳ್ಳುವುದು. ಯಾವುದೇ ಧರ್ಮಕ್ಕೆ ಇರಬೇಕಾದ ಸಾಮಾಜಿಕ ಜವಾಬ್ದಾರಿಯ ಮತ್ತೊಂದು ಮುಖ್ಯ ಲಕ್ಷಣವೆಂದರೆ, ಅದು ಮೊದಲು ಈ ಲೋಕ ಜೀವನದ ಬಗ್ಗೆ ಗಾಢವಾದ ಪ್ರೀತಿಯ ಸಂಬಂಧವನ್ನು ಆಧ್ಯಾತ್ಮಿಕತೆಯ ಮೂಲಭಾವವನ್ನಾಗಿ ಕೂಡಿಸಬೇಕು.

■■

# ಚಿಂತನ–೫

*ಧ್ವನಿ ಮುದ್ರಣ: ೨೬.೦೪.೯೧*

●

ನಮ್ಮ ಇಂದಿನ ಬದುಕನ್ನು ಇನ್ನಷ್ಟು ಸಹನೀಯವಾಗಿ, ಸುಖಮಯವನ್ನಾಗಿ, ಸುಂದರವನ್ನಾಗಿ, ವೈಚಾರಿಕವನ್ನಾಗಿ ಮಾಡುವುದು ಹೇಗೆ ಎನ್ನುವುದೇ ಎಲ್ಲ ಕವಿ, ಕಲಾಕಾರರ, ಕ್ರಾಂತಿಕಾರರ, ವಿಜ್ಞಾನಿಗಳ ಹಂಬಲವಾಗಿದೆ. ಆದರೆ ಈ ನಮ್ಮ ಬದುಕು ದಿನದಿಂದ ದಿನಕ್ಕೆ ಅಸಹನೀಯವಾಗಿ, ಅಹಿತಕರವಾಗಿ, ಕುರೂಪವಾಗಿ, ಅವೈಚಾರಿಕವಾಗಿ, ರೂಪುಗೊಳ್ಳುವಂತೆ ತೋರುತ್ತಿದೆಯಲ್ಲ ಎನ್ನುವುದೇ ನಮ್ಮೆಲ್ಲರ ಆತಂಕಕ್ಕೆ ಕಾರಣವಾಗಿದೆ. ಈ ಆತಂಕದ ಸಮಯದಲ್ಲಿ ನಮ್ಮನ್ನು ಕುರಿತು ಈ ವ್ಯವಸ್ಥೆಯಾಕೆ ಹೀಗಿದೆ ಎಂಬುದನ್ನು ಕುರಿತು, ಅದು ಹಾಗಿರುವುದಕ್ಕೆ ನಾವೂ ಕಾರಣವಲ್ಲವೇ ಎಂಬುದನ್ನು ಕುರಿತು, ವಸ್ತು ನಿಷ್ಠವಾಗಿ ವಿಚಾರ ಮಾಡಬೇಕಾಗಿದೆ. ಏಕೆಂದರೆ, ಈ ವಾಸ್ತವದ ಒಂದು ಭಾಗವಾಗಿರುವ ಹಾವು, ಬದಲಾಗದೆ, ಸುತ್ತಣ ಜಗತ್ತು ಬದಲಾಗುವುದಾದರೂ ಹೇಗೆ? ಹಾವು ಬದಲಾಗಬೇಕೆಂಬ ಎಚ್ಚರ ನಮ್ಮಲ್ಲಿ ಹುಟ್ಟದೆ, ಅಥವಾ ನಾವು ಬದಲಾಗಬೇಕೆಂಬ ಸಂಕಲ್ಪವಿಲ್ಲದೆ ಜಗತ್ತು ಬದಲಾಗಬೇಕೆಂದು ನಿರೀಕ್ಷಿಸುವುದಾಗಲೀ ಸುಧಾರಕತನದ ಘೋಷಣೆ ಮಾಡುವುದಾಗಲೀ ಅತ್ಯಂತ ಅನೈತಿಕವಾದ ನಿಲುವಾಗುತ್ತದೆ.

ನಮ್ಮ ಬದುಕಿನಲ್ಲಿ ಆಗಿರುವಂತೆ ತೋರುವ ಬದಲಾವಣೆಗಳೇನಿದ್ದರೂ ಕೇವಲ ಮೇಲ್ಪದರದವು ಮಾತ್ರ, ಆದರೆ ಒಳಗಿನ ತಿರುಳಿನಲ್ಲಿ ಏನೂ ಬದಲಾವಣೆ ಆಗಿಲ್ಲ. ಮೇಲೆ ನೋಡಲು ಈ ಯುಗದ ಮನುಷ್ಯ ಎಷ್ಟೊಂದು ನಾಗರಿಕತೆಯಲ್ಲಿ ಮುಂದುವರೆದವನಂತೆ ತೋರಿದರೂ ಅವನ ಒಳಗಿರುವ ಮನುಷ್ಯ ಆದಿಮಾನವನೇ ಆಗಿದ್ದಾನೆ ಅನಿಸುತ್ತಿದೆಯಲ್ಲವೆ? ಇಂಥ ಮನುಷ್ಯನನ್ನು ಒಳಗೊಂಡ ಈ ಹೊತ್ತಿನ ನಮ್ಮ ಪ್ರಪಂಚ ಎದುರಿಸುತ್ತಿರುವ ಮುಖ್ಯವಾದ ಆತಂಕಗಳು ಮೂರು ಎಂದು ಹೇಳಬಹುದು. ಮೊದಲನೆಯದು ಪರಿಸರ ನಾಶದ ತಲ್ಲಣ. ಎರಡನೆಯದು ಅವೈಚಾರಿಕತೆ. ಮೂರನೇಯದು ಧಾರ್ಮಿಕ ಮೂಲಭೂತವಾದ. ಇವುಗಳಲ್ಲಿ ಮೊದಲನೆಯದಾದ ಪರಿಸರ ನಾಶದ ತಲ್ಲಣ ಭಾರತವು ಸ್ವತಂತ್ರವಾದ ನಂತರ ಅದು ರೂಪಿಸಿಕೊಂಡ ಅಭಿವೃದ್ಧಿ ಯೋಜನೆಯೊಂದಿಗೆ ಥಳುಕು ಹಾಕಿಕೊಂಡಿರುವಂಥದು. ಭಾರತವು ಸ್ವತಂತ್ರವಾದ ಮೇಲೆ ಅದರ ಎದುರಿಗೆ ಅಭಿವೃದ್ಧಿ ಯೋಜನೆಯ ಎರಡು ಮಾದರಿಗಳು ಸಿದ್ಧವಾದವು. ಒಂದು ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನಗಳನ್ನು

ಬಳಸಿಕೊಳ್ಳದೆ ಹೋದರೆ ಬದಲಾಗುತ್ತಿರುವ ಜಗತ್ತಿನ ನಡುವೆ ನಾವು ಅಸಂಗತವಾಗಿ ಬಿಡುತ್ತೇವೆ ಎಂಬ ನೆಹರೂ ಮಾದರಿ. ಮತ್ತೊಂದು ವ್ಯವಸಾಯವೇ ಪ್ರಧಾನವಾದ ಬಹುಸಂಖ್ಯಾತ ಹಳ್ಳಿಗಳಿರುವ ಭಾರತದಲ್ಲಿ ಗ್ರಾಮಕೇಂದ್ರಿತವಾದ ಕೈಗಾರಿಕೆಗಳನ್ನು ಹೆಚ್ಚು ಮಾಡಿ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಸರ್ವೋದಯವನ್ನೇ ತನ್ನ ಗುರಿಯಾಗಿಸಿಕೊಂಡ ಸ್ವರಾಜ್ಯ ನಿರ್ಮಾಣವೇ ಈ ದೇಶದ ಯೋಜನೆಯ ಗುರಿಯಾಗಿರಬೇಕೆಂಬ ಗಾಂಧಿಮಾದರಿ. ಈ ಎರಡರಲ್ಲಿ ಮೊದಲನೆಯದು ಮೇಲುಗೈ ಆಗಿ, ಮಹಾಮಹಾ ಯೋಜನೆಗಳು ಜಾರಿಗೆ ಬಂದು, ನಾಶವಾದ ಅರಣ್ಯ ಸಂಪತ್ತೆಷ್ಟು? ಪರ್ವತಾರಣ್ಯ ಪರಿಸರದ ಮೂಲ ನಿವಾಸಿಗಳ ಸಂಸ್ಕೃತಿಗೆ ಒದಗಿದ ಧಕ್ಕೆ ಎಷ್ಟು? ಕಲುಷಿತವಾದ ನದಿ ಜಲಗಳೆಷ್ಟು? ನಗರೀಕರಣ ಹಾಗೂ ಯಂತ್ರಸ್ಥಾವರಗಳಿಂದ ಆದ ವಾಯುಮಾಲಿನ್ಯವೆಷ್ಟು? ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿದೆ. ಹೀಗಾಗಿ ಸಮುದಾಯದ ಹಿತಕ್ಕೆ ಅಗತ್ಯವಾದ ಅಭಿವೃದ್ಧಿಯನ್ನು ಪರಿಸರ ಸಂರಕ್ಷಣೆಯನ್ನು ಹೊಂದಿಸಿಕೊಂಡು ಹೋಗುವುದು ಹೇಗೆ ಎಂಬ ಸಂದಿಗ್ಧದಲ್ಲಿ ನಾವು ತೊಳಲುತ್ತಿದ್ದೇವೆ. ಈ ಆತಂಕದ ಜೊತೆಗೆ ನಮ್ಮ ದೇಶವನ್ನು ಕಾಡುತ್ತಿರುವ ಮತ್ತೊಂದು ಪಿಡುಗೆಂದರೆ ಅವೈಚಾರಿಕತೆ. ಈಗಾಗಲೇ ಪ್ರಸ್ತಾಪಿಸಿದಂತೆ ಅವೈಚಾರಿಕತೆಗೆ ಮುಖ್ಯವಾದ ಕಾರಣ ಎಂದರೆ, ನಮ್ಮ ಶಿಕ್ಷಣ ಕ್ರಮದಲ್ಲಿ, ನಿಜವಾದ ವೈಜ್ಞಾನಿಕ ಮನೋಧರ್ಮದ ಬೆಳವಣಿಗೆಗೆ ತಕ್ಕ ಅವಕಾಶಗಳನ್ನು ಕಲ್ಪಿಸದೆ ಇರುವುದು. ಈ ಹೊತ್ತಿನ ನಮ್ಮ ಶಿಕ್ಷಣವು ಈ ದಿನದ ತರುಣರಲ್ಲಿ; ನಿಜವಾದ ವೈಜ್ಞಾನಿಕ ಮನೋಧರ್ಮವನ್ನಾಗಲೀ ಪರಂಪರೆಯ ಪ್ರಜ್ಞೆಯನ್ನಾಗಲೀ, ಮೌಲ್ಯನಿಷ್ಠೆಯನ್ನಾಗಲಿ ಪ್ರಚೋದಿಸುವಷ್ಟು ನವೀಕರಣಗೊಂಡಿಲ್ಲ ಎಂದೇ ಹೇಳಬೇಕಾಗಿದೆ. ಮತ್ತೊಂದು ಆತಂಕವೆಂದರೆ ಇಡೀ ಜಗತ್ತನ್ನೇ ಇವತ್ತು ಕಾಡುತ್ತಿರುವ ಮೂಲಭೂತವಾದ ದೇವರು, ಧರ್ಮ, ದೇವಾಲಯಗಳು ಒಟ್ಟು ಮನುಷ್ಯ ಸಂಸ್ಕೃತಿಯಲ್ಲಿ ಮಹತ್ವದ ಘಟಕಗಳು ಎಂಬುದೇನೋ ನಿಜ. ಹಾಗೂ ಸಂಸ್ಕೃತಿ ಎನ್ನುವುದು ಮೂಲತಃ ಎಲ್ಲರನ್ನೂ ಹಿಡಿದು ಎಲ್ಲರನ್ನೂ ಕೂಡಿಸುವ ಒಂದು ಸಂಯೋಜಕ ಸತ್ವವಾಗಿದೆ. ಆದರೆ ನಾನಾ ವಿಚ್ಛಿದ್ರಕಾರಕ ಶಕ್ತಿಗಳಿಂದ ಒಡೆದು ಹೋಗುತ್ತಿರುವ ಈ ಹೊತ್ತಿನ ಮನುಷ್ಯನನ್ನು ಹಿಡಿದು ಒಂದೆಡೆ ಕೂಡಿಸುವ ಸಾಂಸ್ಕೃತಿಕ ಸತ್ವದ ಪುನರುಜ್ಜೀವನಕ್ಕಾಗಿ ನಾವೆಲ್ಲ ಪ್ರಯತ್ನಿಸಬೇಕಾಗಿದೆ.

■■

## ಚಿಂತನ-೬

*ಧ್ವನಿ ಮುದ್ರಣ: ೨೬-೦೬-೯೧*

●

**ಅ**ಪ್ಪ ನೆಟ್ಟ ಆಲದ ಗಿಡ;
ಮಗನ ಕಾಲಕ್ಕೆ ಬರಿಯ ಬುಡ;
ಮೊಮ್ಮಗನಿಗಿರಲಿಲ್ಲ ಅದರ ಕಲ್ಪನೆ ಕೂಡ.

ಹೀಗೆ ಬೆಳೆದಿದ್ದೇವೆ ನಾವು ಎನ್ನುತ್ತಾರೆ ಕನ್ನಡದ ಒಲವಿನ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರು. ಈ ಮಾತು ನಮಗೂ, ನಮ್ಮ ಪರಿಸರದ ಪರಂಪರೆಯ ಸಂಬಂಧರಾಹಿತ್ಯಕ್ಕೆ ಕುರಿತ ಟೀಕೆಯಂತಿದೆ. ಮನುಷ್ಯ ಮೇಲೆ ನೋಡಲು ಒಬ್ಬಂಟಿಯಂತೆ ಕಂಡರೂ ಅವನು ಏಕಾಕಿಯಲ್ಲ. ಅವನ ಹಿಂದೆ ಗತಕಾಲವಿದೆ. ಅವನ ಮುಂದೆ ಅಮೂರ್ತವಾದ ಭವಿಷ್ಯವಿದೆ. ಹೀಗೆ ಈ ಎರಡರ ನಡುವೆ ನಿಂತ ನಾವು, ನಮಗೂ ನಾವು ನಿಂತ ನೆಲಕ್ಕೂ, ಅದರ ಹಿಂದಿನ ಗತಕಾಲಕ್ಕೂ ಏನೇನೂ ಸಂಬಂಧವಿಲ್ಲವೆಂಬಂತೆ ಎಷ್ಟೋ ವೇಳೆ ನಡೆದುಕೊಳ್ಳುತ್ತೇವೆ. ವಾಸ್ತವವಾಗಿ ನಮ್ಮ ಇಂದಿನ ಬದುಕು ಎನ್ನುವುದು ಕೇವಲ ವರ್ತಮಾನಕ್ಕೆ ಸೀಮಿತವಾದದ್ದಲ್ಲ. ಅದರ ಹಿಂದೆ ಒಂದು ಭೂತಕಾಲವಿದೆ. ಅದಕ್ಕೊಂದು ಚರಿತ್ರೆಯಿದೆ. ಆ ಚರಿತ್ರೆಯ ತುಂಬಾ ನೆನಪುಗಳಿವೆ. ಈ ನೆನಪುಗಳಿಗೆ ಒಂದು ಪರಂಪರೆಯಿದೆ. ಅದು ನಮ್ಮ ವರ್ತಮಾನವನ್ನು ಪ್ರಭಾವಿಸುತ್ತದೆ, ನಿಯಂತ್ರಿಸುತ್ತದೆ. ಹೀಗಾಗಿ ನಮ್ಮ ಗತಕಾಲ ಎನ್ನುವುದು ಅದು ಜಡವೂ ನಿಷ್ಕ್ರಿಯವೂ ಆದುದಲ್ಲ. ಅದೊಂದು ವಸ್ತುವಲ್ಲ. ಅದು ಒಂದು ಜೀವಂತವಾದ ಶಕ್ತಿ ಸಮುಚ್ಚಯವೂ ಹೌದು. ಹಿಂದು-ಮುಂದುಗಳ ಬಿಂದುವಾದ ಚಲನಶೀಲವಾದ ವರ್ತಮಾನದಲ್ಲಿ ಬದುಕುವ ನಾವು, ಏಕಕಾಲಕ್ಕೆ ಗತಕಾಲದ ನೆನಪುಗಳಿಗೂ, ಭವಿಷ್ಯತ್ತಿನ ಕನಸುಗಳಿಗೂ, ಹಕ್ಕುದಾರರೆಂಬ ಸಂಗತಿಯನ್ನು ಮರೆತು, ವರ್ತಮಾನದಲ್ಲಿ ನಿಜವಾಗಲಾರೆವು. ಹಾಗೆ ಆ ಗತಕಾಲದಲ್ಲಿರತಕ್ಕದ್ದೆಲ್ಲ, ಪವಿತ್ರವೆಂದು ಗ್ರಹಿಸುವ ಮನಸ್ಸಿಗೆ ಅದರೊಳಗಿನ ಅವೈಚಾರಿಕವೂ ಜೀವವಿರೋಧಿಯೂ ಆದ ಎಷ್ಟೋ ಸಂಗತಿಗಳು ಗೋಚರಿಸುವುದಿಲ್ಲ. ಹಾಗೆಯೇ ಆ ಪ್ರಾಚೀನವಾದುದರಲ್ಲಿರುವ ಎಷ್ಟು ಮೌಲಿಕವಾದ ಅಂಶಗಳು ನಮ್ಮ ವರ್ತಮಾನದ ಬದುಕಿಗೆ ಇಳಿದು ಬಂದಿವೆ ಅಥವಾ ಇಳಿದು ಬಂದಿಲ್ಲ ಎಂಬ ವಿವೇಚನೆ ಗೊತ್ತಿರುವುದಿಲ್ಲ. ಹೀಗಾಗಿ ಗೊತ್ತಿರುವುದೇನಿದ್ದರೂ ಪರಂಪರೆಯ ಗಿಳಿಪಾಠ ಮಾತ್ರ.

ನಮ್ಮಲ್ಲಿ ವೇದಗಳಿವೆ ಉಪನಿಷತ್ತುಗಳಿವೆ, ಋಷಿಮುನಿಗಳು ಮತ್ತು ಮಹಾ ಆಚಾರ್ಯರು, ಘನವಾದ ಸತ್ಯಗಳನ್ನು ಸಾಕ್ಷಾತ್ಕರಿಸಿಕೊಂಡು ಬದುಕಿದ್ದಾರೆ. ಜಗತ್ತಿಗೆ ಸಾರಿದ್ದಾರೆ. ಸಂತರು, ಸಿದ್ಧರು, ಯೋಗಿಗಳು, ಅವತಾರ ಪುರುಷರು ಕಾಲದಿಂದ ಕಾಲಕ್ಕೆ ಮಹತ್ತಾದ ಆದರ್ಶಗಳನ್ನು, ಪರಂಪರೆಗಳನ್ನು ನಿಲ್ಲಿಸಿದ್ದಾರೆ. ಇದು ಸಾಮಾನ್ಯವಾಗಿ ಈ ಗಿಳಿಪಾಠದ ಪಲ್ಲವಿ. ಹೀಗೆ ಗತಕಾಲದ ಉಜ್ವಲತೆಯ ಕಡೆಗೆ ಬೆರಳು ತೋರಿಸುತ್ತ ಅದನ್ನೇ ಹಾಡಿ ಹೊಗಳುವ ಪ್ರವೃತ್ತಿಯೊಂದು ಪ್ರಚಲಿತವಾಗಿದೆ. ನಿಜ, ಇವೆಲ್ಲವೂ ಇವೆ. ಆದರೆ ಇಂಥ ಒಂದು ಉದಾತ್ತವೂ, ಘನವೂ ಆದ ಪರಂಪರೆಯು ಇದ್ದೂ ಕೂಡಾ ನಮ್ಮ ವರ್ತಮಾನದ ಬದುಕು ತನಗೂ ಆ ಪರಂಪರೆಗೂ ಏನೇನೂ ಸಂಬಂಧವಿಲ್ಲದಂತೆ ನಡೆದು ಕೊಳ್ಳುತ್ತಿದೆಯಲ್ಲ ಯಾಕೆ? ಎಂಬ ಪ್ರಶ್ನೆಗೆ ಉತ್ತರ ದೊರೆಯದಾಗಿದೆ. ಮುಖ್ಯವಾದ ಮಾತೆಂದರೆ ಆ ಗತ ಪರಂಪರೆಯನ್ನು ನಮ್ಮ ವಿವೇಚನೆಗೆ ಒಳಗು ಪಡಿಸುತ್ತ ನಮಗೆ ಅಲ್ಲಿಂದ ಪ್ರಸ್ತುತವಾದುದನ್ನು ಉಪಯೋಗಿಸಿ ಕೊಳ್ಳುವ ವಿವೇಕವೇ ನಮ್ಮಲ್ಲಿ ಇಲ್ಲವೆಂದು ತೋರುತ್ತದೆ. ಇದಕ್ಕೆ ಕಾರಣ ಪ್ರಾಚೀನವಾದುದೆಲ್ಲ ಪವಿತ್ರವೆಂಬ, ಅದರೊಳಗಿನ ಸಂಗತಿಗಳು ಅಧಿಕೃತವೆಂಬ ತಪ್ಪು ತಿಳುವಳಿಕೆಯೇ ಕವಿ ಕುವೆಂಪು ಹೇಳುವ ಹಾಗೆ

"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು;
ಎದೆಯ ದನಿಗೂ ಮಿಗಿಲಾದ ಶಾಸ್ತ್ರವಿಹುದೇನು;
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು;
ನಿನ್ನೆದೆಯ ದನಿಯ ಋಷಿ ಮನು ನಿನಗೆ ನೀನು"

ಯಾಕೆಂದರೆ, ಹಿಂದಿನ ಪರಂಪರೆಯ ಎಲ್ಲವೂ ಎಲ್ಲ ಕಾಲಕ್ಕೂ ಮೌಲಿಕವಾದುದೆಂದು ತಿಳಿಯಬೇಕಾಗಿಲ್ಲ. ಅಂದಿಗೆ ಅಗತ್ಯವೆಂದು ಸರಿಯೆಂದು ತೋರಿದ ಎಷ್ಟೋ ವಿಚಾರಗಳು ನಮ್ಮ ಕಾಲಕ್ಕೆ ಅಸಂಗತವೆಂಬಂತೆ ತೋರಬಹುದು. ಈ ದೃಷ್ಟಿಯಿಂದ ನಮ್ಮ ಗತಕಾಲವನ್ನು ಅಥವಾ ಪರಂಪರೆಯನ್ನು ನಾವು ನಮ್ಮ ಕಾಲದ ತಿಳುವಳಿಕೆಯ ಬೆಳಕಿನಡಿ ಪರಿಶೀಲಿಸಿ, ಪರೀಕ್ಷಿಸಿ ನಮ್ಮ ಅಗತ್ಯಕ್ಕೆ ತಕ್ಕ ಹಾಗೆ ಬೆಳೆಸಿಕೊಳ್ಳಬೇಕು ಅಥವಾ ಪುನರ್ವ್ಯಾಖ್ಯಾನಿಸಿಕೊಳ್ಳಬೇಕು. ಆದರೆ ವಾಸ್ತವದ ಸಂಗತಿ ಏನೆಂದರೆ ಹಿಂದಿನದೆಂದು ಆಚಾರವಾಗಿ ಆರಾಧಿಸುತ್ತ ನಮಗೂ ಅದಕ್ಕೂ ಇರುವ ಅಂತರವನ್ನು ಕಾಯ್ದುಕೊಳ್ಳುವ ಜಾಣತನವೋ ಅಥವಾ ಅದರ ವಕ್ತಾರ ರಾಗುವುದರ ಮೂಲಕ ಬರಬಹುದಾದ ಪ್ರತಿಷ್ಠೆಯನ್ನು ಅನುಭವಿಸುವ ಚಾಪಲ್ಯವೋ ನಮ್ಮ ಪರಿಸರದಲ್ಲಿ ಪ್ರಧಾನವಾಗಿರುವಂತೆ ತೋರುತ್ತದೆ. ಸಾರಾಂಶವೆಂದರೆ ವೈಚಾರಿಕತೆಗಿಂತ ಕುರುಡು ನಂಬಿಕೆಗಳೇ ನಮ್ಮ ನಮ್ಮ ಬದುಕನ್ನು ಹೆಚ್ಚು ನಿಯಂತ್ರಿಸುವಂತೆ ತೋರುತ್ತದೆ.

# "ಬದುಕು-ನನ್ನ ದೃಷ್ಟಿಯಲ್ಲಿ"

ಈ ಯುಗದ ಸಂತಶ್ರೇಷ್ಠರಾದ ಶ್ರೀ ರಾಮಕೃಷ್ಣ ಪರಮಹಂಸರು ಪ್ರಾಸಂಗಿಕವಾಗಿ ಹೇಳಿದ ದೃಷ್ಟಾಂತವೊಂದು ನನ್ನ ನೆನಪಿಗೆ ಬರುತ್ತಿದೆ: ಒಂದು ದಿನ ಸಕ್ಕರೆಯ ಪರ್ವತದ ಹತ್ತಿರಕ್ಕೆ ಒಂದು ಇರುವೆ ಬಂದಿತಂತೆ. ಒಂದು ಚೂರು ಸಕ್ಕರೆಯನ್ನು ಅದು ಬಾಯಲ್ಲಿ ಕಚ್ಚಿಕೊಂಡು ತನ್ನ ಗೂಡಿನ ಕಡೆ ಹೊರಟಿತು. ಹಾಗೆ ಹೋಗುವಾಗ ಅದು ಯೋಚಿಸಿತಂತೆ, ಮತ್ತೆ ಒಂದು ಸಲ ಇಲ್ಲಿಗೆ ಬಂದಾಗ ನಾನು ಇಡೀ ಸಕ್ಕರೆಯ ಬೆಟ್ಟವನ್ನೇ ನನ್ನ ಗೂಡಿಗೆ ಸಾಗಿಸಿ ಬಿಡುತ್ತೇನೆ ಎಂದು! ಬಹುಶಃ ನಮ್ಮಲ್ಲಿ ಅನೇಕರು ಬದುಕನ್ನು ಕುರಿತು ಎಷ್ಟೋ ವೇಳೆ ಹೀಗೆಯೇ ಯೋಚನೆ ಮಾಡುತ್ತೇವೆ ಎಂದು ತೋರುತ್ತದೆ. ಬದುಕನ್ನು ಎಲ್ಲೋ ಒಂದು ಚೂರು ಅರ್ಥಮಾಡಿಕೊಂಡು, ನಾವು ಇಡೀ ಬದುಕನ್ನೆ ಅರ್ಥ ಮಾಡಿಕೊಂಡಿದ್ದೇವೆ ಅಥವಾ ಅರ್ಥಮಾಡಿಕೊಳ್ಳುತ್ತೇವೆ ಎಂದು ಭ್ರಮಿಸುತ್ತೇವೆ. ಆದರೆ ನಮಗೆ ಗೊತ್ತಿಲ್ಲ, ಈ ಬದುಕು ಎಷ್ಟು ಅಗಾಧವಾದದ್ದು, ಅಗ್ರಾಹ್ಯವಾದದ್ದು ಎಂಬ ಸಂಗತಿ.

ನಮ್ಮ ಹುಟ್ಟು ಕೇವಲ ಒಂದು ಆಕಸ್ಮಿಕ ಎಂದೇ ನನ್ನ ತಿಳಿವಳಿಕೆ. ನಾನು ಹುಟ್ಟಿ ಬಂದ ಈ ಜಗತ್ತಿನಲ್ಲಿ ನಾನೊಬ್ಬನೇ ಇಲ್ಲ; ನನ್ನಂತೆಯೆ ಸಹಜೀವಿಗಳಾದ ಮನುಷ್ಯರಿದ್ದಾರೆ. ನನಗೆ ಆಪ್ತರಾದ ತಂದೆ-ತಾಯಿ-ಹೆಂಡತಿ-ಮಕ್ಕಳು-ಬಂಧು ಬಳಗದವರಿದ್ದಾರೆ. ಇದರಾಚೆಯ ಸಮಾಜದಲ್ಲಿ ಹಾಗೂ ವಿವಿಧ ದೇಶಗಳಲ್ಲಿ, ವಿವಿಧ ವರ್ಣದ, ವಿವಿಧ ಭಾಷೆಯ, ವಿವಿಧ ನಡವಳಿಕೆಯ, ವಿವಿಧ ನಾಗರಿಕತೆಗಳ ವಿಸ್ತಾರವಾದ ಮನುಷ್ಯ ಸಮುದಾಯವಿದೆ. ಮರ, ಗಿಡ, ಗುಡ್ಡ, ಬೆಟ್ಟ, ಹೊಳೆ, ಕಡಲುಗಳಿವೆ; ಆಕಾಶ, ಸೂರ್ಯ, ಚಂದ್ರ, ಗ್ರಹ, ತಾರೆಗಳಿವೆ; ಪಶು ಪಕ್ಷಿ ಪ್ರಾಣಿಗಳಿವೆ. ಈ ಒಂದು ಲೋಕ ಸಂಸಾರದಲ್ಲಿ ನಾನೂ ಒಬ್ಬ. ಈ ಇಂಥ ಬದುಕಿನ ಮಧ್ಯೆ ನಾವು ಹುಟ್ಟಿ ಏನಾಗಬೇಕು ಎನ್ನುವುದು ಮೊದಲೇ ಪೂರ್ವನಿಶ್ಚಿತವಾಗಿದೆಯೋ, ಹಾಗಿದ್ದರೆ ಅದನ್ನು ನಿರ್ಧರಿಸಿದವರು ಯಾರು? ಮತ್ತು ಈ ನಾನು ಏನಾಗಿದ್ದೇನೆಯೋ, ಇದರಾಚೆಗಿನ ನಾಳೆಗಳಲ್ಲಿ ನಾನು ಏನಾಗುತ್ತೇನೆಯೋ, ಏನಾಗಬೇಕೋ ಇತ್ಯಾದಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದರಲ್ಲಿ ನನಗೆ ಅಂತಹ ಆಸಕ್ತಿಯಿಲ್ಲ. ಅದರ ಬದಲು ನಾನು ಕೇವಲ ಆಕಸ್ಮಿಕವೆಂಬಂತೆ ಯಾವ ಒಂದು ಬದುಕಿನ ನಡುವೆ ಹುಟ್ಟಿದ್ದೇನೆಯೋ ಅದರ ಜತೆ ಬೆರೆಯುವುದು, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ತೀರಾ ಮುಖ್ಯವೆಂದು ನಾನು ತಿಳಿಯುತ್ತೇನೆ. ಈ ವೈವಿಧ್ಯಮಯವಾದ ಬದುಕಿನ ಒಂದು ಭಾಗವಾದ 'ನಾನು'

ನನಗೆ ದಕ್ಕಿಲ್ಲ ಅಥವಾ ಬದುಕು ನೀಡಿದ ಅನುಭವಗಳಿಂದ ನಾನು ಪಡೆದದ್ದು, ಪಡೆಯ ಲಾಶಿಸಿದ್ದು, ಪಡೆಯದೆ ಹೋದದ್ದು ಈ ಎಲ್ಲವೂ ನನ್ನನ್ನು ರೂಪಿಸಿವೆ. ಬದುಕು ಎಂದರೆ ನಾನು ಕಂಡದ್ದಷ್ಟೆ, ಅದರಾಚೆಗೆ ಬೇರೇನೂ ಇಲ್ಲ ಎಂದು ನಾನು ತಿಳಿದಿಲ್ಲ. ನಾನು ಕಾಣದ್ದು ಎಷ್ಟೋ ಇದೆ. ಆದರೆ ಅದು ನನಗೆ ತಿಳಿದಿಲ್ಲ. ಮನುಷ್ಯನ ಅನೇಕ ಶತಮಾನಗಳ ಅನ್ವೇಷಣೆ, ತಾನು ತಿಳಿದುಕೊಂಡದ್ದರಿಂದ ತಾನು ತಿಳಿಯದಿದ್ದುದರ ಕಡೆ ನಡೆದ ಪಯಣವಾಗಿದೆ. ಆಧುನಿಕ ವಿಜ್ಞಾನ ಕೂಡಾ ತನ್ನ ಅಪೂರ್ವವಾದ ಸಾಹಸಾನ್ವೇಷಣೆಯಲ್ಲಿ ಇನ್ನೂ ಮೊದಲ ಹೆಜ್ಜೆಗಳನ್ನಿಟ್ಟು ಈ ಮಹಾವಿಶ್ವ ರಹಸ್ಯದ ಹೊಸ್ತಿಲ ಹೊರಗೇ ಮೂಕ ವಿಸ್ಮಯದಲ್ಲಿ ನಿಂತುಕೊಂಡಿದೆ.

ನಾನೂ ನನ್ನ ಬಾಲ್ಯದ ಬದುಕಿನ ಹೊಸ್ತಿಲಿನಲ್ಲಿ ನಿಂತು ಈ ಜಗತ್ತನ್ನು ಗ್ರಹಿಸತೊಡಗಿದ್ದು ವಿಸ್ಮಯದ ಮೂಲಕವೇ ಈ ವಿಸ್ಮಯ–ಹುಟ್ಟಿನೊಡನೆಯೇ ಬಂದು ತೆರೆದ ಕಣ್ಣು : ಹಳ್ಳಿ ಮನೆಯ ನಾಡಹೆಂಚಿನ ಸಂದುಗಳಿಂದ ತೂರಿ ಬಂದು ಮನೆಯೊಳಗಣ ಮಬ್ಬುಗತ್ತಲನ್ನು ಕಳೆದ ಬಿಸಿಲಕೋಲುಗಳು; ಆ ಬಿಸಿಲಕೋಲಿನ ತುಂಬ ತೇಲುವ ಅಸಂಖ್ಯ ಧೂಳಿನ ಕಣಗಳು; ಮನೆಯ ಎದುರಿಗೇ ಥಳಥಳಿಸಿ ಹೊಳೆಯುವ ಕೆರೆ; ಆಗಲೋ ಈಗಲೋ ಹಾರಿ ಹೋಗಲೆಂದೇ ಗರಿ ಬಿಚ್ಚಿಕೊಂಡಿರುವ ತೆಂಗಿನ ಮರಗಳು; ಗದ್ದೆಯೊಳಗೆ ಮಡುಗಟ್ಟಿ ನಿಂತ ಹಸಿರು; ತಂಗಾಳಿಗೆ ತಲೆದೂಗುವ ತೆನೆ ತುಂಬಿದ ವಿಸ್ತಾರವಾದ ಹೊಲದ ಪೈರು; ಹಚ್ಚ ಹಸುರಿನ ಗಿಡದಲ್ಲಿ ಥಟ್ಟನೆ ದಳ ತೆರೆದ ಬೆಳ್ಳನೆಯ ಹೂವು; ಹೆಸರರಿಯದ ಬಹುವರ್ಣದ ಹಕ್ಕಿಗಳ ಹಿಂಡು; ಅವು ಮೇಲೇರಿದಂತೆ ಅನಂತವಾದ ನೀಲಿಯ ಗಗನ; ಹಿಂಡು ಹಿಂಡಾಗಿ ಬಗೆ ಬಗೆ ರೂಪ ತಾಳುತ್ತಾ ಹರಹಿಕೊಂಡ ಮೋಡಗಳು; ಗುಡುಗು–ಮಿಂಚಿನ ಅಬ್ಬರಗಳಲ್ಲಿ ಆಕಾಶದಿಂದ ಸುರಿಯುವ ಮಳೆ; ಕ್ಷೀರಧಾರೆಯನ್ನು ಕರೆಯುವ ಸಾಂದ್ರ ಚಂದ್ರಿಕೆಯ ವಾತ್ಸಲ್ಯದ ತಂಪು;–ಇತ್ಯಾದಿಗಳು ವಿಸ್ಮಯದ ಮೂಲಕ ನನ್ನ ನೆನಪಿನ ಉಗ್ರಾಣದ ತುಂಬ ತುಂಬಿಕೊಂಡ ಅನುಭವಗಳಾಗಿವೆ. ಎಳೆಯಂದಿನ ವಿಸ್ಮಯದ ಲೋಕದಲ್ಲಿ ನನ್ನನ್ನು ಬಹುವಾಗಿ ಆಕರ್ಷಿಸಿದ ಎರಡು ವಸ್ತುಗಳೆಂದರೆ, ಕುಂಬಾರನ ಚಕ್ರ ಮತ್ತು ನೇಕಾರರ ಮನೆಯ ಮಗ್ಗ ನಮ್ಮ ಮನೆಯ ಬದಿಗೆ ಕುಂಬಾರ ಕೇರಿಯಿತ್ತು. ಕುಂಬಾರನ ಚಕ್ರ ಗರಗರನೆ ತಿರುಗುವಾಗ, ಅದರ ಮಧ್ಯದೊಳಗಿನ ಮಣ್ಣು ಕುಂಬಾರನ ಕೈಚಳಕದಿಂದ ಬೇರೆ ಬೇರೆ ಆಕಾರದ ಮಡಕೆ ಕುಡಿಕೆಗಳಾಗಿ ಮೂರ್ತಗೊಳ್ಳುವ ರೀತಿ ನನ್ನನ್ನು ಗಂಟೆಗಟ್ಟಲೆ ಹಿಡಿದು ನಿಲ್ಲಿಸುವ ಸೋಜಿಗವಾಗಿತ್ತು. ಹಾಗೆಯೇ ನೇಕಾರರ ಮನೆಯ ಮಗ್ಗದಲ್ಲಿ ಉದ್ದಕ್ಕೆ ಹಾಸಿಕೊಂಡ ನೂಲು, ಒಂದು ಛಂದೋ ಬದ್ಧತೆಯಲ್ಲಿ ಲಾಳಿಯಾಡಿದಂತೆ ಸೊಗಸಾದ ಬಣ್ಣದ ಸೀರೆಯಾಗಿ ಪರಿವರ್ತನೆಗೊಳ್ಳುವ ಘಟನೆಯೂ ನನಗೊಂದು ಪವಾಡದಂತೆಯೇ ತೋರುತ್ತಿತ್ತು. ಈ ಎರಡೂ ಘಟನೆಗಳೂ ಕವಿತೆ ಹುಟ್ಟುವ ರಹಸ್ಯವನ್ನು ನನಗೆ ತಿಳಿಸಿಕೊಟ್ಟಿವೆ. ಈ ಎಳೆಯಂದಿನಲ್ಲಿ ಅದು ಹೇಗೋ ತೆರೆದುಕೊಂಡ ನನ್ನ ವಿಸ್ಮಯ ಇಂದಿಗೂ ನನ್ನ ನಿರಂತರ ಸಂಗಾತಿಯಾಗಿ, ಈ ಬದುಕಿನೊಂದಿಗೆ ನಾನು ಸಂವಾದವನ್ನು ಮುಂದುವರಿಸಿಕೊಂಡು ಬರಲು ನೆರವಾಗಿದೆ. ಬದುಕಿನಲ್ಲಿ ವಿಸ್ಮಯವನ್ನು ಉದ್ದಕ್ಕೂ ಉಳಿಸಿಕೊಳ್ಳುವುದಿದೆಯಲ್ಲ, ಅದು ಬಹಳ ಮುಖ್ಯವಾದದ್ದು ಎಂದು ನನ್ನ ತಿಳುವಳಿಕೆ.

ಬದುಕು ಎಂದರೆ ಕೇವಲ ನಮ್ಮ ಸಹಜೀವಿಗಳಾದ ಮನುಷ್ಯರ ಜತೆಯ ಸಂಬಂಧವಷ್ಟೇ ಎಂದು ನಾನು ತಿಳಿದಿಲ್ಲ. ನಮ್ಮ ಬದುಕಿನ ಬೇರೊಂದು ಅಭಿವ್ಯಕ್ತಿಯಂತಿರುವ ನಿಸರ್ಗವನ್ನು ಕುರಿತ ಪ್ರೀತಿಯೂ ಇದರಲ್ಲಿ ಸೇರುತ್ತದೆ. ಒಂದು ಗಿಡವನ್ನು, ಮರವನ್ನು, ಹೂವನ್ನು, ಹಕ್ಕಿಯನ್ನು, ಬೆಟ್ಟವನ್ನು, ಹೊಳೆಯನ್ನು, ಮಳೆಯನ್ನು, ಬೆಳೆಯನ್ನು ಪ್ರೀತಿಸಲಾರದವನು ಮನುಷ್ಯರನ್ನು ಪ್ರೀತಿಸಲಾರ. ನಿಸರ್ಗ ಪ್ರೀತಿ ವಾಸ್ತವವಾಗಿ ಜೀವನಪ್ರೀತಿಯ ಒಂದು ವಿಸ್ತರಣೆಯೇ. ನಿಸರ್ಗದ ಭವ್ಯಾದ್ಭುತ ಅಭಿವ್ಯಕ್ತಿಗಳ ಎದುರು ನಾವೆಷ್ಟು ಸಣ್ಣವರು ಎಂಬ ಅರಿವೂ ಈ ಮನುಷ್ಯನ ಅಹಂಕಾರ ಭಂಗಕ್ಕೆ ಅಗತ್ಯವಾದದು. ನಮ್ಮ ಮನೆಯ ಪ್ರಾಕಾರದಲ್ಲಿ ಒಂದೆರಡು ತೆಂಗಿನ ಮರಗಳಿವೆ. ಎಲ್ಲ ಮರಗಳಿಗಿಂತಲೂ ತನ್ನದೇ ಬೇರೆ ಎಂಬ ಒಂಟಿತನವನ್ನು ಕಾಯ್ದುಕೊಂಡು, ಎತ್ತರದಲ್ಲಿ ಗರಿಗಳನ್ನು ಹರಹಿಕೊಂಡು, ಕಾಯಿಗಳನ್ನು ತುಂಬಿಕೊಂಡು, ಇತರ ಮರಗಳಂತೆ ಋತು ಋತುವಿಗೂ ಬದಲಾಗುವ ಹಂಗಿನಿಂದಾಚೆಗೇ ಇದ್ದು ಕೊಂಡು, ಇದ್ದಕ್ಕಿದ್ದಂತೆ ಧಡಾರನೆ ತನ್ನ ಗರಿಗಳನ್ನು ಕಳಚಿ ಎಸೆದು ನಿರ್ಲಿಪ್ತರಂತೆ ನಿಲ್ಲುವ ಇದರ ಭಂಗಿ ನನಗೆ ಕ್ರಿಸ್ತ ಬುದ್ಧರ ನೆನಪು ತರುತ್ತದೆ.

ಹಾಗೆ ನೋಡಿದರೆ ಕಾಣದ ದೇವರಿಗಿಂತ ಒಂದು ಕಾಲಕ್ಕೆ ನಮ್ಮ ನಿಮ್ಮಂತೆಯೆ ಬದುಕಿ ಎತ್ತರಕ್ಕೆ ಏರಿದ ಕ್ರಿಸ್ತ, ಬುದ್ಧ, ಬಸವ, ರಾಮಕೃಷ್ಣ-ವಿವೇಕಾನಂದ, ಗಾಂಧಿ ಇಂಥ ಮನುಷ್ಯರೇ ನನಗೆ ಹೆಚ್ಚು ಗೌರವಾರ್ಹರೆಂದು ತೋರುತ್ತಾರೆ. ಅವರು ಈ ಬದುಕಿನ ಬಗ್ಗೆ ತೋರಿದ ಕಾಳಜಿ, ಮನುಷ್ಯರ ನೋವು-ಸಂಕಟಗಳನ್ನು ಪರಿಹಾರ ಮಾಡುವುದರಲ್ಲಿ ಅವರಿಗಿದ್ದ ಆಸಕ್ತಿ, ಅವರು ಎತ್ತಿ ಹಿಡಿದ ಮೌಲ್ಯಗಳು-ಈ ಕಾರಣದಿಂದ ಇವರೆಲ್ಲರೂ ಪೂಜ್ಯರು! ಇದರಿಂದಾಗಿ ದೇವಸ್ಥಾನಗಳು ಹಾಗೂ ತತ್ಸಂಬಂಧವಾದ ದೇವರ ಕಲ್ಪನೆಗಳು ನನ್ನನ್ನು ಆಕರ್ಷಿಸಿಲ್ಲ. ಹಾಗೆಯೇ ದೇವರ ಹಾಗೂ ಧರ್ಮದ ಹೆಸರಿನಲ್ಲಿ ಜನಸಾಮಾನ್ಯರ ಮೌಢ್ಯವನ್ನು ಬಂಡವಾಳವನ್ನಾಗಿ ಮಾಡಿಕೊಂಡು ಬದುಕುವ ಜನವರ್ಗವನ್ನು ಕಂಡರೆ ನನಗೆ ಆಗುವುದಿಲ್ಲ. ಹಾಗೆಯೆ ಬದುಕಿಗೆ ಇಳಿಸಲಾಗದ ದೊಡ್ಡ ದೊಡ್ಡ ಆದರ್ಶಗಳ ಬಗ್ಗೆ ಮಾತನಾಡುತ್ತಾ ದಿನದಿನದ ಸರಳ ಸಾಧಾರಣದ ಬದುಕನ್ನು ಕೆಳಗಣ್ಣಿನಿಂದ ನೋಡುವ ಪ್ರವೃತ್ತಿಯನ್ನು ನಿಜವಾದ ಆರೋಗ್ಯದ ಲಕ್ಷಣ ಎಂದು ನಾನೆಂದೂ ತಿಳಿದಿಲ್ಲ. ಆದರ ಬದಲು 'ಪ್ರೀತಿ-ಸ್ನೇಹ, ಕರುಣೆ-ಮರುಕ, ಇವೇ ನಮ್ಮ ದೇವರು'. ಕಣ್ಣಿಗೆ ಕಾಣುವ ನಮ್ಮ ಸಹಜೀವಿಗಳ ಜತೆಗೆ ನಮಗಿರಬೇಕಾದ ಮಾನವೀಯ ಸಂಬಂಧಗಳೇ ನಮ್ಮ ಮೊದಲ ನೆಲೆ ಹಾಗೂ ಮೊದಲ ಆದರ್ಶ. ಮನುಷ್ಯನಿಗಾಗಿಯೇ ದೇವರು-ಧರ್ಮ-ದೇವಸ್ಥಾನ ಎಲ್ಲವೂ. ಮನುಷ್ಯನನ್ನು ಮರೆತ ಅಥವಾ ಮನುಷ್ಯರನ್ನು ಬಂಡವಾಳವನ್ನಾಗಿ ಮಾಡಿಕೊಳ್ಳುವ ದೇವರು-ಧರ್ಮ-ದೇವಸ್ಥಾನಗಳು ಕೇವಲ ಅಮಾನವೀಯತೆಯ ಸಂಕೇತಗಳು.

ನನ್ನೊಳಗೆ ಬಂದು ಸೇರಿಕೊಂಡ ಬದುಕಿನ ಒಂದಿಷ್ಟು ಭಾಗ ನಾನು ಪಡೆದ ಶಿಕ್ಷಣದ ಹಾಗೂ ಸಾಹಿತ್ಯದ ಕೊಡುಗೆ. ಯಾಕೆಂದರೆ ಬದುಕನ್ನು ಅರ್ಥ ಮಾಡಿಕೊಳ್ಳುವ ಸೂಕ್ಷ್ಮಸಂವೇದನೆಯ ಪರಿಣಾಮವೇ ಸಾಹಿತ್ಯ. ಓದಿನ ಮೂಲಕ ಪರಿಚಿತವಾದ ಅನ್ಯದೇಶೀಯ ಸಾಹಿತ್ಯ, ನನ್ನ ಸಮಕಾಲೀನ ಸಾಹಿತಿಗಳು ತಮಗೆ ದಕ್ಕಿದ ಬದುಕನ್ನು ಹಿಡಿದು ಶೋಧಿಸಿದ

ಪರಿಣಾಮವಾದ ಸಾಹಿತ್ಯ–ಈ ಎಲ್ಲವೂ ಬದುಕನ್ನು ಕುರಿತ ಬೇರೆ ಬೇರೆಯ ಅರಿವುಗಳನ್ನು ನನಗೆ ಪರಿಚಯ ಮಾಡಿಕೊಟ್ಟಿವೆ. ಈ ಸಾಹಿತ್ಯ ಧಾರ್ಮಿಕ ಮನುಷ್ಯನ ಕಲ್ಪನೆಯನ್ನು ಕೊಟ್ಟಿದೆ; ನೈತಿಕ ಮನುಷ್ಯನ ಕಲ್ಪನೆಯನ್ನು ಕೊಟ್ಟಿದೆ; ದೇವಮಾನವನ ಕಲ್ಪನೆಯನ್ನು ಕಟ್ಟಿಕೊಟ್ಟಿದೆ; ಸಾಮಾಜಿಕ ಮನುಷ್ಯನ ಕಲ್ಪನೆಯನ್ನು ಕಟ್ಟಿಕೊಟ್ಟಿದೆ; ಬದುಕಿನ ವಿವಿಧ ಸಂದರ್ಭಗಳಲ್ಲಿ ಈ ಮನುಷ್ಯ ಪಟ್ಟ ಪಾಡುಗಳನ್ನು, ಏರಿದ ಎತ್ತರಗಳನ್ನು, ಬಿದ್ದ ಆಳಗಳನ್ನು, ಅವನೊಳಗಿನ ಸಂಕೀರ್ಣಗಳನ್ನು, ಸಂಘರ್ಷಗಳನ್ನು, ಅಂದಂದು ಅವನು ಬದುಕನ್ನು ಗ್ರಹಿಸಿದ ಹಾಗೂ· ಎದುರಿಸಿದ ಸನ್ನಿವೇಶಗಳನ್ನು ಪರಿಚಯ ಮಾಡಿಕೊಡುತ್ತ, ನನ್ನ ವರ್ತಮಾನದ ಬದುಕನ್ನು ನಾನು ಅರ್ಥ ಮಾಡಿಕೊಳ್ಳಲು ಮತ್ತು ಒಪ್ಪಿಕೊಳ್ಳಲು ಅಗತ್ಯವಾದ ಧೈರ್ಯವನ್ನೂ, ಶ್ರದ್ಧೆಯನ್ನೂ ನನಗೆ ತಂದುಕೊಟ್ಟಿದೆ. ಹಾಗೆಯೆ ಒಬ್ಬ ಕವಿಯಾಗಿ ನಾನು ಅರ್ಥಮಾಡಿಕೊಂಡ ಬದುಕು, ಕವಿತೆಯ ಮೂಲಕ ಗ್ರಹಿಸಲು ಹಾಗೂ ಅಭಿವ್ಯಕ್ತಿಸಲು ಸಾಧ್ಯವಾದ ಬದುಕು, ನನ್ನ ಜೀವನ ದೃಷ್ಟಿಯನ್ನು ತಕ್ಕಮಟ್ಟಿಗೆ ಪರಿಚಯ ಮಾಡಿಕೊಡುತ್ತದೆ ಎಂದು ನಾನು ಭಾವಿಸಿದ್ದೇನೆ.

ಈ ಬದುಕಿನಲ್ಲಿ ನನಗೆ ಮುಖ್ಯವಾದದ್ದು ನಾನು ನಿಂತ ನೆಲ. ಈ ನೆಲದ ಪರಂಪರೆಗೆ, ಚರಿತ್ರೆಗೆ, ವರ್ತಮಾನಕ್ಕೆ ಹಾಗೂ ನಾಳಿನ ಕನಸುಗಳಿಗೆ ನಾನು ಹಕ್ಕುದಾರನೆಂಬ ಹೆಮ್ಮೆ ನನ್ನದು. ಆದ ಕಾರಣ ಈ ಬದುಕಿನ ನೋವಿಗೆ, ನಲಿವಿಗೆ, ಒಳಿತಿಗೆ ಕೆಡುಕಿಗೆ ನಾನು ಒಡ್ಡಿಕೊಂಡು, ಈ ಬದುಕಿನಲ್ಲಿ ತನ್ಮಯತೆಯಿಂದ ತೊಡಗಿಕೊಂಡಿದ್ದೇನೆ. ಅನೇಕ ವಿಚ್ಛಿದ್ರಕಾರಕ ಶಕ್ತಿಗಳ ನಡುವೆಯೂ ವಿಚಲಿತವಾಗದ ಒಂದು ನಿಲುವಿನಲ್ಲಿ ನಿಂತು, ಬದುಕಿನಲ್ಲಿ ತೊಡಗಿಸಿ ಕೊಳ್ಳುವುದರಿಂದ ಮಾತ್ರ ನಾವು ಬದುಕನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂಬುದು ನನ್ನ ತಿಳಿವಳಿಕೆಯಾಗಿದೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ನಾವು ಸೃಜನಾತ್ಮಕವಾಗಿ ಬದುಕುವುದು ಮುಖ್ಯವಾದ ಸಂಗತಿಯಾಗಿದೆ. ಸೃಜನಾತ್ಮಕವಾಗಿ ಬದುಕುವುದು ಎಂದರೆ ನಿರಂತರವಾದ ಎಚ್ಚರದಲ್ಲಿ ಹಾಗೂ ಸ್ಪಂದಮಾನ ಸ್ಥಿತಿಯಲ್ಲಿ ನಮ್ಮ ಮನಸ್ಸನ್ನು ನಿಲ್ಲಿಸಿಕೊಳ್ಳುವ ಒಂದು ಕೌಶಲ. ಇದು ಸಾಧ್ಯವಾಗುವುದು ಅದಮ್ಯವಾದ ಜೀವನ ಪ್ರೀತಿಯಿಂದ. ಮಹಾ ಲೇಖಕನಾದ ಟಾಲ್‌ಸ್ಟಾಯ್ ಹೇಳಿದ "To love life is to live life' ಎಂದು. ಈ ಮಾತು ನಿಜವಾಗುವುದು–ಈ ಒಂದು ಮನಃ ಸ್ಥಿತಿಯಲಿ.

■■

# "ಭಾರತೀಯ ಕಾವ್ಯ ಮೀಮಾಂಸೆ–ಒಂದು ವಿವೇಚನೆ

ದಿವಂಗತ ಪ್ರೊ. ತೀ.ನಂ. ಶ್ರೀಕಂಠಯ್ಯನವರು ನವೋದಯ ಸಾಹಿತ್ಯ ಸಂದರ್ಭದಲ್ಲಿ ಸಂಶೋಧನೆ, ಸಾಹಿತ್ಯ ವಿಮರ್ಶೆ, ಭಾಷಾಶಾಸ್ತ್ರ ಇತ್ಯಾದಿ ಹಲವು ಕ್ಷೇತ್ರಗಳಿಗೆ ತಮ್ಮ ಮೌಲಿಕವಾದ ಕೊಡುಗೆಯನ್ನು ಸಲ್ಲಿಸಿದ್ದರೂ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ಹೆಸರು ಶಾಶ್ವತವಾಗಿ ಅಂಕಿತವಾಗಿರುವುದು ಅವರು ಬರೆದ 'ಭಾರತೀಯ ಕಾವ್ಯ ಮೀಮಾಂಸೆ' ಎಂಬ ಕೃತಿಯಿಂದಲೇ. ಭಾರತೀಯ ಕಾವ್ಯ ಮೀಮಾಂಸೆ ಮೂಲಭೂತವಾಗಿ ಒಂದೂವರೆ ಸಾವಿರ ವರ್ಷಗಳ ಕಾಲಮಾನದಲ್ಲಿ ಕಾವ್ಯದ ಸ್ವರೂಪವನ್ನು ಕುರಿತು, ಉದ್ದೇಶವನ್ನು ಕುರಿತು, ಪ್ರಯೋಜನವನ್ನು ಕುರಿತು ಸಂಸ್ಕೃತ ಅಲಂಕಾರಿಕರು ನಡೆಯಿಸಿದ ಚಿಂತನೆಗಳನ್ನು ಅತ್ಯಂತ ಸಮರ್ಥವಾಗಿ ಗ್ರಹಿಸಿ ಕನ್ನಡದಲ್ಲಿ ನಿರೂಪಿಸುವ ಮಹಾಸಾಹಸದ ಪರಿಣಾಮವಾಗಿದೆ. ಈ ಮಹಾಸಾಹಸಕ್ಕೆ ಅಗತ್ಯವಾದ, ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷಾ ಸಾಹಿತ್ಯಗಳ ಪರಿಣತಿಯೂ, ಇತರ ಹಲವು ಶಾಸ್ತ್ರಗಳ ಪರಿಜ್ಞಾನವೂ ತೀ.ನಂ.ಶ್ರೀಕಂಠಯ್ಯನವರಿಗೆ ಇದ್ದುದರಿಂದ ಈ ಕೃತಿ, ಅದರ ಮುನ್ನುಡಿಯಲ್ಲಿ ಶ್ರೀ ಕುವೆಂಪು ಅವರು ವರ್ಣಿಸಿರುವಂತೆ ಒಂದು ಆಚಾರ್ಯ ಕೃತಿಯಾಗಿದೆ. ಈ ಕೃತಿ ಪ್ರಕಟವಾಗಿ ಈಗಾಗಲೇ ನಾಲ್ಕು ದಶಕಗಳು ಸಮೀಪಿಸುತದ್ದರೂ ಈ ಕೃತಿ ರಚನೆಗೆ ಮುನ್ನ ಸ್ವಲ್ಪ ಮಟ್ಟಿಗೆ ಮತ್ತು ತದನಂತರ ತಕ್ಕಷ್ಟು ಕಾವ್ಯ ಮೀಮಾಂಸೆಯನ್ನು ಕುರಿತ ಕೆಲಸ ನಡೆದಿದ್ದರೂ, ಈ ಕೃತಿ ಇಂದಿಗೂ ತನ್ನ ಪ್ರಸ್ತುತತೆಯನ್ನು ಕಾಯ್ದುಕೊಂಡು, ಈ ಕ್ಷೇತ್ರದಲ್ಲಿ ಕೆಲಸ ಮಾಡಬೇಕಾದ ಯಾರೇ ಆದರೂ ಮೊಟ್ಟ ಮೊದಲು ಗೌರವದಿಂದ ಗಮನಿಸಲೇಬೇಕಾದ ಮಾದರಿ ಹಾಗೂ ಮಾರ್ಗದರ್ಶಕ ಕೃತಿಯಾಗಿದೆ. ಭಾರತೀಯ ಕಾವ್ಯಮೀಮಾಂಸೆಯನ್ನು ಇಷ್ಟರಮಟ್ಟಿಗೆ ಸಮಗ್ರವಾಗಿ, ಸಾರವತ್ತಾಗಿ ಮತ್ತು ಹೃದ್ಯವಾಗಿ ಪರಿಚಯ ಮಾಡಿಕೊಡುವಂಥ ಕೃತಿ ಬಹುಶಃ ಭಾರತದ ಇತರ ಪ್ರಾದೇಶಿಕ ಭಾಷೆಗಳಲ್ಲಿ ಬಂದಿರಲಾರದು; ಇಂಗ್ಲಿಷ್‌ನಲ್ಲಂತೂ ಈ ಗಾತ್ರ ಹಾಗೂ ಸತ್ವದ ಕೃತಿ, ಈ ವಿಷಯವನ್ನು ಕುರಿತು ಇಲ್ಲವೆಂದರೂ ಅದು ಉತ್ಪ್ರೇಕ್ಷೆಯಾಗಲಾರದು.

ಈ ಕೃತಿ ಮುಖ್ಯವಾಗಿ ಸಂಸ್ಕೃತದಲ್ಲಿ ಕಾವ್ಯಶಾಸ್ತ್ರವನ್ನು ಬೆಳೆಯಿಸಿದ, ಮಹಾಮೇಧಾವಿಗಳ ಅಲಂಕಾರ ಗ್ರಂಥಗಳನ್ನು ಆಧರಿಸಿ ರಚಿತವಾಗಿದ್ದರೂ, ಶ್ರೀಕಂಠಯ್ಯನವರು ಇದನ್ನು ಕೇವಲ ಅಲಂಕಾರ ಶಾಸ್ತ್ರದ ಚರಿತ್ರೆಯನ್ನಾಗಿ ಮಾಡಿಲ್ಲ. ಅದರ ಬದಲು ಅಲಂಕಾರ ಶಾಸ್ತ್ರದ ಬೆಳವಣಿಗೆಯನ್ನು ಮೊದಲಿಗೆ ಸ್ಥೂಲವಾಗಿ ನಿರೂಪಿಸಿ, ಅನಂತರ ಕವಿ–ಕಾವ್ಯ–ಸಹೃದಯರ

ವಿಚಾರ, ರಸ–ಧ್ವನಿ–ಔಚಿತ್ಯ ಈ ವಿಷಯಗಳ ಮೂಲ ಮಾನದಲ್ಲಿ, ಭಾರತೀಯ ಕಾವ್ಯ ಮೀಮಾಂಸೆಯ ನಿಲುವುಗಳನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಜತೆಗೆ ಕನ್ನಡದಲ್ಲಿಯೂ ನಡೆದ ಕಾವ್ಯ ಚರ್ಚೆಯನ್ನು, ಈ ಕೃತಿಯ ಪರಿಶಿಷ್ಟದಲ್ಲಿ ಕೊಡುವುದನ್ನು ಅವರು ಮರೆತಿಲ್ಲ. 'ಅಲಂಕಾರ'ವನ್ನು ಕುರಿತು, ರೀತಿ ಸಿದ್ಧಾಂತವನ್ನು ಕುರಿತು ಪ್ರತ್ಯೇಕವಾದ ವಿವೇಚನೆಗಳಿದ್ದಿದ್ದರೆ ಈ ಕೃತಿ ಇನ್ನೂ ಸಮಗ್ರವಾಗಬಹುದಾಗಿತ್ತು ಎಂದುಕೊಂಡರೂ, 'ಅಲಂಕಾರ' ಹಾಗೂ 'ರೀತಿ'ಗಳ ಬಗ್ಗೆ ಅಲ್ಲಲ್ಲಿ ಪ್ರಸ್ತಾಪಿತವಾಗುವ ಕೆಲವು ಸಂಗತಿಗಳಿಂದ ನಾವು ತೃಪ್ತಿಪಟ್ಟುಕೊಳ್ಳಬಹುದಾಗಿದೆ.

ಈ ಕೃತಿಯ ಮೊದಲ ಭಾಗವಾದ ಅಲಂಕಾರ ಶಾಸ್ತ್ರದ ಬೆಳವಣಿಗೆಯನ್ನು ಕುರಿತು ಬರೆಯುವಾಗ ತೀ.ನಂ.ಶ್ರೀಯವರು ಈ ಕಾವ್ಯ ಚರ್ಚೆಯ ಇತಿಹಾಸವನ್ನು ರೂಪಿಸಿದ ಪ್ರಮುಖ ಅಲಂಕಾರಿಕರ ಸಾಧನೆ–ಸಿದ್ಧಿಗಳನ್ನೂ, ಅವರ ಇತಿ–ಮಿತಿಗಳನ್ನೂ ತಕ್ಕ ವಿಮರ್ಶನ ಪ್ರಜ್ಞೆಯಿಂದ ನಿರೂಪಿಸಿದ್ದಾರೆ. ಈ ಚರಿತ್ರೆಯಲ್ಲಿ ಮುಖ್ಯವಾದ ಲಾಕ್ಷಣಿಕರ ಪರಿಚಯವನ್ನೂ, ಅವರುಗಳಿಗೆ ಇದ್ದ ತಾತ್ವಿಕ ಹಿನ್ನೆಲೆಯನ್ನೂ, ಅವರ ಪ್ರಸ್ಥಾನದ ಸೋಲು–ಗೆಲವುಗಳನ್ನೂ, ತೌಲನಿಕವಾಗಿ ಸಮೀಕ್ಷಿಸಿ ತಮ್ಮ ತೀರ್ಮಾನಗಳನ್ನು ಮಂಡಿಸಿರುವ ಕ್ರಮ ಅವರ ವಿದ್ವತ್ತು ಹಾಗೂ ವಿವೇಚನಾ ಸಾಮರ್ಥ್ಯಗಳಿಗೆ ಸಾಕ್ಷಿಯಾಗಿದೆ.

ಈ ಕೃತಿಯ ಎರಡನೆಯ ಭಾಗವಾದ ಕವಿ–ಕಾವ್ಯ ಸಹೃದಯ ವಿಚಾರವಂತೂ ಮುಖ್ಯವಾಗಿ ಭಾರತೀಯ ಕಾವ್ಯ ಚಿಂತನೆಯಲ್ಲಿನ ಸೃಜನ ಪ್ರಕ್ರಿಯೆಯನ್ನು ಅಥವಾ ಪ್ರತಿಭಾ ವ್ಯಾಪಾರವನ್ನು ಕುರಿತದ್ದಾಗಿದೆ. ಇನ್ನು ಮೂರನೆಯ ಭಾಗ ತೀ.ನಂ.ಶ್ರೀ. ಅವರು 'ಕಾವ್ಯ ಗಾಯತ್ರಿ' ಎಂದು ಕರೆಯುವ ರಸ–ಧ್ವನಿ–ಔಚಿತ್ಯಗಳನ್ನು ಕುರಿತ ವ್ಯಾಖ್ಯಾನವಾಗಿದೆ. ಈ ಎರಡು ಭಾಗಗಳನ್ನು ತೀ.ನಂ.ಶ್ರೀ ಅವರು ನಿರ್ವಹಿಸಿರುವ ರೀತಿ ಅನನ್ಯವಾಗಿದೆ.

ಭಾರತೀಯ ಕಾವ್ಯಮೀಮಾಂಸೆ ಮೂಲತಃ ಒಂದು ಶಾಸ್ತ್ರಗ್ರಂಥವಾದರೂ, ತೀ.ನಂ.ಶ್ರೀ ಅವರ ಬರವಣಿಗೆ ಆ ಕಾರಣದಿಂದ ನೀರಸವಾಗಿಲ್ಲ, ಶಾಸ್ತ್ರ ಜಡವಾಗಿಲ್ಲ; ಅದರ ಬದಲು ಸಾಹಿತ್ಯದಲ್ಲಿ ತಕ್ಕಮಟ್ಟಿಗೆ ಆಸಕ್ತಿಯಿರುವ ಸಾಮಾನ್ಯ ಓದುಗನಿಗೂ ಸಂವಹನಗೊಳ್ಳುವಂಥ ಚೇತೋಹಾರಿಯಾದ ಶೈಲಿಯಲ್ಲಿ ರಚಿತವಾಗಿದೆ. ಹೀಗಾಗಿ ಅವರ ನಿರೂಪಣೆ ಉಪಮೆ–ರೂಪಕಗಳ ಮಾರ್ಗವನ್ನು ಉಚಿತವರಿತು ತಾಳುತ್ತ ಹೃದ್ಯವಾಗಿದೆ. ಇಂಥ ಒಂದೆರಡು ಮಾತುಗಳನ್ನು ನಾವು ನೋಡಬಹುದು. ರಸವನ್ನು ಕುರಿತು "ಕಾವ್ಯ ಸಾಗರವನ್ನು ಆಲೋಚನೆ ಮಾಡಿ ನಮ್ಮ ಶಾಸ್ತ್ರಕಾರರು ಸಾಧಿಸಿರುವ ಅಮೃತವೇ ರಸ" ಎಂಬ ಮಾತಿನ ಮೂಲಕ ಅಲಂಕಾರಿಕರ ಸಾಧನೆಯನ್ನು ವರ್ಣಿಸಿದರೆ, ಅಲಂಕಾರ ಪ್ರಸ್ಥಾನದವರು ಕಾವ್ಯದ ನಿಜವಾದ ತಿರುಳನ್ನರಿಯದೆ ಕೇವಲ ಅಲಂಕಾರಗಳನ್ನು ಪಟ್ಟಿ ಹಾಕಿದ ಕ್ರಮವನ್ನು ಕುರಿತು "ಅವರು ಕಾವ್ಯಸಾಗರದ ತಡಿಯಲ್ಲಿ ಚಿಪ್ಪುಗಳನ್ನು ಆಯ್ದಂತಾಯಿತೆ ಹೊರತು ಅದರ ಆಳವನ್ನು ಶೋಧಿಸಿದಂತಾಗಲಿಲ್ಲ" ಎಂಬ ಮಾತಿನ ಮೂಲಕ ಅಲಂಕಾರ ಪ್ರಸ್ಥಾನದವರ ಸೋಲನ್ನು ಸ್ಪಷ್ಟಪಡಿಸುತ್ತಾರೆ. ಕಾವ್ಯಗಳಲ್ಲಿ ಬಳಕೆಯಾಗುವ ಶಬ್ದಗಳ ಸಾಮರ್ಥ್ಯಕ್ಕೂ ಶಾಸ್ತ್ರಗಳಲ್ಲಿ

ಬಳಕೆಯಾಗುವ ಶಬ್ದಗಳ ಸಾಮರ್ಥ್ಯಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಲು "ಶಾಸ್ತ್ರ ಗ್ರಂಥಗಳಲ್ಲಿ ಶಬ್ದವು ಕೊಟ್ಟ ಕೆಲಸವನ್ನು ಮಾಡಿ ಸುಮ್ಮನಾಗುವ ಕೂಲಿಯಾಳಿನಂತೆ" ಎನ್ನುವ ಹೋಲಿಕೆ ತುಂಬ ಅರ್ಥವತ್ತಾಗಿದೆ. ಇಂಥ ಹೋಲಿಕೆಗಳೂ, ಅತ್ಯಂತ ಅಡಕವಾದ ಸೂಕ್ತಿ ಸದೃಶವಾದ ಅಭಿವ್ಯಕ್ತಿಗಳೂ ಈ ಕೃತಿಯ ಮನೋಜ್ಞತೆಗೆ ಸಾಕ್ಷಿಯಾಗಿವೆ. ಇಡೀ ಕಾವ್ಯ ಮೀಮಾಂಸೆಯ ಇತಿಹಾಸದ ಬೆಳವಣಿಗೆಯನ್ನು ಮತ್ತು ಅಲ್ಲಿ ರಸ ಸಿದ್ಧಾಂತಕ್ಕೆ ಕ್ರಮೇಣ ದೊರೆತ ಪ್ರಾಶಸ್ತ್ಯವನ್ನು ಸಚಿತ್ರವಾಗಿ ನಿರೂಪಿಸುವ ದೇವಸ್ಥಾನದ ಉಪಮೆಯೊಂದು ಹೀಗಿದೆ:

"ಕಾವ್ಯವನ್ನು ಒಂದು ಗುಡಿಗೆ ಹೋಲಿಸಿದರೆ, ಅಲಂಕಾರ ಪ್ರಸ್ಥಾನದವರು ಅದರ ಹೊರಗೋಡೆಯನ್ನು ಸುತ್ತುವುದರಲ್ಲೇ ಕಾಲ ಕಳೆದರು; ರಸವನ್ನು ಕೂಡಾ ಆ ಹೊರಗೋಡೆಯ ಮೇಲೆ ಕೆತ್ತಿರುವ ಅನೇಕ ವಿಗ್ರಹದಲ್ಲಿ ಒಂದಾಗಿ ಅವರು ಭಾವಿಸಿದ್ದರು. ಈ ಒಂದು ವಿಗ್ರಹವು ತುಕ್ಕಾದರೂ ಮುರಿದು ಬಿದ್ದರೂ ಗುಡಿಗೆ ಯಾವ ಭಂಗವೂ ತಟ್ಟುವಂತೆ ಅವರಿಗೆ ತೋರಲಿಲ್ಲ. ರೀತಿ ಪ್ರಸ್ಥಾನದಲ್ಲಿ ರಸವು ಗುಡಿಯೊಳಕ್ಕೆ ಬಂದಿತು; ಕಾವ್ಯಕ್ಕೆ ನಿಯತವಾದ ಅಂಗವಾಯಿತು. ಆದರೆ ಪ್ರಾಮುಖ್ಯವನ್ನು ಇನ್ನೂ ಪಡೆಯಲಿಲ್ಲ. ಅದನ್ನು ಇಲ್ಲಿ ಗರ್ಭಗುಡಿಯ ದ್ವಾರಪಾಲಕನಿಗೆ ಹೋಲಿಸಿಬಹುದೋ ಏನೋ. ಧ್ವನಿಕಾರನು ಬಂದು ರಸದ ಮಹತ್ವವನ್ನರಿತು ಒಳಪೀಠದ ಮೇಲೆ ನಿಲ್ಲಿಸಿದಾಗ, ಇದೇ ಕಾವ್ಯಮಂದಿರದ ಅಧಿದೈವವೆಂದು ಗೊತ್ತಾಯಿತು. ಆದರೂ ಈ ವಿಗ್ರಹಕ್ಕೆ ಪ್ರಾಣ ಪ್ರತಿಷ್ಠೆ ಮಾಡಿದವನು ಅಭಿನವಗುಪ್ತನೆಂದು ಹೇಳಿದರೆ ತಪ್ಪಾಗಲಾರದು. ಭಟ್ಟನಾಯಕ, ಮಹಿಮಭಟ್ಟ ಇತರರೆಲ್ಲರೂ ಈ ದೈವದ ಆರಾಧಕರೇ ಸರಿ; ಇತರರಿಗೂ ಧ್ವನಿ ಪ್ರಸ್ಥಾನದವರಿಗೂ ಆರಾಧನೆಯ ವಿಧಾನದಲ್ಲಿ ಮಾತ್ರ ಭೇದ. ಇನ್ನು ಕಾವ್ಯ ಲಕ್ಷಣದಲ್ಲೇ ರಸದ ಹೆಸರನ್ನು ಸೇರಿಸಿ ಉದ್ಘೋಷಿಸುವ ಕಾರ್ಯ ವಿಶ್ವನಾಥನಿಗೆ ಉಳಿಯಿತು."

ಕಾವ್ಯ ಮೀಮಾಂಸೆಯ ವಿವಿಧ ಪ್ರಸ್ಥಾನಗಳವರು ರಸವನ್ನು ಕುರಿತು ತಾಳಿದ ನಿಲುವು, ಕಡೆಗೆ ರಸಕ್ಕೆ ಸಂದ ಸ್ಥಾನ ಇತ್ಯಾದಿಗಳನ್ನು ಇದಕ್ಕಿಂತ ಸೊಗಸಾಗಿ ಹೇಳಲು ಸಾಧ್ಯವಿಲ್ಲ.

ತೀ.ನಂ.ಶ್ರೀ. ಅವರು ಭಾರತೀಯ ಲಾಕ್ಷಣಿಕರ ಚಿಂತನೆಗಳನ್ನು ಅಧಿಕೃತವಾಗಿ ಗ್ರಹಿಸಿ, ಅರಗಿಸಿಕೊಂಡು, ಅದನ್ನು ವ್ಯಕ್ತಿವಿಶಿಷ್ಟವಾದ ರೀತಿಯಲ್ಲಿ ನಿರೂಪಿಸುವುದರ ಜತಗೆ, ಅಲ್ಲಲ್ಲಿ ತೌಲನಿಕ ವಿವೇಚನೆಯನ್ನೂ ಈ ಕೃತಿಯಲ್ಲಿ ನಡೆಯಿಸಿದ್ದಾರೆನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ಭಾರತೀಯ ಕಾವ್ಯ ಮೀಮಾಂಸೆಯೊಳಗಣ ವಿವಿಧ ಸಿದ್ಧಾಂತಗಳನ್ನು ಕುರಿತ ಪರಸ್ಪರ ತೌಲನಿಕ ಕ್ರಮದ ಜತೆಗೆ, ಭಾರತೀಯ ಕಾವ್ಯ ಮೀಮಾಂಸೆಯ ಹಲವು ಪರಿಕಲ್ಪನೆಗಳಿಗೆ ಸಂವಾದಿಯಾಗಬಹುದಾದ ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯ ಸಂಗತಿಗಳನ್ನು ಕುರಿತ, ತುಲನಾತ್ಮಕ ಪ್ರಯತ್ನಗಳೂ ಇಲ್ಲಿವೆ. ಇತ್ತೀಚಿಗೆ ಪಾಶ್ಚಾತ್ಯ ಸೌಂದರ್ಯ ಮೀಮಾಂಸೆಯಲ್ಲಿ ಕಾಣಿಸಿಕೊಳ್ಳುತ್ತಿರುವ 'ಸೈಕಿಕಲ್ ಡಿಸ್ಟೆನ್ಸ್' ಅಥವಾ 'ಮಾನಸಿಕ ದೂರ' ಎಂಬ ತತ್ವವು ಭಾರತೀಯ ಕಾವ್ಯ ಮೀಮಾಂಸೆಯ ಸಾಧಾರಣೀಕರಣ ತತ್ವದೊಂದಿಗೆ ಸಂವಾದಿಯಾಗ ಬಲ್ಲುದೆಂಬ ಸಂಗತಿ ಮೊಟ್ಟ ಮೊದಲಿಗೆ ಈ ಕೃತಿಯಲ್ಲಿ ಪ್ರಸ್ತಾಪಿತವಾಗಿದೆ. ಹಾಗೆಯೇ ಇಂಗ್ಲಿಷಿನ 'ಇಮ್ಯಾಜಿನೇಷನ್', 'ಇಂಟ್ಯೂಷನ್', 'ಜೀನಿಯಸ್', 'ಫ್ಯಾನ್ಸಿ' ಈ ಮಾತುಗಳಿಗೆ

ಭಾರತೀಯ ಕಾವ್ಯ ಮೀಮಾಂಸೆಯ 'ಪ್ರತಿಭಾ', 'ಪ್ರತಿಭಾನ', 'ಶಕ್ತಿ', 'ಕಲ್ಪನೆ' ಈ ಪದಗಳನ್ನು ಬಳಸುವುದು ಒಳ್ಳೆಯದು ಎಂಬ ಸೂಚನೆಯನ್ನು ಕೊಟ್ಟವರು ತೀ.ನಂ.ಶ್ರೀಕಂಠಯ್ಯನವರು.

ಕಾವ್ಯವನ್ನು ಕುರಿತ ಚರ್ಚೆ ನಿಜವಾಗಿಯೂ ನಡೆಯಬೇಕಾದದ್ದು ಕವಿ ನಿರ್ಮಿತಿ ಹಾಗೂ ಕಾವ್ಯಪರಂಪರೆಗಳ ಹಿನ್ನೆಲೆಯಲ್ಲಿ ಎಂಬುದನ್ನು ಬಲ್ಲ ತೀ.ನಂ.ಶ್ರೀವರು, ಈ ಕೃತಿಯ ಸಂದರ್ಭದಲ್ಲಿ ಸಂಸ್ಕೃತ, ಪ್ರಾಕೃತ, ಹಳಗನ್ನಡ, ಹೊಸಗನ್ನಡ ಮತ್ತು ಜಾನಪದ ಹೀಗೆ ಹಲವು ಹತ್ತು ಕಡೆಗಳಿಂದ ಸ್ವಾರಸ್ಯವಾದ ನಿದರ್ಶನಗಳನ್ನು ಬಲೆಬೀಸಿ ತಂದು, ಭಾರತೀಯ ಕಾವ್ಯಮೀಮಾಂಸೆಯ ತತ್ವಗಳನ್ನು ಅನ್ವಯಿಸಿ ನೋಡಿ ವ್ಯಾಖ್ಯಾನಿಸುವ ಕ್ರಮದಿಂದ ಭಾರತೀಯ ಕಾವ್ಯಮೀಮಾಂಸೆಯ ಹಲವು ತತ್ವಗಳ ಸಾರ್ವಕಾಲಿಕ ಮೌಲ್ಯವನ್ನು ತುಂಬ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಹಾಗೆಯೇ ಕನ್ನಡದ ವಿಮರ್ಶೆಯ ಪ್ರಾರಂಭದ ದಿನಗಳಲ್ಲಿ ಅವರು ಈ ಕೃತಿಯ ಹರಹಿನಲ್ಲಿ ಬಿಡಿ ಬಿಡಿ ಪದ್ಯಗಳನ್ನು ಕುರಿತು ನಡೆಯಿಸುವ ವಿಮರ್ಶನ ವಿಧಾನಗಳು, ಹೊಸಗನ್ನಡದ ಪ್ರಾಯೋಗಿಕ ವಿಮರ್ಶೆಯ ಮೊದಲ ರೂಪಗಳಾಗುವುದರ ಜತೆಗೆ, ಭಾರತೀಯ ಕಾವ್ಯ ಮೀಮಾಂಸೆಯ ಮೂಲಮಾನದಲ್ಲಿ ಕನ್ನಡ ವಿಮರ್ಶೆಯನ್ನು ಬೆಳೆಯಿಸುವ ಸಾಧ್ಯತೆಗಳನ್ನು ಸೂಚಿಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕೃತಿ ಭಾರತೀಯ ಕಾವ್ಯ ಮೀಮಾಂಸೆಯ ಪರಂಪರೆಯೊಂದನ್ನು ಅತ್ಯಂತ ಅಧಿಕೃತವಾದ ರೀತಿಯಲ್ಲಿ ಪರಿಚಯ ಮಾಡಿಕೊಡುವುದಲ್ಲದೆ, ಈ ಅರಿವಿನಿಂದ ಮುಂದೆ ಆಗಬೇಕಾದ ಅಧ್ಯಯನಕ್ಕೂ ನಿರ್ದೇಶನ ನೀಡಬಲ್ಲ ಒಂದು ವಿದ್ವತ್ ಸಾಹಸವಾಗಿದೆ.

■■

# ನಾನೇಕೆ ಬರೆಯುತ್ತೇನೆ ?

೧೯೪೨-೪೩ನೆಯ ಇಸವಿ. ಆಗ ನಾನು ತುಮಕೂರಿನ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ವಿದ್ಯಾರ್ಥಿ. ನನಗೆ ಆಗ ಹದಿನಾರು ವರ್ಷ ವಯಸ್ಸು. ಆ ಹೊತ್ತಿಗಾಗಲೇ ನನ್ನ ಹೈಸ್ಕೂಲಿನ ದಿನಗಳಲ್ಲಿ ಅಂದಿನ ಕಥಾ ಸಾಹಿತ್ಯ ಮುಖ್ಯವಾಗಿ ಬಿ.ವೆಂಕಟಾಚಾರ್ಯರು ಕನ್ನಡಕ್ಕೆ ತಂದ ಬಂಕಿಂಚಂದ್ರರ ಕಾದಂಬರಿಗಳು, ಗಳಗನಾಥ, ಅ.ನ.ಕೃ., ಶಿವರಾಮ ಕಾರಂತರ ಇವರ ಬರಹಗಳು, ಕುವೆಂಪು ಅವರ ಕಾವ್ಯ ಹಾಗೂ ನಾಟಕಗಳು ಸಾಹಿತ್ಯದ ಬಗ್ಗೆ ನನ್ನಲ್ಲಿ ಒಂದು ಬಗೆಯ ಪ್ರೀತಿಯನ್ನೂ, ರುಚಿಯನ್ನೂ ಆಕರ್ಷಣೆಯನ್ನೂ ಹುಟ್ಟಿಸಿದ್ದವು.

ಆದೊಂದು ದಿನ ಕಾಲೇಜಿನಲ್ಲಿ ಇಂಗ್ಲಿಷ್ ಭಾಷೆಯ ಕವಿತೆಯೊಂದರ ಪಾಠ ನಡೆದಿತ್ತು. ಆ ಕವಿತೆಯ ಹೆಸರು 'An elegy written on a country church yard'. ಅದನ್ನು ಬರೆದವನು ಥಾಮಸ್ ಗ್ರೇ ಎಂಬ ಕವಿ. ಸಾಕಷ್ಟು ಸುದೀರ್ಘವಾದ ಈ ಕವಿತೆಯೊಳಗಿನ ಒಂದು ಪದ್ಯವನ್ನು ಅಂದು ಅಧ್ಯಾಪಕರು ತರಗತಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. ಆ ಪದ್ಯ ಹೀಗಿದೆ:

Full many a gem of purest ray serene
The dark unfathom'd caves of the ocean bear
Full many a flower is born to blush unseen
And waste its sweetness on the desert air.

ಈ ಪದ್ಯದ ಧಾಟಿ, ಭಾಷೆಯ ಬೀಸು, ಅರ್ಥದ ಸೊಗಸು, ಅದ್ಭುತವಾದ ರೀತಿಯಲ್ಲಿ ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡಿತು. ನಿದ್ದೆ-ಎಚ್ಚರಗಳಲ್ಲಿ ಆ ಕವಿತೆಯ ವಿಷಾದಭಾವ ನನ್ನನ್ನು ಕಾಡಿತು. ಒಂದೆರಡು ದಿನಗಳ ನಂತರ ರಾತ್ರಿ ನನ್ನ ವಿದ್ಯಾರ್ಥಿ ನಿಲಯದ ಕೊಠಡಿಯಲ್ಲಿ ಕೂತು ಈ ಪದ್ಯದ ಭಾವವನ್ನು ಕನ್ನಡ ಸಾಹಿತ್ಯ ಸಂದರ್ಭಕ್ಕೆ ಹೊಂದಿಸಿ ಒಂದು ಕವಿತೆಯನ್ನು ಬರೆಯಲು ಪ್ರಾರಂಭಿಸಿದೆ. –

ಕಡಲಿನ ಕತ್ತಲು ಗವಿಯಲ್ಲಿ
ಅಡಗಿಹವೆಷ್ಟೋ ರತ್ನಗಳು
ಘೋರಾರಣ್ಯದ ತರುಗಳಲಿ
ತುಂಬಿಹವೆಷ್ಟೋ ಕುಸುಮಗಳು.

ಎಸೆಯುವ ರನ್ನವ ಧರಿಸುವರಾರು
ಕಡಲಿನ ಗವಿಯಿಂ ಹೊರತೆಗೆದು?
ಕುಸುಮದ ಕಂಪನು ಸೇವಿಪರಾರು
ತುಂಬಿದ ಕಾನನ ಮಧ್ಯದಲಿ.

ಕನ್ನಡ ಸಾಹಿತ್ಯಾಬ್ಧಿಯಲಿ
ಅಡಗಿಹವೆಷ್ಟೋ ರತ್ನಗಳು
ಕನ್ನಡ ಭಾಷೆಯ ಕಾನನದಿ
ತುಂಬಿವೆ ಕಬ್ಬಿಗ ಕುಸುಮಗಳು

–ಹೀಗೆ ಆ ಕವಿತೆ ಮುಕ್ತಾಯವಾಯಿತು. ಇಡೀ ಕವಿತೆ ಥಾಮಸ್‌ಗ್ರೇ ತನ್ನ ಕವಿತೆಯಲ್ಲಿ ಬಳಸಿದ ಶಬ್ದ ಚಿತ್ರಗಳನ್ನೇ ಉಪಯೋಗಿಸಿಕೊಂಡು ಬರೆದ ಅನುಕರಣವಾದರೂ, ಅದರ ಭಾಷೆ, ಬಂಧ ಹಾಗೂ ಕವಿತೆ ಮೂಲಕ್ಕಿಂತ ಬೇರೆಯೆ ಆದ ಅರ್ಥಾಂತರವನ್ನು ಪಡೆದುಕೊಂಡ ಕ್ರಮ ನನ್ನದೇ. ಈ ಕವಿತೆ ಈ ಮೊದಲು ನನ್ನ ಹೈಸ್ಕೂಲಿನ ದಿನಗಳಲ್ಲಿ ನಾನು ಬರೆದ ಕೆಲವು ಹರಕು–ಮುರುಕು ಕವನಗಳಿಗೆ ಹೋಲಿಸಿದರೆ ಅವಕ್ಕಿಂತ ಚೆನ್ನಾಗಿಯೇ ಇದೆ ಎಂದು ತೋರಿತು. ಮರುದಿನ ಕಾಲೇಜಿನಲ್ಲಿ ನನ್ನ ಪ್ರೀತಿಯ ಕನ್ನಡ ಅಧ್ಯಾಪಕರಾದ ಶ್ರೀ ಜೆ.ಪಿ.ರಾಜರತ್ನಂ ಅವರಿಗೆ ಈ ಕವಿತೆಯನ್ನು ತೋರಿಸಿದೆ. ಅದನ್ನೋದಿ ಅವರು 'ಪರವಾಗಿಲ್ಲ ಕಣಯ್ಯ, ಚೆನ್ನಾಗಿಯೆ ಇದೆಯಲ್ಲ ಪದ್ಯ' ಎಂದರು. 'ಇನ್ನೇನೇನು ಬರೆದಿದ್ದೀಯ ತಂದು ತೋರಿಸು' ಎಂದರು. 'ಈ ಪದ್ಯವನ್ನು ಎಲ್ಲಾದರೂ ಪ್ರಕಟಿಸೋಣ, ಕಾಪಿ ಮಾಡಿ ತಂದು ಕೊಡು'– ಎಂದರು. ಅವರ ಮೆಚ್ಚುಗೆಯ ಮಾತಿನಿಂದ ನನಗೆ ತುಂಬ ಖುಷಿಯಾಯಿತು. 'ಸಾಹಿತ್ಯ ನಿಧಿ' ಎಂದು ಹೆಸರು ಕೊಟ್ಟು, ಈ ಪದ್ಯವನ್ನು ಕಾಪಿ ಮಾಡಿ ಅವರ ಕೈಗೆ ಕೊಟ್ಟೆ. ಕೆಲವೇ ತಿಂಗಳಲ್ಲಿ ಅದು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬೆಂಗಳೂರಿಂದ ಸಂಪಾದಿಸಿ ಪ್ರಕಟಿಸುತ್ತಿದ್ದ 'ಜೀವನ' ಮಾಸ ಪತ್ರಿಕೆಯಲ್ಲಿ ಅಚ್ಚಾಗಿ, ಅದರದೊಂದು ಗೌರವ ಪ್ರತಿ ನನ್ನ ಕೈಸೇರಿತು. ಮೊಟ್ಟ ಮೊದಲಬಾರಿಗೆ ಪ್ರಕಟವಾದ ಈ ನನ್ನ ಕವಿತೆಯನ್ನು ಕಂಡು ನನಗಾದ ಹಿಗ್ಗನ್ನು ವರ್ಣಿಸಲಾರೆ. ರೀಡಿಂಗ್ ರೂಂನಲ್ಲಿದ್ದ ಆ ಪತ್ರಿಕೆಯೊಳಗಿನ ನನ್ನ ಪದ್ಯವನ್ನೋದಿ ನನ್ನ ಸಹಪಾಠಿಗಳನೇಕರು ಆಶ್ಚರ್ಯಪಟ್ಟರು. 'ಅದು ಹೇಗಯ್ಯ ಬರೆದೆ?' ಎಂದರು. ನನಗೆ ಗೊತ್ತಿಲ್ಲ' ಎಂದೆ. 'ನಾನೇಕೆ ಬರೆಯುತ್ತೇನೆ'–ಎನ್ನುವುದಕ್ಕೆ ಬಹುಶಃ ಇದೇ ಸರಿಯಾದ ಉತ್ತರವಿರಬಹುದೇನೋ ಆದರೆ ಇದು ತೃಪ್ತಿಕರವಾದ ಉತ್ತರವಲ್ಲವೆಂದು ನನಗೆ ಗೊತ್ತು. ಆದರೂ ಒಂದು ಕವಿತೆಯ ಹುಟ್ಟಿನ ಹಿಂದೆ ಅನೇಕ ಕಾರಣಗಳೂ, ಪ್ರೇರಣೆಗಳೂ, ಪ್ರಭಾವಗಳೂ ಇರುತ್ತವೆ ಎಂಬುದಂತೂ ನಿಜ. ನಿದರ್ಶನಕ್ಕೆ ಹೇಳುವುದಾದರೆ ಈಗ ಪ್ರಸ್ತಾಪಿಸಿದ 'ಸಾಹಿತ್ಯನಿಧಿ' ಎಂಬ ಈ ನನ್ನ ಕವಿತೆ ನೇರವಾಗಿ ನನ್ನ ಅನುಭವದಿಂದ ಹುಟ್ಟಿದ್ದಲ್ಲ. ಅದರೊಳಗಿನ ಅನುಭವ ದ್ರವ್ಯ ಥಾಮಸ್ ಗ್ರೇ ಕವಿಯದು. ಅಲ್ಲದೆ ಅದು ಅನ್ಯಭಾಷಾ ಪರಂಪರೆಯೊಳಗಿನದು. ಆದರೆ ನಾನು ಬರೆದ ಕವಿತೆಗೆ ಇಂಗ್ಲಿಷ್ ಕವಿತೆಯ ಆ ಸೊಗಸೇ ಮುಖ್ಯವಾದ ಪ್ರೇರಣೆಯಾಯಿತು. ಈ ಪ್ರೇರಣೆಯಿಂದ ನಾನು ಬರೆದ ಕವಿತೆ ಅದರ ಅನುಕರಣದಂತೆ ತೋರಿದರೂ, ಅದು ನನ್ನಲ್ಲಿ ಹಾಗೂ ನನ್ನ ಭಾಷೆಯ ಸಂದರ್ಭದಲ್ಲಿ ಪಡೆದುಕೊಂಡ

ಅರ್ಥಾಂತರ ನನ್ನದೇ. ಅಂದರೆ ಒಂದು ಭಾಷೆ ಹಾಗೂ ಸಾಹಿತ್ಯದ ರುಚಿ ಹಾಗೂ ಪರಿಚಯದ ಪೂರ್ವಸಿದ್ಧತೆಯಿದ್ದ ನನ್ನಲ್ಲಿ, ಬೇರೊಂದು ಭಾಷಾ ಸಾಹಿತ್ಯದೊಳಗಿನ ಕವಿತೆಯ ಪ್ರೇರಣೆ, ನಾನೂ ಒಂದು ಕವಿತೆಯನ್ನು ಬರೆಯುವಂತೆ ಮಾಡಿತು. ಅಷ್ಟೆ ಅಲ್ಲ ನಾನೂ ಒಬ್ಬ ಕವಿ ಎನ್ನುವುದನ್ನು ನನಗೆ ತೋರಿಸಿಕೊಟ್ಟತು. ಆ ಕವಿತೆಗೆ ದೊರೆತ ಮೆಚ್ಚಿಗೆ, ಪ್ರೋತ್ಸಾಹ, ಅದು ಪ್ರಕಟವಾಗುವುದರ ಮೂಲಕ ಹಲವರ ಕಣ್ಣಿಗೆ ಬಿದ್ದು ಅದರಿಂದ ಬಂದ ಪ್ರಶಂಸೆ-ಇತ್ಯಾದಿಗಳೆಲ್ಲ ಹದಿನಾರರ ಹರೆಯದ ನನಗೆ ಅಂದು ದೊರೆತ ಕಾರಣದಿಂದ ಈ ಕವಿತೆಯ ಹಾದಿಯಲ್ಲಿ ನಾನು ಇಷ್ಟುದೂರ ಮುಂದುವರಿಯಲು ಸಾಧ್ಯವಾಗಿದೆ ಎಂದು ನನ್ನ ತಿಳಿವಳಿಕೆ. ಈ ಕೆಲವು ಮಾತುಗಳ ಮೂಲಕ 'ನಾನೇಕೆ ಬರೆಯುತ್ತೇನೆ' ಎನ್ನುವುದಕ್ಕೆ ಕೆಲವು ತರ್ಕಬದ್ಧವಾದ ಕಾರಣಗಳನ್ನು ಕಂಡು ಕೊಂಡಂತಾಯಿತು.

ಈಗ ಪ್ರಸ್ತಾಪಿಸಿದ್ದು ನಲವತ್ತರ ದಶಕದ ನನ್ನ ಕವಿತೆಯ ಮೊದಲ ದಿನಗಳ ಸಂಗತಿಗಳನ್ನು. ಐವತ್ತರ ದಶಕದ ಒಂದು ಸಂದರ್ಭ. ಬಹುಶಃ ೧೯೫೨ರ ಕಾಲ ಎಂದು ತೋರುತ್ತದೆ. ನಾನು ಮಹಾರಾಜಾ ಕಾಲೇಜಿನ ಅಧ್ಯಾಪಕ. ಆ ವೇಳೆಗೆ ನನ್ನ ಮೊದಲ ಕವನ ಸಂಗ್ರಹ 'ಸಾಮಗಾನ' ಪ್ರಕಟವಾಗಿತ್ತು. ಮೈಸೂರಿನ ಕೃಷ್ಣಮೂರ್ತಿಪುರದ ಬಾಡಿಗೆ ಮನೆಯ ವಿಸ್ತಾರವಾದ ಹಿತ್ತಲಿನಲ್ಲಿ ಒಂದು ಏಳುಸುತ್ತಿನ ಮಲ್ಲಿಗೆ ಹೂವಿನ ಗಿಡವಿತ್ತು. ಅದರಲ್ಲಿ ಒಂದು ಬೆಳಿಗ್ಗೆ ದುಂಡಗೆ, ದಪ್ಪಗೆ, ಬೆಳ್ಳಗೆ ದಳತೆರೆದು ಅರಳಿದ ಒಂದೇ ಒಂದು ಹೂವು ಕಾಣಿಸಿಕೊಂಡಿತು. ಆ ಹೂವಿನ ಸೊಗಸು ನನ್ನ ಮನಸ್ಸಿನಲ್ಲಿ ತಂಗಿತು. ನಾನು-ಹೋದಲ್ಲಿ, ಬಂದಲ್ಲಿ ಆ ಹೂವಿನ ಸೊಗಸು ಹಾಗೂ ಕಂಪು ನನ್ನ ನ್ನು ಕಾಡಿತು. ಕಡೆಗೊಂದು ದಿನ-

'ನೋಡೋ ಇದೊ ಇಲ್ಲರಳಿ ನಗುತಿದೆ
ಏಳುಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರಗಿಡದಿಂ-
ದೆಂತು ಮೂಡಿತೊ ಬೆಳ್ಳಗೆ!

-ಎಂದು ಪ್ರಾರಂಭವಾಗುವ ಕವಿತೆಯೊಂದು ಹುಟ್ಟಿಕೊಂಡಿತು. ಬರೆದಾದ ಮೇಲೆ ಏನೋ ಒಂದು ಬಗೆಯ ಬಿಡುಗಡೆಯ ನಲವು ಹಾಗೂ ವಿಸ್ಮಯ ನನ್ನ ಪಾಲಿಗೆ ಉಳಿಯಿತು. ಇದೇ ದಿನಗಳಲ್ಲಿ ನಾನು ಕಾಲೇಜನಿಂದ ಮನೆಗೆ ಬರುತ್ತಿದ್ದೆ. ನನ್ನ ಮುಂದೆ ನೀಳಜಡೆಯ ಹುಡುಗಿಯೊಬ್ಬಳು ಹೋಗುತ್ತಿದ್ದಳು. ಅವಳ ಬೆನ್ನ ಹಿಂದೆ ಅತ್ತ ಇತ್ತ ಹೊಯ್ದಾಡುವ ಉದ್ದನೆಯ ಹಾಗೂ ಕಪ್ಪಗಿನ ಜಡೆ ನನ್ನನ್ನು ಗಾಢವಾಗಿ ಆಕರ್ಷಿಸಿತು. ಆಕೆ ರಸ್ತೆಯ ಮುಂದಿನ ತಿರುವಿನಲ್ಲಿ ಹಾದು ಕಾಣೆಯಾದಳು. ನಾನು ಮನೆ ತಲುಪುವುದರ ಒಳಗೆ 'ಲಲನೆಯರ ಬೆನ್ನಿನೆಡೆ, ಹಾವಿನೊಲು ಹೋಲ್ವ ಜಡೆ' ಎಂಬ ಎರಡು ಸಾಲುಗಳು ಮನಸ್ಸಿನಲ್ಲಿ ರೂಪುಗೊಂಡವು. ಮನೆ ತಲುಪಿ, ಕಾಫಿ ಕುಡಿದು, ನನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಬರೆಯಲು ಶುರುಮಾಡಿದೆ. 'ಜಡೆ' ಎಂಬ ಹೆಸರಿನಿಂದ ಈಗ ಎಲ್ಲರಿಗೂ ಗೊತ್ತಿರುವ ಇಡೀ ಕವಿತೆ ಲಿಖಿತ ರೂಪವನ್ನು ತಾಳಿತು. ಕವಿತೆಯ ಮೊದಲ ಸಾಲುಗಳೇ, ಇಡೀ ಕವಿತೆಯ ರೂಪವನ್ನು ನಿರ್ಧರಿಸುತ್ತವೆ ಎಂಬ ರಹಸ್ಯವೂ ಮತ್ತು ಕವಿತೆಯೊಂದು ತತ್‌ಕ್ಷಣದ ಪ್ರತಿಕ್ರಿಯೆಯೆಂಬಂತೆ ಮೇಲುನೋಟಕ್ಕೆ ತೋರಿದರೂ ಅದು ಆ ಕ್ಷಣದ್ದು ಮಾತ್ರವಲ್ಲ,

ಎಂದೆಂದೋ ಪಟ್ಟ ಅನುಭವಗಳೆಲ್ಲ ಸ್ಮೃತಿ ರೂಪದಲ್ಲಿ ಒಂದು ಒತ್ತಡದಂತೆ ವರ್ತಿಸುತ್ತವೆ ಎಂಬ ಸಂಗತಿಯೂ ನನ್ನ ಗಮನಕ್ಕೆ ಬಂದಂತಾಯಿತು. ಮತ್ತೊಂದು ದಿನ ಒಂದು ಕಾಲಕ್ಕೆ ಚೆಲುವೆಯಾಗಿದ್ದು, ತಾರುಣ್ಯವನ್ನು ದಾಟಿದ ಹೆಣ್ಣೊಬ್ಬಳು, ತಾನು ತನ್ನ ವಯಸ್ಸಿಗಿಂತ ಚಿಕ್ಕವಳಾಗಿ ಕಾಣಬೇಕೆಂದು ಮಾಡಿಕೊಂಡ ಅತಿಯಾದ ಪ್ರಸಾಧನಗಳನ್ನು ಕಂಡು, ನನಗೆ ಈ ಮನುಷ್ಯನಿಗೆ ಕಾಲವನ್ನು ಕುರಿತು ಭಯ ಹಾಗೂ ಕಾಲದ ಉಪಹತಿಯಿಂದ ಆತ ತಪಿಸಿಕೊಳ್ಳಲು ನಡೆಸುವ ವ್ಯರ್ಥಪ್ರಯತ್ನಗಳ ಹಿಂದಿರುವ ವಿಷಾದ–ಒಂದು ಚಿಂತನೆಯಾಗಿ ಮನಸ್ಸನ್ನು ತುಂಬಿಕೊಂಡಿತು. ಈ ಕುರಿತ ನಾನು ಬರೆದ 'ಭಗ್ನ ಚೆಲುವೆ' ಎಂಬ ಕವಿತೆಯ ಮುಕ್ತಾಯದ ಪಂಕ್ತಿಗಳು ಹೀಗೆವೆ–

ಓ ಭಗ್ನ ಚೆಲುವೆ
ನಿನ್ನನ್ನು ಕಂಡು ಮರುಗಿ ನಿಲುವೆ
ಯುಗ ಯುಗದ ಸಂಸ್ಕೃತಿಯ ನಾಗರಿಕತೆಯ
ಪುನರುಜ್ಜೀವನದ ವ್ಯಥೆಯ ಕಥೆಯನು ನೆನೆದು
ನಿಡುಸುಯ್ಯುವೆ.

ಈ ಕವಿತೆಯ ಮೂಲಕ ಪ್ರಾರಂಭವಾದ 'ಕಾಲ ಮತ್ತು ಮನುಷ್ಯ' ಇವರ ಸಂಬಂಧವನ್ನು ಕುರಿತ ಚಿಂತನೆ, ಮುಂದೆ ನಾನು ಬರೆದ 'ಗಡಿಯಾರದಡಿಯಲ್ಲಿ', 'ಮುಬ್ಬಿನಿಂದ ಮುಬ್ಬಿಗೆ' ಎಂಬ ಕೆಲವು ಮುಖ್ಯ ಕವಿತೆಗಳಿಗೆ ಪ್ರೇರಣೆಯಾಯಿತು. ಈ ಕಾಲದ ಕನ್ನಡ ಕಾವ್ಯ ಸಂದರ್ಭದಲ್ಲಿ 'ಕಾಲ ಮತ್ತು ಮನುಷ್ಯ' ಇನ್ನೂ ಹಲವು ಕವಿಗಳ ವಸ್ತುವಾಗಿ ನಿರ್ವಹಣೆಗೊಂಡಿದೆ ಎನ್ನುವುದನ್ನು ನಮ್ಮ ಓದುಗರು ಗಮನಕ್ಕೆ ತೆಗೆದುಕೊಳ್ಳಬಹುದು. ಅರವತ್ತರ ದಶಕದಲ್ಲಿ ನಾನು ಬರೆದ 'ಕನಸಿನಿಂದ ನನಸಿಗೆ' ಎಂಬ ಕವಿತೆಯೊಂದು ಕವಿಯಲ್ಲಿ ಕಾವ್ಯ ರೂಪುಗೊಳ್ಳುವ ವಿಸ್ಮಯವನ್ನು ಕುರಿತದ್ದು. ಇದನ್ನು ನಾನು ಬರೆವ ರೀತಿಯೆ ವಿಲಕ್ಷಣವಾಗಿದೆ. ೧೯೬೬ನೆಯ ಇಸವಿ ಮೇ ತಿಂಗಳ ರಾತ್ರಿ ನಾನು ಚಿತ್ರದುರ್ಗದಲ್ಲಿ ಬಂಧುಗಳೊಬ್ಬರ ಮನೆಯಲ್ಲಿ ಮಲಗಿದ್ದಾಗ ನಾನೊಂದು ಪದ್ಯವನ್ನು ಬರೆದಂತೆ ಕನಸು ಕಂಡೆ. ಆದರೆ ಬೆಳಿಗ್ಗೆ ಎದ್ದು ಆ ಕವಿತೆಯನ್ನು ಬರಹದಲ್ಲಿ ಹಿಡಿದಿಡಲು ಪ್ರಯತ್ನಿಸಿದಾಗ ಕನಸಿನಲ್ಲಿ ಸ್ಪಷ್ಟವಾಗಿ ಕಂಡ ಆ ಇಡೀ ಕವಿತೆ ತಪ್ಪಿಸಿಕೊಂಡು, ಆ ಕವಿತೆಯ ಮೊದಲ ಪಂಕ್ತಿಯೊಂದನ್ನು ಮಾತ್ರ ಬರೆದಿರಿಸಿಕೊಳ್ಳಲು ಸಾಧ್ಯವಾಯಿತು. 'ಚಂದ್ರ ಜೇಡ ಬಲೆ ನೇಯುತಿತ್ತು ಬೆಳುದಿಂಗಳ ನೂಲಿನಲಿ' ಎಂಬ ಆ ಒಂದು ಪಂಕ್ತಿಯನ್ನೇ ಸಣ್ಣ ಡೈರಿಯಲ್ಲಿ ಗುರುತು ಹಾಕಿಕೊಂಡೆ. ಮುಂದೆ ಎಷ್ಟೇ ಪ್ರಯತ್ನಪಟ್ಟರೂ ಈ ಪಂಕ್ತಿಯ ಜತೆಗೆ ಕನಸಿನಲ್ಲಿ ನಾನು ಕಂಡ ಉಳಿದ ಪಂಕ್ತಿಗಳು ನೆನಪಿಗೇ ಬರಲಿಲ್ಲ. ಕೆಲವು ವರ್ಷಗಳೇ ಉರುಳಿದವು. ೧೯೭೧ನೇ ಮೇ ತಿಂಗಳು ಒಂದು ದಿನ ನನ್ನ ಹಳೆಯ ಪುಸ್ತಕಗಳ ನಡುವೆ ಏನನ್ನೋ ಹುಡುಕುತ್ತಿದಾಗ ಐದು ವರ್ಷಗಳ ಹಿಂದಿನ ಡೈರಿ ಸಿಕ್ಕಿತು. ಅದನ್ನು ತೆಗೆದು ನೋಡಿದಾಗ 'ಚಂದ್ರ ಜೇಡ ಬಲೆ ನೇಯುತಿತ್ತು ಬೆಳದಿಂಗಳ ನೂಲಿನಲ್ಲಿ' ಎಂಬ ಪಂಕ್ತಿ ಕಣ್ಣಿಗೆ ಬಿದ್ದಿತು. ಐದು ವರ್ಷಗಳ ಹಿಂದೆ ಒಂದು ರಾತ್ರಿ ಈ ಪಂಕ್ತಿಯ ಸಮೇತ ಇಡೀ ಕವಿತೆಯೊಂದು ಕನಸಿನಲ್ಲಿ ಸ್ಫುರಿಸಿತ್ತೆಂಬುದನ್ನು ನೆನಪು ಮಾಡಿಕೊಳ್ಳುತ್ತ ಕೂತೆ. ಅದೇನು ಮೋಡಿಯೋ, ಹಠಾತ್ತನೆ. ಕೇವಲ ಒಂದರ್ಧ ಘಂಟೆಯೊಳಗಾಗಿ ಈ ಕವಿತೆಯ ಮೊದಲ ಪಂಕ್ತಿ ತನ್ನ ಇತರ ಚರಣಗಳನ್ನು ಬರಮಾಡಿಕೊಂಡು ಪೂರ್ಣರೂಪವನ್ನು ತಾಳಿತು.

ಇದುವರೆಗೆ ಪ್ರಸ್ತಾಪಿಸಿದ ಈ ಕೆಲವು ಸಂಗತಿಗಳನ್ನು ಗಮನಿಸಿದರೆ, ಕವಿತೆ ಎನ್ನುವುದು ಕೆಲವು ವೇಳೆ ಅನ್ಯಸಾಹಿತ್ಯಕ ಪ್ರೇರಣೆಯಿಂದ, ಕೆಲವು ವೇಳೆ ಲೋಕ ಘಟನೆಗಳಿಗೆ ತೋರುವ ತತ್‌ಕ್ಷಣದ ಪ್ರತಿಕ್ರಿಯೆಗಳಿಂದ, ಕೆಲವು ವೇಳೆ ಗಾಢವಾದ ಚಿಂತನೆಯಿಂದ, ಕೆಲವು ವೇಳೆ ಬಹುಕಾಲದ ಪರಿಭಾವನೆಯಿಂದ, ಕೆಲವು ವೇಳೆ ನಮ್ಮ ಎಚ್ಚರದಾಚೆಯ ನಿಗೂಢ ನೆಲೆಗಳಿಂದ ಹುಟ್ಟಿಕೊಳ್ಳುವ ಒಂದು ವಿಸ್ಮಯವಾಗಿದೆ. ಒಟ್ಟಿನಲ್ಲಿ ನಾನೇಕೆ ಬರೆಯುತ್ತೇನೆ ಎನ್ನುವುದನ್ನಾಗಲೀ, ನಾನು ಹೇಗೆ ಬರೆಯುತ್ತೇನೆ ಎನ್ನುವುದನ್ನಾಗಲೀ ಖಚಿತವಾಗಿ ಹೇಳಲು ಸಾಧ್ಯವೇ ಇಲ್ಲ. ಆದರೆ ಇಷ್ಟು ಮಾತ್ರ ನಿಜ. ಅದು ಹೇಗೊ ನನ್ನ ಅನುಭವಗಳನ್ನು, ಭಾವನೆಗಳನ್ನು, ಚಿಂತನೆಗಳನ್ನು ಕವಿತೆಯ ಮಾಧ್ಯಮದಲ್ಲಿ ಅಭಿವ್ಯಕ್ತಿಪಡಿಸುವ ಸಾಮರ್ಥ್ಯವೊಂದು ನನಗೆ ದತ್ತವಾಗಿದೆ. ಇದರ ಪರಿಣಾಮವಾಗಿ ನನ್ನದೇ ಆದ ಅನುಭವ ವಿಶೇಷವನ್ನು ನನ್ನ ಸುತ್ತಣ ಸಮಾಜದೊಂದಿಗೆ ನಾನು ಹಂಚಿಕೊಳ್ಳಲು ಸಾಧ್ಯವಾಗಿದೆ. ಹೀಗೆ ನನ್ನ ಅನುಭವದೊಂದಿಗೆ ಇತರರೂ ಪಾಲುಗೊಳ್ಳುವಂತಾಗುವುದು ನನಗೆ ಅತ್ಯಂತ ಪ್ರಿಯವಾದ ಸಂಗತಿಯಾಗಿದೆ. ಕಾವ್ಯ ಮೂಲತಃ ಒಂದು ಸಂವಾದ. ಮೊದಲು ಜಗತ್ತಿನೊಂದಿಗೆ; ಅನಂತರ ಸಹೃದಯರೊಂದಿಗೆ. 'ನಾನೇಕೆ ಬರೆಯುತ್ತೇನೆ' ಎನ್ನುವುದಕ್ಕೆ ನಾನು ನೀಡಿದ ಈ ವಿವರಣೆ ಬಹುಶಃ ಹೆಚ್ಚು ಸಮಂಜಸವಾಗಿದೆ ಎಂದು ತಿಳಿಯುತ್ತೇನೆ.

'ನಾನೇಕೆ ಬರೆಯುತ್ತೇನೆ' ಎಂಬುದನ್ನೆ ಕುರಿತ ಕವಿತೆಯೊಂದು ನನಗೆ ನಾನೇ ಹುಡುಕಿಕೊಂಡ ಉತ್ತರವಾಗಿದೆ. ಆ ಕವಿತೆ ಹೀಗಿದೆ:

ನಾನು ಬರೆಯುತ್ತೇನೆ
ಸುಮ್ಮನೆ ಇರಲಾರದ್ದಕ್ಕೆ
ನನ್ನ ವೇದನೆ ಸಂವೇದನೆಗಳನ್ನು
ಕ್ರಿಯೆ ಪ್ರತಿಕ್ರಿಯೆಗಳನ್ನು
ದಾಖಲು ಮಾಡುವುದಕ್ಕೆ
ನಿಂತ ನೀರಾಗದೆ ಮುಂದಕ್ಕೆ
ಹರಿಯುವುದಕ್ಕೆ
ಎಲ್ಲದರ ಜತೆ ಬೆರೆಯುವುದಕ್ಕೆ

ನಾನು ಬರೆಯುತ್ತೇನೆ
ನನ್ನನ್ನು ನಾನು ಕಂಡುಕೊಳ್ಳುವುದಕ್ಕೆ
ಮತ್ತೆ ಕಾಣಿಸುವುದಕ್ಕೆ
ನಿಮ್ಮೊಂದಿಗೆ ಸಂವಾದಿಸುವುದಕ್ಕೆ

ನಾನು ಬರೆಯುತ್ತೇನೆ
ಖುಷಿಗೆ, ನೋವಿಗೆ,
ರೊಚ್ಚಿಗೆ ಮತ್ತು ಹುಚ್ಚಿಗೆ
ಅಥವಾ ನಂದಿಸಲಾರದ ಕಿಚ್ಚಿಗೆ.

# "ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' "

●

ಜಿ.ಎಸ್.ಶಿವರುದ್ರಪ್ಪ

'ಮಹಾಕಾವ್ಯಗಳ ಕಾಲ ಎಂದೋ ಮುಗಿದು ಹೋಗಿದೆ; ಈ ಹೊತ್ತಿಗೆ ಅವು ಪ್ರಸ್ತುತವಲ್ಲ' ಎಂದು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಈ ಶತಮಾನದ ಪ್ರಾರಂಭದಲ್ಲಿ ಘೋಷಿಸಿದರೂ, ರವೀಂದ್ರನಾಥ ಟ್ಯಾಗೋರರಂಥ ಭಾರತೀಯ ಮಹಾಲೇಖಕರೂ 'ಇದು ಮಹಾಕಾವ್ಯಗಳ ಕಾಲವಲ್ಲ; ಇದೇನಿದ್ದರೂ ಬಿಡಿ ಬಿಡಿಯಾದ ಭಾವಗೀತಗಳ ಅಭಿವ್ಯಕ್ತಿಗೆ ಹೇಳಿ ಮಾಡಿಸಿದ ಕಾಲ'-ಎಂದು ಅಭಿಪ್ರಾಯಪಟ್ಟರೂ, ಭಾರತೀಯ ನವೋದಯ ಸಂದರ್ಭದಿಂದ ಹಿಡಿದು ಈ ಹೊತ್ತಿನವರೆಗೂ ಭಾರತೀಯ ಭಾಷಾ-ಸಾಹಿತ್ಯಗಳಲ್ಲಿ ಮಹಾಕಾವ್ಯಗಳ ಪರಂಪರೆ ಮುಂದುವರಿಯುತ್ತಲೇ ಇದೆ ಎನ್ನುವುದು ಸ್ವಾರಸ್ಯದ ಸಂಗತಿಯಾಗಿದೆ. ಕನ್ನಡ ಕಾವ್ಯ ಸಂದರ್ಭದಲ್ಲಂತೂ ಈ ವರೆಗಿನ ವಿವಿಧ ಸಾಹಿತ್ಯ ಚಳುವಳಿಗಳ ನಡುವೆಯೂ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ', ಶ್ರೀನಿವಾಸರ 'ಶ್ರೀರಾಮ ಪಟ್ಟಾಭಿಷೇಕ', ಭೂಸನೂರಮಠ ಅವರ 'ಭವ್ಯಮಾನವ',. ವಿನಾಯಕರ 'ಭಾರತ ಸಿಂಧು ರಶ್ಮಿ' ಮತ್ತು ಪು.ತಿ.ನ ಅವರ 'ಶ್ರೀಹರಿ ಚರಿತೆ' ಈ ಐದು ಗಣನಾರ್ಹವಾದ ಮಹಾಕಾವ್ಯಗಳು ಬಂದಿರುವುದನ್ನು ನೋಡಿದರೆ 'ಮಹಾಕಾವ್ಯಗಳ ಕಾಲ ಮುಗಿದು ಹೋಯಿತು;ಇವೊತ್ತಿಗೆ ಅವು ಪ್ರಸ್ತುತವಲ್ಲ' ಎಂಬ ಪಾಶ್ಚಾತ್ಯ ವಿಮರ್ಶನೋಕ್ತಿ ಎಷ್ಟೊಂದು ಹುಸಿಯಾಗಿದೆ ಎಂಬುದು ಮಾತ್ರವಲ್ಲ, ಕನ್ನಡದ ಸೃಜನಶೀಲತೆ ಈಗ ಉಲ್ಲೇಖಿಸಿದ ಮಹಾಕಾವ್ಯಗಳ ಮೂಲಕ ಮಹಾಕಾವ್ಯ ಪರಂಪರೆಯನ್ನು ಮುಂದುವರಿಸುತ್ತ ತನ್ನ ಮಹತ್ವಾಕಾಂಕ್ಷೆಯನ್ನು ಇಂದಿಗೂ ಉಳಿಸಿಕೊಂಡಿದೆ ಎಂಬುದನ್ನು ಯಾರಾದರೂ ಗುರುತಿಸಬಹುದು.

ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ', ಆಧುನಿಕ ಕನ್ನಡದ ಮೊದಲ ಮಹಾಕಾವ್ಯ ಮಾತ್ರವಲ್ಲ ಮೊದಲ ದರ್ಜೆಯ ಮಹಾಕಾವ್ಯವೂ ಆಗಿದೆ. ಕನ್ನಡಕ್ಕೆ ಮೊದಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ, ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಈ ಕಾವ್ಯ, ಕುವೆಂಪು ಅವರ ಸಮಸ್ತ ಕಾವ್ಯ ನಿರ್ಮಿತಿಯ ಶಿಖರವೆಂದು ಹೇಳಬಹುದು. ಒಂಬತ್ತು ವರ್ಷಗಳ ಸುದೀರ್ಘ ಸಾಹಿತ್ಯಕ ಸಾಧನೆಯಿಂದ ಮೈದೋರಿದ ಕಾವ್ಯಗೊಮ್ಮಟ

ಶಿಲ್ಪ ಇದು. ಈ ಮಹಾಕಾವ್ಯವನ್ನು ಬರೆಯುವ ವೇಳೆಗೆ ಸಾಹಿತ್ಯದ ವಿವಿಧ ಪ್ರಕಾರಗಳ ಪ್ರಯೋಗದಲ್ಲಿ ಒಂದು ನಿಶ್ಚಿತವಾದ ಎತ್ತರದ ಕೃತಿಗಳನ್ನು ನಿರ್ಮಿಸಿದ ಅವರ ಕಾವ್ಯ ಪ್ರತಿಭೆ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ನಿರ್ಮಿತಿಯ ಮೂಲಕ ಪ್ರವೇಶಿಸಿದ ಹಾಗೂ ಗ್ರಹಿಸಿ ನಿರೂಪಿಸಿದ ಅನುಭವ ಪ್ರಪಂಚವೇ ಬೇರೆಯದು. ಈ ಕುರಿತು ಅವರೇ ಹೇಳಿ ಕೊಂಡಿದ್ದಾರೆ–

ನೀಡದೊಳ್ ಬಳೆದು ಕಾಡಿನಲಿ ಹಾರಾಡಿದಾಗರುಡ ಶಿಶು
ಗರಿಬಲಿತ ಮೇಲಲ್ತ ದೇಶಂಗಳಂ ಚರಿಸಿ ತಣಿವುದೆ?
ವಿಯದ್ ವಿಸ್ತೀರ್ಣಮಂ ಬಯಸಿ ಕೈಗೊಳ್ವುದಾಕಾಶ
ಪರ್ಯಟನಮಂ. ಕಿರುಮೀನ್ಗೆ ಕೆರೆ ಕೊಳಂ
ಪೊಳ ಸಾಲ್ಗುಂ. ಆ ತಿಮಿಗೆ ವೇಳ್ಕುಂ ಜಲಕ್ರಿಡೆಗಾ
ರುಂದ್ರ ಸಾಗರ ಸಲಿಲ ವಿಸ್ತಾರ.

ಎಂದು ಇಲ್ಲಿರುವುದು ಗರಿಬಲಿತ ಗರುಡನ ವಿಯದ್ ವಿಸ್ತೀರ್ಣಪರ್ಯಟನ; ಮಹಾತಿಮಿಂಗಿಲದ ರುಂದ್ರಸಾಗರ ವಿಸ್ತಾರದೊಳಗಿನ ಜಲಕ್ರೀಡೆ.

ಈ ಮಾತುಗಳು ನಮ್ಮ ಕನ್ನಡ ಕಾವ್ಯ ಪರಂಪರೆಯೊಳಗೆ ಉದ್ದಕ್ಕೂ ಕಂಡು ಬರುವ ಸ್ವಪ್ರಶಂಸೆಯ ಹಾಗೂ ಅಗ್ಗಳಿಕೆಯ ಮಾತುಗಳ ಮುಂದುವರಿಕೆಯಷ್ಟೆ ಎಂದು ತಿಳಿಯಬಾರದು. ರಾಮಾಯಣದಂಥ ಮಹಾವಸ್ತುವನ್ನು ತಮ್ಮ ವ್ಯಕ್ತಿಪ್ರತಿಭೆಯ ಮೂಲಕ ಈ ಯುಗದ ವ್ಯಾಖ್ಯಾನವನ್ನಾಗಿ ಪ್ರತಿಮಾ ವಿಧಾನದಲ್ಲಿ ಕಡೆದು ನಿಲ್ಲಿಸಿದ ಕುವೆಂಪು ಅವರು, ಈ ಕೃತಿಯನ್ನು ಕೇವಲ ಕನ್ನಡದ ಹಾಗೂ ಭಾರತೀಯ ಪರಂಪರೆಯ ಪ್ರಜ್ಞೆಯಿಂದ ಮಾತ್ರ ಬರೆದಿಲ್ಲ; ಅದನ್ನು ಇಡೀ ಜಾಗತಿಕ ಮಹಾಕಾವ್ಯ ಪರಂಪರೆಯನ್ನು ಅರಗಿಸಿಕೊಂಡ ಪ್ರಜ್ಞೆಯಲ್ಲಿ ಇದನ್ನು ಬರೆದಿದ್ದಾರೆ. ಅವರು ಜಾಗತಿಕ ಮಹಾಕಾವ್ಯ ಪರಂಪರೆಯನ್ನು ಸ್ವೀಕರಿಸಿದ ಹಾಗೂ ಮೈಗೂಡಿಸಿಕೊಂಡ ಕ್ರಮವನ್ನು ತುಂಬ ವಿನಯದಿಂದ ಹೀಗೆ ಪ್ರಸ್ತಾಪಿಸುತ್ತಾರೆ:

ಹೋಮರಗೆ ವರ್ಜಿಲಗೆ ಡಾಂಟೆಮೇಣ್ ಮಿಲ್ಟನಗೆ
ನಾರಣಪ್ಪಂಗೆ ಮೇಣ್ ಪಂಪನಿಗೆ, ಋಷಿವ್ಯಾಸ
ಭಾಸ ಭವಭೂತಿ ಮೇಣ್ ಕಾಳಿದಾಸಾದ್ಯರಿಗೆ,
ನರಹರಿ ತುಲಸಿದಾಸ ಮೇಣ್ ಕೃತ್ತಿವಾಸಾದಿ
ನನ್ನಯ್ಯ ಫಿರ್ದೂಸಿ ಕಂದಾರವಿಂದರಿಗೆ
ಹಳಬರಿಗೆ ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ
ಕಾಲದೇಶದ ನುಡಿಯ ಜಾತಿಯ ವಿಭೇದಮಂ
ಲೆಕ್ಕಿಸದೆ ಜಗತೀ ಕಲಾಚಾರ್ಯರೆಲ್ಲರ್ಗೆ
ಜ್ಯೋತಿಯಿರ್ಪೆಡೆಯಲ್ಲಿ ಭಗವದ್ ವಿಭೂತಿಯಂ
ದರ್ಶಿಸುತೆ ಮುಡಿದಾಗಿ ಮಣಿದು ಕೈಮೋಡಿಸುವೆನಾಂ.

ಎಂಬ ಈ ವಿನಯೋದ್ಘೋಷದಲ್ಲಿ 'ರಾಮಾಯಣ ದರ್ಶನಂ' ಮಹಾಕಾವ್ಯ ಯಾವ ಪರಂಪರೆಯ ಹಿನ್ನೆಲೆಯಲ್ಲಿ ನಿರ್ಮಿತಿಗೊಂಡಿದೆ ಎಂಬುದನ್ನು ಕವಿ ಸೂಚಿಸಿದ್ದಾರೆ.

ಕನ್ನಡದ ಪ್ರತಿಭೆಯ ಒಂದು ವಿಶೇಷವೆಂದರೆ ಅದು ಮಹತ್ ಪರಂಪರೆಯ ವಸ್ತುಗಳನ್ನೆ ತನ್ನ ಕಾವ್ಯನಿರ್ಮಿತಿಗೆ ಬಳಸಿಕೊಂಡರೂ ಎಂದೂ ಅವುಗಳನ್ನು ಯಥಾವತ್ತಾಗಿ ಅನುಸರಿಸುವ ಗೊಡವೆಗೆ ಹೋಗದೆ, ಅವುಗಳನ್ನು ತಮ್ಮ ತಮ್ಮ ಕಾಲ–ದೇಶಾನುಸಾರಿಯಾದ ಯುಗ ಧರ್ಮದ ವ್ಯಾಖ್ಯಾನ ಕೃತಿಗಳನ್ನಾಗಿ ಮಾಡುತ್ತ ಒಂದು ಬಗೆಯ ಪುನರ್ ಸೃಷ್ಟಿಗಳನ್ನು ನಿರ್ಮಿಸಿದೆ ಎನ್ನುವುದು. ಮೂಲ ವ್ಯಾಸಭಾರತದ ವಸ್ತುವನ್ನು ಪಂಪರನ್ನರು ನಿರ್ವಹಿಸಿದ್ದು ಹೀಗೆ; ಕುಮಾರವ್ಯಾಸ ನಿರ್ವಹಿಸಿದ್ದು ಹೀಗೆ. ವಾಲ್ಮೀಕಿ ರಾಮಾಯಣದ ಕತೆಯನ್ನು ನಾಗಚಂದ್ರ ಮತ್ತು ಕುವೆಂಪು ನಿರ್ವಹಿಸಿದ್ದು ಹೀಗೆ. ಈ ದೃಷ್ಟಿಯಿಂದ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮೂಲ ರಾಮಾಯಣವು ಇಪ್ಪತ್ತನೆಯ ಶತಮಾನದ ಸಂವೇದನೆಯೊಳಗೆ ಸಂಭವಿಸಿದ ಒಂದು ಪುನರ್ಭವ ಕೃತಿಯಾಗಿದೆ. ಈ ಕುರಿತು ಕುವೆಂಪು ಅವರೇ–

> ವಾಲ್ಮೀಕಿಯುಲಿದ ಕತೆಯಾದೊಡಂ ಕನ್ನಡದಿ
> ಬೇರೆ ಕತೆಯೆಂಬಂತೆ, ಬೇರೆಮೆಯ್ಯಾಂತಂತೆ
> ಮರುವುಟ್ಟುವಡೆದಂತೆ ಮೂಡಿದೀ ಕಾವ್ಯಮಂ
> ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್

ಎಂದು ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲ ಇದು ಅವರ ಪಾಲಿಗೆ–

> 'ಇತಿಹಾಸಮಲ್ತು, ಬರಿಕತೆಯಲ್ತು
> ಕತೆ ತಾಂ ನಿಮಿತ್ತ ಮಾತ್ರಂ ಆತ್ಮಕೆ ಶರೀರದೋ–
> ಲಂತೆ'

ರಾಮಾಯಣದ ಕಥಾವಸ್ತು ಪರಂಪರಾಗತವಾಗಿ ಬಂದದ್ದಾದರೂ, ಅವರಿಗೆ ಅದರ 'ಕೇವಲ ಕತೆ'ಯಾಗಲಿ, ಆ ಕಥೆಗೆ ಹಿನ್ನೆಲೆಯಾದ ಇತಿಹಾಸವಾಗಲಿ ಮುಖ್ಯವಲ್ಲ. ಅದನ್ನು ಕನ್ನಡದಲ್ಲಿ 'ಬೇರೆ ಕತೆಯೆಂಬಂತೆ' 'ಬೇರೆ ಮೈಯಾಂತಂತೆ' 'ಮರುವುಟ್ಟುವಡೆದಂತೆ' ನಿರ್ವಹಿಸುವುದರಲ್ಲಿಯೆ ಆಸಕ್ತಿ. ಆದುದರಿಂದಲೇ ವಸ್ತು ಸಂವಿಧಾನ, ಭಾಷಾಪ್ರಯೋಗ, ವೈಚಾರಿಕತೆ ಹಾಗೂ ದರ್ಶನದ ದೃಷ್ಟಿಯಿಂದ ಇದು ಕನ್ನಡ ಮಹಾಕಾವ್ಯ ಪರಂಪರೆಯೊಳಗೇ ಒಂದು ಅನನ್ಯವಾದ ಕೃತಿಯಾಗಿದೆ.

ಕುವೆಂಪು ಅವರ ಪ್ರತಿಭೆಯ ಮುಖ್ಯ ಲಕ್ಷಣಗಳೆಂದರೆ ಅದಮ್ಯವಾದ ಹಾಗೂ ಗಾಢವಾದ ಪ್ರಕೃತಿ ಪ್ರೇಮ; ವೈಚಾರಿಕತೆ ಮತ್ತು ಅಧ್ಯಾತ್ಮ. ಶ್ರೀ ರಾಮಾಯಣ ದರ್ಶನಂ ದಲ್ಲಿ ಈ ಮೂರು ಮುಪ್ಪುರಿಗೊಂಡಿವೆ. ಮೂಲತಃ ಕಾಡಿನ ಕವಿಯಾದ ಕುವೆಂಪು ಅವರ ರಮ್ಯಾದ್ಭುತ ಅರಣ್ಯಾನುಭವಗಳು ರಾಮಾಯಣ ದರ್ಶನಂ ಕಾವ್ಯದ ತುಂಬ ಕಿಕ್ಕಿರಿದಿವೆ. ಶ್ರೀರಾಮನ ಬದುಕಿನ ಬಹುಭಾಗ ವನವಾಸದಲ್ಲಿ ಕಳೆದ ಕಾರಣದಿಂದ ಕುವೆಂಪು ಅವರಿಗೆ ತಮ್ಮ ಮಲೆ ನಾಡಿನ ಕಾಡಿನ ದಟ್ಟವಾದ ಅನುಭವಗಳನ್ನು ಅತ್ಯಂತ ವೈವಿಧ್ಯಮಯವಾಗಿ ಅಭಿವ್ಯಕ್ತಿಸಲು ಈ ಕಥಾವಸ್ತು ಸಮೃದ್ಧವಾದ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಹೀಗಾಗಿ ಇಲ್ಲಿನ ಶ್ರೀರಾಮನೂ ಗಿರಿವನ ಪ್ರಿಯ ರಾಮನಾಗಿದ್ದಾನೆ. ಅವನಿಗೆ 'ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ ಈ ವನ್ಯ ಸಂಸ್ಕೃತಿಯ ಮುಂದೆ' ಎಂದು ಅನ್ನಿಸುತ್ತದೆ. ಅಷ್ಟೇ ಅಲ್ಲ, ಈ ವನ್ಯ ಸಂಸ್ಕೃತಿಯ

ಚೈತನ್ಯಾನುಭವಗಳಿಂದಲೆ ಅವನ ವ್ಯಕ್ತಿತ್ವ ರಸ ಸಂಪುಷ್ಟವೂ, ತತ್ವದರ್ಶಿಯೂ ಆಗಿ ವಿಕಾಸಗೊಳ್ಳುತ್ತದೆ. ತನ್ನ ಬದುಕಿನ ಯಾವ ಹಾಗೂ ಎಂಥ ಸಂದರ್ಭದಲ್ಲಿಯೂ ಈ ಕಾವ್ಯದ ಶ್ರೀರಾಮ, ರಮ್ಯತೆಯಿಂದ ಮೊದಲ್ಗೊಂಡು ಭವ್ಯಾನುಭೂತಿ ಪ್ರಚೋದಕವಾದ ನಿಸರ್ಗ ಸೌಂದರ್ಯಾನುಭವಗಳಿಗೆ ವಿಮುಖನಾಗುವುದಿಲ್ಲ.

ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಯುಗದ ತಮ್ಮ ಆಧುನಿಕ ಶಿಕ್ಷಣ ಹಾಗೂ ವಿಪುಲವಾದ ಅಧ್ಯಯನದಿಂದ ಒದಗಿದ ವ್ಯುತ್ಪತ್ತಿಯ ಹಿನ್ನೆಲೆಯಿಂದ, ರಾಮಾಯಣದ ಕತೆಯನ್ನು ಈ ಕಾಲದ ಓದುಗರಿಗೆ ಪುನರ್ ವ್ಯಾಖ್ಯಾನಿಸುವಲ್ಲಿ ಕಂಡು ಬರುವ ವೈಚಾರಿಕತೆ ಈ ಮಹಾಕಾವ್ಯದ ಮತ್ತೊಂದು ವಿಶೇಷತೆಯಾಗಿದೆ. ರಾಮಾಯಣ ನರೋತ್ತಮನಾದ ಶ್ರೀರಾಮನ ಚರಿತೆಯಾದರೂ, ಆತ ಧರ್ಮಸಂಸ್ಥಾಪನೆಗಾಗಿ ಸಂಭವಿಸಿದ ಮಹಾವಿಷ್ಣುವಿನ ಒಂದು ಅವತಾರ ಎಂಬ ಕಲ್ಪನೆ ಜನಮನದಲ್ಲಿ ಬೆಳೆದು ಬಂದಿದೆ. ಕುವೆಂಪು ಅವರು ಶ್ರೀರಾಮನನ್ನು ಅಸಾಮಾನ್ಯನೆಂಬಂತೆ ಚಿತ್ರಿಸಿದರೂ, ಆತ ಒಬ್ಬ ಅವತಾರ ಪುರುಷನೆಂಬ ಕಲ್ಪನೆಯನ್ನು ವಿಮರ್ಶಿಸುತ್ತ

ಜನಮನಮೆ
ಯುಗ ಶಕ್ತಿಯಲ್ತೆ? ತಾನಾ ಶಕ್ತಿ ಮೂರ್ತಿಗೊಳೆ
ನಾಮದನ್ನವತಾರಮೆಂದು ಪೂಜಿಪೆವಲ್ತೆ ಪೇಳ್
ವ್ಯಷ್ಟಿ ರೂಪದಿನ್ ಇಳಿವ ಸೃಷ್ಟಿಯ ಸಮಷ್ಟಿಯಂ?

ಎಂದು 'ಅವತಾರ'ದ ಕಲ್ಪನೆಯನ್ನು ಮನಃಶಾಸ್ತ್ರೀಯವಾಗಿ ವ್ಯಾಖ್ಯಾನಿಸುತ್ತಾರೆ. ಒಂದೊಂದು ಕಾಲದ ಜನಸಮಷ್ಟಿಯ ಆಶೋತ್ತರಗಳೇ ಯುಗಶಕ್ತಿಯಾಗಿ, ಮಹಾವ್ಯಕ್ತಿಗಳ ಹುಟ್ಟಿಗೆ ಕಾರಣವಾಗುತ್ತದೆ. ಹೀಗೆ ಸಮಷ್ಟಿಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವ ಮಹಾವ್ಯಕ್ತಿಗಳನ್ನೇ ನಾವು 'ಅವತಾರ'ಎನ್ನುತ್ತೇವೆ. ಈ ಅರ್ಥದಲ್ಲಿ ಶ್ರೀರಾಮನು ತ್ರೇತಾಯುಗದ ಜನಮನಸ್ಸಿನ ಅಭೀಪ್ಸೆಯ ಪರಿಣಾಮವಾಗಿದ್ದಾನೆ–ಎಂದು ಕುವೆಂಪು ವ್ಯಾಖ್ಯಾನಿಸುವ ಕ್ರಮ ವಿಶಿಷ್ಟವಾಗಿದೆ. ಹಾಗೆಯೇ ಶ್ರೀರಾಮನ ಮಹತ್ತು ಇರುವುದು ಬಹುಮಂದಿ ಭಾವಿಸಿರುವಂತೆ ಆತ ಲೋಕಕಂಟಕನಾದ ರಾವಣನನ್ನು ವಧಿಸಿದ ಒಂದೇ ಕಾರಣದಲ್ಲಿ ಅಲ್ಲ ಎನ್ನುತ್ತಾರೆ ಕುವೆಂಪು. ಅವರು ಹೇಳುತ್ತಾರೆ–

..........ಕೊಂದ ಕತದಿಂ ಪೆರ್ಮನಾದನೆ
ರಾಮ?' —ಕೇವಲ ರಾವಣನನ್ನು ಕೊಂದನೆಂಬ ಕಾರಣದಿಂದ
ದೊಡ್ಡವನಾದನೆ ರಾಮ?—ಅಲ್ಲ.
ಆಮಾತನುಳಿ, ಪಗೆಯೆ? ತೆಗ ತೆಗೆ.
ಪೆರ್ಗ್ಗೊರ್ಲೆಯೆ ಚಿನ್ನೆ. ಮಹತ್ತಿಗೇಂ ದೊರೆಯೆ
ಕೊಲೆ? ದೈತ್ಯನ ಗೆಲಿದ ಕಾರಣಕಲ್ತು
ತನ್ನ ದಯಿತೆಯನೊಲಿದ ಕಾರಣಕೆ ಗುರುಕಣಾ
ರಾಮಚಂದ್ರಂ.

ಎನ್ನುತ್ತಾರೆ ಕುವೆಂಪು. ಮೂಲತಃ ರಾಮಾಯಣ ಅನನ್ಯವಾದ ಪ್ರೇಮದ ಕತೆ. ರಾಮನ

ಮಹತ್ತು ವ್ಯಕ್ತವಾಗುವುದು ಆತ ರಾವಣನ್ನು ಕೊಂದನೆಂಬ ಕಾರಣದಲ್ಲಿ ಇಲ್ಲ; ಅದು ಇರುವುದು ತನ್ನ ಸತಿಯಾದ ಸೀತೆಯ ಬಗ್ಗೆ ಇರಿಸಿಕೊಂಡ ಅದಮ್ಯವಾದ ಒಲವಿನಲ್ಲಿ. ಸೀತೆಯ ವಿಚಾರದಲ್ಲಿ ಮಾತ್ರವಲ್ಲ ಯಾರ ನಡವಳಿಕೆಯ ವಿಚಾರದಲ್ಲಿಯೂ ಶ್ರೀರಾಮ ಅಪ್ರಿಯವಾಗಿ ವರ್ತಿಸುವುದಿಲ್ಲ. ತಾನು ರಾಜ್ಯ ತ್ಯಾಗ ಮಾಡಿ ವನವಾಸಕ್ಕೆ ತೆರಳಲು ಕಾರಣಳಾದ ಮಂಥರೆಯಿಂದ ಹಿಡಿದು, ತನ್ನ ಮಡದಿಯನ್ನು ಕದ್ದೊಯ್ದ ರಾವಣನನ್ನೂ ಒಳಗೊಂಡಂತೆ ಎಲ್ಲರ ವಿಚಾರದಲ್ಲೂ ಕರುಣೆ-ಅನುಕಂಪಗಳನ್ನು ವರ್ಷಿಸುವಷ್ಟು ಉದಾರವಾಗಿದೆ ರಾಮನ ಹೃದಯ. ಪೆರ್ಮೆಗೆ ಅಥವಾ ದೊಡ್ಡತನಕ್ಕೆ ಒಲ್ಮೆಯೇ ಚಿನ್ಹೆ ಎಂಬುದನ್ನು ಆತ ತನ್ನ ನಡವಳಿಕೆಯಲ್ಲಿ ಆಚರಿಸಿ ತೋರಿಸುತ್ತಾನೆ.

ಕುವೆಂಪು ತಮ್ಮ ರಾಮಾಯಣದಲ್ಲಿ ಚಿತ್ರಿಸಿರುವ ಸೀತೆಯ ಅಗ್ನಿಪ್ರವೇಶದ ಸಂದರ್ಭ ಈ ಶತಮಾನದ ವೈಚಾರಿಕತೆಗೆ ಒಡ್ಡಿದ ಸಮರ್ಥವಾದ ಪ್ರತೀಕವಾಗಿದೆ. ಸೀತೆಯ ಅಗ್ನಿ ಪ್ರವೇಶದ ಸಂದರ್ಭ ಅತ್ಯಂತ ಸೂಕ್ಷ್ಮವೂ ವಿವಾದಗ್ರಸ್ತವೂ ಆಗಿದೆ. ರಾವಣನಿಂದ ಅಪಹೃತಳಾಗಿ ಅಶೋಕವನದಲ್ಲಿದ್ದ ಸೀತೆಯ ಶೀಲವನ್ನು ರಾವಣವಧೆಯ ನಂತರ ಶಂಕಿಸಿದ ಶ್ರೀರಾಮನ ನಡವಳಿಕೆ ಪ್ರಶ್ನಾರ್ಹವಾಗಿರುವುದು ಮಾತ್ರವಲ್ಲ, ಪುರುಷ ಪ್ರಧಾನ ಸಮಾಜದ, ಈ ದೇಶದ ಗಂಡು, ಹೆಣ್ಣನ್ನು ನಡೆಯಿಸಿಕೊಳ್ಳುವ ಅಮಾನವೀಯವಾದ ನಿಲುವಿಗೆ ಒಂದು ಸಾಕ್ಷಿಯಾಗಿದೆ. ಕುವೆಂಪು ಈ ಸಂದರ್ಭವನ್ನು ನಿರ್ವಹಿಸುವಲ್ಲಿ ಎಲ್ಲ ವಿವರಗಳನ್ನೂ ಮೂಲ ರಾಮಾಯಣದ ಕತೆಯೊಳಗಿದ್ದಂತೆಯೆ ಇರಿಸಿಕೊಂಡೂ, ಅತ್ಯಂತ ಮಹತ್ವದ ಬದಲಾವಣೆಯೊಂದನ್ನು ಮಾಡಿಕೊಳ್ಳುವುದರ ಮೂಲಕ ಇಡೀ ಸನ್ನಿವೇಶದ ಸತ್ವವನ್ನೇ-ಮಾರ್ಪಾಡು ಮಾಡಿದ್ದಾರೆ. ಅದೇನೆಂದರೆ ಸೀತೆ ಅಗ್ನಿ ಪ್ರವೇಶವನ್ನು ಮಾಡುತ್ತಿದ್ದ ಹಾಗೆಯೇ ಶ್ರೀರಾಮನು ತಾನೂ ಅಗ್ನಿಯನ್ನು ಅವಳ ಜತೆಗೇ ಪ್ರವೇಶಿಸಿ, ಸೀತೆಯೊಂದಿಗೆ ತನ್ನನ್ನೂ ಪರೀಕ್ಷೆಗೆ ಒಳಗುಪಡಿಸಿಕೊಂಡು, ಸೀತೆಯ ಜತೆಗೆ ಕೈಹಿಡಿದುಕೊಂಡು ಹೊರಕ್ಕೆ ಬರುತ್ತಾನೆ. ಎಂದರೆ ಪರೀಕ್ಷೆಗೆ ಒಳಗಾಗುವ ಸಂದರ್ಭ ಬಂದಾಗ ಹೆಣ್ಣಿನ ಹಾಗೆಯೇ ಗಂಡೂ ಆ ಪರೀಕ್ಷೆಗೆ ಒಳಗಾಗತಕ್ಕದ್ದು, ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಶ್ರೇಷ್ಠವಾದದ್ದು, ಗಂಡಾದವನು ಹೆಣ್ಣನ್ನು ಶಂಕಿಸಲು ಅಧಿಕಾರವಿರುವುದಾದರೆ, ಹೆಣ್ಣಿಗೂ ಗಂಡನ್ನು ಶಂಕಿಸಲು ಅಧಿಕಾರವಿರಬೇಕು. ಹಾಗಿದ್ದರೇ ಅದು ದಾಂಪತ್ಯ; ಅದು ಸಮಾನತೆ; ಅದು ನಿಜವಾದ ಪ್ರೇಮ. ಇಷ್ಟೂ ಸಂಗತಿಗಳನ್ನೂ ಸೀತೆಯ ಅಗ್ನಿಪ್ರವೇಶದ ಸಂದರ್ಭವನ್ನು ಕುವೆಂಪು ಅವರು ಚಿತ್ರಿಸಿರುವ ಕ್ರಮ ಒಳಗೊಳ್ಳುತ್ತದೆ.

ಕುವೆಂಪು ತಮ್ಮ ಈ ಮಹಾಕಾವ್ಯಕ್ಕೆ 'ಶ್ರೀ ರಾಮಾಯಣ ದರ್ಶನಂ' ಎಂದು ಕರೆದಿದ್ದಾರೆ. ಎಂದರೆ ರಾಮಾಯಣದ ಕತೆಯ ಮೂಲಕ ಕುವೆಂಪು ತಾವು ಕಂಡ 'ದರ್ಶನ'ವೊಂದನ್ನು ಚಿತ್ರಿಸಿದ್ದಾರೆ. ಅದೇನೆಂದರೆ ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಉದ್ಧಾರವಿದೆ. ಈ ಜಗತ್ತು ವ್ಯಕ್ತಿಯ ಆತ್ಮ ವಿಕಾಸ ಯಾತ್ರೆಯ ಒಂದು ಪಥ. ಈ ದೃಷ್ಟಿಯಿಂದ ಕುವೆಂಪು ರಾಮಾಯಣದ ಪ್ರತಿಯೊಂದು ಪಾತ್ರವೂ ತಮ್ಮ ಜನ್ಮೋದ್ದೇಶ ಸಾಧನೆಯ ಪಾರಿಣಾಮಕ ಪಥದೊಳಗಿನ ಸಾಧಕರೇ. ಅಹಲ್ಯೆ, ಮಂಥರೆ, ಶಬರಿ, ಕೈಕೆ, ಸಂಪಾತಿ, ರಾವಣ ಅಷ್ಟೆ ಅಲ್ಲ, ಸೀತೆ ಹಾಗೂ

ಶ್ರೀರಾಮ–ಈ ಎಲ್ಲರೂ ಸಾಧಕರೆ. ಶ್ರೀರಾಮನ ವನವಾಸ ಪ್ರಯಾಣವೇ ಅನೇಕ ಸಾಧಕರ ತಪಸ್ಸಿದ್ಧಿಗೆ ಕಾರಣವಾಗಿದೆ; ಹಾಗೆಯೆ ಶ್ರೀರಾಮನೇ ತನ್ನ ಸ್ವಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವ ಒಂದು ವಿಧಾನವೂ ಆಗಿದೆ. ಮಂಥರೆಯ ನೆಪದಿಂದ ಸಂಭವಿಸಿದ, ಮೇಲು ನೋಟಕ್ಕೆ ಒಂದು 'ದುರ್ಘಟನೆ'ಯೆಂಬಂತೆ ತೋರುವ ರಾಮನ ರಾಜ್ಯ ಪರಿತ್ಯಾಗ ಹಾಗೂ ಮುಂದಿನ ವನವಾಸಕ್ಲೇಶಗಳಿಗೆ ಕಾರಣವಾದ ಒಂದು ಅಚಾತುರ್ಯ ಅನೇಕರ ಅಭ್ಯುದಯಕ್ಕೆ ಮತ್ತು ಕರ್ಮಕ್ಷಯಕ್ಕೆ ಕಾರಣವಾಯಿತು ಎಂಬ 'ಹೊಸ ನೋಟ'ವೊಂದು ಸೀತೆಯ ಪಾತ್ರದ ಮೂಲಕ ಅಭಿವ್ಯಕ್ತವಾಗಿದೆ. ರಾಮ–ರಾವಣರ ಮಹಾಸಂಗ್ರಾಮ ಅತ್ತ ನಡೆಯುತ್ತಿರುವ ಸಂದರ್ಭದಲ್ಲಿ ಅಶೋಕವನದೊಳಗಿದ್ದ ಸೀತೆ, ತ್ರಿಜಟೆಯನ್ನು ಕುರಿತು ಹೀಗೆ ಹೇಳುತ್ತಾಳೆ:

> ನಿನಗೊಂದನೊರೆದಪೆನು ಎನಗೊದಗಿದೊಂದು
> ನವ್ಯ ಸಾಕ್ಷಾತ್ಕಾರಮಂ, ಆವುದಾಗಲಿ ನೆವಂ
> ಫಲದಾಯಕಂ ತಪಂ. ನನಗೆ, ರಘುನಾಥಂಗೆ
> ಮೇಣ್ ರಾಕ್ಷಸೇಂದ್ರನಿಗೆ, ಮೂವರ್ಗಂ ಅವರವರ
> ಕರ್ಮಾನುಸಾರಿ ಜನ್ಮೋದ್ದೇಶ ಸಾಧನೆಗೆ
> ಮೇಣಾತ್ಮ ವಿಕಸನದ ಪರಿಣಾಮ ಸಿದ್ಧಿಗೆ
> ಸಹಾಯ ಮಾದುದು ಮಂಥರೆಯ ಮೂಲದೀ ಬೃಹದ್
> 'ದುರ್ಘಟನೆ. ಇನ್ನನಿತು ಜೀವರಿಗೆ ತಂತಮ್ಮ
> ಕರ್ಮಕ್ಷಯಕೆ ಮತ್ತೆ ಧರ್ಮಾಭ್ಯುದಯಕಿದು
> ನಿಮಿತ್ತಮಾದಪುದೊ ಪೇಳ್ವರಾರ್?

ಎಂದು. ಇದು ರಾಮಾಯಣ ದರ್ಶನದ ಕಾಣ್ಕೆ. ಜಗತ್ತನ್ನು ನಿಯಂತ್ರಿಸುವ ವಿರಾಟ್ ಮನದ ಸಂಕಲ್ಪ, ಅನೇಕರ ಆತ್ಮೋದ್ಧಾರಕ್ಕೆ ತನ್ನದೇ ಆದ ತಂತ್ರವನ್ನು ರೂಪಿಸುತ್ತದೆ. ಈ ಆತ್ಮೋದ್ಧಾರ ವ್ಯಕ್ತಿಯ ಮೂಲಸ್ವಭಾವದ ಕ್ರಮಬದ್ಧವಾದ ಪರಿವರ್ತನೆಯ ಮೂಲಕ ಸ್ಫುಟವಾಗುತ್ತದೆ. ತನ್ನ ಸ್ವಭಾವದೊಳಗಿನ ದೌರ್ಬಲ್ಯಕ್ಕೆ ವಶನಾಗಿ, ಸೀತೆಯನ್ನು ಕದ್ದು ತಂದ ರಾವಣನು ಸೀತೆಯ ಹೆಣ್ತನದ ಘನತೆಯ, ಪಾವಿತ್ರ್ಯದ ಹಾಗೂ ಪಾತಿವ್ರತ್ಯದ ಮಹಿಮೆಯಿಂದ ತನ್ನ ಸ್ವಭಾವದಲ್ಲಿ ಮಾರ್ಪಾಡು ಹೊಂದಿ, ಸೀತೆಯ ಬಗೆಗಿದ್ದ ಅವನ 'ಕಾಮ' ಭಾವನೆಯು ಕ್ರಮೇಣ ಪವಿತ್ರವಾದ 'ಪ್ರೇಮ'ವಾಗಿ ಪರಿವರ್ತಿತವಾಗುವ ಅದ್ಭುತವನ್ನು ಕುವೆಂಪು ಈ ಕೃತಿಯಲ್ಲಿ ಚಿತ್ರಿಸಿ ರಾವಣನ ಪಾತ್ರವನ್ನು ಉದಾತ್ತವನ್ನಾಗಿ ಮಾಡಿದ್ದಾರೆ; ಹಾಗೆಯೆ ರಾವಣನನ್ನು ರಾಮನ ಘನತೆಗೆ ತಕ್ಕ ಪ್ರತಿನಾಯಕನನ್ನಾಗಿ ಚಿತ್ರಿಸಿದ್ದಾರೆ.

ಜಾಗತಿಕ ಮಹಾಕಾವ್ಯ ಪರಂಪರೆಯ ಪ್ರಜ್ಞೆಯಿಂದ ಕನ್ನಡದ ಆಧುನಿಕ ಮಹಾಕಾವ್ಯ ಪರಂಪರೆಯೊಂದನ್ನು ಪ್ರಾರಂಭಿಸಿದ ಶ್ರೀರಾಮಯಣದರ್ಶನಂ, ಸೃಷ್ಟಿಯಾಗಿ ಆಗಲೇ ನಾಲ್ಕು ದಶಕಗಳು ಉರುಳಿವೆ. ಆದರೆ ಈ ಮಹಾ ಕೃತಿಯ ಸಮಗ್ರವಾದ ಅಧ್ಯಯನ ಹಾಗೂ ವಿಮರ್ಶೆ ಇನ್ನೂ ನಡೆಯಬೇಕಾದ ಕಾರ್ಯವಾಗಿದೆ.

■■

# ಕವಿ ಪಂಪ : ನಮಗೆಷ್ಟು ಪ್ರಸ್ತುತ ?

ಕರ್ನಾಟಕಕ್ಕೆ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಒಂದು ಸುದೀರ್ಘವಾದ ಸಾಂಸ್ಕೃತಿಕ ಪರಂಪರೆಯಿದೆ. ಈ ಪರಂಪರೆಯನ್ನು ಕಟ್ಟಿದವರು ಕನ್ನಡ ನಾಡಿನ ಕವಿಗಳು, ರಾಜರು, ಸಂತರು, ಗಾಯಕರು, ಶಿಲ್ಪಿಗಳು, ಕಾಲದಿಂದ ಕಾಲಕ್ಕೆ ಪ್ರಚಲಿತವಾದ ವಿವಿಧ ಧರ್ಮಗಳು ಮತ್ತು ಅವುಗಳ ಆಚಾರ್ಯರು, ಜಾನಪದ ಹಾಡುಗಾರರು ಹಾಗೂ ಶ್ರೀಸಾಮಾನ್ಯರು, ಈ ಎಲ್ಲರೂ ಶತಮಾನಗಳ ಕಾಲ ಆಶಿಸಿದ, ಚಿಂತಿಸಿದ, ಭಾವಿಸಿದ ಮತ್ತು ಬದುಕಿದ ಒಂದು ಜೀವನ ಕ್ರಮವನ್ನೆ ಸ್ಥೂಲವಾಗಿ ಕರ್ನಾಟಕ ಸಂಸ್ಕೃತಿ ಎಂದು ಕರೆಯಬಹುದು.

ಈ ಸಂಸ್ಕೃತಿಯ ಒಂದು ಬಹುಮುಖ್ಯವಾದ ಭಾಗ ಸಾಹಿತ್ಯ. ಈ ಸಾಹಿತ್ಯ ಪರಂಪರೆಯೊಳಗೆ, ಇಪ್ಪತ್ತೊಂದನೆ ಶತಮಾನದ ಒಂದು ಅಸ್ಪಷ್ಟ ಜಗತ್ತಿನ ಮಧ್ಯೆ ನಿಂತ ನಾವು, ಹಿಮ್ಮುಖವಾಗಿ ಪಯಣ ಹೊರಟರೆ ಹೋಗಿ ತಲುಪುವುದು ಪಂಪನನ್ನು!

ಪಂಪ ಹುಟ್ಟಿದ್ದು, ಬೆಳೆದದ್ದು, ಕವಿಯಾಗಿ ರೂಪುಗೊಂಡದ್ದು ಹತ್ತನೆ ಶತಮಾನದ ಕರ್ನಾಟಕದಲ್ಲಿ. ಅಂದರೆ ಸರಿಯಾಗಿ ಇಂದಿಗೆ ಒಂದು ಸಾವಿರದ ಒಂದು ನೂರು ವರ್ಷಗಳ ಹಿಂದೆ.

ಒಂದು ಸಾವಿರದ ಒಂದೂ ನೂರು ವರ್ಷಗಳ ಹಿಂದಿನ ಈ ಕವಿ, ಆಧುನಿಕ ಕಾಲದವರಾದ ನಮಗೆ ಎಷ್ಟು ಪ್ರಸ್ತುತ? ಅವನು ಬರೆದದ್ದು ನಮ್ಮ ಕಾಲದ ಭಾಷೆಯಲ್ಲಿ ಅಲ್ಲ; ನಾವು ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕಾದ ಹಳಗನ್ನಡದಲ್ಲಿ. ಅವನ ಕಾವ್ಯದ ವಸ್ತುಗಳೋ ಪ್ರಾಚೀನ ಪರಂಪರೆಗೆ ಸೇರಿದ್ದು, ಅವನ ಕೃತಿಯೊಳಗಿನ ಬದುಕು ಅವನ ಕಾಲದ ಚರಿತ್ರೆಗೆ, ನಂಬಿಕೆಗಳಿಗೆ, ಮೌಲ್ಯಗಳಿಗೆ ಸಂಬಂಧಿಸಿದ್ದು, ಹೀಗಿರುವಾಗ ಪಂಪ ನಮಗೆ ಎಷ್ಟು ಪ್ರಸ್ತುತ? ನಮ್ಮ ಕಾಲದ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಅವನಲ್ಲಿ ಉತ್ತರಗಳಿವೆಯೆ? ಇದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು.

ಆಶ್ಚರ್ಯದ ಸಂಗತಿ ಎಂದರೆ ಪಂಪ ತನ್ನ ಕಾಲವನ್ನು ಮೀರಿ, ವಿವಿಧ ಕಾಲಘಟ್ಟಗಳ ಓದುಗರಿಗೆ ಪ್ರಸ್ತುತನಾಗಿದ್ದಾನೆ. ಕವಿಗಳಿಗೆ ಪ್ರೇರಣೆಯಾಗಿದ್ದಾನೆ, ಪ್ರಭಾವವಾಗಿದ್ದಾನೆ. ಆ ಕಾರಣದಿಂದಲೆ ಏನೊ ಹದಿನಾಲ್ಕನೆ ಶತಮಾನದ ನಾಗರಾಜ ಎಂಬ ಕವಿ 'ಪಸರಿಪ ಕನ್ನಡಕ್ಕೆ

ಒಡೆಯನ್ ಒರ್ವನೆ. ಸತ್ಕವಿ ಪಂಪನ್ ಆವಗಂ' ಎಂದು ಪ್ರಶಂಸಿಸಿದ್ದಾನೆ. ಈ ಹೊತ್ತಿಗೂ ಈ ಮಾತು ತೀರಾ ನಿಜ.

ಪಂಪ ಕನ್ನಡದ ಮೊದಲ ಕವಿ; ಮೊದಲದರ್ಜೆಯ ಕವಿ. ಆದರೆ 'ಮೊದಲ ಕವಿ' ಎಂಬ ಗ್ರಹಿಕೆ ಪ್ರಶ್ನಾರ್ಹವಾಗಬಹುದಾದರೂ 'ಮೊದಲ ದರ್ಜೆಯ ಕವಿ' ಎಂಬುದು ಎಂದೂ ವಿವಾದಾಸ್ಪದವಾದ ಸಂಗತಿಯಾಗಿಲ್ಲ. ಈ ಕವಿಯ ಕಾಲ-ದೇಶಾದಿ ವಿಷಯಗಳು ಈಗಾಗಲೇ ಕನ್ನಡ ಸಾಹಿತ್ಯಾಸಕ್ತರಿಗೆ ಗೊತ್ತಿರುವುದರಿಂದ, ಆ ವಿಚಾರಗಳನ್ನು ಅಪ್ರಧಾನವನ್ನಾಗಿಸಿ, ಪಂಪ ಯಾಕೆ ನಮಗೆ ಪ್ರಸ್ತುತನಾಗುತ್ತಾನೆ ಅನ್ನುವುದರ ಕಡೆ ಗಮನಹರಿಸೋಣ.

ಪಂಪನ ಸೂತ್ರಪ್ರಾಯವಾದ ಒಂದು ಉಕ್ತಿ ಈ ಹೊತ್ತಿಗೂ ತುಂಬ ಬಳಕೆಯಲ್ಲಿದೆ ಅದೆಂದರೆ 'ಮನುಷ್ಯ ಜಾತಿ ತಾನೊಂದೆವಲಂ' ಮನುಷ್ಯ ಜಾತಿ ತಾನು ಒಂದೆ ಅಲ್ಲವೆ-ವೆನ್ನುವುದು.

ನಮ್ಮ ವಾಸ್ತವವನ್ನೆ ನೋಡೋಣ. ಏನಾಗಿದ್ದೇವೆ ನಾವು? ಏನಾಗಿದೆ ಈ ದೇಶ? ಸರ್ವಧರ್ಮ ಸಹಿಷ್ಣುವೆಂದು ಹೇಳಲಾದ ಈ ದೇಶದ ಮನಸ್ಸು ಕೋಮುವಾದದ ದಳ್ಳುರಿಯಲ್ಲಿ ಬೇಯುತ್ತಿದೆ. ಒಂದು ಕಾಲಕ್ಕೆ ಮನುಷ್ಯರ ಆಧ್ಯಾತ್ಮಿಕ ಅವಶ್ಯಕತೆಯಾಗಿದ್ದ ಮತ್ತು ಮನುಷ್ಯರನ್ನು ಹಿಡಿದು ಕೂಡಿಸುತ್ತಿದ್ದ ದೇವರು-ಧರ್ಮ-ದೇವಸ್ಥಾನಗಳು ಈಗ ಮನುಷ್ಯ ಮನುಷ್ಯರನ್ನು ಒಡೆಯುವ ಸ್ಫೋಟಕ ಸಾಮಗ್ರಿಗಳಾಗಿ ಪರಿಣಮಿಸಿರುವಾಗ, ಧಾರ್ಮಿಕ ಮೂಲಭೂತ ವಾದಿಗಳಿಂದ, ನಾವು ಬಹುಕಾಲದಿಂದ ಹೇಗೋ ಕಾಪಾಡಿಕೊಂಡುಬಂದ ಕೋಮು ಸಾಮರಸ್ಯದ ಆಕೃತಿಗಳು ಭಗ್ನವಾಗುತ್ತಿರುವಾಗ, ಮನುಷ್ಯರೆಲ್ಲರನ್ನೂ ಹಿಡಿದು ಕೂಡಿಸಬಲ್ಲ ಮೂಲಸೂತ್ರವೊಂದನ್ನು ನಾವು ಹುಡುಕುತ್ತಿರುವಾಗ, 'ಮನುಷ್ಯ ಜಾತಿ ತಾನೊಂದೆವಲಂ' ಎಂದ, ಪಂಪನ ಈ ಉಕ್ತಿ ಮನುಷ್ಯಕುಲ ಮನನ ಮಾಡಿಕೊಳ್ಳಬೇಕಾದ ಒಂದು ಮಹಾಮಂತ್ರದಂತೆ ಇದೆ.

ಸ್ವಾರಸ್ಯದ ಸಂಗತಿ ಎಂದರೆ : ರಾಷ್ಟ್ರಕವಿ ಕುವೆಂಪು ಅವರು ಪ್ರತಿಪಾದಿಸಿದ 'ವಿಶ್ವಮಾನವ' ಕಲ್ಪನೆಯ ಬೀಜರೂಪದಂತೆ ಇದೆ-ಪಂಪನ ಈ ಘೋಷಣೆ. ಕುವೆಂಪು ಹೇಳುತ್ತಾರೆ 'ಮನುಷ್ಯಜಾತಿ ತಾನೊಂದವಲಂ ಎಂಬ ಪಂಪನ ಈ ಮಾತನ್ನು ನಾವು ನಿರುಪಾಧಿಕವಾಗಿ ಒಪ್ಪಿಕೊಳ್ಳಬೇಕು' ಎಂದು.

ಮನುಷ್ಯ ಜಾತಿಯ ಏಕತೆಯನ್ನು ಎತ್ತಿ ಹಿಡಿಯುವ ಪಂಪ ಮೊಟ್ಟಮೊದಲ ಬಾರಿಗೆ ಮನುಷ್ಯತ್ವದ – ಸಮಗ್ರ ಮನುಷ್ಯತ್ವದ – ಕಲ್ಪನೆಯೊಂದನ್ನು ಕಟ್ಟಿಕೊಡುವ ಮೂಲಕ ನಮಗೆ ಇನ್ನೂ ಹೆಚ್ಚು ಪ್ರಸ್ತುತನಾಗುತ್ತಾನೆ. ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಕವಿಗಳು ತಮ್ಮ ಕಾಲದ ಮನುಷ್ಯನ ಕಲ್ಪನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಅವುಗಳಲ್ಲಿ ಮೊದಲನೆಯದೇ ಪಂಪನದು. ಅದು ಹೀಗಿದೆ:

'ಚಾಗದ, ಭೋಗದ, ಅಕ್ಕರದ, ಗೇಯದ, ಗೊಟ್ಟಿಯ
ಅಲಂಪಿನ ಇಂಪುಗಳ್ಗೆ ಆಗರಮಾದ ಮಾನಸರೆ ಮಾನಿಸರ್'.

ಇದು ನಿಜವಾದ ಮನುಷ್ಯನನ್ನು ಕುರಿತು ಪಂಪನ ನಿರ್ವಚನ. ಮನುಷ್ಯ ನಿಜವಾದ ಮನುಷ್ಯನೆನ್ನಿಸಿಕೊಳ್ಳಬೇಕಾದರೆ ಈ ಐದು ಲಕ್ಷಣಗಳು ಇರಬೇಕು. ಅವುಗಳಲ್ಲಿ ಮೊದಲನೆಯದು ತ್ಯಾಗ. ಅನಂತರದ್ದು ಭೋಗ. ಮನುಷ್ಯ ಈ ಲೋಕದ ಸುಖ ಸಂತೋಷಗಳನ್ನು ಅನುಭವಿಸುವುದೆ ಭೋಗ. ಪಂಪ ಅಂಥ ಸುಖ-ಸಮೃದ್ಧಿಯ ಜೀವನವನ್ನು ನಡೆಯಿಸಿದವನು. ಆದರೆ ಈ ಭೋಗ ಎನ್ನುವುದು ತ್ಯಾಗ ಮೂಲವಾಗಿರಬೇಕು. ತ್ಯಾಗರಹಿತವಾದ ಭೋಗ ಪ್ರವೃತ್ತಿ ಧರ್ಮಕ್ಕೆ ವಿರುದ್ಧವಾದದ್ದು. ಆದುದರಿಂದಲೆ ಮನುಷ್ಯನ ಲೋಕ ಜೀವನದ ಮೊದಲ ಲಕ್ಷಣವನ್ನಾಗಿ 'ತ್ಯಾಗ'ವನ್ನು ಹೇಳುತ್ತಾನೆ. ಈ ತ್ಯಾಗದ ನಿಜವಾದ ಅರ್ಥವನ್ನು ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ದ ಭೀಷ್ಮರ ಹಾಗೂ ಕರ್ಣನ ಪಾತ್ರದಲ್ಲಿ, ಆದಿಪುರಾಣದ ವೃಷಭದೇವನ ಮತ್ತು ಬಾಹುಬಲಿಯ ಪಾತ್ರದಲ್ಲಿ ಚಿತ್ರಿಸಿದ್ದಾನೆ. ಇನ್ನು ಮನುಷ್ಯತ್ವದ ಮೂರನೆಯ ಲಕ್ಷಣ 'ಅಕ್ಕರದ' ಅಥವಾ ಶಿಕ್ಷಣದಿಂದ ಬರುವ ಸಂಸ್ಕಾರವನ್ನು ಕುರಿತದ್ದು; ನಾಲ್ಕನೆಯದು ಗೇಯದ ಅಥವಾ ಸಂಗೀತದ ಬಗ್ಗೆ ಇರಬೇಕಾದ ಆಸಕ್ತಿಗಳನ್ನು ಕುರಿತದ್ದು. ಐದನೆಯದು ಗೊಟ್ಟಿಯ-ಎಂದರೆ ಸಮಾನ ಮನಸ್ಕರಾದ ಸಂಗಾತಿಗಳ ಬಳಗದ ಸ್ನೇಹ-ವಿಶ್ವಾಸ ಇತ್ಯಾದಿಗಳಿಂದ ಉಂಟಾಗುವ ಸಂತೋಷ. ಅಂದರೆ ಮನುಷ್ಯ ತ್ಯಾಗಿಯಾಗಿರಬೇಕು. ಲೋಕದ ಸುಖಸಂತೋಷಗಳನ್ನು ತಕ್ಕ ಜೀವನ ಪ್ರೀತಿಯಿಂದ ಅನುಭವಿಸುವ ಭೋಗಿಯಾಗಬೇಕು, ಅಕ್ಷರಜ್ಞಾನದಿಂದ ಅಥವಾ ಶಿಕ್ಷಣದಿಂದ ಪರಿಷ್ಕೃತನಾಗಿರಬೇಕು; ಸಂಗೀತದ ಆಸಕ್ತಿ ಮತ್ತು ಅಭಿರುಚಿಗಳಿಂದ ಮನಸ್ಸನ್ನು ಹದಗೊಳಿಸಿಕೊಂಡಿರಬೇಕು; ಒಂಟಿಯಾಗಿ ದೂರನಿಲ್ಲದೆ ಒಳ್ಳೆಯ ಗೆಳೆಯರ ಬಳಗದ ನಡುವೆ ಬೆರೆಯುವಂತಿರಬೇಕು. ಈ ಬಗೆಯ ಸೊಗಸುಗಳಿಗೆ ಮಾಧುರ್ಯಗಳಿಗೆ ಆಗರವಾದ ಅಥವಾ ಅವಕಾಶ ಮಾಡಿಕೊಂಡ ಮನುಷ್ಯರೇ ನಿಜವಾದ ಮನುಷ್ಯರು.

ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಪಂಪ ಹೇಳುವ ಮಾನವತೆಯ ಪಂಚಸೂತ್ರಗಳು ಇವು. ಆದರೆ ಇಲ್ಲಿಗೇ ನಿಲ್ಲುವುದಿಲ್ಲ ಪಂಪ, ಈ ಐದು ಲಕ್ಷಣಗಳೂ ಈ ಲೋಕದಲ್ಲಿ ಮನುಷ್ಯ ಅಳವಡಿಸಿಕೊಳ್ಳಬೇಕಾದ ಲಕ್ಷಣಗಳೇನೋ ಹೌದು. ಆದರೆ ಈ ಲೋಕಕ್ಕೆ ಮೀರಿದ ಹಾಗೂ ಈ ಲೋಕವನ್ನು ಮೀರುವ ಈ ಮನುಷ್ಯ ಚೈತನ್ಯಕ್ಕೆ ಇವಿಷ್ಟೇ ಸಾಲವು. ಈ ಮನುಷ್ಯನನ್ನು ಈ ವಾಸ್ತವದ ನೆಲೆಯಿಂದ ಮೇಲೆ ಎತ್ತಲು ಬೇಕು ಅಧ್ಯಾತ್ಮಿಕ ಮೌಲ್ಯಗಳು. ಈ ಕುರಿತು 'ದಯೆ, ದಮಂ, ದಾನಂ, ತಪಂ, ಶೀಲಂ, ಎಂಬಿವೆ ಮೈಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ"? – ದಯ-ದಮ-ದಾನ-ತಪಸ್ಸು ಮತ್ತು ಶೀಲ ಇವುಗಳನ್ನೆ ತನ್ನ ಶರೀರವನ್ನಾಗಿಸಿಕೊಂಡ ಧರ್ಮವೆ ಅಲ್ಲವೆ ನಮ್ಮನ್ನು ಉದ್ಧಾರ ಮಾಡುವುದು? ಎನ್ನುತ್ತಾನೆ ಪಂಪ ತನ್ನ 'ಆದಿ ಪುರಾಣ' ವನ್ನು ಬರೆಯುವ ಸಂದರ್ಭದಲ್ಲಿ.

ವಿಕ್ರಮಾರ್ಜುನ ವಿಜಯದ ಸಂದರ್ಭದಲ್ಲಿ ಪಂಪನ ಮನುಷ್ಯತ್ವದ ಸೂತ್ರದಲ್ಲಿ ಉಕ್ತವಾಗಿರುವ ಐದು ಮೌಲ್ಯಗಳನ್ನು ಲೌಕಿಕ ಮೌಲ್ಯಗಳು ಎಂದು ಕರೆಯುವುದಾದರೆ, ಆದಿಪುರಾಣದ ಸಂದರ್ಭದ ಸೂತ್ರದಲ್ಲಿ ಉಕ್ತವಾದ ಐದು ಮೌಲ್ಯಗಳನ್ನು ಅಧ್ಯಾತ್ಮಿಕ ಮೌಲ್ಯಗಳು ಎನ್ನಬಹುದು. ಮೊದಲ ಐದು ಲೌಕಿಕ ಮನುಷ್ಯನ ನಿರ್ಮಾಣಕ್ಕೆ ಬುನಾದಿಯಾದರೆ, ಅನಂತರದ ಐದು ಅಧ್ಯಾತ್ಮಿಕ ಮನುಷ್ಯನ ನಿರ್ಮಾಣಕ್ಕೆ ಬುನಾದಿಯಾಗಿವೆ. ಮೊದಲಿನ

ಐದು ಇರುವ ಸ್ಥಿತಿಯನ್ನು ಹೇಳಿದರೆ, ಮತ್ತಿನ ಐದು ಇರಬೇಕಾದ ಸ್ಥಿತಿಯನ್ನು ಸೂಚಿಸುತ್ತವೆ. ಯಾಕೆಂದರೆ ಈ ಮನುಷ್ಯ ಏಕಕಾಲಕ್ಕೆ ಲೌಕಿಕನೂ ಹೌದು, ಅಧ್ಯಾತ್ಮಿಕನೂ ಹೌದು.

ಪಂಪ ಬರೆದದ್ದು ಎರಡು ಮಹತ್ ಕೃತಿಗಳನ್ನು : ಒಂದು ವಿಕ್ರಮಾರ್ಜುನ ವಿಜಯ ಮತ್ತೊಂದು ಆದಿಪುರಾಣ, ವಿಕ್ರಮಾರ್ಜುನ ವಿಜಯ ಮಹಾಭಾರತವನ್ನು ವಸ್ತುವನ್ನಾಗಿ ಉಳ್ಳದ್ದು; ಆದಿಪುರಾಣ ಪ್ರಥಮ ತೀರ್ಥಂಕರನಾದ ವೃಷಭದೇವನನ್ನು ಕುರಿತದ್ದು,

ಕನ್ನಡದಲ್ಲಿ ಮಹಾಭಾರತದ ವ್ಯಾಸಾನುಭವವನ್ನು ಗ್ರಹಿಸಿ ನಿರೂಪಿಸಿದ ಮಹಾ ಕವಿಗಳು ಇಬ್ಬರು; ಒಬ್ಬ ಪಂಪ; ಮತ್ತೊಬ್ಬ ಕುಮಾರವ್ಯಾಸ. ಕುಮಾರವ್ಯಾಸನ ಮಹಾಭಾರತ 'ಕಲಿಯದವರಿಗೂ ಕಾಮದೇನು'ವಾದರೆ, ಪಂಪ ಭಾರತ 'ಕಲಿತವರ ಕಲ್ಪವೃಕ್ಷ'! ಪಂಪನ 'ವಿಕ್ರಮಾರ್ಜುನ ವಿಜಯ ವ್ಯಾಸಭಾರತದ ಕಥೆಯನ್ನು ಅರ್ಜುನ ಕೇಂದ್ರಿತವನ್ನಾಗಿ ಮಾಡಿಕೊಂಡು, ತನ್ನ ರಾಜನಾದ ಅರಿಕೇಸರಿಯನ್ನು ಅರ್ಜುನನ ಪಾತ್ರದೊಂದಿಗೆ ಸಮಾವೇಶಗೊಳಿಸಿ, ಹತ್ತನೆಯ ಶತಮಾನದ ವೀರಜೀವನದ ಬದುಕನ್ನು ಕಟ್ಟಿಕೊಟ್ಟಿರುವ ಒಂದು ಮಹತ್ ಪ್ರಯೋಗವಾಗಿದೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ, ಪಂಪನ ವಿಕ್ರಮಾರ್ಜುನ ವಿಜಯ ವ್ಯಾಸ ಭಾರತಕ್ಕೆ ಪಂಪನು ಕೊಟ್ಟ ಹತ್ತನೆ ಶತಮಾನದ ವ್ಯಾಖ್ಯಾನ-ಎನ್ನಬಹುದು. ಆದರೆ ಆ ಕಾರಣಕ್ಕೆ ಅದು ವ್ಯಾಸರ ಸಂಸ್ಕೃತ ಮಹಾಭಾರತದ ಅನುಸರಣವಲ್ಲ, ಅನುಕರಣವಲ್ಲ, ವ್ಯಾಸಭಾರತಕ್ಕೆ ಮತ್ತು ಪ್ರತಿಸೃಷ್ಟಿ. ಒಂದೇ ಒಂದು ಸಂದರ್ಭವನ್ನು, ಈ ಮಾತಿಗೆ ನಿದರ್ಶನವನ್ನಾಗಿ ನೋಡೋಣ:

ಮಹಾಭಾರತ ಕಥೆಯ ಉದ್ಯೋಗ ಪರ್ವದ ಒಂದು ಸಂದರ್ಭ ಇದು. ಪಾಂಡವರ ವನವಾಸ – ಅಜ್ಞಾತವಾಸಗಳು ಮುಗಿದು, ಅವರು ತಮ್ಮ ರಾಜ್ಯವನ್ನು ನ್ಯಾಯಸಮ್ಮತವಾಗಿ ಮರಳಿ ಪಡೆದುಕೊಳ್ಳಲೆಂದು ಶ್ರೀ ಕೃಷ್ಣನು ಪಾಂಡವರ ರಾಯಭಾರಿಯಾಗಿ ದುರ್ಯೋದನನಲ್ಲಿಗೆ ಬರುತ್ತಾನೆ. ಆದರೆ ಕೃಷ್ಣನ ಸಂದಾನ ವಿಫಲವಾಗಿ ಕುರುಕ್ಷೇತ್ರದ ರಣರಂಗ ಅನಿವಾರ್ಯವೆಂದು ನಿಶ್ಚಯವಾದಾಗ, ಕೃಷ್ಣ ತಾನು ಪಾಂಡವರಲ್ಲಿಗೆ ಹಿಂದಿರುಗುವ ಮುನ್ನ ಕರ್ಣನೊಬ್ಬನನ್ನೆ ಗುಟ್ಟಾಗಿ ಒಂದೆಡೆ ಕರೆದುಕೊಂಡು ಬಂದು, ಅವನ ಜನನದ ರಹಸ್ಯವನ್ನು ತಿಳಿ 'ಪಾಂಡವರಲ್ಲಿ ಪ್ರಥಮನಾದ ನೀನು, ದುರ್ಯೋಧನನ ಊಳಿಗವನ್ನು ತ್ಯಜಿಸಿ ಪಾಂಡವರ ಕಡೆಗೆ ಬಂದು ಬಿಡು' – ಎನ್ನುತ್ತಾನೆ. ಆಗ ಕರ್ಣ ತಾನು ಹಾಗೆ ಮಾಡಲಾರೆನೆಂದು ಸ್ಪಷ್ಟ ಪಡಿಸಿ, ತನಗೂ ದುರ್ಯೋಧನನಿಗೂ ಇರುವ ಗಾಢವಾದ ಸ್ನೇಹಕ್ಕೆ ಒಂದು ಪ್ರಸಂಗ ಪ್ರತಿಮೆಯನ್ನು, ತನ್ನ ಸ್ವಾನುಭವದ ನೆನಪಿನಿಂದ ಎತ್ತಿ ಮಂಡಿಸುತ್ತಾನೆ:

> 'ನೆತ್ತಮನ್ ಆಡಿ ಭಾನುಮತಿ ಸೋಲ್ತೊಡೆ
> ಸೋಲಮನ್ ಈವುದೆಂದು ಕಾಡುತ್ತಿರೆ
> ಲಂಬಣಂ ಸರಿಯೆ; ಬಳ್ಕುತಿರೆ ಮುತ್ತಿನ ಕೇಡನೆ ನೋಡಿನೋಡಿ
> ಏನಮಿಲ್ಲದೆ, 'ಇವನ್ ಆಯ್ದುದೊಪೇಳಿಂ' '
> ಎಂಬ ಧೂಪೋತ್ತಮನಂ ಬಿಸುಟ್ಟು
> ನಿಮ್ಮೊಳೆ ಪೊಕ್ಕಡೆ, ದೇಡನಲ್ಲನೇ?'

ಒಂದು ದಿನ ಚಕ್ರವರ್ತಿಯಾದ ದುರ್ಯೋಧನ ತನ್ನಗೆಳೆಯನಾದ ಕರ್ಣನನ್ನು ತನ್ನ ರಾಣೀವಾಸದ ಅಂತಃಪುರಕ್ಕೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ತನ್ನ ರಾಣಿಯಾದ ಭಾನುಮತಿಯೂ, ಪ್ರಿಯ ಮಿತ್ರನೂ ಆದ ಕರ್ಣನೂ ಪಗಡೆಯಾಟ ಆಡುವ ಸಂದರ್ಭವನ್ನು ಏರ್ಪಡಿಸಿ, ತಾನು ಕೇವಲ ಪ್ರೇಕ್ಷಕನಾಗಿ ಕೂತುಕೊಳ್ಳುತ್ತಾನೆ. ಈ ಪಗಡೆಯಾಟದಲ್ಲಿ ಸೋತವರು, ಗೆದ್ದವರಿಗೆ ಏನು ಕೊಡಬೇಕು ಎಂದು ಮಾತು–ಕತೆಯಾದಂತೆ ತೋರುತ್ತದೆ. ಕರ್ಣ ತಾನು ಒಂದು ವೇಳೆ ಸೋತರೆ ಪಣವಾಗಿ ಏನನ್ನು ಕೊಡುತ್ತೇನೆಂದು ಹೇಳಿದನೋ ಅದು ತಿಳಿಯದು; ಆದರೆ ಭಾನುಮತಿ ಮಾತ್ರ ತಾನು ಸೋತರೆ ತನ್ನ ಕೊರಳಲ್ಲಿರುವ ಮುತ್ತಿನ ಹಾರವನ್ನು ಪಣವಾಗಿ ಕೊಡುತ್ತೇನೆ ಎಂದು ಹೇಳಿರಬೇಕು. ಪಗಡೆಯಾಟ ಪ್ರಾರಂಭವಾಯಿತು ಕರ್ಣನಿಗೂ – ಭಾನುಮತಿಗೂ ದುರ್ಯೋಧನ ನೋಡುತ್ತ ಕುಳಿತಿದ್ದಾನೆ. ಆಟ ಮುಂದುವರಿದು, ಭಾನುಮತಿ ಸೋಲುತ್ತಾಳೆ – ಪಂಪನ ಕಥನ – ಇಲ್ಲಿಂದ ಪ್ರಾರಂಭವಾಗುತ್ತದೆ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಎಂದು. ಮುಂದೇನಾಯಿತು?

ಪಗಡೆಯಾಟದಲ್ಲಿ ಭಾನುಮತಿ ಸೋತಳು. ಕರ್ಣನು ಆಕೆ ಒಡ್ಡಿದ ಪಣವನ್ನು ಕೊಡಬೇಕೆಂದು ಕಾಡಿದ. ಭಾನುಮತಿಯ ಕೊರಳ ಮುತ್ತಿನ ಸರಕ್ಕೇ ಕೈ ಹಾಕಿದ. ಆಗ ಆ ಮುತ್ತಿನ ಸರ ಹರಿದು, ಮುತ್ತುಗಳೆಲ್ಲ ಚಲ್ಲಾಪಿಲ್ಲಿಯಾಗಿ ನೆಲದ ಮೇಲೆ ಚೆಲ್ಲಾಡಿವೆ. ಎಂತಹ ಅಚಾತುರ್ಯವಾಯಿತಲ್ಲ ಎಂದು ಚದುರಿಬಿದ್ದ ಮುತ್ತುಗಳ ಅವಸ್ಥೆಯನ್ನು ನೋಡಿ ಕರ್ಣನು ಹೆದರಿ ನಡುಗುತ್ತಿದ್ದಾನೆ. ಆಗ ದುರ್ಯೋಧನನು ಯಾವ ಸಂಕೋಚವನ್ನು ಪಡದೆ, 'ಏನಯ್ಯ ಚದುರಿದ ಈ ಮುತ್ತುಗಳನ್ನು ಆರಿಸಿಕೊಡಲೇನು?' – ಎಂದನು.

ಈ ಪ್ರಸಂಗವನ್ನು ಕರ್ಣ ಕೃಷ್ಣನ ಮುಂದಿಟ್ಟು ಇಂಥ–ನಿಷ್ಕಲ್ಮಷವೂ, ಗಾಢವೂ ಆದ ಸ್ನೇಹದಿಂದ ತನ್ನನ್ನು ನಡೆಯಿಸಿಕೊಂಡ ಭೂಪೋತ್ತಮನಾದ ಕೌರವನನ್ನು ಬಿಟ್ಟು ನಿಮ್ಮ ಪಕ್ಷವನ್ನು ಸೇರಿದರೆ ನಾನು ಯಾರಿಗೂ ಬೇಡದವನಾದ ನಿಕೃಷ್ಟನಾಗುವುದಿಲ್ಲವೇ? – ಎನ್ನುತ್ತಾನೆ.

ಈ ಒಂದು ಪ್ರಸಂಗ ಪಂಪನಿಗೆ ಮೂಲವಾದ ಯಾವ ಭಾರತದಲ್ಲೂ ಇಲ್ಲ. ಅಂಥ ಅನನ್ಯವಾದ ನಿರ್ಮಿತಿ ಪಂಪನದು.

ಪಂಪನ ಇನ್ನೊಂದು ಕೃತಿ ಆದಿಪುರಾಣ ಪ್ರಥಮ ತೀರ್ಥಂಕರ ವೃಷಭದೇವನನ್ನು ಕುರಿತ ಕನ್ನಡದ ಮೊದಲ ಜೈನ ಪುರಾಣ ಅಥವಾ ಜಿನಾಗಮನನ್ನು ಕುರಿತ ಧಾರ್ಮಿಕ ಕಾವ್ಯ. ಇದು ಮೂಲತಃ ಜೀವವೊಂದು ದೇವನಾಗುವ ಆತ್ಮಯಾತ್ರೆಯ ಮಹಾ ಕಥನ. ಜನ್ಮ ಜನ್ಮಾಂತರಗಳಲ್ಲಿ ತೊಳಲಿ, ಬಳಲಿ. ಕರ್ಮಕ್ಷಯದ ಮೂಲಕ ಕಾಳಿಕೆಯನ್ನು ಕಳೆದುಕೊಳ್ಳುತ್ತಾ, ಈ ಲೋಕದ ಭೋಗವೈಭವಗಳಿಂದ ಬಿಡಿಸಿಕೊಂಡು ತನ್ನ ಮೋಕ್ಷವನ್ನು ತಾನೇ ಗಳಿಸಿಕೊಳ್ಳಲು ಕೈಕೊಳ್ಳುವ ಜೀವರುಗಳ ಅಧ್ಯಾತ್ಮಯಾತ್ರೆಯ, ಒಂದು ಪ್ರಯಾಣದ ಚಿತ್ರಣವಾಗಿದೆ – ಆದಿಪುರಾಣ.

ಈ ಹೊತ್ತು ಜಗತ್ತು ಬಹುಬಗೆಯ ಹಿಂಸಾಚಾರಗಳಿಂದ ತತ್ತರಿಸುತ್ತಿದೆ. ಧರ್ಮ ಮತ್ತು ರಾಜಕಾರಣಗಳ ಅಪವಿತ್ರ ಮೈತ್ರಿಯಿಂದಾಗಿ ಸಮಕಾಲೀನ ಬದುಕಿನ ನೆಮ್ಮದಿ

ನಾಶವಾಗಿದೆ. ಪ್ರಬಲವಾದ ರಾಷ್ಟ್ರಗಳ ಆಕ್ರಮಣಕಾರೀ ಪ್ರವೃತ್ತಿಗಳಿಂದ ನಮ್ಮ ವರ್ತಮಾನದ ಚರಿತ್ರೆ ಸಾಕಷ್ಟು ರಕ್ತಸಿಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಪಂಪನ ಆದಿಪುರಾಣವು ಎತ್ತಿ ಹಿಡಿಯುವ ಮೌಲ್ಯಗಳು ನಮಗೆ ಅತ್ಯಂತ ಪ್ರಸ್ತುತವಾಗಿವೆ.

ಪಂಪನ 'ವಿಕ್ರಮಾರ್ಜುನ ವಿಜಯ'ವು ಹಿಂಸಾಮಯವಾದ ರಣರಂಗದ ತುಮುಲಗಳನ್ನೂ, ಅದಕ್ಕೆ ಕಾರಣವಾದ ಮನುಷ್ಯರ ದಾಯಾದಿ ಮಾತ್ಸರ್ಯ, ವಂಚನೆ, ಸ್ಪರ್ಧೆ, ಪ್ರತೀಕಾರ – ಇತ್ಯಾದಿಗಳ ವಾಸ್ತವ ಜಗತ್ತೊಂದಕ್ಕೆ ಕನ್ನಡಿ ಹಿಡಿಯುತ್ತದೆ. 'ಆದಿ ಪುರಾಣವು ಈ ಲೋಕದ ಭೋಗ ವೈಭವಗಳ ನಿಷ್ಪ್ರಯೋಜಕತೆಯನ್ನೂ, ಯುದ್ಧದ ರಕ್ತಪಾತವಿಲ್ಲದ ನಿಲುವುಗಳನ್ನೂ ಪ್ರತಿಪಾದಿಸುತ್ತ, ತ್ಯಾಗ–ವೈರಾಗ್ಯ–ತಪಸ್ಸುಗಳ ಮೂಲಕ ಜೀವವು ಏರುವ ಎತ್ತರವನ್ನು ಕುರಿತು ಭಾಷ್ಯ ಬರೆಯುತ್ತದೆ. ಮೂಲತಃ ಅವನ ಎರಡೂ ಕಾವ್ಯಗಳು ಏಕಕಾಲಕ್ಕೆ ಈ ಬದುಕು ಇರುವ ಸ್ಥಿತಿಯನ್ನೂ ಮತ್ತು ಇರಬೇಕಾದ ಸ್ಥಿತಿಯನ್ನೂ ಪ್ರತಿಮಿಸುತ್ತವೆ.

ತನ್ನ ಜೀವಿತ ಕಾಲದಲ್ಲಿ ತನ್ನ ರಾಜನೂ ಗೆಳೆಯನೂ ಆದ ಅರಿಕೇಸರಿಯ ಜತೆಗೆ ಅನೇಕ ಯುದ್ಧಗಳಲ್ಲಿ ಒಬ್ಬಯೋಧನಾಗಿ ಭಾಗವಹಿಸಿ 'ಚತುರಂಗ ಬಲ ಭಯಂಕರಣಂ' ಎಂದು ತನ್ನನ್ನು ವರ್ಣಿಸಿಕೊಂಡ ಪಂಪನಿಗೆ ಯುದ್ಧದ ಹಿಂದಿರುವ ಹಿಂಸಾರಭಸಮತಿಗಳ ಮಹತ್ವಾಕಾಂಕ್ಷೆಗಳೂ, ಯುದ್ಧದ ಅಮಾನವೀಯ ಅನಾಹುತಗಳೂ ಸುಪರಿಚಿತವಾದ ಸಂಗತಿಗಳಾಗಿದ್ದವು. ಈ ಹಿನ್ನಲೆಯಲ್ಲಿ ಆದಿಪುರಾಣದಲ್ಲಿ ಪಂಪನು ಚಿತ್ರಿಸಿರುವ ಭರತ–ಬಾಹುಬಲಿ ಇವರ ಮುಖಾಮುಖಿ ಗಮನಿಸತಕ್ಕ ಸಂದರ್ಭವಾಗಿದೆ.

ಭರತ ಮತ್ತು ಬಾಹುಬಲಿ ಮೊದಲ ತೀರ್ಥಂಕರನಾದ ವೃಷಭದೇವನ ಮಕ್ಕಳು. ಇವರಿಬ್ಬರೂ ಅಣ್ಣ ತಮ್ಮಂದಿರು. ಆದಿದೇವನು ತಪಸ್ಸಿಗೆ ಹೋದ ಮೇಲೆ ತಂದೆಯಿಂದ ತಮಗೆ ದತ್ತವಾದ ರಾಜ್ಯಗಳಿಗೆ ಅಧಿಪತಿಗಳಾಗಿ, ಭರತ ಅಯೋಧ್ಯೆಯಲ್ಲಿ ಬಾಹುಬಲಿ ಪೌದನಪುರದಲ್ಲಿ ರಾಜ್ಯವಾಳುತಿದ್ದವರು. ಭರತ ಮಹತ್ವಾಕಾಂಕ್ಷಿ; ಬಾಹುಬಲಿ ಸ್ವಯಂ ತೃಪ್ತ. ಭರತನಿಗೆ ಜಗತ್ತನ್ನೆಗೆಲ್ಲುವ ಬಯಕೆ. ಹೀಗಾಗಿ ತನ್ನ ಚಕ್ರರತ್ನವನ್ನು ಮುಂದಿಟ್ಟುಕೊಂಡು ಷಟ್ ಖಂಡಮಂಡಲಗಳನ್ನು ತನ್ನ ಪ್ರತಾಪದಿಂದ ವಶಪಡಿಸಿಕೊಂಡು ಮುನ್ನಡೆಯುತ್ತಾನೆ. ಯಾವ ರಕ್ತಪಾತವೂ ಇಲ್ಲದೆ ರಾಜಧಿರಾಜರುಗಳನ್ನು ಕಾಲಿಗೆ ಎರಗಿಸಿಕೊಳ್ಳುತ್ತ ಮುನ್ನಡೆದ ಭರತಚಕ್ರವರ್ತಿಗೆ, ತನ್ನಂಥ ಮಹಾವೀರರು ಹಿಂದೆ ಬಂದಿರಲಿಲ್ಲ, ಮತ್ತು ಮುಂದೆ ಬರುವುದಿಲ್ಲ ಎನ್ನಿಸತೊಡಗಿತು. ಈ ಒಂದು ಭಾವನೆಯನ್ನು ಎಲ್ಲ ಕಾಲಕ್ಕೂ ಸಲ್ಲುವಂತೆ ಜಗಜ್ಜಾಹೀರು ಮಾಡುವುದು ಹೇಗೆ? ನೋಡುತ್ತಾನೆ ಎದುರಿಗೆ ಗಗನೋನ್ನತವಾಗಿ ರಾರಾಜಿಸುತ್ತಿದೆ ವೃಷಭಾದ್ರಿ ಎಂಬ ಮಹಾಪರ್ವತ. ಆ ಪರ್ವತದ ಮೇಖಲಾಭಿತ್ತಿಯಲ್ಲಿ ತನ್ನ ಪರಾಕ್ರಮದ ವಿಜಯ ಪ್ರಶಸ್ತಿಯನ್ನು ಆಚಂದ್ರತಾರಾರ್ಕವಾಗಿ ನಿಲ್ಲುವಂತೆ ಶಾಸನ ರೂಪದಲ್ಲಿ ಕೆತ್ತಿಸಬೇಕೆಂದು ತನ್ನ ಮಂತ್ರಿಗಳಿಗೆ ಅಪ್ಪಣೆ ಮಾಡಿದನು ಭರತ ಚಕ್ರವರ್ತಿ ಸರಿ. ಶಾಸನವೇನೋ ಸಿದ್ಧವಾಯಿತು. ಅದನ್ನು ಕೆತ್ತಿಸಲೆಂದು ಮಂತ್ರಿಮುಖ್ಯರೊಡನೆ ವೃಷಭಾ ಚಲದ ಬಳಿಗೆ ಬಂದುನೋಡುತ್ತಾನೆ ಭರತ, ಮುಂದೇನಾಯಿತೆಂಬುದನ್ನು ಪಂಪನ ಮಾತುಗಳಲ್ಲೇ ಕೇಳೋಣ:

'ಅದರೊಳ್ ಅನೇಕ ಕಲ್ಪ ಶತಕೋಟಿಗಳೊಳ್ ಸಲೆ ಸಂದ
ಚಕ್ರೀವೃಂದದ ಚಲದ ಆಯತಿಯ ಬೀರದ ಚಾಗದ
ಮಾತುಗಳ್ ಪೊದಳ್ದು ಒದವಿರೆ, ತತ್ ಪ್ರಶಸ್ತಿಗಳೊಳ್
ಅಂತು ಅವನ್ ಬಯ್ಕನೆ ನೋಡಿ ನೋಡಿ ಸೋರ್ದುದು
ಕೊಳಗೊಂಡ ಗರ್ವರಸಂ ಆ ಭರತೇಶ್ವರ ಚಕ್ರವರ್ತಿಯಾ'

ನೋಡುತ್ತಾನೆ ಭರತ, ಆ ವೃಷಭಾಚಲನ ಮೇಖಲಾಭಿತ್ತಿಯ ಮೇಲೆ, ತನಗಿಂತ ಹಿಂದೆ ಅನೇಕ ಕಲ್ಪ ಶತಕೋಟ ವರ್ಷಗಳ ಕಾಲಮಾನದಲ್ಲಿದ್ದ ಚಕ್ರವರ್ತಿಗಳು, ಹೀಗೆಯೆ ತಮ್ಮ ದಿಗ್ವಿಜಯದ ತುದಿಯಲ್ಲಿ ತಮ್ಮ ಕೀರ್ತಿಪ್ರತಿಷ್ಠೆಯ ಶಾಸನಗಳನ್ನು ಈ ಮಹಾಪರ್ವತದ ಮೈಯ್ಯ ತುಂಬ ಕೆತ್ತಿಸಿ, ತನ್ನ ಹೆಸರಿಗೇ ಸ್ಥಳವಿಲ್ಲದಂತೆ ಮಾಡಿದ್ದಾರೆ! ಹೀಗೆ ಕಿಕ್ಕಿರಿದ ಪೂರ್ವಪ್ರಶಸ್ತಿಗಳನ್ನು ಒಂದೊಂದಾಗಿ ನೋಡಿ, ಭರತ ಚಕ್ರವರ್ತಿಯ ಮನಸ್ಸಿನಲ್ಲಿ ಮಡುಗಟ್ಟಿದ ಗರ್ವರಸ ಸೋರಿಹೋಯಿತು.

ಮಹತ್ವಾಕಾಂಕ್ಷೆಯ ಪಿತ್ತವಿಕಾರವನ್ನೂ, ಅದಕ್ಕೆ ತತ್ಕಾಲದಲ್ಲಿ ಒದಗಿದ ಚಿಕಿತ್ಸೆಯನ್ನೂ ಪಂಪ ಈ ಪ್ರಸಂಗದ ಮೂಲಕ ಪಂಪ ಚಿತ್ರಿಸಿದ್ದಾನೆ. ಅಷ್ಟೆ ಅಲ್ಲ ಆ ಭರತ ಚಕ್ರವರ್ತಿ ಅಪೂರ್ವದ ರಾಜರುಗಳ ಶಾಸನಗಳೊಂದೊಂದನ್ನು ತನ್ನ ದಂಡ ರತ್ನದಿಂದ ಅಳಿಸಿ ಹಾಕಿ ತನ್ನ ವಿಜಯ ಪ್ರಶಸ್ತಿಯನ್ನು ಬರೆಯಿಸಿ ಹೇಳುವುದರ ಮೂಲಕ ಮಹತ್ವಾಕಾಂಕ್ಷಿಯೊಬ್ಬನ ಚಿತ್ತವಿಕಾರ ಯಾವ ನೆಲೆಯನ್ನು ತಲುಪಬಹುದೆಂಬುದನ್ನು ಸೂಚಿಸಿದ್ದಾನೆ.

ಹೀಗೆ ತನ್ನ ವಿಜಯೋತ್ಸವ ಪ್ರಶಸ್ತಿಯನ್ನು ಕೆತ್ತಿಸಿದ ಭರತ ತನ್ನ ರಾಜಧಾನಿಗೆ ಹಿಂದಿರುಗುತ್ತಾನೆ. ಆದರೆ ಧರ್ಮಸ್ವರೂಪನಾದ ಚಕ್ರ ರತ್ನ ಅಯೋಧ್ಯೆಯ ಪುರದ್ವಾರದಲ್ಲಿ ನಿಂತುಬಿಡುತ್ತದೆ. ಹೀಗಾದುದಕ್ಕೆ ಕಾರಣವೇನಿರಬಹುದೆಂದು ಚಕ್ರವರ್ತಿ ಪುರೋಹಿತರನ್ನು ವಿಚಾರಿಸುತ್ತಾನೆ. ಅವರು ಹೇಳುತ್ತಾರೆ; ಇಷ್ಟು ದಿವಸ ನೀವು ಬಹಿರ್ಮಂಡಲಗಳನ್ನು ಗೆಲ್ಲುವುದರಲ್ಲೆ ಕಾಲ ಕಳೆದಿರಿ; ಇನ್ನೂ ಅಂತರ್ಮಂಡಲಗಳನ್ನು ಗೆಲ್ಲಬೇಕಾದ ಕಾರ್ಯ ಹಾಗೇನಿಂತಿದೆ'. ಹಾಗೆ ಅಂತರ್ ಮಂಡಲದೊಳಗೆ ತಾನು ಗೆಲ್ಲ ಬೇಕಾದವರಲ್ಲಿ ತನ್ನ ತಮ್ಮನಾದ ಬಾಹುಬಲಿಯೆ ಪ್ರಧಾನನಾದವನು; ಅವನನ್ನು ಅಧೀನ ಮಾಡಿಕೊಳ್ಳದಿದ್ದರೆ ಈವರೆಗಿನ ದಿಗ್ವಿಜಯಕ್ಕೆ ಏನೂ ಅರ್ಥವಿಲ್ಲ ಎನ್ನಿಸಿತು ಭರತ ಚಕ್ರವರ್ತಿಗೆ. ಕೂಡಲೆ ರಾಜಾಜ್ಞೆಯೊಂದನ್ನು ಬರೆದು ಬಾಹುಬಲಿಗೆ ಸೂತನ ಮೂಲಕ ಕಳುಹಿಸಲಾಯಿತು. ಆ ಆಜ್ಞೆಯ ಸಾರಾಂಶ ಇಷ್ಟು : 'ನನಗೊಬ್ಬನಿಗೆ ಉಪಭೋಗ್ಯವಾದುದಲ್ಲ ಈ ನೆಲದ ಒಡೆತನ. ಅದಕ್ಕೆ ನೀನೂ ಹಕ್ಕುದಾರನೇ. ಹಿರಿಯ ಅಣ್ಣನಾದ ನಾನು ನಿನಗೆ ತಂದೆಯ ಸಮಾನ. ನೀನು-ನಾನೂ ಜತೆಗೆ ಇರೋಣ. ನೀನು ಬೇರೆಯೆ ಆಗಿರುವುದು ತರವಲ್ಲ. ಆದಕಾರಣ ನನ್ನ ಈ ರಾಜಾಜ್ಞೆಯನ್ನು ಶಿರಸಾವಹಿಸಿ ನೀನು ಬಂದು ಈ ಚಕ್ರವರ್ತಿಯ ಪಾದ ಕಮಲಗಳಿಗೆ ಎರಗಬೇಕು.' ಇದೊಂದು ಧೂರ್ತವಿನಯದ ಉಲ್ಲೇಖವೆಂಬುದನ್ನು ಗ್ರಹಿಸಿದ ಬಾಹುಬಲಿ, ಇದುವರೆಗೂ ಭರತ ಚಕ್ರವರ್ತಿ ನನ್ನ ದೊಡ್ಡ ಅಣ್ಣ. ತಂದೆಗೆ ಸಮಾನ ಎಂದು ನಮಸ್ಕರಿಸುತ್ತಿದ್ದೆ; ಈಗ ತಾನು ಅರಸ, ನಾನು ಆಳು ಎಂಬ ವಿಭೇದದ ಪರಿಸ್ಥಿತಿಯಲ್ಲಿ ನಾನು ಭರತ ಚಕ್ರವರ್ತಿಗೆ ಎರಗಲಾರೆ, ಎಂದು,

ಬೇಕಾದರೆ ಭರತನೆ ನನ್ನೊಡನೆ ಯುದ್ಧಕ್ಕೆ ಬಂದು, ನನ್ನನ್ನು ಎರಗಿಸಿಕೊಳ್ಳಲಿ ಎಂದು ಹೇಳಿ ಕಳುಹಿಸುತ್ತಾನೆ.

ಭರತನ ನಡವಳಿಕೆ ಈ ಹೊತ್ತಿನ ಬಂಡವಾಳಶಾಹಿ ರಾಷ್ಟ್ರಗಳು, ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ನಡೆಯಿಸುವ ದಬ್ಬಾಳಿಕೆಯ ಮನಃಸ್ಥಿತಿಯ ಒಂದು ಪ್ರತೀಕವಾಗಿದೆ.

ಅಂತೂ ಯುದ್ಧ ಅನಿರ್ವಾರ್ಯವಾಯಿತು. ಉಭಯ ಸೈನ್ಯ ಸಾಗರಗಳೂ ಮುಖಾಮುಖಿಯಾದವು. ಇಬ್ಬರು ಪ್ರಬಲ ರಾಜರುಗಳ ಪ್ರತಿಷ್ಠೆಗಾಗಿ ನಡೆಯುವ ಯುದ್ಧದಲ್ಲಿ, ಇಷ್ಟೊಂದು ಸೈನ್ಯ ಭಾಗವಹಿಸುವುದರಿಂದ ಆಗುವ ರಕ್ತಪಾತವನ್ನು ಹೇಗೆ ತಡೆಯುವುದೆಂದು ಎರಡೂ ಕಡೆಯ ಮಂತ್ರಿಮುಖ್ಯರು ಯೋಚಿಸಿದರು. ಅವರು ಭರತ-ಬಾಹುಬಲಿಯವರನ್ನು ಕಂಡು ವಿಜ್ಞಾಪಿಸಿಕೊಂಡರು:

'ಪ್ರಭುಗಳು ಮನ್ನಿಸಬೇಕು. ಈಗ ಯುದ್ಧ ನಿಶ್ಚಿತವಾಗಿರುವುದು ಮಹಾ ರಾಜಾಧಿರಾಜರಾದ ನಿಮ್ಮಿಬ್ಬರ ನಡುವೆ. ಸಮಸ್ತ ಪ್ರಜಾಕ್ಷಯ ಕಾರಣವಾದ ಯುದ್ಧದ ಹಾದಿಯನ್ನು ಬಿಟ್ಟು, ಈಗಾಗಲೇ ಧರ್ಮಸಮ್ಮತವಾಗಿರುವ ದೃಷ್ಟಿಯುದ್ಧ ಮಲ್ಲಯುದ್ಧಗಳ ಮೂಲಕ ನೀವಿಬ್ಬರೆ ನಿಮ್ಮ ಸೋಲು ಗೆಲುವುಗಳನ್ನು ಯಾಕೆ ನಿರ್ಣಯಿಸಬಾರದು?' ಭರತ ಬಾಹುಬಲಿ ಇಬ್ಬರೂ ಮಂತ್ರಿಮುಖ್ಯರ ಸಲಹೆಗೆ ಒಪ್ಪಿದರು. ಸಮಸ್ತ ಸೈನ್ಯವೂ ಮುಖಾಮುಖಿಯಾಗಿ ಹೋರಾಡುವುದರಿಂದ ಆಗಬಹುದಾಗಿದ್ದ ರಕ್ತಪಾತ ತಪ್ಪಿತು. ಭರತ ಬಾಹುಬಲಿ ಇಬ್ಬರೇ ಹೋರಾಡುವುದೆಂದು ನಿಶ್ಚಯವಾಯಿತು. ಸಮಸ್ತ ಸೈನ್ಯವೇ ಪ್ರೇಕ್ಷಕರಾಗಿ ನಿಂತಿತು.

ಭರತ-ಬಾಹುಬಲಿಗಳ ನಡುವೆ ಸಮರ ಪ್ರಾರಂಭವಾಯಿತು. ಮೊದಲ ದೃಷ್ಟಿಯುದ್ಧದಲ್ಲಿ ಬಾಹುಬಲಿ ಗೆದ್ದನು. ಭರತನು ಸೋತನು. ಎರಡನೆಯ ಜಲಯುದ್ಧದಲ್ಲಿ ಬಾಹುಬಲಿ ಗೆದ್ದನು; ಭರತನು ಸೋತನು. ಮೂರೆಯ ಮಲ್ಲ ಯುದ್ಧದಲ್ಲಿ ಇಬ್ಬರೂ ಸಮಬಲರಾಗಿ ಹೋರಾಡಿದರೂ, ತುದಿಗೆ ಬಾಹುಬಲಿಯ ಕೈ ಮೇಲಾಗಿ, ತನ್ನ ಅಣ್ಣನಾದ ಭರತನನ್ನು ಬಾಹುಬಲಿ ಅನಾಮತ್ತಾಗಿ ಮೇಲಕ್ಕೆ ಎತ್ತಿದನು. ಇನ್ನೇನು ಅವನನ್ನು ಆ ಎತ್ತರದಿಂದ ಕೆಳಕ್ಕೆ ಎತ್ತಿ ಹಾಕಿ ಪರಾಭವಕ್ಕೆ ಈಡುಮಾಡಬೇಕು. ಆಗ ಬಾಹುಬಲಿಗೆ ಅನ್ನಿಸಿತು. ಮನುಷ್ಯ ಮನುಷ್ಯರನ್ನು ಹೀಗೆ ಸಂಘರ್ಷಕ್ಕೆ ತೊಡಗಿಸುವುದರ ಹಿಂದೆ ಇರುವುದು ಯಾವುದು? ಅಹಂಕಾರ, ಸ್ಪರ್ಧೆ, ಪ್ರತಿಷ್ಠೆ ಇವುಗಳು ತಾನೆ? ಈ ನಶ್ವರವಾದ ರಾಜ್ಯಭೋಗಗಳ ಮೇಲಿನ ಆಸೆ ಮತ್ತು ಮಹತ್ವಾಕಾಂಕ್ಷೆಯಿಂದ ತನ್ನ ಅಣ್ಣನಾದ ಭರತ ತಮ್ಮಿಬ್ಬರ ನಡುವೆ ಇಂಥ ಸಂದರ್ಭವನ್ನು ತಂದಿಕ್ಕಿರುವಾಗ, ನಾನೂ ಈ ನಶ್ವರವಾದ ರಾಜ್ಯ-ವೈಭವಗಳ ಆಮಿಷಕ್ಕೆ ಒಳಗಾಗಿ, ತನಗೆ ಗುರು ಸಮಾನನಾದ ಅಣ್ಣ ಭರತನನ್ನು ನೆಲಕ್ಕೆ ಎತ್ತಿ ಹಾಕಿ ಸಾರ್ವಜನಿಕವಾಗಿ ಅವನಿಗೆ ಅವಮಾನ ಮಾಡುವುದು ಸರಿಯೆ? ಆದ ಕಾರಣ ಈ ಕ್ಷುದ್ರವಾದ ರಾಜ್ಯ ಭೋಗಗಳನ್ನು ನಾನೇ ತಿರಸ್ಕರಿಸಿ ತಪಸ್ಸಿಗೆ ಹೊರಟು ಹೋಗುತ್ತೇನೆ". ಹೀಗೆಂದು ನಿಶ್ಚಯಿಸಿ ಬಾಹುಬಲಿ ಮೇಲಕ್ಕೆ ಎತ್ತಿದ ತನ್ನ ಅಣ್ಣ ಭರತನನ್ನು ನೆಲಕ್ಕೆ ನಿಧಾನವಾಗಿ ಕೆಳಕ್ಕೆ ಇಳಿಸಿದನು. ಬಾಹುಬಲಿಯ

ಪರವಾದ ಉಭಯ ಸೈನ್ಯಗಳ ಜಯಘೋಷದ ನಡುವೆ, ಸೋತು ತಲೆ ತಗ್ಗಿಸಿದ ಭರತನನ್ನು ಕುರಿತು –

> ನೆಲಸುಗೆ ನಿನ್ನ ವಕ್ಷದೊಳೆ ಭಟ ಖಡ್ಗಮಂಡಲೋತ್ಪಲವನ
> ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ
> ಭೂವಲಯಮನ್ , ಅಯ್ಯನಿತ್ತುದುಮನ್, ನಾಂ ನಿನಗಿತ್ತೆನ್;
> ಇದೇವುದಣ್ಣ, ನೀನೊಲಿದ ಲತಾಂಗಿಗಂ, ಧರೆಗಂ,
> ಅಟಿಸಿದಂದು ನೆಗಳ್ತೆ ಮಾಸದೇ

ಎನ್ನುತ್ತಾನೆ ಬಾಹುಬಲಿ. ಈ ರಾಜ್ಯಲಕ್ಷ್ಮಿ ಅಥವಾ ಚಕ್ರವರ್ತಿಪದವಿ ಎನ್ನುವುದು ರಣರಂಗದ ಮಹಾಯೋಧರ ಖಡ್ಗಗಳ ಸಂಘಟನೆಯಿಂದ ನಿರ್ಮಿತವಾಗುವ ಕನ್ನೈದಿಲೆಯಾಕಾರದ ವರ್ತುಲಗಳ ಮೇಲೆ ವಿಭ್ರಮಿಸುವ ಅಥವಾ ವಿಹರಿಸುವ ಭ್ರಮರಿ ಅಥವಾ ದುಂಬಿ ಇದ್ದ ಹಾಗೆ, ಎಂದರೆ ಅಷ್ಟೊಂದು ಚಂಚಲವಾದದ್ದು. ಈ ನಾನು, ನಮ್ಮಿಬ್ಬರಿಗೂ ತಂದೆಯಾದ ಆದಿದೇವನಿಂದ ದತ್ತವಾದ ಈ ಭೂವಲಯವನ್ನು ನಿನಗೆ ಕೊಡುತ್ತ ಇದ್ದೇನೆ. ಇದೆಂಥದಣ್ಣ? ನೀನು ಪ್ರೀತಿಸಿದ ಹೆಣ್ಣಿಗೂ ನಿನ್ನ ರಾಜ್ಯಕ್ಕೂ ನಾನು ಆಸೆಪಟ್ಟರೆ, ಅದರಿಂದ ನನ್ನ ಯಶಸ್ಸಿಗೆ ಕುಂದು ಬರುವುದಿಲ್ಲವೇ?'

ಹೀಗೆಂದು ಹೇಳಿ, ಬಾಹುಬಲಿ ತನ್ನ ಅಣ್ಣನ ವಿಷಯವಾಗಿ ನಡೆದುಕೊಂಡ ಉದ್ಧಟತನವನ್ನು ತಪಸ್ಸಿನಲ್ಲಿ ತೊಳೆದುಕೊಳ್ಳುತ್ತೇನೆ ಎಂದು ವಿರಾಗಿಯಾಗಿ ತಪಸ್ಸಿಗೆ ಹೊರಟು ಹೋಗುತ್ತಾನೆ.

ಪಂಪನು ಆದಿ ಪುರಾಣದಲ್ಲಿ ಚಿತ್ರಿಸುವ ಈ ಪ್ರಸಂಗ, ಅತ್ಯಂತ ಅಪೂರ್ವವಾದ ಪ್ರಸಂಗ. ಯುದ್ಧದಲ್ಲಿ ಗೆದ್ದವನು, ಸೋತವನಿಗೆ ತಾನು ಗೆದ್ದುದನ್ನೂ, ತನ್ನಲ್ಲಿ ಇದ್ದುದನ್ನೂ ಸಮರ್ಪಿಸಿ ತಪಸ್ಸಿಗೆ ಹೋದನೆಂಬಂತೆ ಚಿತ್ರಿಸಿರುವ ಈ ಪ್ರಸಂಗ ಜಗತ್ತಿನ ಚರಿತ್ರೆಯಲ್ಲಿಯೆ ಒಂದು ಅಪೂರ್ವವಾದ ಘಟನೆಯಾಗಿದೆ.

ಪಂಪನು ನಿಜವಾದ ಕವಿತೆಯ ಲಕ್ಷಣವನ್ನು ಕುರಿತು ಒಂದು ವಿಶಿಷ್ಟವಾದ ಸೂತ್ರವನ್ನು ಮಂಡಿಸುತ್ತಾನೆ.

> 'ಇದು ನಿಚ್ಚಂ ಪೊಸತು, ಅರ್ಣವಂಬೊಲ್
> ಅತಿ ಗಂಭೀರಂ ಕವಿತ್ವಂ'

ಪಂಪನ ಪ್ರಕಾರ ನಿಜವಾದ ಕವಿತ್ವ ಅಥವಾ ಕೃತಿ ನಿರ್ಮಿತಿ ಎನ್ನುವುದು ನಿತ್ಯವೂ ಹೊಸತಾದದ್ದು – ಸಮುದ್ರದಂತೆ.

ಕವಿತ, ಕವಿತಾನಿರ್ಮಿತಿಗೆ ಮೂಲವಾದ ಪ್ರತಿಭಾವಿಶೇಷ ನಿತ್ಯವೂ ಹೊಸತಾದದ್ದು ಅಥವಾ ನವನವ ಉನ್ಮೇಷಶಾಲಿಯಾದದ್ದು – ಎಂಬ ಮಾತು ಹೊಸತೇನಲ್ಲ; ಪಂಪನಿಗೆ ಮೊದಲಿನ ಅನೇಕ ಅಲಂಕಾರ ಶಾಸಜರು ಈಗಾಗಲೇ ಹೇಳಿದಾರೆ. ಆದರೆ ಆ ಮಾತಿಗೆ

ಸಮುದ್ರದ ರೂಪಕವನ್ನು ಕೊಟ್ಟವನು ಪಂಪ. ಹಾಗೆ ಒಂದು ರೂಪಕ ನಿರ್ಮಾಣ ಮಾಡಿ ಕಾವ್ಯ ನಿರ್ಮಿತಿಯ ಅರ್ಥವನ್ನು ವಿಸ್ತಾರ ಮಾಡಿದ್ದಾನೆ ಪಂಪ.

ಸಮುದ್ರ ನಿರಂತರ ಕ್ರಿಯಾಶೀಲವಾದದ್ದು; ಅದು ಎಂದೂ ಸ್ಥಗಿತಗೊಂಡದಲ್ಲ. ಹಗಲೂ ಇರುಳು ಅದರ ತರಂಗಗಳು ದಡಕ್ಕೆ ಬಂದು ಬಡಿಯುತ್ತಲೇ ಇರುತ್ತವೆ. ಹೀಗಾಗಿ ಅದೆಂದೂ ಸ್ಥಗಿತಗೊಂಡು ಪಾಚಿಕಟ್ಟುವಂಥದಲ್ಲ. ಅನೇಕ ನದ–ನದಿಗಳಿಂದ ಸದಾ ಹೊಸನೀರುಗಳನ್ನು ತನ್ನೊಳಕ್ಕೆ ತೆಗೆದುಕೊಳ್ಳುತ್ತಾ, ಸೂರ್ಯತಪದ ಮೂಲಕ ಹೊಸ ನೀರುಗಳನ್ನು ಮೇಘರೂಪದಲ್ಲಿ ಆಕಾಶಪಥಕ್ಕೆ ರವಾನಿಸುತ್ತ, ಹೊಚ್ಚ ಹೊಸತಾಗಿರುವಂಥದ್ದು. ಜತೆಗೆ ಇಷ್ಟೊಂದು ಹೊಸ ನೀರುಗಳು ಶತ ಶತಮಾನಗಳಿಂದ ಅದರೊಳಕ್ಕೆ ಪ್ರವೇಶಿಸುತ್ತಿದ್ದರೂ,ಅದು ಎಂದೂ ತನ್ನ ಮೇರೆಯನ್ನು ಮೀರದೆ, ತನ್ನ ಘನತೆಯನ್ನು ಕಾಯ್ದುಕೊಳ್ಳುವಂಥದ್ದು, ಅಷ್ಟೆ ಅಲ್ಲ; ಅದು ಗಂಭೀರವಾದದ್ದು, ಅಥವಾ ಆಳವಾದದ್ದು.

ಪಂಪನ ಕವಿತೆ ಈ ಆಳವನ್ನೂ, ನಿತ್ಯನೂತನತೆಯನ್ನೂ ಲಕ್ಷಣವನ್ನಾಗಿ ಉಳ್ಳ ಸಮುದ್ರದಂಥ ಕವಿತೆ. ಇಂಥ ಕವಿತೆಯೊಂದಿಗೆ ಮತ್ತು ಕವಿಮನಸ್ಸಿನೊಂದಿಗೆ ಅನುಸಂಧಾನವನ್ನು ನಡೆಯಿಸುವುದೆಂದರೆ, ಮಹತ್ತಾದ ಪ್ರಾಚೀನ ಪರಂಪರೆಯೊಂದಿಗೆ ನಮ್ಮನ್ನು ನಾವು ಜೋಡಿಸಿಕೊಳ್ಳುತ್ತ ನಮ್ಮ ವರ್ತಮಾನವನ್ನು ಅರ್ಥಮಾಡಿಕೊಳ್ಳುತ್ತ ನಮ್ಮನ್ನು ನಾವು ನವೀಕರಿಸಿಕೊಳ್ಳುವ ಪ್ರಕ್ರಿಯೆಯೇ ಆಗಿದೆ.

■■

# ಸ್ಮೃತಿ ಸುರುಳಿ

ಬೆಂಗಳೂರು ಬಾನುಲಿ ಕೇಂದ್ರದ ಚಿನ್ನದ ಹಬ್ಬದ ಸಂದರ್ಭದಲ್ಲಿ ನಿಂತು, ಮೊಟ್ಟಮೊದಲ ಬಾರಿಗೆ ಆಕಾಶವಾಣಿ ನನ್ನ ಸಾಹಿತ್ಯ ಜೀವನವನ್ನು ರೂಪಿಸಿದ ಬಗೆಯನ್ನು ಕುರಿತು ಪರಿಭಾವಿಸಿದಾಗ ಥಟ್ಟನೆ ನೆನಪಿಗೆ ಬರುವ ಘಟನೆಯೊಂದು ಹೀಗಿದೆ:

ಬೆಂಗಳೂರಿನಲ್ಲಿ ಆಕಾಶವಾಣಿ ಕೇಂದ್ರ ಪ್ರಾರಂಭವಾದ ಮೊದಲ ದಿನಗಳಲ್ಲಿ ಎಂದು ಕಾಣುತ್ತದೆ. ನಾನು ಮೈಸೂರಿನಿಂದ ಶಿವಮೊಗ್ಗಕ್ಕೆ ಬಸ್ಸಿನಲ್ಲಿ ಪ್ರಯಾಣ ಮಡುತ್ತಿದ್ದೆ. ಬಸ್ಸು ಮಧ್ಯಾಹ್ನದ ಊಟದ ಬಿಡುವಿಗಾಗಿ, ಕಡೂರಿನ ಒಂದು ಹೋಟಲ್ ಎದುರಿಗೆ ನಿಂತಿತು. ಪಯಣಿಗರಾದ ನಾವೆಲ್ಲ ದಡಬಡನೆ ಬಸ್ಸಿಂದ ಇಳಿದು ಊಟದ ಹೋಟೆಲನ್ನು ಪ್ರವೇಶಿಸಿ ಯಥೋಚಿತವಾದ ಸ್ಥಳಗಳಲ್ಲಿ ಕೂತುಕೊಂಡೆವು. ಊಟದ ತಟ್ಟೆಗೆ ಕಾಯುತ್ತಾ ಹೋಟೆಲ್ ಒಳಗಿನ ಗಜಿಬಿಜಿ ಮತ್ತು ಒಂದು ಬಗೆಯ ಮಬ್ಬು ಕವಿದ ವಾತಾವರಣದ ನಡುವೆ, ಒಂದೆಡೆ ಮೂಲೆಯಲ್ಲಿ ಸ್ಥಾಪಿತವಾದ ರೇಡಿಯೋದಲ್ಲಿ ಅದ್ಯಾವುದೋ ಹಿಂದಿಯ ಚಲನಚಿತ್ರ ಗೀತೆಯೊಂದು ಕೇಳಿಬರುತ್ತಿತ್ತು. ಆ ದಿನಗಳಲ್ಲಿ ರೇಡಿಯೋ ಅನ್ನುವುದೊಂದು ಅಪರೂಪದ ವಸ್ತುವಾಗಿತ್ತು. ಕೆಲವು ಸ್ಥಿತಿವಂತರ ಮನೆಗಳಲ್ಲಿ ಅದೊಂದು ಪ್ರತಿಷ್ಠೆಯ ವಸ್ತು ಮತ್ತು ಸ್ವಲ್ಪ ಹೆಸರು ವಾಸಿಯಾದ ಹೋಟೆಲ್‌ಗಳಲ್ಲಿ ಅದು ಒಂದು ವಿಶೇಷ ಆಕರ್ಷಣೆ. ಇನ್ನೂ ಎಲ್ಲರೂ ಕೊಂಡುಕೊಳ್ಳಬಹುದಾದ ವಸ್ತುವಾಗಿಲ್ಲದಿದ್ದ ಆ ಕಾಲದಲ್ಲಿ ರೇಡಿಯೋದ ಕಾರ್ಯಕ್ರಮಗಳನ್ನಾಗಲಿ, ಕ್ರಿಕೆಟ್ ಮೊದಲಾದ ಕ್ರೀಡೆಗಳ ವೀಕ್ಷಕ ವಿವರಣೆಯನ್ನು ಕೇಬೇಕಾಗಿದ್ದಲ್ಲಿ ನಗರಸಭೆಯ ಸಾರ್ವಜನಿಕ ಉದ್ಯಾನಗಳಿಗೆ ಅಥವಾ ಇಂಥ ಹೋಟೆಲುಗಳಿಗೆ ಹೋಗಬೇಕಾದ ಪರಿಸ್ಥಿತಿಯಿತ್ತು. ಇನ್ನು ಟ್ರಾನ್ಸಿಸ್ಟರ್ ಕ್ರಾಂತಿ ಸಂಭವಿಸಿ, ರೇಡಿಯೋ ಮನೆಮನೆಯ ಹೊಸ್ತಿಲನ್ನು ದಾಟಿ ಎಲ್ಲೆಂದರಲ್ಲಿ ಕಾರ್ಯಕ್ರಮಗಳನ್ನು ಕೇಳಬಲ್ಲ ಜನಪರತೆ ಅದಕ್ಕೆ ಸಾಧ್ಯವಾದದ್ದು ಅರುವತ್ತರ ದಶಕಗಳಲ್ಲಿ. ಆದರೆ ಅದಕ್ಕೂ ಮೊದಲಿನ ಕಾಲದಲ್ಲಿ ಅಲ್ಲ. ಅಂತೂ ನಾನು ನನ್ನ ಪಯಣದ ಮಧ್ಯಂತರದ ವೇಳೆ ಕಡೂರಿನ ಹೋಟೆಲಿನ ಊಟದ ತಟ್ಟೆಯ ಮುಂದೆ ಕೂತಾಗ, ಅದುವರೆಗೂ ರೇಡಿಯೋದಲ್ಲಿ ಮೊಳಗುತ್ತಿದ್ದ ಹಿಂದೀ ಹಾಡು ಮುಗಿದು, ಕನ್ನಡದ ಕಾರ್ಯಕ್ರಮವೊಂದರ ಘೋಷಣೆ ಸುಮಧುರ ಕಂಠದ ಮೂಲಕ ಕೇಳಿಸಿತು. 'ಇದು ಆಕಾಶವಾಣಿ ಬೆಂಗಳೂರು, ಈಗ ಭಾವಗೀತೆಗಳ ಕಾರ್ಯಕ್ರಮ ಮೊದಲಿಗೆ ಕೇಳಿ. ರಚನೆ ಜಿ.ಎಸ್. ಶಿವರುದ್ರಪ್ಪ, ಹಾಡಿದ್ದಾರೆ ಶ್ರೀಮತಿ ಎಚ್.ಆರ್. ಲೀಲಾವತಿ, ಸಂಗೀತ ಪದ್ಮಚರಣ್.

ಅನಂತರ ಅತ್ಯಂತ ಸುಶ್ರಾವ್ಯವಾದ ಸ್ವರಮಾಧುರ್ಯದಲ್ಲಿ 'ಉಡುಗಣವೇಷ್ಟಿತ ಚಂದ್ರ ಸುಶೋಭಿತ ದಿವ್ಯಾಂಬರ ಸಂಚಾರಿ" ಎಂಬ ಕವಿತೆ ಸುಮಾರು ಮೂರು ನಿಮಿಷ ನನ್ನನ್ನು ಒಂದು ಅಪೂರ್ವಸಂಭ್ರಮ ಮತ್ತು ರೋಮಾಂಚನಗಳಲ್ಲಿ ನಿಲ್ಲಿಸಿತು. ಈ ಅಪೂರ್ವ ಅನುಭವ ಇಂದಿಗೂ ನನ್ನ ನೆನಪಿನಲ್ಲಿ ಹಚ್ಚ ಹಸಿರಾಗಿ ಅಚ್ಚೊತ್ತಿ ನಿಂತಿದೆ. ಅಷ್ಟೇ ಅಲ್ಲ ಅಂದಿನಿಂದ ಇಂದಿನ ತನಕ ಶ್ರೋತೃಗಳ ಕೋರಿಕೆಯ ಮೇರೆಗೆ ಮತ್ತೆ ಮತ್ತೆ ಪ್ರಸಾರವಾಗಿ, ಜನದ ಮೆಚ್ಚಿನ ಗೀತೆಯಾಗಿ ಪರಿಣಮಿಸಿದೆ. ಈ ಹೊತ್ತಿಗೂ ಈ ಕವಿತೆ ತನ್ನ ಜನಪ್ರಿಯತೆಯನ್ನು, ಅಲ್ಲ ಜನಪ್ರೀತಿಯನ್ನು ಒಂದಿಷ್ಟೂ ಕಡಿಮೆ ಮಾಡಿಕೊಂಡಿಲ್ಲ. ಅನಂತರ ಶ್ರೀಮತಿ ಲೀಲಾವತಿಯವರ ಮತ್ತು ಇತರ ಗಾಯಕರ ಮೂಲಕ ನನ್ನ ಇನ್ನೆಷ್ಟೋ ಕವಿತೆಗಳೂ ಪ್ರಸಾರಗೊಂಡು ಜನ ನನ್ನನ್ನು ಒಬ್ಬ ಕವಿ ಎಂದು ಒಪ್ಪಿಕೊಳ್ಳುವಂತೆ ಮಾಡಿದ್ದು ಆಕಾಶವಾಣಿಯೇ ಎನ್ನುವುದು ಚಾರಿತ್ರಿಕವಾಗಿ ಒಂದು ಮಹತ್ವದ ಸಂಗತಿ ಎಂದು ನಾನು ತಿಳಿಸಿದ್ದೇನೆ. ಯಾಕೆಂದರೆ ಅದು ಕನ್ನಡ ಕಾವ್ಯದ ಚರಿತ್ರೆಯಲ್ಲಿ ನವ್ಯಸಾಹಿತ್ಯ ಚಳವಳಿಯ ಆವೇಶದ ಅಬ್ಬರದ ಕಾಲ. ನವೋದಯದ ರಮ್ಯತೆ, ವಿಸ್ಮಯ, ಆದರ್ಶ ಆಧ್ಯಾತ್ಮ ಇತ್ಯಾದಿಗಳನ್ನು ವರ್ಜಿಸಿ ನಗರ ಜೀವನದ ಗೊಂದಲಗಳಿಗೆ ಸ್ವಾತಂತ್ರ್ಯೋತ್ತರ ಕಾಲದ ಭ್ರಮನಿರಸನಗೊಂಡ ಮನಸ್ಸಿಗೆ ಕನ್ನಡಿ ಹಿಡಿದ ಕಾವ್ಯದ ಕಾಲ. ಅಚ್ಚುಕಟ್ಟಾದ ಪದ್ಯಬಂಧಗಳನ್ನು ಮುರಿದು ಕವಿತೆಯನ್ನು ಆಡುಮಾತಿನ ಸಮೀಪಕ್ಕೆ ತರುವ ಪ್ರಯೋಗದ ಕಾಲ. ಕಾವ್ಯವನ್ನು ಸಂಗೀತದ ಸಾಹಚರ್ಯದಿಂದ ಪಾರುಮಾಡಬೇಕು ಎನ್ನುವ ಘೋಷಣೆಯ ಕಾಲ. ಇಂಥ ಸಂದರ್ಭದಲ್ಲಿ ಈ ಮೊದಲಿನ ನವೋದಯದ ಕಾಲದಲ್ಲಿ ಕನ್ನಡ ಕಾವ್ಯಕ್ಷೇತ್ರವನ್ನು ಪ್ರವೇಶಿಸಿ, ಆ ಕಾಲದ ಮಹಾಸತ್ವಗಳ ಪ್ರೇರಣೆಯಿಂದ ಅಚ್ಚುಕಟ್ಟಾದ ಪದ್ಯಬಂಧಗಳಿಗೆ ಒಲಿದ ನನ್ನಂಥವರನ್ನು ಅಂದಿನ ಸಾಹಿತ್ಯ ವಲಯ ಕವಿ ಎಂದು ಸ್ವೀಕರಿಸಲು ಸಿದ್ಧವಿರಲಿಲ್ಲ. ಅಷ್ಟೇ ಅಲ್ಲ ಒಟ್ಟಾರೆಯಾಗಿ ನವೋದಯ ಮಾರ್ಗದ ಹಾಗೂ ಕವಿತೆಯ ಬಗ್ಗೆ ಅರುಚಿಯನ್ನೇ ಹುಟ್ಟಿಸುವಂತಿದ್ದ ನವ್ಯ ಚಳವಳಿಯ ಸಂದರ್ಭದಲ್ಲಿ ಬಹುಮಟ್ಟಿಗೆ ಏಕಾಂಗಿಯೂ ಅಜ್ಞಾತನೂ ಆಗಿ ಉಳಿದ ನನ್ನಂಥವರನ್ನು ಅಂದಿನ ಕಾವ್ಯಾಸಕ್ತ ಸಹೃದಯ ಸಮೂಹ–ಗಮನಿಸಬೇಕು, ನವ್ಯ ಕವಿಗಳೂ ಅಲ್ಲ, ನವ್ಯ ವಿಮರ್ಶಕರೂ ಅಲ್ಲ–ನನ್ನನ್ನು ಒಬ್ಬ ಕವಿ ಎಂದು ಒಪ್ಪಿಕೊಳ್ಳುವಂತೆ ಮಾಡಿದ್ದು ಆಕಾಶವಾಣಿಯ ಗೇಯ ಗಾರುಡಿಯೇ ಎನ್ನುವುದು ನನ್ನ ತಿಳವಳಿಕೆಯಾಗಿದೆ. ಹಾಗೆಂದರೆ ನಾನು ಬರೆದದ್ದು ಕೇವಲ ಹಾಡುಗಾರಿಕೆಗೆ ಅಳವಡುವಂಥ ಕವಿತೆಯೇ, ಆ ಕಾರಣದಿಂದ ಜನ ನನ್ನನ್ನು ಕವಿ ಎಂದು ಒಪ್ಪಿಕೊಳ್ಳಲು ಸಾಧ್ಯವಾಯಿತು ಎಂಬುದು ಈ ಮಾತಿನ ಅರ್ಥವಲ್ಲ. ಹಾಗೆ ನೋಡಿದರೆ ನವೋದಯ ಕಾಲದ ಕವಿಗಳ ಕಾವ್ಯದಲ್ಲಿ ಹಾಡುಗಾರಿಕೆಗೆ ಅಳವಡುವ ಕವಿತೆಗಳ ಸಂಖ್ಯೆ ಅವರ ಸಮಗ್ರ ಕಾವ್ಯದ ಹಿನ್ನೆಲೆಯಲ್ಲಿ ಎಲ್ಲೋ ಸ್ವಲ್ಪ ಮಾತ್ರ, ಮತ್ತು ಆಯಾ ಕವಿಗಳನ್ನು ಕುರಿತ ಚರ್ಚೆ ನಡೆದಿರುವುದು ಮತ್ತು ನಡೆಯಬೇಕಾದದ್ದು ಅವರವರ ಸಮಗ್ರ ಕಾವ್ಯ ಅಧ್ಯಯನದಿಂದಲೇ ಹೊರತು ಹಾಡಿಗೆ ಅಳವಡುವ ಕೆಲವೇ ಕವಿತೆಗಳಿಂದ ಅಲ್ಲ. ಇದು ನನ್ನಂಥವರ ಕವಿತೆಗೂ ಅನ್ವಯಿಸುವ ಮಾತಾಗಿದೆ. ಆದರೆ ಆಕಾಶವಾಣಿಯ ಸುಗಮ ಸಂಗೀತ ಮಾಡಿದ ಕೆಲಸವೆಂದರೆ ಕಾವ್ಯದ ಚರಿತ್ರೆಯ ಒಂದು ಪ್ರತಿಕೂಲ ಪರಿಸ್ಥಿತಿಯಲ್ಲಿ

ನಿರ್ಲಕ್ಷ್ಯಕ್ಕೆ ಗುರಿಯಾಗಬಹುದಾಗಿದ್ದ ಕವಿಯನ್ನು, ಬಹುಸಂಖ್ಯಾತ ಕಾವ್ಯಾಸಕ್ತರ ಬಳಿಗೆ ತೆಗೆದುಕೊಂಡು ಹೋಗಿ, ಜನ ಅವನನ್ನು ಕವಿ ಎಂದು ಒಪ್ಪಿಕೊಳ್ಳುವಂತೆ ಮಾಡಿ ಅವನಲ್ಲಿ ಒಂದು ಬಗೆಯ ಧೈರ್ಯವನ್ನು ಪ್ರಚೋದಿಸಿದ್ದು. ನನ್ನ ವಿಚಾರದಲ್ಲಿ ಈ ಮಾತು ಹೆಚ್ಚು ನಿಜ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕನ್ನಡದ ಅನೇಕ ಶ್ರೇಷ್ಠ ಕವಿಗಳನ್ನು ಕಾವ್ಯಾಸಕ್ತ ಸಹೃದಯರ ಬಳಿಗೆ ಒಯ್ದು ಮುಟ್ಟಿಸಿ, ಅವರಲ್ಲಿ ಈ ಕವಿಗಳ ಹಾಗೂ ಕವಿತೆಯ ಬಗ್ಗೆ ಅಭಿರುಚಿ-ಆಸಕ್ತಿಗಳನ್ನು ಬೆಳೆಯಿಸಿದ್ದು ಮತ್ತು ಬೆಳೆಯಿಸುತ್ತಿರುವುದು ಆಕಾಶವಾಣಿಯೇ, ಅಥವಾ ಆಲ್ ಇಂಡಿಯಾ ರೇಡಿಯೋವೆ.

ಈ ಆಲ್ ಇಂಡಿಯಾ ರೇಡಿಯೋ-ಆಕಾಶವಾಣಿ ಎಂಬ ಹೆಸರು ಬಂದದ್ದು ಒಂದು ಸ್ವಾರಸ್ಯವಾದ ಸಂಗತಿಯೇ. ಯಾವುದನ್ನು ಆಲ್ಇಂಡಿಯಾ ರೇಡಿಯೋ ಎಂದು ಕರೆಯುತ್ತೇವೆಯೋ, ಆ ಪ್ರಸಾರ ಮಾಧ್ಯಮದ ಮೂಲ ಸಂಸ್ಥೆ ಮೊದಲು ಪ್ರಾರಂಭವಾದದ್ದು ದೆಹಲಿಯಲ್ಲಿ-೧೯೩೬ರಲ್ಲಿ. ಆಶ್ಚರ್ಯದ ಸಂಗತಿ ಎಂದರೆ ಸರಿಸುಮಾರು ಇದೇ ಕಾಲದಲ್ಲಿ ಮೈಸೂರು ವಿಶ್ವವಿದ್ಯಾಲಯದ ಮನಃಶಾಸ್ತ್ರವಿಭಾಗದ ಪ್ರಾಧ್ಯಾಪಕರ ಮುಖ್ಯಸ್ಥರೂ ಆದ ಡಾ. ಎಂ.ವಿ. ಗೋಪಾಲಸ್ವಾಮಿ ಅವರು ತಮ್ಮ ಮನೆಯ ಒಂದು ಟ್ರಾನ್ಸ್‌ಮಿಟರ್ ಇಟ್ಟುಕೊಂಡು ಪ್ರಸಾರ- ಪ್ರಯೋಗಗಳು ನಡೆಯಿಸುತ್ತಿದ್ದರು. ೧೯೪೨ರ ವೇಳೆಗೆ ಗೋಪಾಲಸ್ವಾಮಿಯವರ ರೇಡಿಯೋ ಸ್ಟೇಷನ್ನಿಗೆ ಭದ್ರವಾದ ತಳಹದಿಯನ್ನು ಹಾಕಿ ಅದನ್ನು ಕೆಲವರ್ಷ ನಡೆಯಿಸಿ, ಬಹುಶಃ ೧೯೪೫ರ ಹೊತ್ತಿಗೆ ಅದನ್ನು ಮೈಸೂರು ಸರ್ಕಾರಕ್ಕೆ ವಹಿಸಿಕೊಟ್ಟರು. ಅನಂತರ ಸರ್ಕಾರದ ಕೋರಿಕೆಯಂತೆ ಅವರು ಅದರ ಗೌರವ ಸಂಚಾಲಕರಾಗಿದ್ದುಕೊಂಡು, ಕನ್ನಡದ ಶ್ರೇಷ್ಠ ಸಾಹಿತಿಗಳೂ, ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕರು ಆಗಿದ್ದ ನಾ. ಕಸ್ತೂರಿಯವರನ್ನು ಈ ರೇಡಿಯೋ ಸ್ಟೇಷನ್ನಿನ ನಿರ್ವಾಹಕರನ್ನಾಗಿ ನೇಮಕ ಮಾಡಿಕೊಂಡು, ಮೈಸೂರಿನ ರೈಲ್ವೆ ಸ್ಟೇಷನ್ ಹತ್ತಿರ ಎಕ್ಸಿಬಿಷನ್ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಾ.ಕಸ್ತೂರಿಯವರು ಅನೇಕ ಯೋಜನೆಗಳನ್ನು ಹಾಕಿಕೊಂಡು ತುಂಬ ಉತ್ಸಾಹದಿಂದ ಈ ರೇಡಿಯೋ ಕೇಂದ್ರವನ್ನು ನಡೆಯಿಸಿದ್ದಲ್ಲದೆ ಮೊಟ್ಟಮೊದಲ ಬಾರಿಗೆ ಅದರ ಆಕಾಶವಾಣಿ ಎಂಬ ಹೆಸರನ್ನು ಸೂಚಿಸಿದರು. ಡಾ. ಗೋಪಾಲಸ್ವಾಮಿಯವರು ಆ ಹೆಸರನ್ನು ಒಪ್ಪಿಕೊಂಡು 'ಆಕಾಶವಾಣಿ' ಎಂದು ನಾಮಕರಣ ಮಾಡಿದರು. ಈಗ "ಆಕಾಶವಾಣಿ" ಎನ್ನುವ ಹೆಸರೇ ಅಧಿಕೃತವಾಗಿ ಬಳಕೆಗೆ ಬಂದಿದ್ದರೂ, ನಾ. ಕಸ್ತೂರಿಯವರನ್ನು ಈ ಕಾರಣಕ್ಕೆ ನೆನೆಯುವವರು ಇಲ್ಲವಾಗಿದ್ದಾರೆ. ಹಾಗೆಯೇ ಕನ್ನಡ ನಾಡಿನಲ್ಲಿ ಸುಮಾರು ಏಳು ದಶಕಗಳಷ್ಟು ಹಿಂದೆಯೇ ಮೊಟ್ಟಮೊದಲು ರೇಡಿಯೋ ಕೇಂದ್ರವೊಂದನ್ನು ಪ್ರಾರಂಭಿಸಿದವರು. ಡಾ. ಎ.ವಿ. ಗೋಪಾಲಸ್ವಾಮಿಯವರು ಎನ್ನುವ ವಿಷಯವು ಮರೆತು ಹೋಗಿದೆ. ಈ ಸಂಗತಿಯನ್ನು ಕಸ್ತೂರಿಯವರ ಅನಂತರ ಮೈಸೂರು ಆಕಾಶವಾಣಿಯ ಅಸಿಸ್ಟೆಂಟ್ ಸ್ಟೇಷನ್ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸಿದ ಹಿರಿಯ ಸಾಹಿತಿ. ಪ್ರೊ. ಎ.ಎಸ್. ಮೂರ್ತಿರಾವ್ ಅವರು ತಮ್ಮ 'ಚಿತ್ರಗಳು-ಪತ್ರಗಳು' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಮೈಸೂರಿನ ಆಕಾಶವಾಣಿಯನ್ನು ತನ್ನ ಅಂಗವಾಗಿ ಮಾಡಿಕೊಂಡು ಬೆಂಗಳೂರು

ಆಕಾಶವಾಣಿ ಪ್ರಾರಂಭವಾದದ್ದು ನವೆಂಬರ್, ೧೯೫೫ರಲ್ಲಿ ಈಗ ಅದರ ಚಿನ್ನದ ಹಬ್ಬ. ಬೆಂಗಳೂರು ಆಕಾಶವಾಣಿಯೊದಿಗೆ ನನ್ನ ಸಂಪರ್ಕವು ಸುಮಾರು ನಾಲ್ಕು ದಶಕಗಳಿಗೂ ಮೀರಿದ್ದು. ಹಾಗೆಯೇ ಕರ್ನಾಟಕಾದ್ಯಂತ ಹರಡಿರುವ ಇದರ ಅಂಗವಾದ ವಿವಿಧ ಆಕಾಶವಾಣಿ ಶಾಖೆಗಳ ಕಾರ್ಯಕ್ರಮಗಳಲ್ಲಿಯೂ ನಾನು ಸಂದರ್ಭಾನುಸಾರವಾಗಿ ಭಾಗವಹಿಸಿದ್ದೇನೆ. ದಸರಾ, ದೀಪಾವಳಿ-ಯುಗಾದಿಯಂಥ ಸಂದರ್ಭಗಳಲ್ಲಿ ಆಕಾಶವಾಣಿ ಏರ್ಪಡಿಸುತ್ತಿದ್ದ ಕವಿಸಮ್ಮೇಳನಗಳಿರಬಹುದು. ವಿಶೇಷ ಉಪನ್ಯಾಸಗಳಿರಬಹುದು; ಸಾಂದರ್ಭಿಕವಾದ ಸಂದರ್ಶನ ಕಾರ್ಯಕ್ರಮ ಗಳಿರಬಹುದು- ಇಂಥ ಎಷ್ಟೋ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸುವುದರ ಮೂಲಕ ಬೆಂಗಳೂರು ಆಕಾಶವಾಣಿಯೊಂದಿಗೆ ನನ್ನ ಬಾಂಧವ್ಯವನ್ನು ವಿಸ್ತರಿಸಿಕೊಂಡಿದ್ದೇನೆ.

ಸಾಹಿತ್ಯದ ದೃಷ್ಟಿಯಿಂದ ಆಕಾಶವಾಣಿಯ ಮೂರು ಕೊಡುಗೆಗಳನ್ನು ನಾನು ಗಮನಿಸಿದ್ದೇನೆ; ಮೊದಲನೆಯದು, ರೇಡಿಯೋ ರೂಪಕವೆಂಬ ಒಂದು ಶ್ರವ್ಯರಂಗ ಪ್ರಕಾರ. ಮೂಲತಃ ದೃಶ್ಯರೂಪವಾದ ನಾಟಕ ಶ್ರವ್ಯರೂಪವನ್ನು ತಾಳಬೇಕಾಗಿ ಬಂದಾಗ, 'ಕಿವಿಯೇ ಕಣ್ಣಾಗಿ' ಅದನ್ನು ಅನುಭವಿಸಬೇಕು.

ಈ ಎಲ್ಲ ಶ್ರೇಯಸ್ಸು ಬೆಂಗಳೂರು ಆಕಾಶವಾಣಿಗೆ ಸೇರಬೇಕು.

ನಮ್ಮದು ಮುಖ್ಯವಾಗಿ ಶ್ರವಣಪ್ರಿಯ ಬಹುಜನ ಸಂಸ್ಕೃತಿಯ ದೇಶ. ಬಹು ಹಿಂದಿನಿಂದಲೂ ಎಲ್ಲ ಬಗೆಯ ತಿಳಿವುಗಳು ಹಾಗೂ ಮನರಂಜನೆ ಈ ದೇಶದ ಜನಕ್ಕೆ ಲಭ್ಯವಾದದ್ದು ಕಿವಿಯ ಮೂಲಕವೇ. 'ಕೇಳು ಜನ ಮೇಜಯ ಧರಿತ್ರೀಪಾಲ' ಎನ್ನುವುದೆ ಮಹಾಭಾರತಕ್ಕೆ ಬಹುಜನ ಶ್ರಾವಕರ ಜತೆ ಮತ್ತು ಶ್ರಾವಕರ ಪ್ರತಿನಿಧಿಯಾಗಿ ಕೂತ ಜನಮೇಜಯನಿಗೆ, ವೈಶಂಪಾಯನರು ಕಥೆ ಹೇಳುವಾಗ ಸಂಬೋಧಿಸಿದ ರೀತಿ. ಲಿಖಿತ ಪರಂಪರೆ ಇನ್ನೂ ರೂಪುಗೊಳ್ಳುವ ಮೊದಲೇ ಈ ದೇಶದ ವೇದೋಪನಿಷತ್ತುಗಳು ಹಾಗೂ ಮಹಾಕಾವ್ಯಾದಿಗಳು ಉಳಿದು ಬಂದದ್ದು ಶ್ರವ್ಯ ಪರಂಪರೆಯ ಸ್ಮೃತಿಯ ಪಾತ್ರದಲ್ಲೇ. ಇಂಥ ದೇಶದ ಜನಕ್ಕೆ ರೇಡಿಯೋ ಅಂಥ ವಿಚಿತ್ರವೆಂದು ಅನ್ನಿಸದೆ, ಒಂದು ವರವಾಗಿಯೇ ಪರಿಣಮಿಸಿದ್ದು, ತೀರಾ ಸಹಜವಾಗಿದೆ. ಇದು ಒಂದು ಶ್ರವ್ಯಮಾಧ್ಯಮವಾದರೂ, ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದಾದ ಸಾಧನವಾಗಿ, ಬಹುಜನವನ್ನು ಅವರು ಇದ್ದಲ್ಲಿಯೇ ತಲುಪಬಹುದಾದ ವ್ಯಾಪಕತೆಯಿಂದ ಗಣನೀಯವಾದ ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾಗಿದೆ. ಜನರ ಅಂದಂದಿನ ಅಭಿರುಚಿ ಹಾಗೂ ಅಗತ್ಯಗಳಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸುತ್ತ, ತನ್ನ ಪ್ರಸಾರದ ವಿಷಯಗಳ ವ್ಯಾಪ್ತಿ ಮತ್ತು ವೈವಿಧ್ಯಗಳಿಂದ ಸಾರ್ವಜನಿಕ ಶಿಕ್ಷಣ ಹಾಗೂ ಮನರಂಜನೆಯ ಉಪಕರಣವಾಗಿದೆ. ಕೃಷಿ, ಆರೋಗ್ಯ, ವಾಣಿಜ್ಯ, ಮಹಿಳೆ, ಕುಟುಂಬ ಕಲ್ಯಾಣ, ರಾಷ್ಟ್ರೀಯತೆ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಅಧ್ಯಾತ್ಮ, ಜಾನಪದ, ಕಲೆ, ಸಾಹಿತ್ಯ, ಸಂಗೀತ – ಇತ್ಯಾದಿ ವಿಷಯ ವೈವಿಧ್ಯತೆಯೊಂದಿಗೆ, ಈ ದೇಶದ ವಿವಿಧ ಸ್ತರಗಳ ಅನುಭವಗಳೊಂದಿಗೆ ತಳುಕು ಹಾಕಿಕೊಂಡಿರುವ 'ಆಕಾಶವಾಣಿ' ನಿಜವಾದ ಅರ್ಥದಲ್ಲಿ 'ಜನವಾಣಿ' ಯೂ ಆಗಿದೆ.

ಇಂಥ 'ಆಕಾಶವಾಣಿ' ಕಳೆದ ಎರಡು ದಶಗಳ ಕಾಲಮಾನದಲ್ಲಿ, ದೂರದರ್ಶನದ ಬಣ್ಣದ–ಬೆರಗಿನ ಆಕರ್ಷಣೆಗಳ ಕಾರಣದಿಂದ ತನ್ನ ಬಹುಪಾಲು ಶ್ರೋತೃಗಳನ್ನು ಕಳೆದುಕೊಂಡು ಹಿನ್ನೆಲೆಗೆ ಸರಿದಂತೆ ಕಾಣುವುದಾದರೂ, ಅದು ಇನ್ನೂ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿಲ್ಲ ಎಂದು ಕೆಲವು ಪರಿವೀಕ್ಷಣೆಗಳು ಹೇಳುತ್ತವೆ. ಇತ್ತೀಚಿನ ಒಂದು ದಶಕದಲ್ಲಿ ಸ್ಥಾಪಿತವಾದ ಸ್ಥಳೀಯ ಬಾನುಲಿ ಕೇಂದ್ರಗಳ ಪ್ರಸಾರ ಪ್ರಯೋಗಗಳಿಂದಾಗಿ, ಆಕಾಶವಾಣಿ ಸಮುದಾಯದ ಬದುಕಿಗೆ ನೇರವಾಗಿ ಸ್ಪಂದಿಸುತ್ತ, ಪುನರುಜ್ಜೀವನಗೊಳ್ಳುತ್ತಿದೆ ಎನ್ನುವ ಅಭಿಪ್ರಾಯಗಳೂ ಮೂಡಿ ಬಂದಿದೆ. ಇದು ಹೇಗೇ ಇರಲಿ ದೂರದರ್ಶನಕ್ಕೆ ಸಮಾನಾಂತರ ವಾಗಿ, ಆಕಾಶವಾಣಿ ತನ್ನ ಅಸ್ತಿತ್ವವನ್ನೂ ವಿಶಿಷ್ಟತೆಯನ್ನೂ ಕಾಯ್ದುಕೊಂಡು ತನ್ನ ಶ್ರೋತೃ ಸಮುದಾಯವನ್ನು ಮತ್ತು ಸಂಘಟಿಸಿಕೊಳ್ಳುವುದು ಹೇಗೆ ಎನ್ನುವುದು ಈ ಹೊತ್ತಿನ ಪ್ರಶ್ನೆಯಾಗಿದೆ. ಬೆಂಗಳೂರು ಆಕಾಶವಾಣಿ ತನ್ನ ಚಿನ್ನದ ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಆಕಾಶವಾಣಿಯ ನಾಳಿನ ಹೆಜ್ಜೆಗಳನ್ನು ಕುರಿತು ಇನ್ನೂ ಗಂಭೀರವಾದ ಚಿಂತನೆ ನಡೆಯ ಬೇಕಾಗಿದೆ.

■■

# ಭಿತ್ತಿ ೩

## ಜೀವ ದರ್ಶನ

(ಜಿ.ಎಸ್.ಎಸ್. ಅವರ ಬಾನುಲಿ ಸಂವಾದ/ಸಂದರ್ಶನಗಳು)

# ಡಾ. ಜಿ.ಎಸ್.ಎಸ್ ಅವರೊಂದಿಗೆ ಸಂದರ್ಶನ

●

*ಸಂದರ್ಶಕರು : **ಡಾ. ಹೆಚ್.ಎಸ್. ವೆಂಕಟೇಶಮೂರ್ತಿ***

(ಡಾ.ಜಿ.ಎಸ್. ಶಿವರುದ್ರಪ್ಪನವರಿಗೆ ರಾಷ್ಟ್ರಕವಿ ಪ್ರಶಸ್ತಿ ಪ್ರಕಟವಾದ ಸಂದರ್ಭದಲ್ಲಿ ನಡೆಸಲಾದ ಸಂದರ್ಶನ)

***ಡಾ॥ ಹೆಚ್.ಎಸ್.ವಿ. :*** *ಪ್ರಿಯ ಶ್ರೋತೃಗಳೆ, ರಾಷ್ಟ್ರಕವಿಯಾಗಿ ನಮ್ಮೆಲ್ಲರ ಮೆಚ್ಚಿನ ಕವಿಯಾಗಿರುವ, ಡಾ. ಜಿ.ಎಸ್. ಶಿವರುದ್ರಪ್ಪನವರು : ಈ ವರ್ಷ, ನಮ್ಮ ಸರ್ಕಾರದಿಂದ, ಘೋಷಿತ ರಾಗಿರೋದು ನಮ್ಮೆಲ್ಲರಿಗೂ ತುಂಬಾ ಸಂತೋಷದ, ಅಭಿಮಾನದ, ಹೆಮ್ಮೆಯ ಸಂಗತಿ. ಈ ದಿನ ನಮ್ಮ ಶ್ರೋತೃಬಾಂಧವರಿಗಾಗಿ ಅವರೊಂದಿಗೆ ಕೆಲವು ಸಮಯ, ಕೆಲವು ಮಾತುಗಳನ್ನಾಡಬೇಕು. ಅಂತ ನಾನು ಬಯಸಿದ್ದೇನೆ. ಮೊದಲು, ಹಿರಿಯರಾದ ಡಾ. ಜಿ.ಎಸ್.ಎಸ್. ಅವರಿಗೆ, ನಿಮ್ಮ ಪರವಾಗಿ, ಮತ್ತು ವೈಯುಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸ್ತಾ ಇದೀನಿ.*

**ಡಾ॥ ಜಿ.ಎಸ್.ಎಸ್ :** ಈ ಅಭಿನಂದನೆಗಾಗಿ ನನ್ನ ಕೃತಜ್ಞತೆಯ ವಂದನೆಗಳು.

*ಪ್ರ: ಸರ್, ನಿಮಗೆ ರಾಷ್ಟ್ರಕವಿ ಪುರಸ್ಕಾರದ ಗೌರವ ಈಗ ದೊರೆತಿದೆ. ಇದು ನಮ್ಮ ಪರಂಪರೆಯಲ್ಲಿ ಡಾ.ಜಿ.ಎಸ್.ಎಸ್. ಬಹಳ ಪ್ರತಿಷ್ಠಿತವಾದ ಸನ್ಮಾನ ಅಂತ ನಾನು ಭಾವಿಸ್ತೀನಿ, ಯಾಕೆಂದ್ರೆ, ಹಿಂದೆ, ಮಹಾ ವಿದ್ವಾಂಸರೂ, ಸಂಶೋಧಕರೂ ಆಗಿದ್ದಂಥ ಗೋವಿಂದಪ್ಪೈ ಅವರು ರಾಷ್ಟ್ರಕವಿಯಾಗಿದ್ದರು. ಆನಂತರ ನಮ್ಮ ನಾಡಿನ ಹೆಮ್ಮೆಯ ಸಾಹಿತಿಗಳಾದಂಥ ಕವಿವರ್ಯ ಡಾ. ಕೆ.ವಿ. ಪುಟ್ಟಪ್ಪನವರು, ರಾಷ್ಟ್ರಕವಿಗಳಾದರು. ಶ್ರೀಯುತ ಕುವೆಂಪು ಅವರು ನಿಮಗೆ ಆಚಾರ್ಯರು. ನಿಮ್ಮ ಪ್ರೀತಿಯ ಗುರುಗಳು. ಅವರು ಯಾವ ಸ್ಥಾನ ಗೌರವ ಅಲಂಕರಿಸಿದ್ರೋ, ಆ ಸ್ಥಾನಗೌರವ, ಈ ದಿನ ಇವತ್ತು ನಿಮ್ಮ ಪಾಲಾಗಿದೆ. ಇಂಥಾ ಸಂದರ್ಭದಲ್ಲಿ ಈ ಹಿನ್ನೆಲೆಯಲ್ಲಿ, ನಿಮ್ಮ ತಕ್ಷಣದ ಸ್ಪಂದನ ಏನೂಂತ ತಿಳಿಯೋದಿಕ್ಕೆ ನನಗೆ ತುಂಬಾ ಕುತೂಹಲ.*

ಉ: ಪ್ರಶಸ್ತಿಗಳು ನನಗೇನೂ ಹೊಸದಲ್ಲ. ಹಾಗೆ ನೋಡಿದರೆ ನಮ್ಮ ಪರಂಪರೆಯಲ್ಲಿ ಪ್ರಶಸ್ತಿಗಳ ಪರಂಪರೆಯೇ ಇದೆ. ಸಾಹಿತ್ಯ ಪರಂಪರೆಯೊಳಗೆ, ಕವಿಗಳನ್ನು ವಿದ್ವಾಂಸರನ್ನು ಪ್ರಶಸ್ತಿ ಮೂಲಕ ಗೌರವಿಸುವ ಪರಂಪರೆ ಇದೆ. ಪಂಪನಿಂದ ಹಿಡಿದು. ಆಧುನಿಕ ಕಾಲದವರೆಗೂ

ಇದೆ. ಹಿಂದಿನ ಕಾಲದ ಅಧಿಕಾರೂಢ ಪ್ರಭುಗಳು ಗೌರವಿಸ್ತಾ ಇದ್ದಿದ್ದಕ್ಕೂ ಈ ಕಾಲದಲ್ಲಿ, ಸರ್ಕಾರ ಗೌರವಿಸಕ್ಕೂ ವ್ಯತ್ಯಾಸ ಇದೆ. ಹಿಂದೆ ರಾಜಮಹಾರಾಜರು ತಮ್ಮ ಖುಷಿಗಾಗಿ ಆಸ್ಥಾನದಲ್ಲಿ ಕವಿಗಳನ್ನು ಇಟ್ಕೊಂಡಿರ್ತಾ ಇದ್ರು, ಆದರೂ ಕವಿಗಳು ಗೌರವ ಪಡೆದ ಮಾತ್ರಕ್ಕೇ, ಅವರು ರಾಜರ ಹಂಗಿಗೆ ಒಳಗಾಗಿದ್ರು ಅಂತ ಏನೂ ಇಲ್ಲ. ತಮ್ಮ ಆತ್ಮಗೌರವವನ್ನು ಉಳಿಸಿಕೊಂಡೇ, ಕವಿಗಳು, ಪ್ರಶಸ್ತಿ ಸ್ವೀಕಾರ ಮಾಡಿದ ಸಂದರ್ಭಗಳು ನಮ್ಮಲ್ಲಿ ಕಂಡು ಬಂದಿವೆ. ಈ ಹೊಸ ಕಾಲದಲ್ಲಿ, ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸರ್ಕಾರ ಅನ್ನೋದು, ನಮ್ಮ ಪ್ರಜೆಗಳ ಪ್ರತಿನಿಧಿ. ಈ ದೃಷ್ಟಿಯಿಂದ, ಸರ್ಕಾರ ಅನ್ನೋ ಪ್ರಜೆಗಳ ಪ್ರತಿನಿಧಿ ಕೊಡೋ ಗೌರವ, ಆ ಕಾಲದ ಗೌರವ, ಹಿಂದಿನ ಗೌರವಗಳಿಗಿಂತ ಭಿನ್ನವಾಗಿದೆ. ಸ್ವರೂಪದಲ್ಲಿ ಇದು ಸಂತೋಷದ ಸಮಾಚಾರ, ಎರಡನೇದು ಈ ಪ್ರಶಸ್ತಿ ಕೊಟ್ಟ ವಿಧಾನ ಕೂಡ ಪ್ರಜಾ ಸತ್ತಾತ್ಮಕವಾಗಿಯೇ ಇದೆ. ಅಂದ್ರೆ, ಸರ್ಕಾರ ನೇರವಾಗಿ ಸಂಪುಟ ತೀರ್ಮಾನದ ಮೂಲಕ ಕೊಟ್ಟಿದ್ದಲ್ಲ ಇದು. ಇದು ಸರ್ಕಾರ ಒಂದು ಸಾಹಿತಿಗಳ ಸಮಿತಿಯನ್ನು ಗೊತ್ತುಮಾಡಿ. ಅದಕ್ಕೆ ಒಬ್ಬರು ಅಧ್ಯಕ್ಷರನ್ನು ಗೊತ್ತುಮಾಡಿ, ಅದರ ಮೂಲಕ ಅನೇಕ ಸಾಹಿತಿಗಳ ಅಭಿಪ್ರಾಯಗಳನ್ನು ಸ್ವೀಕರಿಸಿ, ಆ ಮೂಲಕ ನನ್ನ ಆಯ್ಕೆ ಮಾಡಿರುವುದು ಕೂಡ, ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಯ್ಕೆ. ಈ ಕ್ರಮ ನನಗೆ ಸಮಾಧಾನ ತಂದಿದೆ. ಈ ಪ್ರಶಸ್ತಿ ಮೊದಲು ಬಂದಿದ್ದು ಮಂಜೇಶ್ವರ ಗೋವಿಂದ ಪೈ ಅವರಿಗೆ. ಆಗ ಇನ್ನೂ ಕರ್ನಾಟಕ ಏಕೀಕರಣವಾಗಿರಲಿಲ್ಲ. ಮದ್ರಾಸ್ ಸರ್ಕಾರ ಅವರಿಗೆ ಈ ಪ್ರಶಸ್ತಿ ಕೊಟ್ಟು ಗೌರವಿಸಿತು. ಬಹಳ ಘನ ವಿದ್ವಾಂಸರು. ಶ್ರೇಷ್ಠ ಕವಿಗಳು. ಅನುಮಾನವೇ ಇಲ್ಲ. ಕನ್ನಡದ ಮೊದಲ ಸಂಶೋಧನೆಗಳ ಗುದ್ದಲಿಪೂಜೆ ಮಾಡಿದವರು ಅವರು. ಆನಂತರ ೧೯೬೪ರಲ್ಲಿ ಕುವೆಂಪು ಅವರಿಗೆ ಆಗಿನ ಕರ್ನಾಟಕ ಸರ್ಕಾರದ ಸಚಿವ ಸಂಪುಟವೇ ತೀರ್ಮಾನ ಕೈಗೊಂಡು, ನೇರವಾಗಿ ನಿಜಲಿಂಗಪ್ಪ ಮುಖ್ಯ ಮಂತ್ರಿಯಾಗಿದ್ದಾಗ, ಅವರನ್ನು ರಾಷ್ಟ್ರಕವಿಯಾಗಿ ಗೌರವಿಸಿದರು. ಕರ್ನಾಟಕ ಏಕೀಕರಣ ಆಗಿರಲಿಲ್ಲ. ಕರ್ನಾಟಕ ಏಕೀಕರಣವಾಗಿ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಈ ಪ್ರಶಸ್ತಿ ಬಂದಿರೋದು ನನಗೆ ಹೆಚ್ಚಿನ ಸಂತೋಷವನ್ನು ತಂದಿದೆ. ಅಷ್ಟೇ ಅಲ್ಲ, ನಾನು ಕುವೆಂಪು ಅವರ ಶಿಷ್ಯ ಕೂಡ ಹೌದು. ಕುವೆಂಪು, ಗೋವಿಂದ ಪೈ ಇಂಥವರಿಂದ ಅಲಂಕೃತವಾದ ಈ ಪ್ರಶಸ್ತಿಯನ್ನು ನಾನು ತುಂಬಾ ಹಿಂಜರಿಕೆಯಿಂದ, ನಮ್ರತೆಯಿಂದ, ಸ್ವೀಕರಿಸ್ತಾ ಇದ್ದೇನೆ. ಯಾಕೆಂದ್ರೆ ಈಗ ನಮ್ಮ ಪರಿಸರದಲ್ಲಿ ಆ ಎತ್ತರದ ವ್ಯಕ್ತಿಗಳು ಇಲ್ಲ ಅನ್ನೋದು ನಿಜವಾಗಿಯೂ ನಿಜ, ಆದ್ದರಿಂದ ನನಗೆ ಈ ಪ್ರಶಸ್ತಿಗೆ ಅರ್ಹನಲ್ಲವೇನೊ ಅನ್ನೋದಕ್ಕಿಂತ ಗೋವಿಂದಪೈ, ಕುವೆಂಪು ಅವರಿಂದ ಅಲಂಕೃತವಾದ ಈ ಪ್ರಶಸ್ತಿಯನ್ನು ಪಡೆಯೋದು ನನಗೊಂದು ಗೌರವ ಅಂತ ಅನ್ನೋದು ನನ್ನ ಭಾವನೆ.

ಪ್ರ: *ನೀವು ಹೇಳಿದ ಹಾಗೆ ಹಿಂದೆ ರಾಜಮಹಾರಾಜರು ತಮ್ಮ ಆಸ್ಥಾನಗಳಲ್ಲಿ ಕವಿಗಳನ್ನು ಆಸ್ಥಾನ ಕವಿ ಅಂತ ಹೇಳಿ ಗೌರವಿಸ್ತಾ ಇದ್ದರು. ಆಸ್ಥಾನಕವಿ ಅನ್ನೋ ಗೌರವಕ್ಕೂನೂ ಈಗ ರಾಷ್ಟ್ರಕವಿ ಅನ್ನೋದಕ್ಕೂನೂ ಸಾಕಷ್ಟು ವ್ಯತ್ಯಾಸ ಇದೆ. ಆಸ್ಥಾನಕವಿ ಅಂತ*

*ಅನ್ನೋದು, ಒಂದು ಸಭೆಗೆ ಸೀಮಿತವಾದ ಹಾಗೆ ಕಾಣಿಸ್ತಾ ಇದೆ, ಒಂದು ಅಧಿಕಾರ ವಲಯಕ್ಕೆ ಸೀಮಿತವಾದ ಹಾಗೆ ಕಾಣಿಸ್ತಾ ಇದೆ. ಆದರೆ ರಾಷ್ಟ್ರಕವಿ ಅನ್ನೋದು ಅಖಂಡ ಕರ್ನಾಟಕಕ್ಕೇ ಪ್ರಾತಿನಿಧಿಕವಾದ ಹುದ್ದೆ ಅನ್ನೋದಕ್ಕಿಂತ ಅದು ಒಂದು ಅಂತಸ್ತು, ಗೌರವ ಅಂತ ನಾನು ಭಾವಿಸ್ತೀನಿ. ಈ ಬಗ್ಗೆ ನಿಮ್ಮ ಅನಿಸಿಕೆ ಏನು ಸಾರ್?*

ಉ: ನೀವು ಹೇಳೋದು ನಿಜ. ಹಿಂದಿನ ಆಸ್ಥಾನಕವಿ ಅಂದಾಗ, ಅದೊಂದು ಅಲಂಕಾರಪ್ರಾಯವಾದ್ದು ಅಷ್ಟೇನೆ! ಸ್ಥಾನವಾಗಿತ್ತು, ಗಾಯಕರು, ನರ್ತಕರು, ಕವಿಗಳು ಎಲ್ಲರೂ ಇದ್ದ ಹಾಗೇ ಕವೀನೂ ಇದ್ದ ಅಂತ ಹೇಳಿ. ಅದೊಂದು ನಿಯೋಗ ಆ ಕಾಲಕ್ಕೆ. ಆದರೆ ಇವತ್ತು ಕವಿ ಯಾವುದಕ್ಕೂ ಬದ್ಧನಲ್ಲ. ಸ್ವತಂತ್ರ ಭಾರತದಲ್ಲಿ ನಾವು ಸ್ವತಂತ್ರವಾಗಿದ್ದೇವೆ. ಮತ್ತೆ ಈ ಹೊತ್ತಿನ ಸಂದರ್ಭದಲ್ಲಿ ರಾಷ್ಟ್ರಕವಿ ಅನ್ನೋ ಮಾತು ಸ್ವಲ್ಪ ವಿಲಕ್ಷಣವಾಗಿ ಕಾಣಿಸಬಹುದು. ಇಂಡಿಯಾ ದೇಶವನ್ನು ರಾಷ್ಟ್ರ ಅಂತೀವಿ. ಗುಜರಾತನ್ನು ರಾಷ್ಟ್ರ ಎನ್ನಬಹುದೇ? ಕರ್ನಾಟಕವನ್ನು ರಾಷ್ಟ್ರ ಅನ್ನಬಹುದೇ? ಖಂಡಿತವಾಗಿಯೂ ರಾಷ್ಟ್ರ ಅನ್ನಬಹುದು. ಏಕೆಂದ್ರೆ, ರಾಷ್ಟ್ರಭಾಷೆ ಅಂತ ನಾವು ಹೇಗೆ ಕರೀತೀವಿ. ೧೪ ಭಾಷೆಗಳೂ ಕೂಡ ರಾಷ್ಟ್ರಭಾಷೆಗಳೇ. ಅಲ್ಲದೆ ನಮ್ಮ ರಾಷ್ಟ್ರದ ಕಲ್ಪನೆ ಇವತ್ತು ವ್ಯತ್ಯಾಸವಾಗಿದೆ. ಪಶ್ಚಿಮದ ಅನೇಕ ರಾಷ್ಟ್ರಗಳನ್ನು ನಾವೇನು ಕರೀತೀವಿ, ಆ ರಾಷ್ಟ್ರಗಳಿಗೆ ಹೋಲಿಸಿದಾಗ, ನಮ್ಮ ಇಂಡಿಯಾ ದೇಶದ ಪ್ರತಿಯೊಂದು ಪ್ರದೇಶವೂ ಕೂಡ ದೊಡ್ಡದಾಗಿದೆ. ಮತ್ತು ರಾಷ್ಟ್ರದ ಎಲ್ಲ ಲಕ್ಷಣಗಳನ್ನು ಪಡೆದುಕೊಂಡಿದೆ. ಮತ್ತು ಪಶ್ಚಿಮದ ರಾಷ್ಟ್ರದ ಕಲ್ಪನೆಗಳಿಗೂ ನಮಗೂ ವ್ಯತ್ಯಾಸ ಅಂದ್ರೆ, ಪಶ್ಚಿಮದಲ್ಲಿ ರಾಷ್ಟ್ರ ಅಂದ್ರೆ, ಒಂದು ಭಾಷೆ, ಒಂದು ಜನಾಂಗ, ಇರುವಂಥ ಒಂದು ಪ್ರದೇಶ. ಆದರೆ ನಮ್ಮಲ್ಲಿ, ಅನೇಕ ಭಾಷೆಗಳಿವೆ. ಅನೇಕ ಬಗೆಯ ಜನರಿದ್ದಾರೆ. ಕರ್ನಾಟಕದಲ್ಲೂ ಹೀಗೆ! ಪಶ್ಚಿಮದ ರಾಷ್ಟ್ರದ ಕಲ್ಪನೆಗೆ ಹೋಲಿಸಿದರೆ, ಇಂಡಿಯಾ ದೇಶದ ಪ್ರತಿಯೊಂದು ರಾಷ್ಟ್ರವೂ, ಪ್ರತಿ ಪ್ರದೇಶವೂ ಭಿನ್ನ ಭಿನ್ನವಾದ ತನ್ನದೇ ಆದ ಒಂದು ಪ್ರಾದೇಶಿಕ ಸಂಸ್ಕೃತಿಯನ್ನುಳ್ಳ ರಾಷ್ಟ್ರವಾಗಿದೆ. ರಾಷ್ಟ್ರ, ಅಂದ್ರೆ ರಾಜ್ಯ ಅಂತನೇ ಅರ್ಥ. ಕರ್ನಾಟಕ ಈ ಅರ್ಥದಲ್ಲಿ ರಾಷ್ಟ್ರವೇ ಅನ್ನಬಹುದು. ಪಕ್ಕದ ಮಹಾರಾಷ್ಟ್ರ ನೋಡಿ! ಹೆಸರಲ್ಲೇ ರಾಷ್ಟ್ರ ಇದೆ. ಈ ಹಿನ್ನೆಲೆನಲ್ಲಿ ಕವಿ, "ರಾಷ್ಟ್ರಕವಿ" ಅನ್ನೋದು "ಆಸ್ಥಾನಕವಿ" ಅನ್ನೋದಕ್ಕಿಂತ ಬಹಳ ಶ್ರೇಷ್ಠವಾದ ಸರಿಯಾದ ನಿರ್ದೇಶನ ಅಂತ ನಾನು ತಿಳ್ಕೊಂಡಿದ್ದೇನೆ.

ಪ್ರ: *ಹಾಗೇನೇ ಈ ರಾಷ್ಟ್ರ ಅನ್ನೋದನ್ನ ಬೇಕಾದ್ರೆ, ಉಪರಾಷ್ಟ್ರೀಯತೆ ಅನ್ನೋ ಅರ್ಥದಲ್ಲಿ ಬೇಕಾದ್ರೂ ಅರ್ಥೈಸಿಕೊಳ್ಳಬಹುದು. ಅನೇಕ ಉಪರಾಷ್ಟ್ರೀಯತೆಗಳು ಸೇರಿ ರಾಷ್ಟ್ರೀಯ ಕಲ್ಪನೆ ಬರುತ್ತೆ. ಒಂದು ರಾಷ್ಟ್ರ ಅನ್ನೋದು ಇಲ್ಲವೇ ಇಲ್ಲ ಹಾಗೆ ನೋಡಿದರೆ. ಭಾರತ ಒಂದು ಅಮೂರ್ತ ಕಲ್ಪನೆ. ಅಲ್ಲಿ ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಇವೆಲ್ಲ ಸೇರಿ ಭಾರತ ಅನ್ನೋದು ಒಂದು ಘಟಕ ಉತ್ಪನ್ನವಾಗುತ್ತೆ. ಅದರಿಂದ ರಾಷ್ಟ್ರೀಯ ಕವಿ ಅನ್ನೋದು, ರಾಷ್ಟ್ರಕವಿ ಅನ್ನೋದು, ಸಂಸ್ಕೃತಿಯ ಪ್ರತಿನಿಧಿಕ, ಅನ್ನುವಂಥ ಒಂದು, ಭೂ ಭಾಗವನ್ನು ಪ್ರತಿನಿಧಿಸುವ ಕವಿ ಅಂತನೂ ತಗೋಬಹುದು. ಕೇವಲ ಒಂದು*

*ಅಧಿಕಾರದ ವಲಯ ಅಲ್ಲ, ಅಥವಾ ಸರ್ಕಾರಿ ವಲಯ ಅಲ್ಲ. ಅಥವಾ ಒಂದು ಭೌಗೋಳಿಕ ವಲಯನೂ ಅಲ್ಲ. ಈ ರಾಷ್ಟ್ರೀಯತೆ ಅನ್ನೋದು, ಅಮೆರಿಕದಲ್ಲಿನ ಕನ್ನಡಿಗ ಸಂಸ್ಕೃತಿಗೂ ಅಲ್ಲಿಯೂ ನಿಮ್ಮ ಸಂಬಂಧ ಇದ್ದೇ ಇರುತ್ತೆ, ಅಲ್ಲವೆ ನಾವು ಎಲ್ಲಿದ್ದರೇನು? ಬೊಂಬಾಯಿ, ಮದ್ರಾಸು, ಕಲ್ಕತ್ತದಲ್ಲಿ, ಎಲ್ಲೆಂದರಲ್ಲಿ. ಅಂತ ನೀವೇ ಬರೆದಿಲ್ವೆ? ಅಂದರೆ ಎಲ್ಲೆಲ್ಲಿ ಕನ್ನಡ ಜನ ಇದಾರೋ ಎಲ್ಲೆಲ್ಲಿ ಕನ್ನಡ ಭಾಷೆ ಇದೆಯೋ ಎಲ್ಲೆಲ್ಲಿ ಕನ್ನಡ ಸಾಹಿತ್ಯವನ್ನು ಓದಲಾಗುತ್ತೋ, ಅದೆಲ್ಲ ಸೇರಿ ಅಖಂಡ ಕರ್ನಾಟಕದ ಕಲ್ಪನೆ ಬರುತ್ತದೆ, ಹಾಗಾಗಿ ಅಂತಹ ಒಂದು ಅಖಂಡ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿ ನೀವು ಸೀಮಿತರಾಗಿದ್ದೀರಿ ಅಂತ ನಾನು ಭಾವಿಸ್ತೀನಿ.*

ಉ: ಈ ಅಖಂಡ ಕರ್ನಾಟಕದ ಕಲ್ಪನೆ ಬರಬೇಕಾದ್ರೆ, ನೀವು ಕುವೆಂಪು ಅವರನ್ನು ಓದಬೇಕು.

ಕುವೆಂಪು ಅವರು ಎಂದೂ ಕರ್ನಾಟಕವನ್ನು ಒಂದು ರಾಜಕೀಯ ಘಟಕವಾಗಿ ಪರಿಗಣಿಸಲಿಲ್ಲ. ಅವರ ಪ್ರಕಾರ ಅದು ಸಾಂಸ್ಕೃತಿಕ ಘಟಕ. ಅವರ ಪ್ರಕಾರ ಪಂಪ, ಮುಖ್ಯಮಂತ್ರಿ ನೃಪತುಂಗನೆ ಚಕ್ರವರ್ತಿ. ರನ್ನ, ಜನ್ನ, ನಾಗವರ್ಮ, ಸರ್ವಜ್ಞ, ಷಡಕ್ಷರ, ಸರಸ್ವತಿಯೇ ರಚಿಸಿದ ಅರಾಜಕೀಯ ಮಂಡಲ. ಹೀಗೆ ಕುವೆಂಪು ತಾವು ಅಧೀನರಾಗಿರುವುದು ಆಡಳಿತಾರೂಢ ಕರ್ನಾಟಕದ ಒಬ್ಬ ವ್ಯಕ್ತಿಯಾಗಲ್ಲ. ಎಲ್ಲ ಕಾಲಕ್ಕೂ ಅಖಂಡವಾಗಿರುವ ಕರ್ನಾಟಕದ ಸಾಂಸ್ಕೃತಿಕ ನಕ್ಷೆಯ ಅಧೀನಕ್ಕೆ ಒಳಪಟ್ಟವರು. ಕುವೆಂಪು ವಿಧೇಯರಾಗಿರೋದು ಈ ಮಂತ್ರಿಮಂಡಲಕ್ಕೆ, ನಿತ್ಯ ಸಚಿವ ಮಂಡಲ ಅದು. ಅದು ಯಾವಾಗಲೂ ಬದಲಾಗೋದಲ್ಲ. ಕುವೆಂಪು ಅವರು ಯಾವ ಮಂಡಲವನ್ನು ಸಾಂಸ್ಕೃತಿಕ ಮಂಡಲ ಅಂತ ಕರೆದರೋ ಅಂಥಾ ಮಂಡಲದ ಕವಿ ನಾನು ಅಂತ ಹಾಗೇನೇ ಎಲ್ಲೆಲ್ಲಿ ಕರ್ನಾಟಕದ ಜನರು ಇದ್ದಾರೋ ಆ ಎಲ್ಲವೂ ಕೂಡ ಈ ರಾಷ್ಟ್ರದ ಕಲ್ಪನೆಗಳಿಗೆ ಬರುತ್ತದೆ.

ಪ್ರ: *ಈಗ ಕನ್ನಡದಲ್ಲಿ ತಮ್ಮಂತೆ ಇನ್ನೂ ಅನೇಕ ಜನ, ಕವಿಗಳು ಕಾವ್ಯರಚನೆ ಮಾಡ್ತಾ ಇದಾರೆ. ಆದರೆ, ನಾವು ಎಲ್ಲರನ್ನೂ ರಾಷ್ಟ್ರಕವಿ ಅಂತ ಕರೆಯೋದಕ್ಕೆ ಆಗೋದಿಲ್ಲ. ಗೌರವಿಸಲು ಆಗೋದಿಲ್ಲ ಅದಕ್ಕೆ ಏನೋ ವಿಶೇಷವಾದ ಅರ್ಥ ಇದೆ ಅಂತ, ನಾನು ಭಾವಿಸ್ತೀನಿ. ರಾಷ್ಟ್ರಕವಿ ಅಂತ ಒಬ್ಬರನ್ನು ಆರಿಸೋವಾಗ, ಆತ ಕೇವಲ ಕವಿಯಾಗಿದ್ದರೆ ಸಾಲದು. ನನ್ನ ದೃಷ್ಟಿಯಲ್ಲಿ ಆತ ಒಬ್ಬ ಸಾಂಸ್ಕೃತಿಕ ನಾಯಕನಾಗಿರಬೇಕು. ಆಗ ಮಾತ್ರ ಆ ರಾಷ್ಟ್ರಕವಿ ಅನ್ನೋ ಪದಕ್ಕೆ ಒಂದು ವ್ಯಾಪ್ತಿ ಒಂದು ಅರ್ಥ ಬದ್ಧತೆ ಸಿದ್ಧಿಸುವುದು. ನಿಮ್ಮನ್ನು ರಾಷ್ಟ್ರಕವಿ ಅಂತ ಕರೆಯೋವಾಗ, ನಿಮ್ಮ ಸಾಹಿತ್ಯವನ್ನೂ ಲಕ್ಷಿಸಿ, ನಿಮ್ಮ ಸಾಂಸ್ಕೃತಿಕ ಕಾಣಿಕೆಯನ್ನು ಕೂಡ ಗಮನಿಸಿ, ಸರ್ಕಾರ ಈ ನೇಮಕಾತಿಯನ್ನು ಮಾಡಿದೆ. ಅಂತ ನಾನು ಭಾವಿಸಿದೀನಿ.*

ಉ: ಹಾಗೇಂತ ತಿಳ್ಕೊಂಡಿದೀನಿ ನಾನು.

ಪ್ರ: *ಖಂಡಿತವಾಗಿಯೂ. ನೀವು ವೈಯುಕ್ತಿಕವಾಗಿ, ಖಾಸಗಿಯಾಗಿ, ಒಬ್ಬ ಲೇಖಕನಾಗಿ*

ನಿಮ್ಮದೇ ನಿಲುವನ್ನು ಹೊಂದಿರಬಹುದು. ನಿಮ್ಮದೇ ಧೋರಣೆಯನ್ನು ಹೊಂದಿರಬಹುದು. ನಿಮ್ಮದೇ ತಾತ್ವಿಕತೆಯನ್ನು ಹೊಂದಿರಬಹುದು. ಆದರೆ, ನೀವು ಏನು ಮಾಡಿಕೊಂಡು ಬಂದ್ರಿ ನಿಮ್ಮ ಸಾಹಿತ್ಯಕ ಬದುಕಿನಲ್ಲಿ ಅಂದ್ರೆ, ನೀವೆಲ್ಲೇ ಹೋದ್ರೂ ಅಲ್ಲೆಲ್ಲ, ಸಾಂಸ್ಕೃತಿಕ ವೇದಿಕೆಗಳನ್ನು ನಿರ್ಮಾಣ ಮಾಡ್ತಾ, ಅಲ್ಲಿ ವಿಭಿನ್ನ ವಿಚಾರಗಳನ್ನು ತರ್ತಾ ನಾನಾ ರೀತಿಯಲ್ಲಿ ಯೋಚನೆ ಮಾಡೋ ಜನ ಒಟ್ಟಿಗೆ ಅಲ್ಲಿ ಕುಳಿತು, ಅಲ್ಲಿ ಮಾತಾಡೋಂಥ ಅವಕಾಶವನ್ನು ಕಲ್ಪಿಸಿದಿರಿ. ಹೀಗೆ, ಒಂದು ಅಖಂಡ ರಾಷ್ಟ್ರದ ಕಲ್ಪನೆ ನಮ್ಮಲ್ಲಿ ಉಂಟಾಗತಕ್ಕದ್ದು. ಯಾವುದೇ ಒಂದು ಪಕ್ಷ, ಒಂದು ಧರ್ಮ, ಒಂದು ತತ್ತ್ವ ಅದಕ್ಕೆ ಕಟ್ಟು ಬಿದ್ದವನು, ರಾಷ್ಟ್ರಕವಿಯಾಗಲಾರ, ಅಂದರೆ, ಪ್ರಾತಿನಿಧಿಕ ಸ್ವರೂಪವನ್ನು ಅತ ಪಡೆಯಲಾರ ಅಂತ ನಾನು ಭಾವಿಸ್ತೀನಿ. ಕುವೆಂಪು, ಆ ಥರದ ಒಬ್ಬ ವ್ಯಕ್ತಿಯಾಗಿದ್ದರು. ಹಾಗೇ ತಾವೂ ಕೂಡ ಅವರ ಶಿಷ್ಯರಾಗಿ ನಿಜವಾದ ಅರ್ಥದಲ್ಲಿ ರಾಷ್ಟ್ರವನ್ನು ಅಂದ್ರೆ, ಕನ್ನಡ, ರಾಷ್ಟ್ರವನ್ನು ಪ್ರತಿನಿಧಿಸುವಂತಹ, ಕನ್ನಡ ಸಂಸ್ಕೃತಿಯನ್ನು, ಅದರ ವಿರುದ್ಧದ ಎಲ್ಲ ಸೆಳೆತಗಳನ್ನೂ ಕೂಡ, ಒಪ್ಪಿ ಮಾನ್ಯ ಮಾಡುತ್ತ ಇಂತಹ ವಿಚಾರ ಸಂಘರ್ಷದಿಂದಲೇ, ಒಂದು ಒಪ್ಪಂದ ಸಾಧ್ಯ ಅನ್ನೋಂಥ ನಿಲುವಿನಲ್ಲಿ ನೀವು ಕೆಲಸ ಮಾಡ್ತಾ ಬಂದಿದೀರಿ. ಹಾಗಂತ ನಿಮಗೆ ಖಚಿತ ನಿಲುವಿಲ್ಲ ಅಂತ ಅಲ್ಲ, ನಿಮ್ಮ ನಿಲುವು ಖಾಸಗಿ ನಿಲುವಾಗಿರಬಹುದು. ಆದರೆ, ಒಬ್ಬ ಸಾಂಸ್ಕೃತಿಕ ನಾಯಕನಾಗಿ ಎಲ್ಲ ನಿಲುವುಗಳನ್ನೂ ಮಾನ್ಯ ಮಾಡೋದು, ಅದಕ್ಕೆ ಅವಕಾಶ ಕಲ್ಪಿಸೋದು, ಒಂದು ಅಗತ್ಯ, ಹಾಗೆ ಮಾಡೊದ್ರಿಂದ ಮಾತ್ರನೇ ಸಂಸ್ಕೃತಿ ಸಜೀವವಾಗಬಲ್ಲುದು, ಚೇತನಶಾಲಿಯಾಗಬಲ್ಲದು ಎಂಬ ಕಲ್ಪನೆ ತಮ್ಮದು ಅಂತ ನಾನು ಭಾವಿಸ್ತೀನಿ. ಅದು ನೀವು ಸಾಹಿತ್ಯ ವಲಯದಲ್ಲಿ ಮಾಡಿದ್ದೀರಿ. ಸಾಂಸ್ಕೃತಿಕ ವಲಯದಲ್ಲಿ ಮಾಡಿದ್ದೀರಿ. ಧಾರ್ಮಿಕ ವಲಯದಲ್ಲಿ ಕೂಡ ನೀವು ಮಾಡಿದ್ದೀರಿ. ಆ ದೃಷ್ಟಿಯಿಂದ ನಿಮ್ಮನ್ನು ಈ ದಿನ ರಾಷ್ಟ್ರಕವಿಯಾಗಿ ನಮ್ಮ ಸರ್ಕಾರ, ಗೌರವಿಸಿರೋದು ನಿಮ್ಮ ಅಭಿಮಾನಿಗಳಾದ ನಮ್ಮಂತಹ ಅನೇಕರಿಗೆ ಅಪಾರ ಸಂತೋಷವನ್ನು ಉಂಟುಮಾಡಿದೆ. ಈಗ ಒಂದು ವಿಷ್ಯ ಸಾರ್... ನಿಮಗೆ ವಿಶಿಷ್ಟವಾದ ಗುರುಪರಂಪರೆ ಇದೆ. ಈ ದಿನ ನಮ್ಮ ಕರ್ನಾಟಕದ ಒಂದು ಅತ್ಯುನ್ನತ ಪದವಿಯನ್ನು, ಸ್ಥಾನಮಾನ ಪಡೆದಿರುವಾಗ, ನಿಮ್ಮ ಆಚಾರ್ಯ ಪರಂಪರೆ ಏನಿದೆಯಲ್ಲ. ನಮ್ಮ ಕುಮಾರವ್ಯಾಸ ಹೇಳೋ ಹಾಗೆ, ಇದು ಬಹಳ ಮುಖ್ಯವಾದದ್ದು ಅಂತ, ಅದನ್ನ ನೀವು ನೆನೆಸಿಕೊಳ್ಳೋದು ತುಂಬಾ ಅಗತ್ಯ ಅಂತ ಅನ್ನಿಸುತ್ತೆ, ನಿಮ್ಮ ಮೇಲೆ ಪ್ರಭಾವ ಬೀರಿರುವಂತಹ, ಬಹಳ ಮುಖ್ಯವಾಗಿರುವಂತ ಮೂವರು ನನಗೆ ತಕ್ಷಣ ನೆನಪಾಗ್ತಾ ಇದಾರೆ. ಒಬ್ಬರು ಕುವೆಂಪು, ಇನ್ನೊಬ್ಬರು, ತೀನಂಶ್ರೀ ಮತ್ತು ತ.ಸು. ಶಾಮರಾಯರು ಈ ಮೂರು ಜನ ಆಚಾರ್ಯರಿದ್ದಾರಲ್ಲ, ಇವರ ಬಗ್ಗೆ ನಿಮ್ಮ ಬಳಿ ಕೇಳಲು ನಮಗೆ ತುಂಬಾ ಕುತೂಹಲ ಇದೆ.

ಉ: ಬಹಳ ಸರಿಯಾಗಿ ಗುರುತಿಸಿದಿರಿ ನೀವು, ನಾನು ಬೆಳೆದಿರುವುದು ಅನೇಕ ಸಂಸ್ಥೆಗಳ, ವ್ಯಕ್ತಿಗಳ ಪೋಷಣೆಯಿಂದ, ಮೊದಲಿಗೆ ನೆನೆಸಿಕೊಳ್ಳಬೇಕಾದದ್ದು. ಸಿದ್ಧಗಂಗಾ ಕ್ಷೇತ್ರವನ್ನು

ಅತ್ಯಂತ ಬಡತನದ ಹಿನ್ನೆಲೆಯಿಂದ ಬಂದ ನನಗೆ, ಯಾವುದೇ ವಿದ್ಯಾರ್ಥಿ ನಿಲಯದಲ್ಲಿ ಸ್ಥಳ ಸಿಗದೆ ಇರೋವಾಗ, ಸಿದ್ಧಗಂಗೆಯಂತಹ ಒಂದು ಕ್ಷೇತ್ರದಲ್ಲಿ, ಅಲ್ಲಿನ ಸ್ವಾಮಿಗಳು ನನಗೆ ಸ್ಥಳಾವಕಾಶ ಮಾಡಿಕೊಟ್ರು, ಎಸ್.ಎಸ್.ಎಲ್.ಸಿ.ಗೆ ಬಂದಾಗ, ನಾನು ಆ ಸ್ಥಿತೀಲಿ ಇದ್ದೆ. Turning point ಅದು. ಬದುಕಿನಲ್ಲಿ. ಮುಂದಿನ ಶಿಕ್ಷಣದ ದೃಷ್ಟಿಯಿಂದ ಮತ್ತು ಯಾವಾಗ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದೆನೋ ಆಗ, ಮನೆಯೊಳಗೆ ನೀವು ಕೆಲಸಕ್ಕೆ ಹೋಗೋದು ಒಳ್ಳೆದು ಅಂತ ಬಲವಂತ ಮಾಡುವಾಗ, ನಾನು ಇನ್ನೂ ಮುಂದಕ್ಕೆ ಓದಬೇಕು ಅನ್ನೋ ಛಲ ಇಟ್ಕೊಂಡು ಮಠ ಸೇರಿದವನು. ಹೀಗೆ ೩-೪ ವರ್ಷ ನಾನು ಅಲ್ಲಿದ್ದವನು. ಆ ಸ್ವಾಮಿಗಳು ಇವತ್ತು ಯಾರು ನಡೆದಾಡುವ ದೇವರು ಅಂತ ಅನೇಕರು ವರ್ಣಿಸ್ತಾರೋ ಆ ದೇವರ ಸಾನ್ನಿಧ್ಯದಲ್ಲಿ ನಾನು ಬೆಳೆದವನು. ಗುಡ್ಡ-ಬೆಟ್ಟಗಳ ಪ್ರಶಾಂತ ಪರಿಸರದೊಳಗೆ, ನಾನು, ನನ್ನ ಶಿಕ್ಷಣವನ್ನು ಪಡೆದೆ. ನಾನು ಓದೋ ಕಾಲಕ್ಕೆ, ನಾನ್ನೂರು ಜನ ವಿದ್ಯಾರ್ಥಿಗಳಿದ್ದರು. ಈಗ ೮೦೦೦, ವಿದ್ಯಾರ್ಥಿಗಳು ಅಶನ ವಸತಿಗಳನ್ನು ಪಡೆದುಕೊಂಡು, ಅಲ್ಲಿ ಅಭ್ಯಾಸ ಮಾಡ್ತಿದ್ದಾರೆ. ಈ ದೇಶದ ಅವಕಾಶ ವಂಚಿತರಿಗೆ ಬಡವರಿಗೆ ಅವಕಾಶ ಕೊಟ್ಟ ಸ್ಥಳ ಅದು. ಅಂತಹ ಸ್ಥಳದಲ್ಲಿ ನಾನು ಅಭ್ಯಾಸ ಮಾಡಿದೆ. ಆದ್ದರಿಂದ ಮೊದಲು, ನಾನು ಶ್ರೀಕ್ಷೇತ್ರ ಸಿದ್ಧಗಂಗೆಗೆ ನಮನವನ್ನು ಸಲ್ಲಿಸಬೇಕು. ಅಲ್ಲಿಂದ ನಾನು ಮೈಸೂರಿಗೆ ಬಂದಾಗ, ಬಹಳ ಪ್ರಭಾವ ಬೀರಿದಂತಹ ವ್ಯಕ್ತಿಗಳು ಅಂದ್ರೆ, ಕುವೆಂಪು, ಅವರು. ಅವರ ಸಾನ್ನಿಧ್ಯದಲ್ಲಿ ನಾನೇನನ್ನು ಪಡೆದೆನೋ, ಅದು ನಾನು ಇವತ್ತು ಏನಾಗಿದ್ದೇನೋ ಅದಕ್ಕೆ ಕಾರಣ. ಅವರು ಅತ್ಯಂತ ಉಜ್ವಲವಾದ ಸಾಹಿತಿ, ಆ ಕಾಲಕ್ಕೆ ಅವರ ಪ್ರೇರಣೆ ಮತ್ತು ಪ್ರಭಾವಗಳಿಂದ ನನ್ನ ಕಾವ್ಯ ಜೀವನ ಮತ್ತು ಸಾಹಿತ್ಯ ಜೀವನ ರೂಪುಗೊಂಡಿದೆ. ಆದ್ದರಿಂದ ಈ ದೃಷ್ಟಿಯಿಂದ ಕುವೆಂಪು ಅವರು ನನ್ನ ದೃಷ್ಟಿಯಲ್ಲಿ ಆಚಾರ್ಯಪುರುಷರು.

ಎರಡನೇಯವರು, ತ.ಸು. ಶಾಮರಾಯರು. ಆ ಕಾಲದಲ್ಲಿ ಅವರಿಲ್ಲದೆ ಇದ್ದಿದ್ರೆ ನನ್ನ ಬದುಕು ಮತ್ತೆ ಅಸ್ತವ್ಯಸ್ತಗೊಳ್ಳುವ ಸಂಭವ ಇತ್ತು. ಹೀಗೆ ನನ್ನ ಬದುಕಿನ ಆಸೆ ಕಲ್ಪಿಸಿದವರು ನನ್ನನ್ನು ಪೋಷಿಸಿದವರು ತ.ಸು. ಶಾಮರಾಯರು. ನಾನು ಬರೆದ ಕವಿತೆಗಳನ್ನು ಕೇಳಿ, ಅದನ್ನ ಸಂತೋಷಪಟ್ಟು ಅದನ್ನೆಲ್ಲ ಸೇರಿಸಿ, ಮೊಟ್ಟ ಮೊದಲ. ಕವನ ಸಂಕಲನ ಮಾಡೋದ್ರ ಮೂಲಕ ನನ್ನ ಪರಿಚಯ ಮಾಡಿಕೊಟ್ಟವರು. ಒಂದು ಮಾತಿನಲ್ಲಿ ಹೇಳೋದಾದ್ರೆ, ಕುವೆಂಪು ಅವರು, ನನ್ನ ಕಾವ್ಯಜೀವನಕ್ಕೆ ಗಾಳಿ ಬೆಳಕು ಇದ್ದ ಹಾಗೆ. ತ.ಸು. ಶಾಮರಾಯರು, ನೆಲ ನೀರು ಇದ್ದ ಹಾಗೆ. ಹಾಗೆನೇ, ಎದೆ ತುಂಬಿ ಹಾಡಿದೆನು ಅನ್ನೋ ಕವಿತೆಯಿದೆಯಲ್ಲ, ಆ ಕವಿತೇನ ನಾನು ಬರೆದದ್ದು. ಶಾಮರಾಯರನ್ನು ಕುರಿತು. ನಾನು ಎದೆತುಂಬಿ ಹಾಡಿದ್ದನ್ನು ಮೊಟ್ಟಮೊದಲು ಕೇಳಿದವರು ಅವರೇ. ಮತ್ತೊಬ್ಬರು ಆಚಾರ್ಯರು, ನನ್ನ ಬದುಕಿನ ಮೇಲೆ ಪ್ರಭಾವ ಬೀರಿದವರು ಅಂದ್ರೆ, ತೀ.ನಂ.ಶ್ರೀಕಂಠಯ್ಯನವರು. ಅವರ ವಿದ್ವತ್ತು, ಅವರ ನಿಕ್ಷ್ಪಕ್ಷತೆ, ಅವರ ಸಂಯಮ ಪೂರ್ಣವಾದ ಬರವಣಿಗೆ ಇವೆಲ್ಲವೂ ಕೂಡ ನನ್ನ ಮೇಲೆ ಬಹಳ ಪರಿಣಾಮ ಉಂಟು

ಮಾಡಿದೆ. ನಾನು ಅವರ ವಿದ್ಯಾರ್ಥಿಯಾಗಿರಲಿಲ್ಲ. ಅವರು ನಾನು ಓದೋ ಕಾಲಕ್ಕೆ ಗುರುಗಳಾಗಿರಲಿಲ್ಲ. ಆದರೆ, ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದಾಗ, ಅವರು ಪ್ರೊಫೆಸರ್ ಆಗಿದ್ದರು. ನಾನು ಅಧ್ಯಾಪಕನಾಗಿದ್ದೆ. ಆಗ ನಾನು ಅವರ ತರಗತಿಗಳನ್ನು ಪ್ರವೇಶ ಮಾಡೋದ್ರ ಮೂಲಕ, ಪಾಠ ಕೇಳುವ ಅನುಮತಿಯನ್ನು ಅವರಿಂದ ಪಡೆದು, ೨ ವರ್ಷಗಳ ಕಾಲ ಎಂ.ಎ.ವಿದ್ಯಾರ್ಥಿಗಳ ಜೊತೆ ಕೂತು ಅವರ ಪಾಠ ಕೇಳಿದ್ದೇನೆ. ಅದು ನನ್ನ ಬರವಣಿಗೆಗೆ ಒಂದು ನಿಷ್ಕೃಷ್ಟತೆಯನ್ನು ಒಂದು ಖಚಿತತೆಯನ್ನು ಕೊಟ್ಟಿತು. ಕುವೆಂಪು ಅವರ ಅಮೂರ್ತವಾದ ಪ್ರತಿಭಾವಿಲಾಸ, ಇವರ ನಿಷ್ಕೃಷ್ಟ ಪಾಂಡಿತ್ಯ, ಇವೆರಡೂ, ನನ್ನ ಬರವಣಿಗೆಯನ್ನು ರೂಪಿಸಿವೆ. ಈ ದೃಷ್ಟಿಯಿಂದ, ನಾನು ಮೊಟ್ಟ ಮೊದಲು ನೆನೀದೇಕಾದ್ದು ಈ ಮೂರು ಜನರನ್ನು ಅಂತ ನಾನು ಭಾವಿಸ್ತೀನಿ.

**ಪ್ರ:** *ಹಾಗೇ ನೀವು ಕವಿಯಾಗಿ, ತುಂಬ ಹೆಸರು ಮಾಡಿರೋಂಥವರು. ವಿಮರ್ಶೆ, ಕಾವ್ಯಚಿಂತನೆ, ಇವು ನಿಮಗೆ ಪ್ರಿಯವಾದ ರಂಗಗಳೇ ಆದರೂ ಕೂಡ, ಈ ದಿನ ಕನ್ನಡ ಸಂಸ್ಕೃತಿಯಲ್ಲಿ ನಿಮ್ಮನ್ನು ಕವಿಯಾಗಿ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ನಿಮ್ಮ ಕಾವ್ಯ ಜೀವಿತದ ಮೇಲೆ, ಗಾಢವಾದ ಪ್ರಭಾವ ಬೀರಿದಂತಹ ಕವಿಗಳು ಯಾರು ?*

**ಉ:** ನಾನು ಇಡೀ ಕನ್ನಡ ಸಾಹಿತ್ಯ ಪರಂಪರೆಯಿಂದಲೂ ಸಾಕಷ್ಟು ಪುಷ್ಟಿ ಪಡೆದಿದ್ದೇನೆ. ರನ್ನ, ಪಂಪ, ಕುಮಾರವ್ಯಾಸ, ವಚನಕಾರರು, ಬಹಳ ಮುಖ್ಯವಾದ ಘಟ್ಟಗಳು. ಯಾವುದೇ ಕನ್ನಡ ಸಾಹಿತಿ ಈ ಮೂರು ಘಟ್ಟಗಳ ಪರಿಚಯ ಇಲ್ಲದೆ ಇದ್ರೆ, ಅವನ ಬರವಣಿಗೆ ಅಷ್ಟು ಸಶಕ್ತವಾಗೋದಿಲ್ಲ. ಯಾಕೆಂದ್ರೆ ಮತ್ತೆ ಮತ್ತೆ ಪ್ರಾಚೀನಕ್ಕೆ ಹೋಗಬೇಕಾದ್ರೆ, ನಾವು ಈ ಮೂವರ ಕಡೆ ನೋಡಬೇಕಾಗುತ್ತದೆ. ಎರಡನೇದು ನನ್ನ ಕಾವ್ಯ ಜೀವನದಲ್ಲಿ ಹೆಚ್ಚು ಪ್ರಭಾವ ಬೀರಿದವರು ಕುವೆಂಪು ಅವರೇ. ಅದರಲ್ಲಿ ಅನುಮಾನವೇ ಇಲ್ಲ. ಯಾಕೆಂದ್ರೆ ಆ ವ್ಯಕ್ತಿತ್ವವೇ ಅಂಥದ್ದು. ಆಕರ್ಷಿತನಾದೆ. ನವೋದಯದ ಉತ್ಕರ್ಷ ಕಾಲದಲ್ಲಿ, ಸಾಹಿತ್ಯವನ್ನು ಪ್ರವೇಶಿಸಿದಾಗ ನಮ್ಮೆದುರಿಗೆ ಇದ್ದಂತ ಮಹಾ ಸತ್ವಗಳು ಅವು. ಯಾರೂ ತಪ್ಪಿಸಕೊಳ್ಳಲೇ ಸಾಧ್ಯ ಇಲ್ಲ. ಬೇಂದ್ರೆ, ಪುತಿನ ಮೂವರೂ ನನಗೆ ಪರಿಚಯ. ಆದರೆ, ನಮ್ಮ ಮುಖ್ಯವಾದ ಸಮಾಧಾನ ಅಂದ್ರೆ, ಸಮಸ್ಯೆ ಅಂದ್ರೆ, ಪ್ರಭಾವಕ್ಕೆ ಒಳಗಾದ್ರೂ ಕೂಡ ಅದರಿಂದ ದೂರಾಗೋದನ್ನು ಕೂಡ ಕ್ರಮೇಣ ಕಲಿತುಕೊಂಡಿದ್ದೇನೆ. ಕಲಿತುಕೊಳ್ಳೋದಿಕ್ಕೆ ಅನೇಕ ಸಾಹಿತ್ಯ ಚಳುವಳಿಗಳು ನನಗೆ ಮಾರ್ಗದರ್ಶಕವಾಗಿವೆ. ಯಾಕೆಂದ್ರೆ, ನವೋದಯದ ಉತ್ಕರ್ಷದ ಕಾಲಕ್ಕೆ, ಮತ್ತೆ ನವೋದಯದ ಹಾಗೆ ಬರೆದರೆ ಪ್ರಯೋಜನವಿಲ್ಲ. ಮತ್ತೆ ನವ್ಯದ ಕಾಲದಲ್ಲಿ ನವ್ಯದ ಹಾಗೆ ಬರೆದ್ರೆ ಪ್ರಯೋಜನವಿಲ್ಲ. ಆದ್ದರಿಂದ ನವೋದಯದವರಿಂದ ಏನು ಕಲೀಬಹುದು. ನವ್ಯದವರಿಂದ ಏನು ಕಲೀಬಹುದು. ದಲಿತ ಬಂಡಾಯದವರಿಂದ ಏನು ಕಲೀಬಹುದು. ಹೀಗೆ ಪ್ರತಿಯೊಂದು ಚಳುವಳಿಯಿಂದಲೂ ಕೂಡ, ನನ್ನ ಸೃಜನಶೀಲತೆಗೆ ತಕ್ಕ ಹಾಗೆ, ಅನೇಕ ಪಾಠಗಳನ್ನ ನಾನು ಕಲಿತು, ನಾನು ಅರಗಿಸಿಕೊಂಡಿದ್ದೇನೆ. ನಾನು ಇವುಗಳನ್ನು ಸೃಜನಶೀಲತೆಗೆ

ತಕ್ಕ ಹಾಗೆ ಅರಗಿಸಿಕೊಂಡ ಕ್ರಮ ಅನ್ನಬಹುದೇ ಹೊರತು, ಅದನ್ನು ಸಮನ್ವಯ ಅಂತ ಹೇಳಕ್ಕಾಗಲ್ಲ.

ಪ್ರ: *ಸಮನ್ವಯ ಅನ್ನೋದು ನೀವು ಬೇಡಾಂದ್ರೂ ನಿಮ್ಮನ್ನು ಬೆಂಬತ್ತಿ ಬರ್ತಾ ಇರೋ ಪೀಡೆ. ಇರಲಿ, ನನಗನ್ನಿಸುತ್ತದೆ ನೀವು ನವೋದಯದ ಕಾಲದಲ್ಲಿ ಕುವೆಂಪು, ಪುತಿನ ಬೇಂದ್ರೆ ಅಂತ ಮಹಾಕವಿಗಳಿಂದ ಪ್ರೇರಿತರಾಗಿದ್ದರೂ ಕೂಡ ನಿಮ್ಮ ಕಾವ್ಯಗಳಲ್ಲಿ ಭಿನ್ನತೆ ಇದೆ ಅಂತ. ಉದಾಹರಣೆಗೆ, ನವೋದಯದವರಿಗೆ ಬಹಳ ಪ್ರಿಯವಾದ ಆಧ್ಯಾತ್ಮಿಕತೆ ಗುಂಗು ನಿಮ್ಮಲ್ಲಿಲ್ಲ. ಎರಡನೇದು ವೈಚಾರಿಕತೆ ನಿಮ್ಮ ಕಾವ್ಯದ ಬಹಳ ಪ್ರಧಾನವಾದ ಸತ್ವ ಅಂತ ಭಾವಿಸ್ತೀನಿ, ಅದರಲ್ಲೂ ಕುವೆಂಪು ಹಾಗೆ ನೀವೂ ಕೂಡ ಶೋಷಿತರ ಪರವಾಗಿ ಕೆಳವರ್ಗದ ಪರವಾಗಿ, ನೊಂದವರ ಪರವಾಗಿ, ಸದಾ ಧ್ವನಿ ಎತ್ತುತ್ತ ಬಂದವರು. ಪ್ರತಿಭಟನೆ ಮಾಡ್ತಾ ಬಂದವರು. ಆ ದೃಷ್ಟಿಯಿಂದ ಕೂಡ ನಿಮ್ಮ ವೈಚಾರಿಕತೆ ಬಹಳ ತೀವ್ರವಾದದ್ದು. ಮೂರನೇದು, ಸಾಮಾನ್ಯವಾಗಿ ನವೋದಯ ಪರಂಪರೆಯಲ್ಲಿ, ಅಪಾರವಾದ ದೈವಶ್ರದ್ಧೆ ಅನ್ನೋದು ಕಂಡು ಬರುತ್ತೆ. ನಿಮ್ಮ ಕಾವ್ಯದಲ್ಲಿ ಅಂಥ ದೈವಶ್ರದ್ಧೆ ಕೂಡ ನನಗೆ ಅಷ್ಟು ವಿಶೇಷವಾಗಿ ಕಾಣಿಸ್ತಾ ಇಲ್ಲ. ಹಾಗೇ ಪ್ರಕೃತಿ ಬಗ್ಗೆ ಕೂಡ ನಿಮ್ಮಲ್ಲಿ ಅಂತಾ ಕಾಳಜಿ ಇಲ್ಲ. ಕುವೆಂಪು ಅಂಥ ಕವಿ ನಿಮ್ಮ ಮೇಲೆ ಪ್ರಭಾವ ಬೀರಿದ್ರೂ, ಅವರ ಪ್ರಕೃತಿ ಪ್ರೇಮ ನಿಮ್ಮಲ್ಲಿ ಕಾಣಲಿಲ್ಲ. ನಿಮಗೆ ಸಮಾಜ ಮುಖ್ಯ. ಜನಗಳ ಸಂಬಂಧ ಮುಖ್ಯ. ಸಮಾಜದಲ್ಲಿನ ಏರುಪೇರುಗಳನ್ನು ಸರಿಪಡಿಸುವ ಧಾವಂತ, ಅದು ಆಗದಿದ್ದಾಗ ಉಂಟಾಗೊ ಹತಾಶೆ, ಕತ್ತಲ ವಿರುದ್ಧ ಹೇಗಾದ್ರು ಹಣತೆ ಹಚ್ಚೇನಿ ಅನ್ನುವ ಧೀರಸಂಕಲ್ಪ, ಇಂಥ ಒಂದು ಏಕಾಂಗಿ ಹೋರಾಟದ ಪ್ರತಿನಿಧಿಯಾಗಿ ನೀವು ಕಂಡು ಬರ್ತಾ ಇದೀರಿ. ಆಶ್ಚರ್ಯ. ಅಂದ್ರೆ, ಧಾರ್ಮಿಕ ವಲಯದ ಪ್ರಭಾವದಲ್ಲಿ ಬೆಳೆದಿರಿ. ಸಿದ್ಧಗಂಗಾ ಆಶ್ರಮ, ರಾಮಕೃಷ್ಣ ಆಶ್ರಮದ ಪ್ರಭಾವ ನಿಮ್ಮ ಮೇಲೆ ತುಂಬಾ ಆಗಿದೆ. ಅನೇಕ ಸೊಗಸಾದ ಪದ್ಯಗಳನ್ನು ಅನುವಾದ ಮಾಡಿದ್ದೀರಿ ನೀವು. "ಹೌದೇನೇ ಉಮಾ ಹೌದೇನೇ ! ಉಡುಗಣ ವೇಷ್ಟಿತ, ಇವೆಲ್ಲ ಅಲ್ಲಿಂದ ಬಂದವು. ಇವೆಲ್ಲ ಬರೆದಿದ್ರೂ ಕೂಡ ನಿಮ್ಮ ದೈವಚಿಂತನೆ ಭಿನ್ನವಾದದ್ದು ಅಂತ. ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ. ಅನ್ನುವಾಗ ಇದು ಬಹಳ ಚರ್ಚೆಗೆ ಒಳಗಾಯ್ತು. ಇಲ್ಲದ ದೇವರು ಅಂತಾರಲ್ಲ, ದೇವರಿಲ್ಲ ಅಂತ ಶಿವರುದ್ರಪ್ಪ ಹೇಗೆ ಹೇಳ್ತಾರೆ ಅಂತ. ನನಗನ್ನಿಸುತ್ತೆ. ನೀವು ಕಲ್ಲು ಮಣ್ಣಿನ ಗುಡಿಯಲ್ಲಿ ದೇವರಿಲ್ಲ ಅಂತ ಹೇಳ್ತೀರಿ. ಆ ದೇವರೆಲ್ಲಿದ್ದಾನೆ. ಪ್ರೀತಿ–ಸ್ನೇಹಗಳನ್ನು ಹೇಳ್ತೀರಿ. ನಿಮ್ಮ ದೈವಕಲ್ಪನೆ ಬಹಳ ಭಿನ್ನ. ನಾಸ್ತಿಕರು ಅನ್ನಲ್ಲ ನಾನು. ನಿಮ್ಮ ದೈವ ಕಲ್ಪನೆ ಏನು ?*

ಉ: ಮೊದಲಿಗೆ ನನಗೆ ರಾಮಕೃಷ್ಣ ಪರಮಹಂಸರ ಪ್ರಭಾವಲಯ ಇತ್ತು ಕುವೆಂಪು ಅವರಿಂದ. ರಾಮಕೃಷ್ಣ ಪರಮಹಂಸರು ಸರ್ವಧರ್ಮ ಸಮನ್ವಯ ಹೇಳಿದವರು. ಎಲ್ಲ ಧರ್ಮಗಳೂ ಸತ್ಯ. ಯಾವುದೂ ಶ್ರೇಷ್ಠವಲ್ಲ. ಯಾವುದೂ ಕನಿಷ್ಠವಲ್ಲ. ಈ ಮಹಾತತ್ತ್ವ ಇದೆಯಲ್ಲ, ಇದು ಎಲ್ಲ ಕವಿಗಳಲ್ಲೂ ಪ್ರಭಾವಿಸಿದೆ. ನೀವು ಹೇಳಿದ ಹಾಗೆ ಸಾಂಪ್ರದಾಯಿಕ ದೇವರ

ಕಲ್ಪನೆ ನಂದಲ್ಲ. ಅದಕ್ಕೆ ಅದರ ಬಗ್ಗೆ ಯೋಚನೆ ಮಾಡೋಕಿಂತ, ನಾವು ನಮ್ಮ ಮಾನವೀಯ ಸಂಬಂಧಗಳನ್ನು ಕುರಿತು ಯೋಚಿಸೋಣ. ಮನುಷ್ಯನ ನಡುವಿನ ಅಡ್ಡಗೋಡೆಗಳನ್ನು ಕೆಡವೋಣ, ಕತ್ತಲೆಯಲ್ಲಿ ದೀಪ ಹಚ್ಚುವ ಪ್ರಯತ್ನ ಮಾಡೋಣ. ನೊಂದವರ ಕಂಬನಿ ಒರೆಸೋಣ. ಶೋಷಿತರ ಪರವಾಗಿ ದನಿಯೆತ್ತಿ ನಿಲ್ಲೋಣ. ಈ ಬಗೆಯ ಸಾಮಾಜಿಕ ಕಾಳಜಿಯನ್ನು ಯಾವ ದೃಷ್ಟಿಯಿಂದಲೂ ಅಧ್ಯಾತ್ಮದ ದೃಷ್ಟಿಗೆ ವಿರೋಧ ಅನ್ನಲು ಆಗಲ್ಲ. ಎಲ್ಲ ಆಧ್ಯಾತ್ಮವೂ ಕೂಡ ಅದು, ಮನುಷ್ಯನ ಸಮಾನತೆಯ ಪರವಾಗಿಯೇ ಇರತಕ್ಕದ್ದು. ಮುಖ್ಯವಾಗಿ ಆಧ್ಯಾತ್ಮ ಅಂದ್ರೆ, ಸಮಾನತೆಯನ್ನು ಕಟ್ಟುವ, ಕಾಣುವ ಪ್ರವೃತ್ತಿ. ಹೀಗೆ ಧರ್ಮವನ್ನು ಆಧ್ಯಾತ್ಮಿಕ ನೆಲೆಯಿಂದ ಬಿಡಿಸಿ, ಸಾಮಾಜಿಕ ನೆಲೆಯಲ್ಲಿಟ್ಟು ನೋಡ್ದಾಗ, ಕಾಣುವ ಮತ್ತು ಕಟ್ಟುವ, ಮನೋಧರ್ಮವೇ ಆಧ್ಯಾತ್ಮ. ಹೀಗಾಗಿ, ನಮ್ಮ ವಾಸ್ತವಿಕ ಜೀವನ ಈಗಿರುವುದಕ್ಕಿಂತ ಇನ್ನಷ್ಟು ಸುಖವಾಗಿ, ಇನ್ನಷ್ಟು ಸುಂದರವಾಗಿ, ಇನ್ನಷ್ಟು ವೈಚಾರಿಕವಾಗಿ ರೂಪುಗೊಳ್ಳಬೇಕು. ಎಲ್ಲ ವಿಚ್ಛಿದ್ರಕಾರಕ ಶಕ್ತಿಗಳಿಂದ ಮನುಷ್ಯ ಒಡೆದು ಹೋಗ್ತಿದಾನೆ. ಈ ಒಡೆಯುವ ಮನುಷ್ಯನನ್ನು ಕೂಡಿಸುವುದು ಹೇಗೆ ? ಅನ್ನೋದೇ ನನ್ನ ಕಾವ್ಯಗಳ ಮುಖ್ಯ ಅಂಶವಾಗಿದೆ.

ಪ್ರ: *ಅನೇಕ ಪ್ರಶ್ನೆಗಳು ನಮ್ಮಲ್ಲಿವೆ. ಆದರೂ, ನನಗೆ ತುಂಬ ಮುಖ್ಯ ಅನ್ನಿಸಿದ ಒಂದು ಪ್ರಶ್ನೆ. ಇವತ್ತಿನ ಜಾಗತಿಕ ಸಂದರ್ಭದಲ್ಲಿ ನೀವು ರಾಷ್ಟ್ರಕವಿ ಆಗಿದ್ದೀರಿ. ರಾಷ್ಟ್ರೀಯತೆ ಅನ್ನೋ ಕಲ್ಪನೆಗಾಗಲೀ, ಉಪರಾಷ್ಟ್ರೀಯತೆ ಅನ್ನೋ ಕಲ್ಪನೆಗಾಗಲೀ, ಪ್ರಾಂತೀಯತೆ ಅನ್ನೋ ಕಲ್ಪನೆಗಾಗಲೀ, ಪ್ರಾಂತ್ಯದ ಭಾಷೆಯಾಗಿರುವ ಕನ್ನಡವನ್ನು ಉಳಿಸಿಕೊಳ್ಳಬೇಕು ಕನ್ನಡವೇ ಸತ್ಯ ಅನ್ನೋದಾಗಲೀ, ಇದರಲ್ಲಿ ಏನು ಅರ್ಥ ಇದೆ ? ಇದಕ್ಕೆ ಏನಾದರೂ ವ್ಯಾವಹಾರಿಕ ನೆಲೆ ಉಂಟಾ ಅಂತ ನನಗೆ ತುಂಬ ಸಂಶಯ ಇದೆ.*

ಉ: ಈಗ ನಮ್ಮ ಭಾಷೆ, ಸಂಸ್ಕೃತಿ, ಎಲ್ಲವೂ ಕೂಡ ಅತ್ಯಂತ ಆತಂಕದ ಸ್ಥಿತಿಯಲ್ಲಿವೆ. ವಾಸ್ತವವಾಗಿ ನಾವು ನಮ್ಮ ದೇಶೀಯತೆಗೆ ಹಿಮ್ಮರಳುವ ಪ್ರಯತ್ನ ಮಾಡುವ ಮೂಲಕ ನಮ್ಮ ಬೇರುಗಳನ್ನು ಕಂಡುಕೊಳ್ಳುವ ಮೂಲಕ ಈ ಹೊರಗಿನ ಆಕ್ರಮಣಗಳನ್ನು ಎದುರಿಸಲು ಸಾಧ್ಯ ಅಂತ ಅಂದ್ಕೊಂಡಿದೇನೆ. ಯಾಕೆಂದ್ರೆ ಇವತ್ತು ಹಿಂಸೆ ತಾಂಡವವಾಡ್ತಾ ಇದೆ. ಇವತ್ತಿನ ಬಹಳ ಪ್ರಧಾನವಾದ ಸಮಸ್ಯೆ ಹಿಂಸೆ. ವಿಜ್ಞಾನ ಇಷ್ಟು ಬೆಳೆದ್ರೂ ಕೂಡ, ವಿಜ್ಞಾನ ಹಿಂಸೆಯ ಉಪಕರಣವಾಗಿಯೂ ಕೆಲಸ ಮಾಡ್ತಾ ಇದೆ. ಅತ್ಯಂತ ಅಸ್ವಸ್ಥವಾಗಿ ಕಾಣುವ ಈ ಜಗತ್ತಿನಲ್ಲಿ, ನಾವು ನಮ್ಮ ಭಾಷೆಯನ್ನು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳೋದು ಹೇಗೆ ಅಂತ ನಾವು ಗಂಭೀರವಾಗಿ ವಿಚಾರ ಮಾಡಬೇಕಾಗಿದೆ ಅಂತ ನನಗನ್ನಿಸ್ತಾ ಇದೆ.

ಪ್ರ: *ಕೊನೆ ಪ್ರಶ್ನೆ : ಸಮೂಹ ಮಾಧ್ಯಮಗಳಲ್ಲಿ ಆಕಾಶವಾಣಿ ತುಂಬಾ ಪ್ರಭಾವಶಾಲಿ, ತುಂಬಾ ಜನಪ್ರಿಯ. ನಿಮ್ಮ ಮತ್ತು ಇದರ ಒಡನಾಟದ ಬಗ್ಗೆ ೨ ಮಾತು ಹೇಳಿ.*

ಉ: ಆಕಾಶವಾಣಿ ಜೊತೆ ನನ್ನ ಸಂಬಂಧ ಬಹಳ ಬಹಳ ಗಾಢವಾದದ್ದು. ಬಹಳ ಕಾಲದ್ದು

ಕೂಡ ಹೌದು. ಮೊಟ್ಟ ಮೊದಲು, ನನ್ನ ಜನರ ಹತ್ತಿರ ಕರೆದುಕೊಂಡು ಹೋಗಿ ನಾನು ಕವಿ ಅಂತ ಗುರುತಿಸಿಕೊಳ್ಳೋ ಹಾಗೆ ಮಾಡಿದ್ದು, ಆಕಾಶವಾಣಿ. ನವ್ಯಕಾವ್ಯದ ಸಂದರ್ಭದಲ್ಲಿ ನವೋದಯದ ನಮ್ಮಂತ ಎಷ್ಟೋ ಜನರು ನಿರ್ಲಕ್ಷ್ಯಕ್ಕೊಳಗಾದ ಸಂದರ್ಭದಲ್ಲಿ ಆಕಾಶವಾಣಿಯ ಕಲಾವಿದರು ನಮ್ಮ ಗೀತೆಗಳನ್ನು ಹಾಡೋದ್ರ ಮೂಲಕ ನಮಗೆ ಹೆಸರನ್ನು ಕೊಟ್ಟರು. ನಮ್ಮ ಮುಂದಿನ ಕಾವ್ಯ ಜೀವನಕ್ಕೆ ರಕ್ಷಣೆ ಮತ್ತು ಪೋಷಣೆ ಒದಗಿಸಿತು ಅಂತ ನಾನು ವಿಶೇಷವಾಗಿ ನೆನೆಸ್ತೀನಿ.

■■

# ಸಾಧನೆಯ ಹಾದಿ ಮಾಲಿಕೆಯಲ್ಲಿ

**ಡಾ. ಜಿ.ಎಸ್. ಶಿವರುದ್ರಪ್ಪ ಅವರೊಂದಿಗೆ ಸಂದರ್ಶನ**

●

*ಸಂದರ್ಶಿಸಿರುವವರು : **ಜಿ.ಪಿ. ಬಸವರಾಜು***

**ಜಿ.ಪಿ.ಬಿ :** *ಪ್ರೊಫೆಸರ್ ಜಿ.ಎಸ್.ಎಸ್. ಅವರು, ಕನ್ನಡ ಕಾವ್ಯ ಪ್ರೇಮಿಗಳಿಗೆ ಚಿರಪರಿಚಿತರಾದವರು. ಕವಿಯಾಗಿ ೫೦ ವರ್ಷಗಳಿಗೂ ಮಿಕ್ಕಿದ ಕಾಲಾವಧಿಯಲ್ಲಿ ಅವರು ತಮ್ಮ ಕಾವ್ಯ ಪ್ರಯೋಗವನ್ನು ಮಾಡ್ತಾ ಬಂದಿದ್ದಾರೆ. ಜನರ ಹೃದಯಗಳನ್ನು ಕೂಡ ಗೆಲ್ಲುತ್ತಾ ಬಂದಿದ್ದಾರೆ. ಕವಿ ಮಾತ್ರ ಅಲ್ಲ, ಕನ್ನಡ ಪರಂಪರೆಯ ಜೊತೆಗೆ ಗಾಢವಾದ ಸಂಬಂಧವನ್ನು ಇಟ್ಕೊಂಡು, ಅಲ್ಲಿಯ ಕೃತಿಗಳನ್ನು ವಿಮರ್ಶೆ ಮಾಡ್ತಾ ವಿಮರ್ಶಕರಾಗಿ, ಆಮೇಲೆ ವಿದ್ವಾಂಸರಾಗಿ, ಕಾವ್ಯಾರ್ಥ ಚಿಂತನದಂಥ ಕೃತಿಗಳನ್ನು ಸೌಂದರ್ಯ ಮೀಮಾಂಸೆ ಅಂಥ ಕೃತಿಗಳನ್ನು ಕೊಡ್ತಾ ಬಂದಿದ್ದಾರೆ. ಕಾವ್ಯವಂತೂ ಮುಖ್ಯವಾದ ಮಾಧ್ಯಮ. ೧೨ಕ್ಕೂ ಹೆಚ್ಚು ಕವನ ಸಂಕಲನಗಳನ್ನು ಅವರು ಪ್ರಕಟಿಸಿದ್ದಾರೆ. ಅವರ ಪ್ರವಾಸ ಕೂಡ ಜನಪ್ರಿಯವಾದದ್ದು. ಅವರು ೩-೪ ಪ್ರವಾಸ ಕಥನಗಳನ್ನು ಕೂಡಾ ಬರೆದಿದ್ದಾರೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಒಂದು ನಿರಂತರ ದನಿಯಾಗಿ ಆಪ್ತದನಿಯಾಗಿ ಕನ್ನಡ ಕಾವ್ಯಲೋಕವನ್ನು ಜೀವಂತವಾಗಿ ಇಟ್ಟಿರುವ ಪ್ರೊಫೆಸರ್ ಜಿ.ಎಸ್. ಶಿವರುದ್ರಪ್ಪ ಅವರೊಂದಿಗೆ ಈ ದಿನ ಒಂದಷ್ಟು ಹೊತ್ತು ಮಾತಾಡೋದು ಈ ಸಂದರ್ಶನದ ಮುಖ್ಯ ಉದ್ದೇಶ.*

*ಇಲ್ಲಿ ಮೊದಲು ವಿಶೇಷವಾಗಿ ಅವರ ಬಾಲ್ಯವನ್ನು ಕೇಂದ್ರೀಕರಿಸಿಕೊಂಡು ಮಾತಾಡಲು ನಾನಿಷ್ಟ ಪಡ್ತೀನಿ...... ನಮಸ್ಕಾರ........*

**ಜಿ.ಎಸ್.ಎಸ್ :** ನಮಸ್ಕಾರ

**ಜಿ.ಪಿ.ಬಿ :** *ಬಾಲ್ಯದ ಅನುಭವಗಳು ಜೀವನ ಪರ್ಯಂತ ಉಳಿದು ಲೇಖಕನನ್ನು ಕಾಡುವುದು, ಅಭಿವ್ಯಕ್ತಿಯಾಗಿ ಮಾರ್ಪಡುವುದು ಸಾಮಾನ್ಯ. ಹೀಗೆ ನಿಮ್ಮನ್ನು ಕಾಡಿದ ಬಾಲ್ಯದ ಅನುಭವಗಳು ಯಾವುವು ?*

ಜಿ.ಎಸ್.ಎಸ್ : ನನ್ನ ಬಾಲ್ಯ ನಾನು ಹುಟ್ಟಿದ ಶಿಕಾರಿಪುರ ಅನ್ನುವ ಮಲೆನಾಡಿನ ಗ್ರಾಮಾಂತರ ಪ್ರದೇಶದಲ್ಲಿ ಕಳೀತು.

ಶಿಕಾರಿಪುರ ಹೆಸರೇ ಸೂಚಿಸೋ ಹಾಗೆ, ಅದು ಬೇಟೆಗಾರರ ಊರು ಶಿವಮೊಗ್ಗ ಜಿಲ್ಲೆ ಬೇರೆ, ಕುವೆಂಪು ಅವರ ಕುಪ್ಪಳ್ಳಿಯನ್ನು ಪಂಪನ ಬನವಾಸಿಯನ್ನು ಒಳಗೊಂಡ ಸಹ್ಯಾದ್ರಿಯ ಅರಣ್ಯ ಪರಿಸರದ ಈ ಊರು ನನ್ನೂರು ಆಗಿರೋದು ನನಗೆ ಸಂತೋಷದ ಸಂಗತಿ. ದುರದೃಷ್ಟವಶಾತ್ ನಾನು ಅಲ್ಲಿ ನನ್ನ ಬಾಲ್ಯದ ೨-೩ ವರ್ಷಗಳನ್ನು ಹೊರತಾಗಿ ಉಳಿದ ಹಾಗೆ ಕಳೀಲೇ ಇಲ್ಲ. ಅಲ್ಲಿನ ನೆನಪುಗಳು ಅಂಥ ದಟ್ಟವಾಗಿ ನನ್ನ ಮೇಲೆ ಇಲ್ಲ. ಆದರೆ ಅಲ್ಲಿಂದ ಮುಂದಕ್ಕೆ, ಅದೇ ಪರಿಸರದ ಶಿವಮೊಗ್ಗ, ಹೊನ್ನಾಳಿ, ಈ ಪರಿಸರದ ನೆನಪುಗಳು ಸ್ವಲ್ಪ ನನ್ನ ಮನಸ್ಸಿನ ಮೇಲೆ ಬಿದ್ದಿವೆ.

ಪ್ರ: *ಈ ಭಾಗವೂ ಮಲೆನಾಡಿಗೆ ಸೇರಿದ್ದೇ.*

ಉ: ಹೌದು ಹೌದು, ಅದರಲ್ಲೂ ಕೂಡ ತುಂಗಾ, ಭದ್ರಾ ಈ ಎರಡೂ ನದಿಗಳು ನನ್ನ ಬದುಕಿನ ಮೇಲೆ ಬಹಳ ಗಾಢವಾದ ಪರಿಣಾಮವನ್ನು ಉಂಟುಮಾಡಿವೆ. ನಿರಂತರವಾದ ಈ ಜಲಸಮೃದ್ಧಿಯುಳ್ಳ ಈ ನದಿ, ಬೇರೆ ಬೇರೆ ಕಾಲಮಾನಗಳಲ್ಲಿ ಯಾವ ಯಾವ ರೂಪ ತಾಳ್ತಾ ಇತ್ತು ಅನ್ನೋದು ನನ್ನ ಶೈಶವದ ಕಣ್ಣಿಗೆ ಇನ್ನೂ ಕಟ್ಟಿದ ಹಾಗೆ ಇದೆ. ಆ ನದಿಗಳು ಪ್ರತೀಕಗಳಾಗಿ ಮತ್ತೆ ಮತ್ತೆ ನನ್ನ ಕಾವ್ಯದಲ್ಲಿ, ಬರ್ತಾ ಇದೆ. ನನ್ನ ಎಳೆ ವಯಸ್ಸಿನಲ್ಲಿ ಒಂದು ಸಲ ತುಂಗಾ ನದಿಯಲ್ಲಿ ಶಿವಮೊಗ್ಗದಲ್ಲಿ ನಮ್ಮ ತಂದೆ ತಾಯಂದಿರು ಯಾವುದೋ ಕೆಲಸಕ್ಕೆ ಬಂದಾಗ ಆ ಮರಳುದಂಡೆ ಒಳಗೆ ರೊಟ್ಟಿ ಬುತ್ತಿ ಬಿಚ್ಚಿಕೊಂಡು ಕೂಡ್ತಾ ಇರೋವಾಗ, ಆ ಹೊಳೆಯುವ ನದಿಯ ನೀರಿನ ಹೊಳಪನ್ನು ಕಂಡು ಚಿಕ್ಕ ಮಗುವಾದ ನಾನು ಹೋಗಿ ಅದರೊಳಗೆ ಮುಗುಚಿಕೊಂಡೆ ಅಂತ ಇವತ್ತಿಗೂ ನನ್ನ ಹಿರಿಯರು ಹೇಳೋದನ್ನು ಜ್ಞಾಪಿಸಿಕೊಳ್ತಾ ಇರ್ತೀನಿ. ಹೀಗೆ ನನಗೂ ನದಿಗೂ ಸಂಬಂಧ ಇದೆ. ನದಿ, ನನ್ನ ಪಾಲಿಗೆ ಜೀವನ ಸಮೃದ್ಧಿಯ, ಚಲನಶೀಲತೆಯ ಸಂಕೇತ ಆಗಿ ಉಳಿದಿದೆ. ಈ ನದಿಯ ಪ್ರತೀಕ ಅನ್ನೋದು ಆಗಾಗ ನನ್ನ ಕವಿತೆಗಳಲ್ಲಿ ಮತ್ತೆ ಮತ್ತೆ ಕಂಡು ಬರ್ತಾ ಇದೆ. ಉದಾಹರಣೆಗೆ ಸಾವನ್ನು ಕುರಿತು ಬರೆದ ಒಂದು ಪದ್ಯದೊಳಗೆ ಅಲ್ಲಿ ನಿರಂತರ ಪ್ರವಾಹದೊಳಗೆ ಯಾವುದು ಎಷ್ಟೋ? ಎಷ್ಟು ಹೋಗುತ್ತೋ ಎಷ್ಟು ಬರುತ್ತೋ ಎಂಬ ಕಲ್ಪನೆಯನ್ನು ಮಾಡೋವಾಗ ಹೊಳೆಯ ದಡದಲಿ ಕೂತು ಬೆರಗಾದ ಮೂಕ ಮಗು, ಬಂದುದೆಷ್ಟೋ ಏನೋ ಹೋದುದೆಷ್ಟೋ ಏನೋ ಅನ್ನುವ ಮಾತಿದೆ. ಹೀಗೆ ನದಿ ನನಗೆ ಜೀವನದ ನಿರಂತರತೆಗೆ ಒಂದು ಸಂಕೇತವಾಗಿದೆ.

ಪ್ರ: *ಸರ್, ನೀವು ಆ ಘಟನೆಯನ್ನು ಹೇಳಿದ್ರಲ್ಲ, ನಿಮ್ಮನ್ನು ಯಾರು ರಕ್ಷಿಸಿದರು ?*

ಉ: ಇನ್ನೊಂದು ತಮಾಷೆ ಇದೆ. ನಮ್ಮ ತಾಯಿ ಬಂದು ಎತ್ಕೊಂಡ್ರಂತೆ ಬಿಡಿ. ಮತ್ತೊಂದು ಸಂಗತಿ ೧೯೫೩ನೇ ಇಸವಿ ನಾವು ಸ್ನೇಹಿತರೆಲ್ಲ ಬನಾರಸ್‌ಗೆ ಪ್ರವಾಸ ಹೋಗಿದ್ವಿ. ಪ್ರಭುಪ್ರಸಾದ್, ಪ್ರಭುಶಂಕರ್ ಎಲ್ಲರೂ. ಅಲ್ಲಿ ಗಂಗಾ ನದಿ ಬಹಳ ಪ್ರಮುಖ ಆಕರ್ಷಣೆ.

ಅದು ಪವಿತ್ರವಾಗಿದೆ ಪುರಾಣ ಪ್ರಸಿದ್ಧವಾಗಿದೆ ಅಂತಲ್ಲ. ಗಂಗಾನದಿ ಬಗ್ಗೆ ನೆಹರೂ ಅವರೇ ಎಷ್ಟು ಭಾವುಕರಾಗಿದ್ದಾರೆ ನಾವು ಕಾಣಬಹುದು. ಅದು ನಮ್ಮ ಸಂಸ್ಕೃತಿ ಒಂದು ಭಾಗ. ಗಂಗಾ ಅಂತನ್ನೋದು ನಮ್ಮ ಹಳ್ಳಿ ಜನ, ತಮ್ಮ ಊರಿನ ಬದಿಯ ಹಳ್ಳಗಳನ್ನೇ ಗಂಗಯ್ಯನ್ನಾಗಿ ಮಾಡಿಬಿಡ್ತಾರೆ. So ಗಂಗಾ ನದಿ ಭಾರತೀಯ ಬದುಕಿನ ಸಾಂಸ್ಕೃತಿಕ ಸ್ಮರಣೆ ಅದನ್ನ ನೋಡ್ತಾ ಇರೋವಾಗ ಅಲ್ಲಿ ಸ್ನಾನ ಮಾಡಬೇಕೂಂತ ನಾವು ೩ ಜನ ಕೆಳಕ್ಕೆ ಇಳಿದೆವು ಮೊದಲು ನಾನಿಳಿದೆ. ಆಮೇಲೆ ಪ್ರಭುಶಂಕರ್ ಇಳಿದರು. ಆಮೇಲೆ ಪ್ರಭುಪ್ರಸಾದ್ ಐದು ದಶಕಗಳಿಂದಲೂ ತಮ್ಮ ಪ್ರಜ್ಞಾವಂತಿಕೆಯನ್ನು ಜೀವಂತವಾಗಿರಿಸಿ ಕೊಂಡಿದ್ದಾರೆ. ನಾವು ಮೂವರೂ ಕೊಚ್ಚಿ ಹೋಗೋ ಪ್ರಸಂಗ ಬಂದಿತ್ತು ಆಗ ಯಾರೋ ಬಂದು ನಮ್ಮನ್ನು ಬಚಾವ್ ಮಾಡಿ, ಆ ಮೇಲೆ ದಿಗ್ಭ್ರಾಂತರಾಗಿ ಕೂತ ನಮ್ಮನ್ನು ನೋಡಿ ಊರಿಗೆ ಹೋಗಿ ಬದುಕಿ ಬಂದಿದೀರಿ. ಜನಕ್ಕೆ ಊಟಕ್ಕೆ ಹಾಕಿಸಿ ಅಂತ ಹೇಳಿದ್ರು, ನದಿಯ ಇನ್ನೊಂದು ನೆನಪು ಇದು.

ಮತ್ತೆ ಬಾಲ್ಯಕ್ಕೆ ನಾವು ಹೊರಳೋದಾದ್ರೆ, ಅಲ್ಲಿಂದ ಮುಂದಕ್ಕೆ ನನ್ನ ಬದುಕಿನ ಭಾಗ ಬೇರೆ ಬೇರೆ ಕಡೆ ಕಳೀತು. ಯಾವುದೇ ಒಂದು ಪ್ರಾದೇಶಿಕ ಪರಿಸರದ ನೆನಪಿನ ಜೊತೆ ನನ್ನ ಬಾಲ್ಯ ಹೆಣೆದುಕೊಂಡಿಲ್ಲ. ಅದಕ್ಕೆ ಕಾರಣ ಅಂದ್ರೆ, ನಮ್ಮ ತಂದೆಯವರು ಮಿಡ್ಲ್ ಸ್ಕೂಲ್ ಹೆಡ್‌ಮಾಸ್ತರಾಗಿ ಊರಿಂದ ಊರಿಗೆ ವರ್ಗಾವಣೆ ಆಗ್ತಾ ಇದ್ದಿದ್ರಿಂದ ಮತ್ತು ಆ ಕಾಲದ ವರ್ಗಾವಣೆ ಒಂದು ಜಿಲ್ಲೆಯಿಂದ ಜಿಲ್ಲೆಗೆ ಇರ್ತಾ ಇದ್ದಿದ್ರಿಂದ. ನಾವು ಅನೇಕ ಜಿಲ್ಲೆಗಳಲ್ಲಿ ಕಾಲ ಕಳೀಬೇಕಾಯ್ತು. ಎರಡನೇ ಹಂತ ಅಂದ್ರೆ ಈ ತೆಂಗಿನ ಸೀಮೆಯ ಹೊಸದುರ್ಗದ ಪರಿಚಯ. ಈ ತೆಂಗಿನ ಮರ ಇದೆಯಲ್ಲ, ಇದು ಮತ್ತೆ ಮತ್ತೆ ನನ್ನ ಕವನಗಳಲ್ಲಿ ಬರುವ ಮತ್ತೊಂದು ಪ್ರತೀಕ. ಅದು ನನಗೆ ತೆಂಗಿನ ಮರದ ಹಾಗೆ ಕಾಣೋದಿಲ್ಲ. ಅದು ಈಗಲೋ ಆಗಲೋ ಹಾರಿ ಹೋಗಲೆಂದು ಗರಿ ಬಿಚ್ಚಿಕೊಂಡು ನಿಂತ ಒಂಟಿ ಕಾಲಿನ ಪಕ್ಷಿ ಹಾಗೆ ತೋರ್‍ತದೆ. ಹೀಗೆ ತೆಂಗಿನ ಮರ ನನ್ನ ಪಾಲಿಗೆ ದೊಡ್ಡ ವಿಸ್ಮಯ ಇವತ್ತಿಗೂ ಕೂಡ. ತೆಂಗಿನಮರ ಅಂತ್ಲೇ ಡುಂಡಿರಾಜ್ ಅವರು ನನ್ನನ್ನು ಹೋಲಿಸಿ ಒಂದು ಪದ್ಯನೂ ಬರೆದಿದ್ದಾರೆ. ಅದನ್ನು ನಾವು ನೆನೆಸಿಕೊಳ್ಳಬಹುದು. ತೆಂಗಿನ ಮರ ನನಗೆ ಏನಂದ್ರೆ, ಬೇರೆ ಮರಗಳ ಹಾಗೆ ಋತು ಪರಿವರ್ತನೆ ಆಗೋದಿಲ್ಲ. ಉಳಿದ ಮರಗಳ ಹಾಗೆ ಚಿಗುರಬೇಕು-ಇಲ್ಲ ಅದು ಹಂಗಿಗೆ ಒಳಗಾಗೋದೇ ಇಲ್ಲ. ಆಶ್ಚರ್ಯ ಉಳಿದ ನಿಸರ್ಗ ಸಹಜವಾದ ಬೇರೆ ಮರಗಳು ಈ ನಿಸರ್ಗ ನಿಯಮಕ್ಕೆ ಅಧೀನವಾಗೋ ಹಾಗೆ ತೆಂಗಿನ ಮರ ಅಧೀನವಾದ ಹಾಗೆ ನನಗೆ ತೋರೋದಿಲ್ಲ. ಅದು ಯಾವಾಗ ಚಿಗುರುತ್ತೋ ಗೊತ್ತಿಲ್ಲ ಥಟ್ಟನೆ, ಮೇಲೆದ್ದು ಎತ್ತರದಲ್ಲಿ ಗರಿಬಿಚ್ಚಿ ನಿಲ್ಲುವ ವಿಚಿತ್ರ, ತುಂಬು ತುಂಬು ಗೊನೆಗಳನ್ನು ಬಿಟ್ಟುಕೊಂಡು ಮತ್ತು ಯಾವಾಗಂದ್ರೆ ಆವಾಗ ಗರಿಗಳನ್ನು ಧಡಾರನೆ ಎಸೆಯೋದು ನೋಡಿದಾಗ ನನಗೆ ಕ್ರಿಸ್ತ ಬುದ್ಧರ ನೆನಪು ಉಂಟಾಗ್ತದೆ. ಹೀಗೆ ತೆಂಗಿನಮರ ನನ್ನ ಕವಿತೆಗಳಲ್ಲಿ ತುಂಬಾ ಮುಖ್ಯವಾದ ಪ್ರತೀಕವಾಗಿ ಕಂಡುಬರುತ್ತೆ. ಮೂರನೇಯದು ಕುಂಬಾರನ ತಿಗರಿ ಚಕ್ರ ಇದೆಯಲ್ಲ

ಅದು. ನನ್ನ ಬಾಲ್ಯದ ಪ್ರತೀಕ ಅಂತ ಕಾಣ್ತದೆ ನಾನು ಎಳೆಯಂದಿನಲ್ಲಿ ನನ್ನ ಮನೆ ಪಕ್ಕದಲ್ಲಿ, ಒಂದು ಕುಂಬಾರಕೇರಿ ಇತ್ತು. ಅಲ್ಲಿ ಹೋಗಿ ಆ ತಿರುಗುವ ಗಾಲಿ ಮೇಲೆ ಅವನು ಮಣ್ಣಿನ ಮುದ್ದೆಗಳನ್ನು ಅನೇಕ ಆಕಾರಗಳಾಗಿ ಪರಿವರ್ತಿಸುವಾಗ ಕವಿತೆ ಹುಟ್ಟೋದು ಹೀಗೆ ಅನ್ನಿಸ್ತಾಇತ್ತು. ಮಣ್ಣಿನ ಮುದ್ದೆ ನೋಡ್ತಾ ನೋಡ್ತಾ ಬೇರೆ ಬೇರೆ ರೂಪ ತಾಳುತ್ತಲ್ಲ, ಆ ತಾಳುವಿಕೆ ಇದೆಯಲ್ಲ ಕವಿತೆ ಹುಟ್ಟೋದು ಹೀಗೆ. ಅಂತ ಅನ್ನಿಸ್ತಾಇತ್ತು. ಮಣ್ಣಿನಲ್ಲಿ ದೊಡ್ಡ ಆಕಾರವನ್ನು ನಿರ್ಮಾಣ ಮಾಡೋದು ಅಲ್ಲಿತ್ತು. ಮಡಿಕೆ ಮಣ್ಣೊಳಗೆ ಕುಂಬಾರ ಮುಟ್ಟಿದ್ದರಿಂದ ಅದನ್ನ ತೆಗೀತಾನೆ ಹೊರಗೆ ಬಂತು. ಹಾಗೇ ಕವಿತೆ ಇಲ್ಲಿದೆ-ಜೀವನದಲ್ಲಿ ಕವಿ ಅದನ್ನು ಹೊರಗೆ ತೆಗೀತಾನೆ ಅಷ್ಟೇನೆ. All Poetry was already written ಅಂತ ಒಬ್ಬ ದೊಡ್ಡ ಮನುಷ್ಯ ಹೇಳಿದ ಮಾತು ಕೂಡ ನನಗೆ ನೆನಪಾಗುತ್ತೆ. ಮತ್ತೊಂದು ನನ್ನ ಎಳೆಯಂದಿನ ಪ್ರತೀಕ ಅಂದ್ರೆ ಕಾಡೋದು ಹಣತೆ. ದೇವಸ್ಥಾನಗಳಲ್ಲಿ ಹಣತೆ ನಾವು ಚಿಕ್ಕಂದಿನಲ್ಲಿ ಹಳ್ಳಿಗಳಲ್ಲಿ ಇದ್ವಿ ಆ ದೇವಸ್ಥಾನಗಳು ಆ ಜಾತ್ರೆಗಳು, ಉತ್ಸವಗಳು, ಅಲ್ಲಿ ಗರ್ಭಗುಡಿಯೊಳಗೆ ಬೆಳಗೋ ಹಣತೆಗಳು ಎಲ್ಲ ನನ್ನನ್ನು ಕಾಡುತ್ತಿದ್ದವು. ನಮ್ಮ ಕಾಲಕ್ಕೆ ಎಲೆಕ್ಟ್ರಿಕ್ ದೀಪಗಳಿರಲಿಲ್ಲ. ಮನೇಲಿ ಹಣತೆ ಬೆಳಕಲ್ಲೇ ನಾವು ಓದಿದ್ದು ಕೂಡ. ಹೀಗೆ ಹಣತೆ ಅನ್ನೋದು ಪ್ರಶಾಂತತೆಗೆ ಬೆಳಕಿಗೆ ಸಂಕೇತವಾಗಿ ಉಳ್ಕೊಂಡಿದೆ. ಹಣತೆ ಹಚ್ಚುತ್ತೇನೆ ನಾನು ಈ ಕತ್ತಲನ್ನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದ ಅಲ್ಲ ಎಂಬ ಕವಿತೆ ಹುಟ್ಟಿಕೊಂಡಿದ್ದು ಇದೇ ಕಾರಣದಿಂದ. ಮೇಲಿಂದ ಮೇಲೆ ಹಣತೆ ಹಚ್ಚೋದು ಹಣತೆ ಹಚ್ಚೋ ಕೆಲಸ It is a Creative act. ಎಲ್ಲರೂ ಮಾಡೋದು ಹಣತೆ ಹಚ್ಚೋ ಕೆಲಸವೆ. ಯಾರು ಮತ್ತೆ ಮತ್ತೆ ಹಚ್ಚುತ್ತಾರೋ ಅವರು ದೊಡ್ಡವರಾಗ್ತಾರೆ. ನನಗೆ ಸಾಮಾನ್ಯವಾಗಿ ಮಣ್ಣಿನ ಹಣತೆ ಅಷ್ಟೇ ಸಾಕು. ದೂರದ ನಕ್ಷತ್ರ ಬೇಕಾಗಿಲ್ಲ ಅದು ಒಂದು ರೀತಿಯ humility ವಿನಯದ ಬೆಳಕು. ಇವಿಷ್ಟು ನನ್ನ ಬಾಲ್ಯದ ಬದುಕಿನಲ್ಲಿ ಹಾದು ಹೋದಂಥ ಮುಖ್ಯವಾದ ಪ್ರತೀಕಗಳು, ನಾನು ಬೆಳೆದ ಪರಿಸರ.

ಪ್ರ: *ಸರ್, ನೀವು ಇಲ್ಲೀವರೆಗೂ ವಸ್ತುಗಳನ್ನು ಕುರಿತು ಹೇಳಿದಿ. ಪ್ರಕೃತಿಯ ಭಾಗವಾದ ಮರವನ್ನು ಕುರಿತು ಹೇಳಿದ್ರಿ ವ್ಯಕ್ತಿಗಳು, ನಿಮ್ಮ ಬದುಕಿನಲ್ಲಿ ಪ್ರಭಾವ ಬೀರಿದವರು ? ಅಂದ್ರೆ ಬಾಲ್ಯದಲ್ಲಿ ವಿಶೇಷ ಪ್ರಭಾವ ಬೀರಿದ ನಿಮ್ಮ ಮನಸ್ಸಿನಲ್ಲಿ ನಿಂತ ವ್ಯಕ್ತಿಗಳು ಯಾರಾದ್ರೂ ಇದಾರಾ?*

ಉ: ಬಾಲ್ಯದಲ್ಲಿ ಹಾಗೆ ನಿಲ್ಲೋದಕ್ಕೆ ನಾನು ಒಂದು ಕಡೆ ನಿಂತವನಲ್ಲ. ಅದು ಊರಿಂದ ಊರಿಗೆ ಹೋಗ್ತಾ ಇದ್ದಿದ್ರಿಂದ, ಯಾವ ವ್ಯಕ್ತಿಯೂ ಕೂಡ ಅಂತ ಪರಿಣಾಮ ಉಂಟುಮಾಡಲಿಲ್ಲ. ಆದರೂ ನನ್ನ ಹೈಸ್ಕೂಲಿನ ದಿನಗಳಲ್ಲಿ ಆಗ ೧೨-೧೩ ವರ್ಷ ಅಂತಿಟ್ಕೊಳ್ಳಿ. ನನಗೆ ಮೊಟ್ಟ ಮೊದಲ ಪ್ರೇರಣೆ ಕೊಟ್ಟವರು ಒಬ್ಬರು ಗಣಿತದ ಅಧ್ಯಾಪಕರು ರೇವಣ್ಣ ಅಂತ. ಗಣಿತದ ಅಧ್ಯಾಪಕರು ಆಗಿನ High Schoolನಲ್ಲಿ ಅವರಿಗೆ ಹಾಕಿದ ಬದಲಿ ತರಗತಿಗಳಲ್ಲಿ ಕುವೆಂಪು ಅವರು ನಾಟಕಗಳನ್ನು ಕಾವ್ಯವನ್ನು ತಂದು ಓದ್ತಾ

ಇದ್ರು, ಅದು ನನ್ನ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. ಮೊಟ್ಟ ಮೊದಲ ಬಾರಿಗೆ ಕುವೆಂಪು ಕಾವ್ಯಭಾಷೆ, ಮಾಧುರ್ಯ, ಅದರ ಮೋಡಿ, ಇದೆಲ್ಲವೂ ಕೂಡ, ನಮಗೆ ಪರಿಚಯವಾದದ್ದು ಒಬ್ಬ ಗಣಿತದ ಮೇಷ್ಟ್ರಿಂದ. ಅದೂ ಬದಲಿ ತರಗತಿಗಳಲ್ಲಿ. ಅಲ್ಲದೆ ಅವರು ನಾನು ಓದುತ್ತಿದ್ದ Hostel warden ಕೂಡಾ ಆಗಿದ್ದರು. ಆಗೆಲ್ಲ, ವಾರಕ್ಕೆ ಒಂದು ಸಾರಿ ಏನಾದ್ರೂ ಬರೆದುಕೊಂಡು ಬನ್ನಿ ಅಂತ ಹೇಳ್ತಾ ಇದ್ದರು. ಆ ಕಾಲದಲ್ಲಿ ನನಗೆ ಕಿವಿ ಮೇಲೆ ಬೀಳ್ತಾ ಇದ್ದಂಥ ಕಾವ್ಯ ಅಂದರೆ ಕುಮಾರವ್ಯಾಸನ ಪದ್ಯಗಳು, ಲಕ್ಷ್ಮೀಶನ ಪದ್ಯಗಳು, ಸರ್ವಜ್ಞನ ಪದ್ಯಗಳು, ಆಕಸ್ಮಾತ್ತಾಗಿ ಕುವೆಂಪು, ಬೇಂದ್ರೆ ಮುಂತಾದವರ ಪದ್ಯಗಳು ಎಲ್ಲವೂ ಅವರ ಮೂಲಕವೇ. ಅವರು ಹೀಗೆ ಹೇಳಿದಾಗಲೆಲ್ಲ ನಾನು ೧೪ನೇ ವಯಸ್ಸಿನಲ್ಲಿ ಒಂದು ಪದ್ಯವನ್ನು ಬರೆದು ಅವರು ವಾರಕ್ಕೊಂದು ಸಾರಿ ಕರೀತಿದ್ದ ಸಭೆಯೊಳಗೆ ಓದಿದೆ.

"ಇರುವೆಯೊಂದು ತನ್ನ ಮರಿಗೆ
ನೀರೊಳೀಜು ಕಲಿಸಲೆಂದು
ಹರಿವ ತೊರೆಯ ಬಳಿಗೆ ಹೋಯಿತು."

ಅಂತ ಪ್ರಾರಂಭವಾಗುವ ಪದ್ಯ ಆ ಪದ್ಯ ಎಲ್ಲೂ ಸಿಗ್ತಾ ಇಲ್ಲ ನನಗೆ. ಜ್ಞಾಪಕ ಇರೋದಿಷ್ಟು, ಹೀಗೆ ನನಗೆ ಪರಿಚಿತವಾದ ಗೋವಿನ ಕಥೆಯ ಹಾಡಿನ ಧಾಟಿಯೊಳಗೆ ಅಂಥದೊಂದು ಪದ್ಯ ಬರೆದದ್ದು ನನಗೆ ನೆನಪಿದೆ. ಹೀಗೆ ನನಗೆ ಕವಿತೆಯೊಳಗೆ, ಸಾಹಿತ್ಯದ ಒಳಗೆ ಆಸಕ್ತಿ ಹುಟ್ಟಿಸಿದ್ದು ಗಣಿತದ ಮೇಷ್ಟ್ರು ರೇವಣ್ಣ. ಅವರು ನನ್ನ ಮೇಲೆ ಅಪಾರವಾದ, ಪರಿಣಾಮ ಬೀರಿದ್ದಾರೆ.

ಪ್ರ: *ಆದರೆ ನೀವು ಗ್ರಾಮೀಣ ಪರಿಸರದಲ್ಲಿ ಸುತ್ತಿದೀರಿ. ಸ್ಥಳ ಬೇರೆ ಬೇರೆ ಆದರೂ ಕೂಡ ಗ್ರಾಮೀಣ ಪರಿಸರದಿಂದ ನೀವು ಹೊರಗೆ ಬಂದಿಲ್ಲ. ಅಂಥಾ ದಿನಗಳಲ್ಲಿ ನಿಮ್ಮ ಮನದ ಆಳದಲ್ಲಿ ಉಳಿದಿರುವ ಗ್ರಾಮೀಣ ಕಲೆಗಳು ಜಾನಪದ ಇರಬಹುದು, ನಾಟಕ, ಅಂತಾದ್ದು ಯಾವುದು ?*

ಉ: ಆ ಕಾಲದಲ್ಲಿ ಬೇಸಿಗೆ ಬಂತು ಅಂದ್ರೆ, ಸುತ್ತಮುತ್ತ ಹಳ್ಳಿಗಳಲ್ಲಿ ಬಯಲಾಟಗಳನ್ನು ಆಡ್ತಾ ಇದ್ದರು. ಆ ಬಯಲಾಟಗಳು ಅನೇಕ ಇವತ್ತಿಗೂ ನೆನಪಿದೆ ನನಗೆ. ಲಂಕಾದಹನ ಬಹಳ ಸುಪ್ರಸಿದ್ಧವಾದ ನಾಟಕ. ಅದರಲ್ಲೂ ಆಂಜನೇಯನ ವನಪ್ರವೇಶ, ಲಂಕೆಯನ್ನು ಹಾಳು ಮಾಡೋದು, ಸುಡೋದು ಇವೆಲ್ಲ ಬಹಳ ಪರಿಣಾಮವನ್ನು ಬೀರಿದವು. ಹೀಗೆ ನನ್ನ ಚಿಕ್ಕಂದಿನಲ್ಲಿ ಗ್ರಾಮೀಣ ಪರಿಸರದ ಬಯಲು ನಾಟಕಗಳಲ್ಲಿ ಬಹಳ ಗಾಢ ಪರಿಣಾಮ ಆಯ್ತು. ರಾತ್ರಿ ಹಳ್ಳಿ ಹಳ್ಳಿಗೆ ಹೋಗಿಬಿಡ್ತಾ ಇದ್ದೆ. ಗೋಣೀ ಚೀಲ ಹಾಸ್ಕೊಂಡು ಕೂತು ಬೆಳಗಿನವರೆಗೆ ನೋಡ್ಕೊಂಡು ಬರ್ತಾ ಇದ್ದೆ ಮತ್ತು ಆ ಊರಲ್ಲಿ ಸಾಹುಕಾರರ ಮನೆಗಳಲ್ಲಿ ಗ್ರಾಮೋಫೋನ್ ಇರ್ತಿತ್ತು. ಆ ಗ್ರಾಮೋಫೋನ್‌ನಲ್ಲಿ ದಾನಶೂರ ಕರ್ಣ ಹಾಡುಗಳು ಕೇಳ್ತಾ ಇದ್ದೆ. ಎಲ್ಲ ಬಾಯಿಗೆ ಬರ್ತಾ ಇತ್ತು, ಹೀಗೆ ಎಳೆಯಂದಿನ ನೆನಪುಗಳಲ್ಲಿ ಹಬ್ಬ ಹರಿದಿನ ಉತ್ಸವ, ತೇರು, ಯಕ್ಷಗಾನ, ನಾಟಕಗಳು ನೆನಪು.

*ಪ್ರ: ಕೊಟ್ಟೂರಪ್ಪನವರ ನಾಟಕಗಳನ್ನು ನೀವು ನೋಡಿದೀರಾ ಸರ್*

ಉ: ನೋಡಿದೇನೆ, ತಿಪಟೂರಿನಲ್ಲಿ ದಾನಶೂರ ಕರ್ಣ ನೋಡಿದೀನಿ ಬಹಳ ಅದ್ಭುತವಾದ ಕಲೆಗಾರರು ಅವರು.

*ಪ್ರ: ಮುಂದೆ ನಿಮ್ಮ ಕೃತಿಗಳಲ್ಲಿ ಇವುಗಳ ಪ್ರಭಾವ ಕಾಣಿಸೊದೇ ಇಲ್ಲವಲ್ಲ ಸರ್ ?*

ಉ: ಅದು ಯಾಕೇಂತ ನಾನು ಹೇಳಲಾರೆ

*ಪ್ರ: ಇನ್ನೊಂದು ಮುಖಕ್ಕೆ ಹೊರಳೋಣ. ನಿಮ್ಮ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಮೈಸೂರು ಬಹಳ ಪ್ರಮುಖವಾದ ಪಾತ್ರ ವಹಿಸಿದೆ ಅಂತ ತಿಳ್ಕೊಂಡಿದ್ದೇನೆ. ಅಲ್ಲಿ ನಿಮ್ಮನ್ನು ಪ್ರಭಾವಿಸಿದವರು ಮತ್ತು ಅಲ್ಲಿನ ಪರಿಸರ ?*

ಉ: ಅದಕ್ಕಿಂತ ಸ್ವಲ್ಪ ಹಿಂದಕ್ಕೆ ಹೋಗೋಣ. ನಾನು ತುಮಕೂರಿನಲ್ಲಿ intermediate ಓದ್ತಾ ಇದ್ದೆ. ಆಗ ನನಗೆ ೧೮ ವರ್ಷ. ರಾಜರತ್ನಂ ಇದಾರಲ್ಲ ನನ್ನ ಮೇಲೆ ಅತ್ಯಂತ ಪರಿಣಾಮ ಬೀರಿದ ಅಧ್ಯಾಪಕರಲ್ಲಿ ಒಬ್ಬರು. ಅಲ್ಲಿ ಅಧ್ಯಾಪಕರಾಗಿದ್ದರು. ವಿದ್ಯಾರ್ಥಿ ಪ್ರತಿಭೆಗಳನ್ನು ಗುರುತಿಸಿ ಅದನ್ನು ಪ್ರಕಾಶಕ್ಕೆ ತರೋದರಲ್ಲಿ ಅವರು ಮಾಡಿದ ಕೈಂಕರ್ಯ ಬಹಳ ದೊಡ್ಡದು. ಆ ಕೆಲಸವನ್ನು ಶ್ರೀನಿವಾಸರಾಜು ಕ್ರೈಸ್ಟ್ ಕಾಲೇಜಿನಲ್ಲಿ ಈಗಲೂ ಮುಂದುವರೆಸ್ತಾ ಇದ್ದಾರೆ ಅನ್ನಬಹುದು. ಕಂಚಿನ ಕಂಠದ ಜಟ್ಟಿಯ ಮೈಕಟ್ಟಿನ ರಾಜರತ್ನಂ ಬಹಳ ಅದ್ಭುತವಾದ ಮನುಷ್ಯ ಅವರು ಆ ಕಾಲಕ್ಕೆ ಬನಿಯನ್ ಹಾಕ್ಕೊಂಡು, ಒಂದು ಲುಂಗಿ, ಪಂಚೆ (ಖದ್ದರ್) ಮೈ ಮೇಲೆ ಒಂದು ಬಳೀ ವಸ್ತ್ರ ಹೊದ್ದುಕೊಂಡು ಬರ್ತಾ ಇದ್ದರು. ನನಗೆ ಬಹಳ ಸ್ವಾರಸ್ಯಕರವಾದ ಸಂಗತಿ ಜ್ಞಾಪಕಕ್ಕೆ ಬರುತ್ತೆ. ಆ ಕಾಲದಲ್ಲಿ ಸ್ವಾತಂತ್ರ್ಯ ಚಳವಳಿ ನಡೀತಾ ಇತ್ತಲ್ಲ. ಆಗ ರಾಜರತ್ನಂ ಅವರು ಈ ಥರ ಬನಿಯನ್, ಖಾದಿ, ಹಾಕ್ಕೊಂಡು ಬರೋದು ಸರ್ಕಾರಕ್ಕೆ ಇಷ್ಟವಿರಲಿಲ್ಲ. ಅವರಿಗೆ ಒಂದು notice ಕೊಟ್ರು, ಹಾಗೆ ಬರಕೂಡದು ಅಂತ. ಮೈ ತುಂಬಾ ಸರಿಯಾಗಿ ಬಟ್ಟೆ ಹಾಕ್ಕೊಂಡು ಬರಬೇಕು ಅಂತ. ಆಗ ರಾಜರತ್ನಂ ಒಂದು ಉದ್ದನೆಯ ನಿಲುವಂಗಿ ಹೊಲಿಸಿದರು. ಆ ನಿಲುವಂಗಿ ಒಳ್ಳೆ Drum ಥರಾ ಇತ್ತು. ಆ ನಿಲುವಂಗಿ ಹಾಕ್ಕೊಂಡು ಅವರು ಬಂದ್ರು, ಬಂದು ಪಾಠ ಮಾಡಿ, ಆ ನಿಲುವಂಗಿ ಅಲ್ಲಿ ತಗಲು ಹಾಕಿ, ಮತ್ತೆ ಬನಿಯನ್‌ನಲ್ಲಿ ವಾಪಸ್ ಹೋಗ್ತಾ ಇದ್ದರು. ಇದು ಚೆನ್ನಾಗಿ ನೆನಪಿದೆ ನನಗೆ. ಅಲ್ಲಿ ಬಹಳ ಮುಖ್ಯವಾದ ಸಂಗತಿ ಅಂದ್ರೆ, ನಾನು ಈ ಅವಧೀನಲ್ಲಿ (intermediate) ಪದ್ಯಗಳನ್ನು ಬರೀತಾ ಇದ್ದೆ. ನಾನು ಬರೆದ ಪದ್ಯಗಳನ್ನು ರಾಜರತ್ನಂ ಅವರಿಗೆ ತೋರಿಸೋ ಒಂದು ಸಂದರ್ಭ ಬಂತು. ಒಂದು ದಿನ ತರಗತಿನಲ್ಲಿ ಮೇಷ್ಟ್ರು ಇಂಗ್ಲಿಷ್ ಪಾಠಮಾಡ್ತಾ ಇದ್ದರು. Thomas gray ಅವರ Elegy returned on a country churchyard ಬಹಳ ಸುಪ್ರಸಿದ್ಧವಾದ ಪದ್ಯ. ಅದನ್ನು ಅಧ್ಯಾಪಕರು ಮಾಡ್ತಾ ಇರೋವಾಗ, ಒಂದು ಕವಿತೆ ಒಂದು ಭಾಗ stanza ನನ್ನ ಮೇಲೆ ತುಂಬಾ ಗಾಢವಾಗಿ ಹಿಡೀತು. ಅದ್ಯಾವುದು ಅಂದ್ರೆ Full many a gem of puniest receive the god confathomed the caves of the ocean bare, Full many a flowers born, blush un-

seen ....... ಈ ಪದ್ಯ ಎಂಥಾ ಗಾಢವಾದ ಪರಿಣಾಮ ಬೀರ್ತು ಅಂದ್ರೆ ಅವತ್ತು ರಾತ್ರಿ ನನ್ನ ಕೊಠಡಿಯೊಳಗೆ ಕೂತ್ಕೊಂಡು ಅದನ್ನು ಕನ್ನಡಕ್ಕೆ ಹಾಕಿದೆ.

"ಕಡಲಿನ ಕತ್ತಲು ಗವಿಯಲ್ಲಿ
ಅಡಗಿಹವೆಷ್ಟೋ ರತ್ನಗಳು
ಘೋರಾರಣ್ಯದ ತರುಗಳಲಿ
ತುಂಬಿವಿಹವೆಷ್ಟೋ ಕುಸುಮಗಳು
ಎಸೆಯುವ ರನ್ನವ ಧರಿಸುವರಾರು ?
ಕಡಲಿನ ಗವಿಯಂ ಹೊರತೆಗೆದು
ಕುಸುಮದ ಕಂಪನು ಸೇವಿಪರಾರು
ತುಂಬಿದ ಕಾನನ ಮಧ್ಯದಲಿ....

ಹೀಗೆ ಮೂರು stanza ಬರೆದೆ. ನಾನು ಅಂತಾ ಒಂದು ರತ್ನ.... ನಾನು ಅಂತಾ ಒಂದು ಕುಸುಮ ಅನ್ನೋ ರೂಪು ಕೊಟ್ಟಿದ್ದೆ ನಮ್ಮನ್ಯಾರು ಕೇಳ್ತಾರೆ ಅಂತ. ಇದನ್ನ ತೊಗೊಂಡು ಹೋಗಿ ರಾಜರತ್ನಂ ಅವರಿಗೆ ತೋರಿಸಿದೆ. ಅವರು "ಚೆನ್ನಾಗಿದೆಯಯ್ಯ ಪದ್ಯ ಇದು... ಇದನ್ನು ಎಲ್ಲಾದ್ರೂ ಕಳಿಸೋಣ ಪ್ರಕಟಣೆಗೆ ಅಂದ್ರು, ಅವರೇ ಅದನ್ನ ನನ್ನ ಹತ್ತಿರ ತೊಗೊಂಡು ಕಾಪಿ ಮಾಡಿಸಿ ಬೆಂಗಳೂರಿನಲ್ಲಿ ಆಗ ಬರ್ತಾ ಇದ್ದ 'ಜೀವನ' ಪತ್ರಿಕೆಗೆ ಕಳಿಸಿದರು. ಜೀವನ ಪತ್ರಿಕೆ ಸಂಪಾದಕರು ಮಾಸ್ತಿ ಅವರು. ಅದು ಕಳಿಸಿದ ಒಂದೆರಡು ತಿಂಗಳ ಒಳಗಾಗಿ ಪ್ರಕಟವಾಗಿ ಬಂದೇ ಬಿಡ್ತು. ಇದು ನನಗೆ ಎಂಥಾ ಪ್ರಚೋದನೆ ಕೊಡ್ತು ನನ್ನ ಕಾವ್ಯ ಜೀವನದಲ್ಲಿ ಅನ್ನೋದನ್ನ ನಾನು ಹೇಳಲಾರೆ. ಆ ಇನ್ನೂ ೧೮–೧೯ ವರ್ಷದ ಹುಡುಗ ನಾನು ಕಳಿಸಿದ ಕವಿತೆಯನ್ನು ಮಾಸ್ತಿಯವರು ಪ್ರೀತಿಯಿಂದ ಹಾಕಿದರು. ಮುಂದೆ ನಾನು ಮಾಸ್ತಿ ಅವರನ್ನು ಕಂಡಾಗ ಅವರಿಗೆ ಗೊತ್ತಾಯ್ತು ನಾನ್ಯಾರು ಅಂತ. ನಾನು ಸ್ವಲ್ಪ ಹೆಸರು ಮಾಡಿದ ಮೇಲೆ ಮಾಸ್ತಿಯವರು ಯಾವುದಾದ್ರೂ ಸಭೆಗಳಲ್ಲಿ ಬಂದಾಗ ಹೆಗಲ ಮೇಲೆ ಕೈಯಾಕಿ "ನೋಡಿ ಶಿವರುದ್ರಪ್ಪನ್ನ ಪದ್ಯ ನಾನೇ ಮೊದಲು ಅಚ್ಚು ಮಾಡಿದ್ದು" ಅಂತ ಪಕ್ಕದಲ್ಲಿದ್ದ ಸ್ನೇಹಿತರಿಗೆ ಹೇಳ್ತಾ ಇದ್ದರು. ಇವೆಲ್ಲ ನನ್ನ ಜೊತೆ ಬರೋ ನೆನಪುಗಳು. ಮತ್ತೆ ಆನಂತರ ನೀವೇನು ಮೈಸೂರಿನ ನೆನಪುಗಳು ಅಂತ ಅಂದ್ರಿ... ಅದೃಷ್ಟವಶಾತ್ ಕುವೆಂಪು ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮತ್ತು ಅಧ್ಯಾಪಕರಾಗಿ ಬಂದ್ರು, ಹೀಗಾಗಿ ನನಗೆ ದೂರದಿಂದ ಕಂಡ ಕುವೆಂಪು ಅವರನ್ನು ತೀರಾ ಹತ್ತಿರದಲ್ಲಿ ನೋಡೋಂಥ ಅವರ ಮಾತುಗಳನ್ನು ಕೇಳುವಂಥ ಒಂದು ಶುಭಯೋಗ ನನಗೆ ಒದಗಿಸಿತು. ಹೀಗಾಗಿ ಕುವೆಂಪು ಅವರ ಸಾನ್ನಿಧ್ಯದಲ್ಲಿ ನಾನು ೫ ವರ್ಷಗಳನ್ನು ಕಳೆದಿದ್ದೇನೆ. ೩ ವರ್ಷ Honours, ೩ ವರ್ಷ MA,Ph.D., ಆಮೇಲೆ ಅವರೇ ಪ್ರೀತಿಯಿಂದ ನನ್ನ ಅಧ್ಯಯನಕ್ಕೆ guide ಆದರು. ಹೀಗೆ ಇಷ್ಟು ಸುದೀರ್ಘ ಕಾಲ ಅಧ್ಯಾಪಕತನದ ಜೀವನದಲ್ಲಿ ನನ್ನ ಮೇಲೆ ಅವರು ಮಾಡಿದಂಥ ಪರಿಣಾಮ ಇದೆಯಲ್ಲ, ಬಹಳ ಗಾಢವಾದದ್ದು. ಕುವೆಂಪು ಅವರ ವ್ಯಕ್ತಿತ್ವದಿಂದ ಏನಾಯ್ತು ಅಂದರೆ ಬರೆದರೆ ಅವರ ಹಾಗೇ ಬರೀಬೇಕು. ಅವರ ಹಾಗೇ ಉಡುಗೆ **ತೊಡಬೇಕು**. ಅವರ ಹಾಗೇ ಆಗಬೇಕು. ಈ ಬಗ್ಗೆಯ ಪ್ರವೃತ್ತಿ ಬಹಳ

ಸಹಜವಾದದ್ದು ಆ ವಯಸ್ಸಿಗೆ. ಹಾಗಾಗಿ ನನ್ನ ಕವಿತೆಗಳ ಮೊದಲ ಸಂಕಲನದ ತುಂಬಾ ನಿಮಗೆ ಕುವೆಂಪು ಅವರ ದಟ್ಟವಾದ ಪ್ರಭಾವ ಕಾಣುತ್ತೆ. ಕುವೆಂಪು ಅದನ್ನು ಗಮನಿಸಿದ್ರು, ಅದನ್ನು ಕುರಿತು ಹೇಳಿದ್ದಾರೆ. ಈ ನಾವು ಎಲ್ಲ ಸಹಾಯ ಮಾಡಿದ ಆಯುಧಗಳು ಹೊಸ ಪೀಳಿಗೆ ತರುಣರಿಗೆ ಸುಲಭ ಸರಬರಾಜಿನ ವಸ್ತುಗಳಾಗಿವೆ ಅಂತ ನನ್ನ "ಮುರಳೀ"ಲಿ ನಿಸ್ಸಂಕೋಚವಾಗಿ ಹೇಳಿದ್ದಾರೆ. ಹೀಗಾಗಿ ಕುವೆಂಪು ಅವರ ದಟ್ಟವಾದ ಪ್ರಭಾವ ನನ್ನ ಆರಂಭದ ಕವಿತೆಗಳಲ್ಲಿ ಕಂಡು ಬಂದಿದೆ. ನನ್ನ ಮುಂದಿನ ಪ್ರಯತ್ನ ಆ ಪ್ರಭಾವದಿಂದ ಹೇಗೆ ಬಿಡಿಸಿಕೊಂಡೆ, ಹೇಗೆ ಬಿಡಿಸಿಕೋ ಬೇಕು ಎಂಬುದು. ಅದನ್ನು ವಿಮರ್ಶಕರು ಗುರುತಿಸಿದ್ದಾರೆ.

ಪ್ರ: *ಕುವೆಂಪು ಅವರನ್ನು ನೀವು ಮೊಟ್ಟ ಮೊದಲ ಬಾರಿಗೆ ಭೇಟಿ ಮಾಡಿದ್ದು, ನೋಡಿದ್ದು, ಅವರ ಧ್ವನಿ, ಮಾತು, ನೆನಪಿದೆಯಾ ನಿಮಗೆ ?*

ಉ: ಕುವೆಂಪು ಅವರು ಗ್ರೀಕ್ ಶಿಲ್ಪಕಲಾವಿಗ್ರಹದ ಮಾದರಿಯ ವ್ಯಕ್ತಿತ್ವ; ನೋಡೋದಿಕ್ಕೇ ಒಂದು ಸಂತೋಷ. ಇವತ್ತಿಗೂ ಆ ಕಾಲದ ಫೋಟೋಗಳಿವೆ. ಅವರನ್ನು ನೋಡಬೇಕೂಂತ್ಲೇ ಮಹಾರಾಜಾ ಕಾಲೇಜಲ್ಲಿ ಕಾರಿಡಾರ್‌ನಲ್ಲಿ ಅವರು ಬರೋ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳು ಕಾದು ನಿಲ್ತಾ ಇದ್ದರು. ಆದರೆ ಅವರು ಯಾವಾಗ ಬರ್‍ತಿದ್ರೋ ಯಾವಾಗ ಹೋಗ್ತಿದ್ರೋ ಗೊತ್ತಿರಲಿಲ್ಲ. ಅಂಥ ಆಕರ್ಷಕ ವ್ಯಕ್ತಿತ್ವ ಅವರದ್ದು. ನಾನು ಮೊಟ್ಟ ಮೊದಲು ತರಗತೀನಲ್ಲಿ ನೋಡಿದ್ದು ಅಷ್ಟೇನೆ. ಆಮೇಲೆ ಅವರ ಜೊತೆ ಮಾತಾಡೋ ಸಂದರ್ಭ ಒಂದು ಬಂತು ನನಗ. ಒಂದು ಸಲ ಕರ್ನಾಟಕ ಸಂಘದಲ್ಲಿ ಒಂದು ಕಾವ್ಯ ಸ್ಪರ್ಧೆ ಏರ್ಪಟ್ಟಿತ್ತು. ನಾನು ಒಂದು ಪದ್ಯಾನ ಕಳಿಸಿದ್ದೆ. ಎ.ಕೆ. ರಾಮಾನುಜಂ ಗೊತ್ತಲ್ಲ ಅವರೂ ನನ್ನ ಕ್ಲಾಸ್‌ಮೇಟ್. ಅವರೂ ಪದ್ಯ ಕಳಿಸಿದ್ರು ನಮ್ಮಿಬ್ಬರಿಗೂ ಬಹುಮಾನ ಬಂತು. ಆಮೇಲೆ ಪುಟ್ಟಪ್ಪನವರು ಅವತ್ತಿನ ದಿನ ವೇದಿಕೆ ಮೇಲೆ ಭೂಪಾಳಂ ಚಂದ್ರಶೇಖರ್ ಅತಿಥಿಯಾಗಿದ್ದರು. ಅವತ್ತು ಬಹುಮಾನವಾಗಿ ನಮಗೆಲ್ಲ ಒಂದೊಂದು ಪುಸ್ತಕ ಕೊಟ್ಟರು. Conquest of self ಅಂತ ಗಾಂಧಿದು ಒಂದು ಪುಸ್ತಕ. ಇವತ್ತಿಗೂ ಇಟ್ಟುಕೊಂಡಿದ್ದೇನೆ. ಕುವೆಂಪುಗೆ ಅವತ್ತೇ ನಾನು ಪದ್ಯ ಬರೀತೀನಿ ಅಂತ ಗೊತ್ತಾದದ್ದು. ಮಾರನೇ ದಿನ ಕ್ಲಾಸ್‌ನಲ್ಲಿ ಕೂತಾಗ ಎಲ್ಲರೂ ಹೋದ ಮೇಲೆ ಸ್ವಲ್ಪ ಬಾ ಇಲ್ಲಿ ಅಂದ್ರು, ಹತ್ರ ಹೋದೆ "ಪದ್ಯ ಬರೀತೀಯ ನೀನು ಅಂದ್ರು." "ಹೌದು" ಅಂದೆ. ಪ್ರೈಸ್ ಬಂತಲ್ಲ ನಿನ್ನೆ ಆ ಪದ್ಯ ತೊಗೊಂಡು ಬಾ ನೋಡೋಣ ಸ್ವಲ್ಪ ಅಂದ್ರು, ನಾನು ಮಾರನೇ ದಿನ ಅದನ್ನು ತೊಗೊಂಡು ಹೋಗಿ ಕೊಟ್ಟೆ. ಓದಿ ನೋಡಿ ನಕ್ಕುಬಿಟ್ರು, ಯಾಕೇಂದ್ರೆ ಆ ಪದ್ಯ ಹೇಗೆ ಸುರು ಆಗುತ್ತೇಂದ್ರೆ,

"ಉಡುಗಣಗಳೊಡೆಯನಂಬರದ ಲಸಿತ ಲಕ್ಷ್ಮಸ್ಥೋಮ ಹೇಮದಾಮಾವೃತದಿ...." ಅಂತ. ಅದು ಯಾರ ಪ್ರಸಾದ ಅಂತ ನಿಮಗೆ ಗೊತ್ತು. ನಕ್ಕುಬಿಟ್ಟು "ಏನು ಪದ್ಯ ಇದೂ ! ಏನು ಹೀಗೆ ಬರೆದಿದೀರಲ್ಲ" ಅಂತಾ ಅಂದು. ಪದ್ಯಕ್ಕೆ ಬಹುಮಾನ ಕೊಟ್ಟಿದ್ದಾರೆ. ನಾನು ಜವಾಬ್ದಾರನಲ್ಲ. ಬಹುಮಾನ ಸಿಕ್ಕಿದ್ದಕ್ಕೆ ತಾನೆ ನಾನು ಅವರನ್ನು ನೋಡೋಕೆ

ಸಾಧ್ಯ ಆಯ್ತು. ಆಮೇಲೆ ಹೇಳಿದ್ರು, "ಇನ್ನು ಏನೇನಿದೆ ಪದ್ಯ ತೊಗೊಂಡು ಬಾ..." ಅಂದ್ರು, ತೊಗೊಂಡು ಹೋಗಿ ಕೊಟ್ಟೆ "ಇವು ಪರವಾಗಿಲ್ಲ ಚೆನ್ನಾಗಿವೆ" ಅಂತ ಅವರೇ ಆಯ್ಕೆ ಮಾಡಿ ಪ್ರಬುದ್ಧ ಕರ್ನಾಟಕಕ್ಕೆ ಕೊಟ್ರು, ಪ್ರಬುದ್ಧ ಕರ್ನಾಟಕದಲ್ಲಿ ಅವು ಉದ್ದಕ್ಕೂ ಪ್ರಕಟ ಆಯ್ತು. ಆ ಕಾಲಕ್ಕೆ ಪ್ರಬುದ್ಧ ಕರ್ನಾಟಕದಲ್ಲಿ ನಿಮ್ಮದೊಂದು ಪದ್ಯ ಪ್ರಕಟ ಆಗೋದು ಅಂದ್ರೆ ಡಿಗ್ರಿ ಕೊಟ್ಟ ಹಾಗೇ ಲೆಕ್ಕ. ಹೀಗೆ ಕುವೆಂಪು ನನ್ನ ಬೆಳೆಸಿದರು. ಕುವೆಂಪು ಹೇಗೆ ಬೆಳೆಸಿದರು ಅಂದ್ರೆ ಜಾಗತಿಕ ಪ್ರಜ್ಞೆಯ ವಿಸ್ತಾರದಲ್ಲಿ ಬೆಳೆಸಿದರು ಪಂಪನನ್ನು ಪಾಠ ಮಾಡೋವಾಗ Homer Milton ಬಗ್ಗೆ ಸಂವಾದಿಯಾದ reference ಕೊಡ್ತಾ ಇದ್ದರು. ಹೀಗಾಗಿ ಕುವೆಂಪು ಅವರು ನಮ್ಮನ್ನು ಕನ್ನಡ ವಿದ್ಯಾರ್ಥಿಗಳಿಗೆ ಬರೀ ಕನ್ನಡ ಅಷ್ಟೇ ಸಾಲದು, ಜಗತ್ತಿನ ಎಲ್ಲ ಸಾಹಿತ್ಯದ ತಿಳುವಳಿಕೆಯೊಳಗೆ ಅವರು ತಮ್ಮ ಪ್ರಜ್ಞೆಯನ್ನು ವಿಸ್ತಾರ ಮಾಡಬೇಕು ಅಂತ ಒಂದು ಬುನಾದಿಯನ್ನು ಹಾಕ್ಕೊಟ್ರು, ಹಾಗೇ Comparative Studies ಅಂತ ಕರೀತೀನಿ ತೌಲನಿಕ ಅಧ್ಯಯನ, ಅದು ಬಹಳ ಮುಖ್ಯ ಅಂತ ಅವರು ಕಲಿಸಿದರು. ಹೀಗಾಗಿ 'ನಾನು ಕಾವ್ಯಾರ್ಥ ಚಿಂತನ' ಮೂಲಭೂತವಾಗಿ ಅವರ ಪ್ರೇರಣೆಯಿಂದ ಬರೆದದ್ದು. ತೀನಂಶ್ರೀ ಅವರದು ಪರೋಕ್ಷವಾದ ಪ್ರೇರಣೆ. ತೀನಂಶ್ರೀ ಅವರ ಶಾಸ್ತ್ರ ನಿಷ್ಕೃಷ್ಟತೆ ಕುವೆಂಪು ಅವರ ಉಜ್ವಲವಾದ intuition ಅಂದರೆ ಪ್ರತಿಭಾ ಮೂಲವಾದ ಬೋಧನೆ ಎರಡನ್ನೂ ನಾನು ಅರಗಿಸಿಕೊಳ್ಳಕ್ಕೆ ಸಾಧ್ಯ ಆಯ್ತು. ತೀನಂಶ್ರೀ ಅತ್ಯಂತ ಅಚ್ಚುಕಟ್ಟಾದ ನಿಷ್ಕೃಷ್ಟವಾದ ಪರಿಜ್ಞಾನವನ್ನು ಹೊಂದಿದ್ರು, ಕಲಿಸಿದ್ರು.

ಪ್ರ: *ತೀನಂಶ್ರೀ ನಿಮಗೆ ಅಧ್ಯಾಪಕರಲ್ಲ.*

ಉ: ಅಲ್ಲ. ಅಲ್ಲ. ನಾನು ಬಂದಾಗ ಅವರು ಧಾರವಾಡದಲ್ಲಿದ್ದರು. ಆದರೆ ನಾನು ಅವರ ಶಿಷ್ಯನಾಗೋ ಯೋಗವನ್ನು ಗಿಟ್ಟಿಸಿಕೊಂಡೆ. ಆ ವೇಳೆಗೆ ಮಹಾರಾಜಾ ಕಾಲೇಜಲ್ಲಿ ನಾನು ಅಧ್ಯಾಪಕನಾಗಿದ್ದೆ. ಕುವೆಂಪು ಅವರು ವೈಸ್ ಛಾನ್ಸಲರ್ ಆಗಿ ಹೋದ ಮೇಲೆ ತೀನಂಶ್ರೀ ಅವರು ಮಹಾರಾಜಾ ಕಾಲೇಜಿಗೆ ಬಂದರು. ಅವರು ಪಾಠ ಮಾಡ್ತಾ ಇರೋವಾಗ ನಾನು ಅಧ್ಯಾಪಕನಾಗಿದ್ದರೂ ಕೂಡ ವಿದ್ಯಾರ್ಥಿಯಾಗಿ ಅವರ ತರಗತಿಗಳಲ್ಲಿ ಕೂಡುವ ಅವಕಾಶ ಕೇಳಿದ್ದೆ. ಅವರು ಒಪ್ಪಿದ್ದರು. ಹೀಗಾಗಿ ನಾನು ೨ ವರ್ಷ ಎಂ.ಎ. ವಿದ್ಯಾರ್ಥಿಗಳ ಜೊತೆಗೆ ನಾನೂ ಒಬ್ಬ ಅಧ್ಯಾಪಕನಾಗಿದ್ದರೂ, ಕೂತು ಅವರ ಪಾಠವನ್ನು ಕೇಳಿ notes ಮಾಡ್ಕೊಂಡು ಅದರಿಂದ ಸಾಕಷ್ಟು ಲಾಭವನ್ನು ಮಾಡ್ಕೊಂಡೆ. ನನ್ನ ವಿಮರ್ಶೆಯ ಪೂರ್ವ-ಪಶ್ಚಿಮ ಅನ್ನೋ ಪುಸ್ತಕ ಬರೆಯೋದಿಕ್ಕೆ ತೀನಂಶ್ರೀ ಅವರೇ ಬಹಳ ಪ್ರಮುಖವಾದ ಪ್ರೇರಣೆ. ಹೀಗಾಗಿ ನನ್ನ ತೌಲನಿಕ ಅಧ್ಯಯನದ ಹಿಂದೆ ಭಾರತೀಯ ಕಾವ್ಯಮೀಮಾಂಸೆ ತಿಳುವಳಿಕೆಯನ್ನು ತೀನಂಶ್ರೀ ಅವರು, ಪಾಶ್ಚಿಮಾತ್ಯ ಕಾವ್ಯಮೀಮಾಂಸೆ ತಿಳುವಳಿಕೆಯನ್ನು ಕುವೆಂಪು ಅವರು ಕೊಟ್ಟಿದ್ದರಿಂದ ನಾನು ಕಾವ್ಯಾರ್ಥ ಚಿಂತನೆಯಂತಹ ಕೃತಿಯನ್ನು ಬರೆಯೋದಕ್ಕೆ ಸಾಧ್ಯ ಆಯ್ತು.

ಪ್ರ: *ಸೌಂದರ್ಯ ಸಮೀಕ್ಷೆಗೆ ಇವರೇ ಗೈಡ್ ಆಗಿದ್ರು ಅಲ್ವ ?*

ಉ: ಹೌದು, ಹೌದು.

ಪ್ರ: *ಸರ್, ಇನ್ನೊಬ್ಬರು ನಿಮ್ಮ ಬದುಕಿನಲ್ಲಿ ಬಹಳ ಪ್ರಭಾವ ಬೀರಿದವರು ತ.ಸು. ಶಾಮರಾಯರು ಅವರ ಪರಿಚಯ, ಅವರ ಜೊತೆಗೆ ನಿಮ್ಮ.....*

ಉ: ಅವರು ನನಗೆ ಕೇವಲ ಅಧ್ಯಾಪಕರು ಅಂತ ನೋಡೋದೇ ಇಲ್ಲ ನಾನು. ಒಂದು ರೂಪಕ ಹೇಳೋದಾದ್ರೆ ನನ್ನ ವ್ಯಕ್ತಿತ್ವಕ್ಕೆ ತ.ಸು ಶಾಮರಾಯರು ನೆಲ-ನೀರು, ಕುವೆಂಪು ಅವರು ಗಾಳಿ-ಬೆಳಕು. ಇಷ್ಟು ಹೇಳಿದರೆ ಸಾಕು. ನನ್ನ ವಿದ್ಯಾರ್ಥಿ ಜೀವನದ ಅತ್ಯಂತ ಬಡತನದ ದಿನಗಳಲ್ಲಿ ತ.ಸು ಶಾಮರಾಯರು, ನನ್ನ ಪೋಷಕರು, ಗುರು, ಪ್ರೇರಕರು ಎಲ್ಲ ಆಗಿದ್ದರು. ವಿದ್ಯಾರ್ಥಿಗಳ ವಿಚಾರದಲ್ಲಿ ಅವರಿಗಿದ್ದ ಅತ್ಯಂತ ಉತ್ಕಟವಾದ ವಾತ್ಸಲ್ಯವನ್ನು ನಾನೆಲ್ಲೂ ಕಾಣಲಿಲ್ಲ. ಅತ್ಯಂತ ಅವ್ಯಾಜವಾದ, ನಿರ್ವ್ಯಾಜವಾದ ಪ್ರೀತಿ. ಒಂದು ಸಲ ನಾವು ಕಾಲೇಜಿನ ತರಗತಿ ಒಳಗೆ ಯಾವುದೇ hostelಗೆ seat ಸಿಗದೆ, ಊಟ ಇಲ್ಲದೆ ಕೂತಿದ್ದಾಗ, ಅವರೇ ಮನೆಗೆ ಕರೆದುಕೊಂಡು ಹೋಗಿ ಊಟ ಹಾಕಿ, ನನ್ನ ವಿಚಾರಗಳನ್ನು ತಿಳ್ಕೊಂಡು hostel ಸೀಟ್ ಕೊಡ್ಸಿದ್ರು. ಹೀಗೆ ನನ್ನ ಬದುಕಿನಲ್ಲಿ ವಾತ್ಸಲ್ಯದ ಪ್ರತಿಮಾ ಸ್ವರೂಪರು ಅಂತ ನಾನು ಅವರನ್ನು ನೆನೀತೀನಿ.

"ಎದೆ ತುಂಬಿ ಹಾಡಿದೆನು" ಪದ್ಯ ಇದೆಯಲ್ಲ, ಆ ಪದ್ಯ ಅವರನ್ನು ಕುರಿತು ಬರೆದದ್ದು. ಯಾಕೇಂದ್ರೆ... ನಾನು ಬರೆದ ಎಲ್ಲ ಕವಿತೆಗಳನ್ನು ಪ್ರತಿವಾರ ಹೋಗಿ ಅವರ ತಲೇಗೆ ತುಂಬ್ತಾ ಇದ್ದೆ. ಏನು ಬರೆದಿದೀಯ ತೊಗೊಂಡು ಬಾರಯ್ಯ... ಅಂತ ಕೇಳ್ತಾ ಇದ್ರು, ಕವಿತೆ ತೊಗೊಂಡು ಚಾಮುಂಡಿ ಬೆಟ್ಟದ ಕಡೆ ಇಬ್ಬರೂ ವಾಕ್ ಹೋಗಿ, ಬಂಡೆ ಮೇಲೆ ಕೂತ್ಕೊಂಡು ನಾನು ಪದ್ಯ ಓದ್ತಿದ್ದೆ. ಅವರು ತಲ್ಲೀನತೆಯಿಂದ ಕೇಳ್ತಾ ಇದ್ದರು. ಎದೆ ತುಂಬಿ ಕೇಳ್ತಾ ಇದ್ದರು. ಅಷ್ಟೇ ಅಲ್ಲ ನನ್ನ ಮೊಟ್ಟ ಮೊದಲ ಕವನ ಸಂಕಲನದ ಪ್ರಕಾಶಕರೂ ಕೂಡ ಅವರೇ. ನನ್ನ ಅನೇಕ ಪುಸ್ತಕಗಳನ್ನು ಆ ಟಿ.ಎಸ್. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಲ್ಲಿ ಪ್ರಕಟಮಾಡಿದ್ದೂ ಕೂಡ ಅವರೇ. ಹೀಗಾಗಿ ಶಾಮರಾಯರ ವಿಚಾರದಲ್ಲಿ ನನಗಿರೋ ಋಣವನ್ನು ಹೇಳಿ ಮುಗಿಸೋಕೆ ಆಗಲ್ಲ.

> "ಎನಿತು ಜನ್ಮದಲಿ ಎನಿತು ಜೀವರಿಗೆ
> ಎನಿತು ನಾವು ಋಣಿಯೋ
> ತಿಳಿದು ನೋಡಿದರೆ ಬಾಳು ಎಂಬುದಿದು
> ಋಣದ ರತ್ನ ಗಣಿಯೋ"

ಅನ್ನೋ ಮಾತನ್ನು ಅವರಿಗೂ ಅನ್ವಯಿಸಿ ಹೇಳಬಹುದು.

ಪ್ರ: *ಸರ್, ನಿಮಗೆ ರಾಮಕೃಷ್ಣ ಆಶ್ರಮದ ಸಂಪರ್ಕ ಬಂತು. ಅದೂ ಕುವೆಂಪು ಮೂಲಕವೇ ಬಂತು ಅಂತ ನಾನು ಭಾವಿಸ್ತೀನಿ. ಅದು ನಿಮ್ಮ ಬದುಕನ್ನು ರೂಪಿಸುವಲ್ಲಿ ಎಂಥ ಪಾತ್ರವನ್ನು ವಹಿಸಿದೆ ?*

ಉ: ಖಂಡಿವಾಗಿಯೂ. ರಾಮಕೃಷ್ಣ ಪರಮಹಂಸರ ಆಶ್ರಮದ ಸಂಪರ್ಕ ನನಗೆ ಉಂಟಾಯ್ತು. ಆ ಕಾಲಕ್ಕೆ ಒಂದು ಸ್ವಾರಸ್ಯ ಸಂಗತಿ ಅಂತ ಹೇಳಿದ್ರೆ ಆಗ ರಾಮಕೃಷ್ಣಾಶ್ರಮದ

ಜ್ಞಾನಜ್ಞಾನಾನಂದ ಅನ್ನೋ ಸ್ವಾಮಿಗಳು "The gospel of Sri. Ramakrishna" ಅಂತ ಒಂದು ಬಹಳ ಅದ್ಭುತವಾದ ಪುಸ್ತಕ ಇದೆ ಇಂಗ್ಲಿಷ್‌ನಲ್ಲಿ Master ಮಹಾಶಯ ಬರೆದಿರೋದು, ಆದರಂತ Biography ಜಗತ್ತಿನಲ್ಲೇ ಇಲ್ಲ. ಅಷ್ಟು ಅದ್ಭುತವಾದದ್ದು ಅದು. ಇಡೀ ರಾಮಕೃಷ್ಣರ ವ್ಯಕ್ತಿತ್ವದ ಬಗ್ಗೆ ಅದೊಂದೇ ಅಂಥ ಪುಸ್ತಕ. ಅದನ್ನ ಅವರು ಕನ್ನಡಕ್ಕೆ ಮಾಡ್ತಾ ಇದ್ದರು. ಅದರಲ್ಲಿ ಅನೇಕ ಕವಿತೆಗಳು ಬರುತ್ತವೆ. ರಾಮಕೃಷ್ಣ ಪರಮಹಂಸರು ತಮ್ಮ ಬೋಧನೆಯ ಸಂದರ್ಭದಲ್ಲಿ ಹೇಳ್ತಾ ಇದ್ದ ಅನೇಕ ಸಾಧು ಸಂತರ ಗೀತೆಗಳು ನಾನಕರದು, ಕಬೀರರದು, ಚೈತನ್ಯ ಹೀಗೇ ಅನೇಕ ಗೀತೆಗಳು ಅದರಲ್ಲಿ ತುಂಬಿಕೊಂಡಿವೆ. ಈ ಗೀತೆಗಳನ್ನು ಹೇಗೆ ಮಾಡೋದು? ಅವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಮಾಡ್ತಾ ಇದ್ದರು. ಅದಕ್ಕೇ ಅವರು ಕವಿಗಳನ್ನು ಹುಡುಕ್ತಾ ಇದ್ದರು. ಅವರು ಹೋಗಿ ಕುವೆಂಪುನ ಕೇಳಿದ್ರಂತೆ. ಕುವೆಂಪು ಹೇಳಿದರು ಶಿವರುದ್ರಪ್ಪಂಗೆ ಕೊಡಿ. ಅವರು ಮಾಡ್ತಾರೆ ಅಂತ. ಹೀಗೆ ರಾಮಕೃಷ್ಣ ಪರಮಹಂಸರ ಕೃಪೆ ನನಗೆ ಆಯಾಚಿತವಾಗಿ ನನ್ನ ಕಡೆ ಬಂತು. ಇಂಗ್ಲಿಷ್ ಪದ್ಯಗಳನ್ನು ಇಟ್ಕೊಂಡು ಅದಕ್ಕೆ ಸಂವಾದಿಯಾದ ಬಂಗಾಳಿ ಹಿಂದಿ ಪದ್ಯಗಳ transliteration ಇಟ್ಕೊಂಡು ಆ ಕವಿತೆಗಳನ್ನು ನಾನು ಅನುವಾದ ಮಾಡಿದೆ. ಇವತ್ತಿಗೆ ರಾಮಕೃಷ್ಣಾಶ್ರಮದಲ್ಲಿ ಹಾಡುವ ಅನೇಕ ಕವನಗಳು ನಾನು ಮಾಡಿದ ಅನುವಾದಗಳೇ ತೀರ್ಥವಾಣಿ ಅಂತ ಆಮೇಲೆ ಒಂದು ಕವನ ಸಂಕಲನ ತಂದೆ. ಇವತ್ತಿಗೂ ಕೂಡ ರಾಮಕೃಷ್ಣ ವಚನವೇದ ಅಂತ ಅಚ್ಚಾಗಿದೆ ಆ ಪದ್ಯಗಳೆಲ್ಲ, ನಾನು ಬಂಗಾಳಿಯಿಂದ ಕನ್ನಡಕ್ಕೆ ಮಾಡಿದ ಪದ್ಯಗಳು. ಆ ಮೂಲಕ ನನಗೆ ಬಂಗಾಳಿಯ ಛಂದೋವಿಧಾನ ಇದೆಯಲ್ಲ ಲಯ ಅದನ್ನ ಕನ್ನಡಕ್ಕೆ ತರಕ್ಕೆ ಸಾಧ್ಯವಾಯ್ತು ಅಂತ ಕೂಡ ಅನ್ನಿಸ್ತಾ ಇದೆ.

ಪ್ರ: *ಬಾಂಗಾಳಿ ಕಲಿತ್ರಾ ಸರ್ ?*

ಉ: ಕಲಿತುಕೊಳ್ಳಲಿಲ್ಲ. Transliteration ಆದ್ದರಿಂದ ಅದರ ಲಯ ಇತ್ಯಾದಿಗಳನ್ನು ಗಮನಿಸೋಕೆ ನನಗೆ ಅನುಕೂಲ ಆಯ್ತು.

ಪ್ರ: *ಸರ್..... ನೀವು ಅಧ್ಯಾಪಕರಾಗಿ ದಾವಣಗೆರೇಲಿ ಮತ್ತೆ ಮೈಸೂರಲ್ಲಿ ಕಾಲಕಳೆದ್ರಿ, ಆಮೇಲೆ ಬೆಂಗಳೂರಿಗೆ ಬಂದ್ರಿ.*

ಜಿ.ಎಸ್.ಎಸ್ : ಹೈದರಾಬಾದ್‌ನಲ್ಲಿ ಸ್ವಲ್ಪ ಕಾಲ ಇದ್ದೆ.

ಪ್ರ: *ತಾತ್ಕಾಲಿಕವಾಗಿ ನಿಮ್ಮ ಅನುಭವದಲ್ಲಿ ಬಹಳ ಗಾಢವಾಗಿ ಉಳಿದಿರುವ ನೆನಪುಗಳು....*

ಉ: ಅಧ್ಯಾಪಕನಾಗಿ ನಾನು ಅನೇಕ ವಿಷಯಗಳನ್ನು ಪಾಠ ಹೇಳಿದೀನಿ. ಸಾಕಷ್ಟು ಪಾಠನೂ ಕಲಿತಿದ್ದೀನಿ. ಇದರಿಂದ ನನಗಾದ ಲಾಭ ಅಂದ್ರೆ... ಶ್ರೇಷ್ಠ ಮಟ್ಟದ ವಿದ್ಯಾರ್ಥಿಗಳನ್ನು ನಾನು ಸಂಪಾದಿಸಿದೆ. ಇವತ್ತು, ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಬಹಳಷ್ಟು ಒಳ್ಳೆ ಹೆಸರು ಮಾಡಿದ ಲೇಖಕರು, ಕವಿಗಳು, ವಿಮರ್ಶಕರು, ಅಂತ ಆಗ್ತಾರೆ. ಅವರೆಲ್ಲ ನನ್ನ ಒಂದು ಕಾಲದ ವಿದ್ಯಾರ್ಥಿಗಳಾಗಿದ್ದರು ಅನ್ನೋದು, ಅದೂ ನನ್ನ ಸಂಪತ್ತಿನ

ಒಂದು ಭಾಗ ಅನ್ನೋದು ಬಹಳ ಮುಖ್ಯವಾದ ಸಂಗತಿ. ಡಿ.ಆರ್. ನಾಗರಾಜ್, ಕೆ.ವಿ. ನಾರಾಯಣ್, ಹೆಚ್.ಎಸ್. ವೆಂಕಟೇಶಮೂರ್ತಿ, ಕಲ್ಗುಡಿ, ನರಹಳ್ಳಿ ಬಾಲಸುಬ್ರಹ್ಮಣ್ಯಂ ಚಿದಾನಂದ ಮೂರ್ತಿ, ಕೆ.ಜಿ. ನಾಗರಾಜಪ್ಪ ಬೇಕಾದಷ್ಟು ಜನ .... ಇದ್ದಾರೆ.

ಪ್ರ: *ಸರ್, ದಾವಣಗೆರೇಲಿ ನೀವು ಮೊಟ್ಟ ಮೊದಲು ಪಾಠ ಮಾಡೋಕೆ ಹೋದಾಗ ನಿಮ್ಮ ಅನುಭವದ ಬಗ್ಗೆ ಓದಿದ್ದೆ. ನೀವು ಒಂದು ಗಂಟೆ ಪಾಠ ಮಾಡಿದ್ರಿ, ವಿದ್ಯಾರ್ಥಿಗಳು ದಿಗ್ಮೂಢರಾದರು. ಅವರಿಗೆ ಏನೂ ಅರ್ಥ ಆಗಿರಲಿಲ್ಲ ಅಂತ, ನೆನೆಸಿಕೊಂಡು ......*

ಉ: ಹಳ್ಳಿ ನಾನು ಯಾವತ್ತೂ ಮಾತಾಡಿದವನಲ್ಲ. ಯಾವುದೇ ಚರ್ಚಾಕೂಟಗಳಲ್ಲಿ ಭಾಗವಹಿಸಿ ಕೂಡಾ ಅಭ್ಯಾಸ ಇರಲಿಲ್ಲ. ಇದ್ದಕ್ಕಿದ್ದ ಹಾಗೆ BA honours ಪಾಸ್ ಮಾಡಿ ಅಧ್ಯಾಪಕನಾಗಿ ಹೋಗು ಅಂತ ವಿಶ್ವವಿದ್ಯಾಲಯದ ಅಪ್ಪಣೆ ಬಂತು. ನನಗೇನು ಮಾಡಬೇಕು ಅಂತ ತೋಚಲಿಲ್ಲ. ಏಕೆಂದ್ರೆ ಸಭೆ, ಸಮಾರಂಭದಲ್ಲಿ ನಿಂತಾಗ, ಕೈಕಾಲು ನಡುಗೋದು ಆ ಕಾಲಕ್ಕೆ ನನಗೆ ಅನುಭವವಾಗಿತ್ತು. ಆದರೆ ಬೇರೆ ದಾರಿ ತೋಚಿತು. ಕನ್ನಡದಲ್ಲಿ ಅರ್ಥವಾಗದ ಹಾಗೆ ಪಾಠ ಮಾಡೋಕೆ ಸಾಧ್ಯವೇ? ಅನ್ನೋ ಪ್ರಯೋಗಾನ ಅವತ್ತು ಮಾಡಿದೆ. ಇಂಗ್ಲಿಷ್‌ನಲ್ಲಿ ಮಾಡಿದ್ರೆ, ನನಗೆ ಅರ್ಥ ಆಗ್ತಿರಲಿಲ್ಲ. ಕನ್ನಡ ಏನಂತೆ ಸುಲಭವಾದದ್ದು ಸರಳವಾದದ್ದು ಪರಿಚಿತವಾದದ್ದು ದೈನಂದಿನವಾದ್ದು. ಅದರಲ್ಲಿ ಹೇಗೆ ಅರ್ಥವಾಗದ ಹಾಗೆ ಹೇಳೋದು? ಅದಕ್ಕೇ ನಾನೇನು ಮಾಡಿದೆ, ಮೊದಲನೇ ಪೀರಿಯಡ್‌ನೊಳಗೆ ಆ ವಿದ್ಯಾರ್ಥಿಗಳಿಗೆ ಅರ್ಥವಾಗದ ಹಾಗೆ ಕಾವ್ಯಮೀಮಾಂಸೆಯ ಭಾರೀ ಭಾರೀ ತಿಮಿಂಗಿಲದ ಮಾತುಗಳನ್ನೆಲ್ಲ ಬಳಸಿ ಅವರನ್ನು ದಂಗು ಬಡಿಸಿದ್ದು ಮೊದಲನೇ ಕೆಲಸ. ಮಾರನೇ ದಿನದಿಂದ ನನಗೆ ಆ ವಿದ್ಯಾರ್ಥಿಗಳನ್ನು ಹತೋಟಿಗೆ ತೊಗೊಳೋಕೆ ಅನುಕೂಲ ಆಯ್ತು. ಹೀಗೆ ಮಾತಾಡಿದ್ರೆ ಇಂಗ್ಲಿಷ್‌ನಲ್ಲಿ ಅರ್ಥವಾಗದ ಹಾಗೇ ಮಾತಾಡೋದಲ್ಲ, ಕನ್ನಡದಲ್ಲೂ ಕೂಡ ಅರ್ಥವಾಗದ ಹಾಗೆ ಮಾತಾಡಬಹುದು ಅಂತ ನನಗೆ ಗೊತ್ತು. ಆದರೆ ಮುಂದಕ್ಕೆ ಅದಾವುದೋ ರೀತಿ ಪಾಠ ಮಾಡೋ ಕಲೆ ನನಗೆ ಕರಗತವಾಯ್ತು ಅನ್ನೋದು ಬೇರೆ ಮಾತು. ಒಳ್ಳೇ ಅಧ್ಯಾಪಕ ಅನ್ನೋ ಹೆಸರನ್ನು ನಾನು ಆಮೇಲೆ ಪಡ್ಕೊಂಡೆ.

ಪ್ರ: *ನೀವು ತರಗತಿಲಿರಲಿ, ಭಾಷಣಕ್ಕಿರಲಿ ಹಾಗೇ ಹೋಗಿರೋದು ನನ್ನ ಅನುಭವಕ್ಕೆ ಬಂದೇ ಇಲ್ಲ. ಪೂರ್ಣಸಿದ್ಧತೆ ಮಾಡ್ಕೊಂಡೇ ಇರ್ತೀರಿ.*

ಉ ಮಾತನಾಡೋದು ಒಂದು ಪರೀಕ್ಷೆ. ಅದು ಸಲೀಸಾದ ಲೀಲಾಜಾಲವಾದ ವಿಷಯ ಅಲ್ಲ. ಯಾವ ವಿಷಯನೇ ಆಗಲಿ, ಪೂರ್ವಸಿದ್ಧತೆ ಅಪೇಕ್ಷಿಸುತ್ತೆ. ಗೊತ್ತಿರೋ ವಿಷಯ ಆದ್ರೂ ಅಷ್ಟೆ. ಪರಿಚಿತವಾದ ವಿಷಯ ಆದರೂ ಕೂಡ ಮತ್ತೆ ಹೊಸದಾಗಿ notes ಮಾಡಬೇಕಾಗುತ್ತೆ. ಹೀಗಾಗಿ ಮಾತಾಡೋದು ನನಗೆ ಸಲೀಸಾದ ಸಂಗತಿ ಅನ್ನಿಸೋದಿಲ್ಲ.

ಅದಕ್ಕೇ ನಾನು ಏನು ಹೇಳಬೇಕು, ಎಷ್ಟು ಹೇಳಬೇಕು ಟಿಪ್ಪಣಿಗಳನ್ನು ಇಟ್ಕೊಂಡೇ

ನಾನು ಮಾತಾಡೋದು ಇದು ಅಧ್ಯಾಪಕತನದಿಂದ ನಾನು ಕಲಿತ ಶಿಸ್ತು ಕೂಡ ಇರಬಹುದು.

ಪ್ರ: *ಮೈಸೂರು ಬಿಟ್ಟು ಹೈದರಾಬಾದ್‌ಗೆ ಹೋಗಬೇಕಾದ ಪ್ರಸಂಗ ಹುಟ್ಟು. ಅದನ್ನ ನಿಮ್ಮ ಆತ್ಮಕತೆಯಲ್ಲಿ ಕೂಡ ಬರ್‍ಕೊಂಡಿದೀರಿ. ಹೇಳ್ತೀರಾ..... ಆ ಪರಿಸ್ಥಿತಿ ಯಾಕೆ ಬಂತು ?*

ಉ: ಆ ಪರಿಸ್ಥಿತಿ .... ಅದೂ .... ಅನಿವಾರ್ಯವಾಗಲಿಲ್ಲ, ಆಕಸ್ಮಿಕವಾಯ್ತು. ನಾನು ಮಾನಸ ಗಂಗೋತ್ರಿಯಲ್ಲಿ ಕೂಡ ಅಧ್ಯಾಪಕನಾಗಿದ್ದೆ ಆಗ. ಮೈಸೂರು ವಿಶ್ವವಿದ್ಯಾಲಯದಲ್ಲಿ ಒಳ್ಳೆಯ ವಾತಾವರಣ ಇತ್ತು ಆಗ. ಯಾವ ಕಿರಿಕಿರಿಯೂ ಇರಲಿಲ್ಲ ನನಗೆ. ಆದರೆ, ಒಂದು ದಿನ ನನ್ನ ಸ್ನೇಹಿತರು ಯಾರೋ ಬಂದು "ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ರೀಡರ್ ಹುದ್ದೆಗೆ ಪತ್ರಿಕೇಲಿ announce ಆಗಿದೆ. ನೀವ್ಯಾಕೆ ಹಾಕಬಾರದು" ಅಂತ ಕೇಳಿದರು ನಾನು "ಅಲ್ಲಯ್ಯ ಅದು ತೆಲುಗು ಮಾತಾಡೋ ದೇಶ, ನಾನು ಕನ್ನಡ ಕವಿ, ಅಲ್ಲಿ ಹೋಗಿ ಏನ್ ಮಾಡಲಿ ? ಮಕ್ಕಳಿಗೆ ವಿದ್ಯಾಭ್ಯಾಸದ ತೊಂದರೆ ಆಗುತ್ತೆ, ನಾನು ಹೋಗಲ್ಲ" ಅಂದೆ ಅವರು ಹೇಳಿದರು "ಏನಂತೆ ! ಒಂದೆರಡು ವರ್ಷ ಹೋಗಿ ಬರಬಹುದು ಅಷ್ಟೆ ಅವರೇ ಟಿ.ಎ. ಡಿ.ಎ. ಕೊಡ್ತಾರೆ. Interview ಗೆ ಹೋಗೋಕೆ ಏನು ಕಷ್ಟ ?" ಅಂದ್ರು, ನಾನು ಸುಮ್ಮನೆ apply ಮಾಡಿದೆ. ಅರ್ಜಿ ಹಾಕಿದ ಮೇಲೆ ಏನಾಯ್ತು ಸ್ವಾರಸ್ಯ ಸಂಗತಿ ಅಂದ್ರೆ... ನನ್ನ ಸ್ನೇಹಿತ ಪ್ರಭುಶಂಕರ್ ಅದೇ ಹುದ್ದೆಗೆ ಅರ್ಜಿ ಹಾಕಿದಾರೆ ಅಂತ ನನಗೆ ಗೊತ್ತಿರಲಿಲ್ಲ. ಇಬ್ಬರೂ ಹೀಗೇ Walk ಹೋಗುವಾಗ ಲೋಕಾಭಿರಾಮವಾಗಿ ನಾನು, ಹೀಗೇ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಒಂದು ರೀಡರ್ ಪೋಸ್ಟ್ ಕಾಲ್ ಮಾಡಿದ್ರು ನಾನೂ ಅರ್ಜಿ ಹಾಕಿದ್ದೇನೆ ಅಂದೆ. "ಅಯ್ಯೋ ನಾನೂ ಹಾಕಿದೀನಪ್ಪಾ !" ಅಂದ್ರು ಅವರು. ನಾನು ಹೇಳಿದೆ "ನಾನು ಹೇಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಾಠ ಮಾಡ್ತಾ ಇದೀನಿ. ನಿಮಗಿಲ್ಲ. ಆದ್ದರಿಂದ ನೀವೇ ಹೋಗಿಬನ್ನಿ ನನಗೇನೂ ಇಲ್ಲ. ಪರವಾಗಿಲ್ಲ. ನನಗೆ ರೀಡರ್ ಪೋಸ್ಟ್ ಮುಖ್ಯ ಅಂತ ಕಾಣ್ತಾ ಇಲ್ಲ ಅಂತ ಹೇಳಿಬಿಟ್ಟು ಅರ್ಜಿ ಹಾಕಿದ್ದ ಪ್ರಭುಶಂಕರ್ ಅವರನ್ನು ನಾನೇ ರೈಲಿಗೆ ಕಳಿಸಿ ಅವರಿಗೆ best wishes ಹೇಳಿ ಅವರನ್ನು ಹೈದರಾಬಾದ್‌ಗೆ ಕಳಿಸಿ ನಾನು ಮನೇಲಿ ಉಳ್ಕೊಂಡೆ. Interview ಗೆ ಹೋಗಲಿಲ್ಲ. ತಮಾಷೆ ಸಂಗತಿ ಅಂದ್ರೆ ೩ ತಿಂಗಳ ನಂತರ ಆ ಪೋಸ್ಟಿಗೆ ಆ ಹುದ್ದೆಗೆ ನನ್ನನ್ನು ನೇಮಕ ಮಾಡಿದ ಆಜ್ಞೆ ನನಗೆ ಬಂತು. ಇದು ಬಹಳ ಆಶ್ಚರ್ಯ. ಕಾರಣ .... ಆಕಸ್ಮಿಕ .... ಹೀಗೆ ನಾನು ಹೈದರಾಬಾದ್‌ಗೆ ಹೋಗಬೇಕಾಯ್ತು.

ಪ್ರ: *ಮುಖ್ಯವಾಗಿ ನಿಮ್ಮ ವ್ಯಕ್ತಿತ್ವ ಪ್ರಖರವಾಗಿ ಬೆಳೆದದ್ದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅದೂ ಕನ್ನಡ ಅಧ್ಯಯನ ಕೇಂದ್ರವನ್ನು ನೀವು ಕಟ್ಟಿದ್ರಲ್ಲಿ, ಬಹಳ ದೊಡ್ಡ ಪರಿಶ್ರಮ ಕಾಣಿಸ್ತಾ ಇದೆ. ಅದು ಅಂಥ ಒಂದು ಕನಸನ್ನು ನೀವು ಯಾವಾಗ ಕಟ್ಕೊಂಡ್ರಿ ಹೇಗೆ ನನಸು ಮಾಡಿದ್ರಿ ?*

ಉ: ಅದೂ ಕೂಡ ಅನಿರೀಕ್ಷಿತವೇ. ನಾನು ಹೈದರಾಬಾದ್‌ಗೆ ಹೋಗೋದು ಹೇಗೆ

ಅನಿರೀಕ್ಷಿತವಾಗಿತ್ತೋ, ಮೈಸೂರಿನಿಂದ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಷ್ಟೇ ಅನಿರೀಕ್ಷಿತವಾಗಿತ್ತು. ಹೈದರಾಬಾದ್ ನಂತರ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಜಿ ಹಾಕಿದಾಗ ಆಯ್ಕೆ ಅಂತಾ ಕಷ್ಟ ಏನಾಗಲಿಲ್ಲ. ತುಂಬಾ ಸುಲಭವಾಯಿತು. ಹಿನ್ನೆಲೆ ಇತ್ತು. ಅಷ್ಟರೊಳಗೆ ಕೆಲವು ಪ್ರಕಟಣೆಗಳು ಇದ್ದವು. ಬೇಕಾದ Qualification ಇದ್ದವು. ಹೀಗೆ ಬೆಂಗಳೂರು ನನಗೆ ಒಳ್ಳೆ ಅವಕಾಶ ಒದಗಿಸ್ತು. ನಾನು ಯೋಚನೆ ಮಾಡಿದೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇದ್ಕೊಂಡು ಬೇರೆ ವಿಶ್ವವಿದ್ಯಾಲಯಗಳು ಮಾಡದ ಕೆಲಸವನ್ನು ಇಲ್ಲಿಂದ ನಾನೇನು ಮಾಡಬಹುದು ? ನೋಡಿದೆ ಆ ಕಡೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ವಿದ್ವತ್‌ಪೂರ್ಣವಾದ ದೊಡ್ಡ ದೊಡ್ಡ ಯೋಜನೆಗಳನ್ನು ಅವರು ಹಾಕ್ಕೊಂಡಿದ್ರು, ವಿಶ್ವಕೋಶ ಮಾದರಿ ಯೋಜನೆಗಳು, ಶಾಸನಗಳ ಸಂಪುಟಗಳು, ಸಾಹಿತ್ಯ ಚರಿತ್ರೆಯಂಥ ಸಂಪುಟಗಳು ಇಂಥದನ್ನು ಅವರು ಮಾಡ್ತಾ ಇದ್ದರು. ಆ ಕಡೆ ಕರ್ನಾಟಕ ವಿಶ್ವವಿದ್ಯಾನಿಲಯ ವಚನ ವಾಙ್ಮಯದ ಸಂಪಾದನೆ, ಪರಿಷ್ಕರಣೆ, ಪ್ರಕಟಣೆ ಇತ್ಯಾದಿ ಹಾಕ್ಕೊಂಡಿತ್ತು. ಇವತ್ತು ಅವೆರಡಕ್ಕೂ ಪೂರಕವಾಗಿ ಬೆಂಗಳೂರಿನ ವಿಶ್ವವಿದ್ಯಾನಿಲಯದಲ್ಲಿ ಸಮಕಾಲೀನ ಸಾಹಿತ್ಯ ವಿಮರ್ಶೆಯ ವಾತಾವರಣವನ್ನು ನಿರ್ಮಾಣ ಮಾಡುವ ಅಗತ್ಯ ಇದೆ ಅನ್ನಿಸ್ತು. ಮಾಡಬೇಕು ಅನ್ನಿಸ್ತು. ಸಂಕಲ್ಪ ಮಾಡಿಕೊಂಡೆ. ಹೀಗಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅದರ ಪಾಠಕ್ರಮಗಳಲ್ಲಿ ಎಲ್ಲದರಲ್ಲೂ ಕೂಡ ಈ ಹೊಸ ಆಧುನಿಕ ದೃಷ್ಟಿಕೋನ ಬರೋ ಹಾಗೆ ಇಟ್ಕೊಂಡೆ. ಇದಕ್ಕೆ ಕಾರಣ ಬರೀ ನಾನೊಬ್ಬನೇ ಅಲ್ಲ. ನನ್ನ ಜೊತೆಗೆ ಇದ್ದ ಎಲ್ಲ ಅಧ್ಯಾಪಕರೂ ಕೂಡ. ಒಳ್ಳೊಳ್ಳೆ ಅಧ್ಯಾಪಕರೂ ನನ್ನ ಜೊತೆ ಇದ್ದರು. ಅವರ ಸಲಹೆ ಸಹಕಾರ ಇದೆಲ್ಲವೂ ಕೂಡ ನನ್ನ ನೆರವಿಗೆ ಬಂತು. ಬೇರೆ ಬೇರೆ ಚಿಂತನಧಾರೆಗಳ ಅಧ್ಯಾಪಕರನ್ನು ಕೂಡ ನಾನು ನೆರವಿಗೆ ತೊಗೊಳ್ಳಬೇಕಾಯ್ತು. ಹೀಗಾಗಿ ನಾನು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮುಖ್ಯವಾಗಿ ಸಮಕಾಲೀನ ಸಾಹಿತ್ಯ ವಿಮರ್ಶೆಯ ಕೇಂದ್ರವಾಗಿ ಬೆಳೆಸಬೇಕು ಅನ್ನೋದು ಮುಖ್ಯವಾಯ್ತು. ಅದಕ್ಕೆ ಅನುಕೂಲವಾಗಿ ಪ್ರಕಟಣೆಗಳನ್ನು ತೊಗೊಂಡೆವು. ವರ್ಷಕ್ಕೆ ಒಂದು ಸಲ ವಿಚಾರ ಸಂಕಿರಣವನ್ನು ಏರ್ಪಡಿಸೋದು ಇದರಲ್ಲಿ ಬಹಳ ಮುಖ್ಯವಾದ ಕಾರ್ಯಕ್ರಮಗಳಲ್ಲಿ ಒಂದಾಯ್ತು. ಸುಮಾರು ೬೭ನೇ ಇಸವಿಯಿಂದ ಹಿಡಿದು ೮೭ನೇ ಇಸವಿವರೆಗೆ ೨೦ ವರ್ಷಗಳ ಕಾಲ ನಿರಂತರವಾಗಿ ನಾನು ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕನಾಗಿದ್ದರಿಂದ ನನಗೆ ಇಷ್ಟು ಕೆಲಸ ಮಾಡೋದಿಕ್ಕೆ ಸ್ವಾತಂತ್ರ್ಯ, ಅನುಕೂಲ, ಅವಕಾಶ ಎಲ್ಲ ಲಭಿಸ್ತು. ಆಗಿನ ಕಾಲದಲ್ಲಿ ಎಲ್ಲ ಉಪಕುಲಪತಿಗಳೂ ಕೂಡ ಇದಕ್ಕೆ ಪೂರಕವಾಗಿ ಕೆಲಸ ಮಾಡಿದರು. ಹೀಗೆ ಕರ್ನಾಟಕದ ಬೇರೆ ಬೇರೆ ಪಂಥಗಳಿಗೆ ಸೇರಿದ ಲೇಖಕರನ್ನು ಒಂದು ಸಮಾನ ವೇದಿಕೆ ಮೇಲೆ ತಂದು ಸಮಕಾಲೀನವಾದ ಸಾಹಿತ್ಯದ ಅಗತ್ಯಗಳನ್ನು ಪೂರೈಸುವಂಥ ವಿಚಾರ ಸಂಕಿರಣಗಳನ್ನು ಏರ್ಪಡಿಸಿದೆವು.

ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಪಂಪ ಒಂದು ಅಧ್ಯಯನ, ಕುವೆಂಪು ಒಂದು ಅಧ್ಯಯನ, ಮಾಸ್ತಿ ಒಂದು

ಪರಿಶೀಲನೆ, ಆಮೇಲೆ ಕನ್ನಡ ವಿಮರ್ಶೆಯ ನೆಲೆ-ಬೆಲೆ, ಸಮಕಾಲೀನ ಸಾಹಿತ್ಯದ ಲಕ್ಷಣಗಳು, ಭಾರತೀಯ ಸಾಹಿತ್ಯ ಅಂದರೇನು ? ಮಹಿಳಾ ಸಂವೇದನೆಗಳು ಹೀಗೇ ಬೇರೆ ಬೇರೆ ವಿಷಯಗಳನ್ನು ಕುರಿತು ೧೫-೧೬ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಪ್ರತಿಯೊಂದು ವಿಚಾರ ಸಂಕಿರಣದ Proceedingsನ ಮಂಡಿತವಾದ ಪತ್ರಿಕೆಗಳನ್ನು ಪುಸ್ತಕ ರೂಪದಲ್ಲಿ ತರೋದ್ರ ಮೂಲಕ ಅದಕ್ಕೆ ರೂಪ ಬಂತು. ಪ್ರಸಾರಾಂಗ ಬೇರೆ ಇತ್ತು. ಅದರ ಸಹಾಯದಿಂದ ದೊಡ್ಡ ೨-೩ ಯೋಜನೆಗಳನ್ನು ಹಾಕಿಕೊಂಡೆವು.

೧) ಸಾಹಿತ್ಯ ವಾರ್ಷಿಕ. ಎಲ್ಲ ಅಧ್ಯಾಪಕರನ್ನು ಕಟ್ಟಿಕೊಂಡು ಪ್ರತಿವರ್ಷ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಕೃತಿಗಳನ್ನು ಸಮೀಕ್ಷೆ ಮಾಡೋ ಕೆಲಸ. ಇದಕ್ಕೆ, Year book ಅಂತಾರೆ. ಅಂದರೆ ಸಾಹಿತ್ಯ ಸಮೀಕ್ಷೆ. ಇದನ್ನು ೧೪ ವರ್ಷಗಳ ಕಾಲ ನಾನು ಮಾಡೋಕೆ ಸಾಧ್ಯ ಆಯ್ತು. ಅದನ್ನು ಮುಂದುವರೆಸಿದ್ರೆ ಬಹಳ ಚೆನ್ನಾಗಿತ್ತು. ಸಾಹಿತ್ಯ ವಿಮರ್ಶೆ ಕೆಲಸ ಆಗ್ತಿತ್ತು. ಹೀಗೆ ಪ್ರತಿವರ್ಷದ ಸಾಹಿತ್ಯದ ಸಮೀಕ್ಷೆ ಒಂದು.

೨) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಅಂತ ೧೦ ಸಂಪುಟಗಳಲ್ಲಿ ತರೋ ಕೆಲಸ ನಾನು ಮಾಡಿದೆ. ಸಾಹಿತ್ಯವನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿಕೊಂಡು ಸಾಮಾನ್ಯ ಜನಕ್ಕೆ ತಿಳಿಯೋ ಹಾಗೆ ಅದನ್ನ ಬರೀಬೇಕು ಅನ್ನೋದು ನನ್ನ ಉದ್ದೇಶವಾಗಿತ್ತು.

೩)ಮತ್ತೊಂದು, ಕನ್ನಡ ಸಾಹಿತ್ಯ ಚರಿತ್ರೆಯ ಬೃಹತ್ ಸಂಪುಟಗಳು. ಅದು ೬ Volumeಗಳಲ್ಲಿ ಬಂತು. ಡಾ. ರಂ.ಶ್ರೀ. ಮುಗಳಿ ಅವರು ಗುರುಗಳು. ನನಗಿಂತ ಹಿಂದೆ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕೆಲವು ವರ್ಷ ಕೆಲಸ ಮಾಡಿದವರು. ಅವರ ಸಹಾಯ ಪಡೆದು ಕವಿರಾಜ ಮಾರ್ಗದಿಂದ ಹಿಡಿದು ಇತ್ತೀಚಿನ ಬಿ.ಎಂ.ಶ್ರೀ.ಯ ವರೆಗೆ ಸಮಗ್ರವಾಗಿ ಸಂಪುಟಗಳನ್ನು ಮಾಡಿದೆವು. ಇವೆಲ್ಲ ಬಹಳ ಮೌಲಿಕವಾದ ಕೊಡುಗೆಗಳಾದವು. ಇದು ಒಂದು ಚಾರಿತ್ರಿಕ ಆಕಸ್ಮಿಕ ಅಂತ ನಾನು ತಿಳ್ಕೊಂಡಿದ್ದೇನೆ. ಅಥವಾ ನನ್ನ ಪಾಲಿಗೆ ಬಂದ ಒಂದು ಭಾಗ್ಯ ಅಂತ ಕೂಡ ಹೇಳಬಹುದು. ಹೀಗಾಗಿ ಕನ್ನಡ ಅಧ್ಯಯನ ಕೇಂದ್ರ ಬೇರೆ ವಿಶ್ವವಿದ್ಯಾನಿಲಯಗಳಿಗಿಂತ ಭಿನ್ನವಾದ, ಸಮಕಾಲೀನ ಸಾಹಿತ್ಯಕ್ಕೆ ಅಗತ್ಯವಾದ ಕೆಲಸಗಳನ್ನು ಮಾಡಿ ನನಗೆ, ವಿಭಾಗಕ್ಕೆ ಹೆಸರು ತಂದು ಕೊಡ್ತು ಅಂತ ನಾನು ಇವತ್ತು ಸಂತೋಷದಿಂದ ಸ್ಮರಿಸ್ತೇನೆ.

ಪ್ರ: *ಸರ್, ನೀವು ಮುಖ್ಯವಾಗಿ ಕವಿ ಮತ್ತು ಬರಹಗಾರರು. ನಿಮಗೆ ಆಡಳಿತ ವ್ಯವಸ್ಥೆ ನೋಡಿಕೊಳ್ಳೋದು ಆ ಮೂಲಕ ಹಲವಾರು ತೊಡಕುಗಳಲ್ಲಿ ಸಿಕ್ಕಿ ಹಾಕ್ಕೊಳ್ಳೋದು ಇದನ್ನೆಲ್ಲ ಹೇಗೆ ನಿಭಾಯಿಸ್ತಿದ್ರಿ ?*

ಉ: ಅದು ನನಗೆ ಕಷ್ಟನೇ ಆಗಲಿಲ್ಲ. ಬಹಳ ಒಳ್ಳೆ ಕಾಲ ಅಂತ ಹೇಳಬಹುದು. ಯಾಕೇಂತ ಹೇಳಿದ್ರೆ, ಆಡಳಿತ ಅನ್ನೋದು ಅಂತಾ ತಲೇ ಮೇಲೆ ಮೂರುಹೊತ್ತೂ ಕುಳಿತುಕೊಳ್ತಿತ್ತು ಅಂತ ಅಲ್ಲ. ಒಂದು ವಿಭಾಗದ ಮುಖ್ಯಸ್ಥನಾಗಬೇಕಾದ್ರೆ ಅದಕ್ಕೊಂದು ವ್ಯವಸ್ಥೆ ಇದೆ.

ಅದಕ್ಕೊಂದು ಕ್ರಮ ಇದೆ. ಪುಟ್ಟಪ್ಪನವರು ಕೂಡ ಆಡಳಿತವನ್ನು ವಹಿಸಿದ್ರು, ಅಂತ ನಿಮಗೆ ಗೊತ್ತಿದೆ. ಆಡಳಿತ ಹೇಗಿರಬೇಕು ಅಂದ್ರೆ ನೀರೊಳಗೆ ಕಲ್ಲು ಎತ್ತಿಟ್ಟ. ಹಾಗೆ ಇರಬೇಕು ಅಂತ ಪುಟ್ಟಪ್ಪನವರು ಹೇಳ್ತಾ ಇದ್ದರು. ನೀರೊಳಗೆ ಕಲ್ಲು ಹಗುರಾಗಿ ಬಿಡುತ್ತೆ. ಹೊರಗೆ ತಂದ್ರೆ ಭಾರ ಆಗುತ್ತೆ. So ಆಡಳಿತವನ್ನು ಅಲ್ಲೇ ಮಾಡಿ ಉಳಿದ ಹಾಗೆ ಹೊರಗೆ ಹಾಯಾಗಿ ಬರಕ್ಕೆ ಕಲೀಬೇಕು ಅಂತ. ಇದೊಂದು ರೀತಿ 'ಅವನಿಮಜ್ಜನ ಚಾತುರ್ಯ' ಮತ್ತು 'ಲಘಿಮಾ ಕೌಶಲ' ಅಂತ ಹೇಳ್ತೀವಿ ನಾವು. ಇವೆರಡೂ ಕವಿಗೆ ಇರಬೇಕು ಅಂತ ಹಾಗೆ ಆಡಳಿತದ ಕೌಶಲ್ಯ, ಹಾಗೇ ಹೊರಗೆ ಬರೋ ಒಂದು ವಿಶೇಷತೆ ಈ ಎರಡೂ ನನಗೆ ಸಿಕ್ಕಿತ್ತು. ಆಡಳಿತದ ಕಾರಣ ಯಾವ ತೊಂದರೆಯೂ ಆಗಲಿಲ್ಲ.

ಪ್ರ: *ಆಮೇಲೆ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಕೂಡ ನೀವು ಬಹಳ ಕೆಲಸ ಮಾಡಿದ್ರಿ.*

ಉ: ಅದಕ್ಕೂ ಜೊತೆಗಿದ್ದವರೇ ಕಾರಣ. ಒಳ್ಳೇ ಸದಸ್ಯರಿದ್ದರು ನನಗ. ಉದಾಹರಣೆಗೆ, ಚದುರಂಗರಿದ್ದರು, ಪ್ರಭುಶಂಕರ್, ಡಿಸೋಜಾ, ನಾಗರಾಜಪ್ಪನವರು, ಒಳ್ಳೆ ಸಲಹೆಗಾರರಿದ್ರು, ಅಲ್ಲೂ ಕೂಡ ಮಾಡೋ ಕೆಲಸ ಕನ್ನಡ ಅಧ್ಯಯನ ಕೇಂದ್ರದ ಕೆಲಸದ ಮುಂದುವರಿಕೇ ಆಗಿತ್ತು. ವಿಮರ್ಶೆಯ ಪರಿಭಾಷೆ ಬಹಳ ಮುಖ್ಯವಾದ ಕೆಲಸ ಇಲ್ಲಾದದ್ದು. ಸಣ್ಣ ಸಣ್ಣ ಪುಸ್ತಕಗಳ ಮೂಲಕ ಆಯ್ತು ಅವತ್ತು ಸಾಲುದೀಪಗಳು ಅನ್ನೋ ಕೃತಿ ಮೂಲಕ ಸಮಕಾಲೀನ ಕವಿಗಳ ವ್ಯಕ್ತಿ ವಿವರಗಳನ್ನು ಕೊಡುವ ಪ್ರಯತ್ನ, ಆಮೇಲೆ ಭಾರತೀಯ ಸಾಹಿತ್ಯ ಸಮೀಕ್ಷೆ ಕೆಲಸವನ್ನು Comparative Indian literature vol 1 & 2 ಅದರ ಅನುವಾದವನ್ನು ಮಾಡಿದ್ವಿ. KM George ಮಾಡಿದ್ದು, ಕನ್ನಡಕ್ಕೆ ಎಲ್.ಎಸ್. ಶೇಷಗಿರಿರಾಯರು ಅವರ ಸಹಾಯದಿಂದ ಕರಗತ ಆಯ್ತು. ಹೀಗೇ ಉದ್ದಕ್ಕೂ ಕೂಡ ನನಗೆ ಜೊತೆಗಾರರಾಗಿ ನಿಂತವರು ಸಹೃದಯರು, ವಿದ್ವಾಂಸರು, ಎಲ್ಲರೂ ಸೇರಿದ್ದರಿಂದ ಒಳ್ಳೇ ಕೆಲಸ ಮಾಡಕ್ಕೆ ಆಯ್ತು.

ಪ್ರ: *ಪುಸ್ತಕ ಬಹುಮಾನ ಕೊಡೋದು ಅದರಲ್ಲೆಲ್ಲ ಒಂದು ವ್ಯವಸ್ಥೆ ತಂದ್ರಿ ನೀವು*

ಉ: ಯುವ ಕವಿ ಸಮ್ಮೇಳನ ಕೂಡ ಪ್ರಾರಂಭ ಮಾಡಿ ಜಾರಿಗೆ ತಂದ್ವಿ ನಾವು

ಪ್ರ: ಕಾವ್ಯ ಹುಟ್ಟೋದ್ರ ಬಗ್ಗೆ ಕೆಲವು ಕುತೂಹಲಕರ ಅಂಶಗಳನ್ನು ನೀವು ಹೇಳ್ತೀರಿ.

ಪ್ರ: *ಈ ಕಾವ್ಯ ಒಂದು ಸಾಲಿನಿಂದ ಹುಟ್ಟಬಹುದು. ನಿಮ್ಮ ಜಡೆ ಕವಿತೆ ಹುಟ್ಟಿದ್ದು ಇಂಥಾ ಒಂದು ಎಳೆಯಿಂದ ಒಂದು ಸಣ್ಣ ನೋಟದಿಂದ ಅಂತ ನಾನು ಕೇಳಿದೀನಿ. ಅದು ಸ್ವಲ್ಪ-----*

ಉ: ಒಂದು ಸಲ ಕಾಲೇಜಿನಿಂದ ಮನೆಗೆ ಬರ್ತಾ ಇದ್ದೆ. ನನ್ನ ಮುಂದೆ ಒಬ್ಬ ಹೆಣ್ಣು ಮಗಳು ಹೋಗ್ತಾ ಇದ್ದಳು. ಉದ್ದವಾದ ಜಡೆ! ನನ್ನ ಕಣ್ಣನ್ನು ಸೆಳೆದದ್ದು ಆ ಜಡೆ. ಅವಳ ಹಿಂದೆ ಹೋಗುವಾಗ ಆಕೆ ಯಾವುದೋ ತಿರುವಿನಲ್ಲಿ ಹೊರಟು ಹೋದಳು. ಜಡೆಯ ನೆನಪು ನನ್ನ ಪಾಲಿಗೆ ಉಳೀತು. ಮನೆಗೆ ಬಂದವನೇ ಒಂದು ಪಂಕ್ತಿ ನನ್ನನ್ನು ಕಾಡಿತು.

"ಲಲನೆಯರ ಬೆನ್ನಿನೆಡೆ.. ಹಾವಿನೊಳು ಹೋಲ್ವ ಜಡೆ" ಅನ್ನೋದು ಸ್ಫುರಿಸಿತು. ರೂಂನಲ್ಲಿ ಕುಳಿತು. ಆ ಎರಡು ಪಂಕ್ತಿ ಬರೆದೆ. ಮುಂದಿನದೂ ಸಲೀಸಾಗಿ ತಮಗೆ ತಾವೇ ಬರುತ್ತವೆ. ಅದಕ್ಕೇ ಹೇಳೋದು "all poetry was already written" ಅಂತ. ಅದು ಹೇಗೆ ಹುಟ್ಟುತ್ತೆ ಅನ್ನೋದು ವಿಸ್ಮಯ. ಅದು ಹೇಳಕ್ಕೆ ಬರೋದಿಲ್ಲ. ಕೆಲವು ವೇಳೆ ಎಷ್ಟು ವರ್ಷಗಳಾದರೂ ಶುರು ಮಾಡಿದ ಪದ್ಯ ಮುಗಿದೇ ಇರಬಹುದು. ಇನ್ಯಾವಾಗಲೋ ಒಂದು ಕಾಲಕ್ಕೆ ಆ ಅರ್ಧಂಬರ್ಧ ಮುಕ್ತಾಯವಾಗಬಹುದು. ಹೀಗೆ, ಕವಿತೆ ಹುಟ್ಟೋದು ಅದ್ಭುತ, ವಿಸ್ಮಯ.

ಪ್ರ: *ಸರ್, ಕನಸಿನಿಂದ ಕನಸಿಗೆ .... ಕವಿತೆ ...........*

ಉ: "ಚಂದ್ರ ಜೇಡ ಬಲೆ ನೇಯುತ್ತಿತ್ತು ಬೆಳದಿಂಗಳನೂಲಿನಲಿ" ಅನ್ನೋ ಪಂಕ್ತಿ ನನಗೆ ಕನಸಿನಲ್ಲಿ ಕಾಣಿಸಿದ್ದು. ಎಚ್ಚರವಾದಾಗ ಅದು ಒಂದು line ಸಿಕ್ಕಿದ್ದು. ಕನಸಿನಲ್ಲಿ ಇಡೀಪದ್ಯ ಬರೆದಿದ್ದೆ. (ನಗು) ಅದನ್ನು ಡೈರೀಲಿ ಬರೆದು ಗುರುತು ಹಾಕಿ ಇಟ್ಕೊಂಡೆ. ಏನು ಮಾಡಿದ್ರೂ ಅದರ ಉಳಿದ ಪಂಕ್ತಿಗಳು ಏನು ಅಂತ ನೆನಪಾಗಲೇ ಇಲ್ಲ. ಆಮೇಲೆ ಎರಡು ವರ್ಷ ಆದ ಮೇಲೆ ಟೇಬಲ್ ಮೇಲೆ ಏನೋ ಹುಡುಕುವಾಗ ಈ ಡೈರಿ ಸಿಗ್ತು. "ಚಂದ್ರ ಜೇಡ .... ಸಾಲುಗಳು ಕಾಣಿಸ್ತು ಆ ಪಂಕ್ತಿ ಇಟ್ಕೊಂಡು ಕೂತ್ಕೊಂಡೆ. ಉಳಿದೆಲ್ಲ ಪಂಕ್ತಿಗಳೂ ಹಾಗೇ ಬಂದು ಬಿಟ್ಟವು. ಇದು ಅನುಭವ ಅಷ್ಟೆ.

ಪ್ರ: *ಸರ್, ನಿಮಗೆ ಕುವೆಂಪು ಪ್ರಿಯವಾದ ಹಾಗೇ ಪುತಿನ ಕೂಡ ಪ್ರಿಯವಾದವರು. ಪುತಿನ ಅವರು ಅಷ್ಟು ನಿಮ್ಮನ್ನು ಪ್ರಭಾವಿಸಿದ್ದು ಹೇಗೆ ?*

ಉ: ಅವರ ಮಧುರವಾದ ವ್ಯಕ್ತಿತ್ವ. ದೊಡ್ಡವರನ್ನು ಹೇಗೋ ಚಿಕ್ಕವರನ್ನೂ ಕೂಡಾ ಅಷ್ಟೇ ಪ್ರೀತಿಯಿಂದ ನೋಡ್ಕೊಳ್ತಾ ಇದ್ದರು. ಚಿಂತನ ಪ್ರವೃತ್ತಿ. ಅವರ ಕವಿತೆಗಿರುವ ವಿಲಕ್ಷಣವಾದ ಚಿಂತನಶೀಲತೆ ಇದೆಯಲ್ಲ ಅದು. ಮೇಲು ನೋಟಕ್ಕೆ ಅತ್ಯಂತ ಸಂಪ್ರದಾಯ ನಿಷ್ಠರಾಗಿ ಕಂಡರೂ ಕೂಡ ಆಳದಲ್ಲಿ ಉದಾರವಾದ ವೈಚಾರಿಕವಾದ ಸ್ವಭಾವ ಇತ್ತಲ್ಲ ಇದು ನನ್ನನ್ನು ಬಹಳ ಆಕರ್ಷಣೆ ಮಾಡ್ತು. ಹೀಗಾಗಿ ಅವರ ಕವಿತೆಗಳಲ್ಲೆಲ್ಲ ಈ ಚಿಂತನ ಪರವಾದ ಪ್ರತಿಭಾ ವಿಶೇಷ ಹೇಗೆ ಕೆಲಸ ಮಾಡಿದೆ, ಅದು ನನ್ನನ್ನು ಆಕರ್ಷಣೆ ಮಾಡಿದ್ದು.

ಪ್ರ: *ಪು.ತಿ.ನ. ಆಗಲೀ, ಕುವೆಂಪು ಆಗಲೀ ಮಹಾಕಾವ್ಯ ಬರೆದರು. ನಿಮ್ಮ ಮನಸ್ಸು ಆ ಕಡೆ ತೊಡಗಲಿಲ್ವ ?*

ಉ: ಯಾಕೋ ಹೋಗೀಲಿಲ್ಲ. ಹೊರಳಲಿಲ್ಲ (ನಗು)

ಪ್ರ: *ಕಾವ್ಯ ಸೃಷ್ಟಿಗೆ ವ್ಯುತ್ಪತ್ತಿ ಆಗತ್ಯ ಅಂತ ಹೇಳ್ತಾರೆ. ಪಾಂಡಿತ್ಯ ಮತ್ತು ಕಾವ್ಯ ಪ್ರತಿಭೆ ಒಂದು ಕಡೆ ಸೇರೋದು ಬಹಳ ಅಪರೂಪ. ಜಡಪಾಂಡಿತ್ಯ ಇರುತ್ತೆ, ಇಲ್ಲವಾದರೆ ಕವಿಯಿಂದ ಪಾಂಡಿತ್ಯ ದೂರ ಉಳಿಯುತ್ತೆ. ಇವೆರಡೂ ಕೂಡ ಒಂದು ಕಡೆ ಸೇರಿರೋದು ನಿಮ್ಮಬಳಿ, ನೀವು ಇದನ್ನು ಸಾಧ್ಯ ಮಾಡ್ಕೊಂಡಿದ್ದು ಹೇಗೆ ?*

ಉ: ನನ್ನ ಪಾಲಿಗೆ ಸೃಜನಶೀಲತೆ ಮತ್ತು ವಿದ್ವತ್ತಿಗೆ ಹೆಚ್ಚು ವ್ಯತ್ಯಾಸವಿಲ್ಲ. ಹಾಗಂತ ವಿದ್ವಾಂಸರೆಲ್ಲ ಸೃಜನಶೀಲರಲ್ಲ ಅಂತ ಹೇಳಲು ಸಾಧ್ಯ ಇಲ್ಲ. ಸೃಜನಶೀಲರಾದವರು ವಿದ್ವಾಂಸರಾಗಿರಬಹುದು. ಉದಾ : ತೀನಂಶ್ರೀ ಅವರು ಪದ್ಯನೂ ಬರೆದರು ಕಾವ್ಯವನ್ನೂ ಬರೆದರು. ಆದರೆ ನನ್ನ ಮಟ್ಟಿಗೆ ಕಾವ್ಯ ಮತ್ತು ಪಾಂಡಿತ್ಯ ಇವುಗಳ ನಡುವೆ ಇರುವ ಗೆರೆ ಬಹಳ ತೆಳುವಾದದ್ದು. ಏಕೇಂದ್ರೆ ಪಾಂಡಿತ್ಯದಿಂದ ವಿದ್ವತ್ತಿನಿಂದ ಲಭಿಸಿದ ಅನುಭವದಿಂದ ಕವಿ ತನ್ನ ಸೃಜನಶೀಲತೆ ಮೂಲಕ ಕಾವ್ಯ ಮಾಡ್ತಾನೆ. ಇವೆರಡೂ ಬೇರೆ ಬೇರೆ. ಯಾರಲ್ಲಿ ಯಾವ ಅಂಶ ಹೆಚ್ಚಾಗಿರುತ್ತೆ ಅನ್ನೋದರ ಮೇಲಿದೆ. ನನಗೆ ವಿದ್ವತ್ತಿನ ಅಂಶ ಹೆಚ್ಚಾಗಿದ್ದಿದ್ರೆ ನಾನು ವಿದ್ವಾಂಸ ಆಗ್ತಾ ಇದ್ದೆ. ನನ್ನಲ್ಲಿ ಕವಿಯ ಅಂಶ ಹೆಚ್ಚಾಗಿದ್ದಿದ್ರೆ ಬರೀ ಕವಿಯಾಗಿ ಉಳೀತಿದ್ದೆ. ಈ ಎರಡನ್ನೂ ತೂಗಿಸಿಕೊಂಡು ಹೋಗುವ ವಿಲಕ್ಷಣ ಮಿಶ್ರಣ ನನ್ನ ವ್ಯಕ್ತಿತ್ವಕ್ಕೆ ಸಾಧ್ಯವಾಗಿರೋದ್ರಿಂದಲೇ ನನಗೆ ಕವಿತೆಗೂ ಪಾಂಡಿತ್ಯಕ್ಕೂ ಭೇದ ಹೆಚ್ಚಾಗಿ ಕಾಣಿಸ್ತಾ ಇಲ್ಲ.

ಪ್ರ: *ಕಾವ್ಯ ಪರಂಪರೆ ಜೊತೆ ನಿಮ್ಮ ಅನುಸಂಧಾನ ತುಂಬಾ ಸುದೀರ್ಘವಾದದ್ದು. ಆದರ ಜೊತೆ ಆತ್ಮೀಯ ಭಾವ ಇರೋ ಹಾಗೆ ತರಕಾರುಗಳನ್ನು ಇಟ್ಕೊಂಡಿರಬಹುದು. ಪರಂಪರೆ ಜೊತೆ ಅಂತಹ ತಕರಾರುಗಳಿವೆಯೇ ? ಅವುಗಳ ಸ್ವರೂಪ ಏನು ?*

ಉ: ಪರಂಪರೆಯ ಜೊತೆ ಅನುಸಂಧಾನ ಮಾಡಿಕೊಳ್ಳದೆ ಇದ್ದರೆ ಒಬ್ಬ ಲೇಖಕ ಲೇಖಕನಲ್ಲ. ಒಬ್ಬ ಬರೆಹಗಾರನಾಗುವುದು ಅಂದರೆ ಪರಂಪರೆಯನ್ನು ಪ್ರವೇಶಿಸುವುದು ಅಂತಾನೇ ಅರ್ಥ. ಆ ಪರಂಪರೆ ನಮ್ಮ ದೇಶದ್ದೇ ಆಗಿರಬೇಕಿಲ್ಲ. ಒಂದು ಪಶ್ಚಿಮದ್ದು–ಪೂರ್ವದ್ದಾಗಿರಬಹುದು, ನಮ್ಮ ಪರಿಸರದ್ದಾಗಿರಬಹುದು ಹೀಗೆ ಪರಂಪರೆಯೊಂದಿಗೆ ನಿರಂತರವಾದ ಸಂವಾದ ಏರ್ಪಡಿಸಿಕೊಳ್ಳುವುದರಿಂದ ಲೇಖಕ ತಾನು ಹೊಸದಾಗೋದಿಕ್ಕೆ ಸಾಧ್ಯ ಅನ್ನೋದು ನನ್ನ ತಿಳುವಳಿಕೆ. ಪರಂಪರೆಯೊಂದಿಗೆ ನನಗೆ ತಕರಾರು ಏನೂ ಇಲ್ಲ. ಸಂಪ್ರದಾಯದೊಂದಿಗೆ ತಕರಾರಿದೆ. ಸಂಪ್ರದಾಯ ನಮ್ಮನ್ನು ಸ್ಥಗಿತಗೊಳಿಸಿದರೆ. ಪರಂಪರೆ ನಮ್ಮನ್ನು ಚಲನಶೀಲರನ್ನಾಗಿ ಮಾಡುತ್ತದೆ. ಹೀಗೆ ಸಂಪ್ರದಾಯದ ಜಡತೆಯನ್ನು ಪರಂಪರೆಯನ್ನು ಚಲನಶೀಲರನ್ನಾಗಿ ಮಾಡೋ ಕೆಲಸವನ್ನೇ ನಾವು ಮಾಡಬೇಕಾಗುತ್ತೆ ಇವತ್ತು. ಹಾಗೆ ಮಾಡಿದಾಗ ಮಾತ್ರ ನಾವು ಜೀವಂತವಾಗಿ ಉಳಿಯೋದಕ್ಕೆ ಸಾಧ್ಯ

ಪ್ರ: *ಬರೆಹಗಾರರಾಗಿ ನೀವು ಅರ್ಧಶತಮಾನಕ್ಕೂ ಹೆಚ್ಚು ಕಾಲ ಬದುಕಿಗೇ ಎದುರಾಗಿ ನಿಂತಿದ್ದೀರಿ. ಈ ಕಾಲಾವಧಿಯಲ್ಲಿ ಅನೇಕ ಸಾಂಸ್ಕೃತಿಕ ಬಿಕ್ಕಟ್ಟುಗಳು ಎದುರಾಗಿವೆ. ಸಾಹಿತ್ಯಿಕ ಚಳುವಳಿಗಳೂ ಬಂದು ಹೋಗಿವೆ. ನೀವು ಅವುಗಳನ್ನು ಹೇಗೆ ಎದುರಿಸಿದ್ದೀರಿ?*

ಉ: ನನ್ನ ಮಟ್ಟಿಗೆ ಈ ಸಾಹಿತ್ಯಿಕ ಚಳುವಳಿಗಳು ಅಂದಂದಿನ ಕಾಲಮಾನದ ಚಾರಿತ್ರಿಕ, ಐತಿಹಾಸಿಕ, ಸಾಮಾಜಿಕ ಒತ್ತಡಗಳ ಕಾರಣ ರೂಪಗೊಂಡಂತಹವು. ನಮಗೆ ಪರಿಚಿತವಿರೋ ಹಾಗೆ ನಾನು ಬರೆಯೋದಕ್ಕೆ ಪ್ರಾರಂಭಿಸಿದಾಗ ನವೋದಯದ ಉತ್ಕರ್ಷಕಾಲ ಅದು. ನವ್ಯದ ಪ್ರವೇಶದ ಕಾಲ. ಆದರೆ ನನ್ನ ಮೂಲ ಸತ್ತ್ವ ನನ್ನ ವ್ಯಕ್ತಿತ್ವದ ಮೂಲ ದ್ರವ್ಯ ನವೋದಯ ಸಾಹಿತ್ಯ ಸಂದರ್ಭದಲ್ಲಿ ರೂಪಗೊಂಡಿದ್ದರಿಂದ

ಆ ಕಾಲದ ಮಹತ್ವದ ಪ್ರತಿಭೆಗಳ ಒಡನಾಟ ನನಗೆ ಇದ್ದಿದ್ದರಿಂದ, ನವ್ಯದ ಸಂದರ್ಭದಲ್ಲಿ ನಾನು ಹೇಗೆ ಮುಖಾಮುಖಿಯಾದೆ ಅನ್ನೋದು ಬಹಳ ಕುತೂಹಲದ ಪ್ರಶ್ನೆ. ನಾನು ನವ್ಯವಾಗಿ ಪರಿವರ್ತಿತವಾಗೋ ಸಾಧ್ಯತೆ ಇರಲಿಲ್ಲ. ಯಾಕೇಂದ್ರೆ ನವ್ಯ ಸಂದರ್ಭದ ದೃಷ್ಟಿ ಧೋರಣೆಗಳಿಗೆ ನವೋದಯ ಕಾಲದಲ್ಲಿ ನಾನು ಪಡೆದುಕೊಂಡಿದ್ದಕ್ಕೂ ವ್ಯತ್ಯಾಸ ಇತ್ತು. ಆದ್ದರಿಂದ ನಾನು ಮಾಡಬಹುದಿದ್ದ ಕೆಲಸ ಅಂದ್ರೆ, ಯಾವುದೇ ಸಾಹಿತ್ಯ ಚಳುವಳಿಗಳಿಗೂ ಗಂಟು ಹಾಕಿಕೊಳ್ಳದೆ ಈ ಎಲ್ಲವುಗಳಿಂದ ನಾನು ಪಡೆಯಬಹುದಾದದ್ದು ಏನು ಅಂತ ನಿರ್ವಂಚನೆಯಿಂದ ಅರಗಿಸಿಕೊಳ್ಳುತ್ತ ನನ್ನದೇ ಆದ ದಾರಿಯನ್ನು ನಾನು ಕಂಡುಕೊಳ್ಳಲು ಪ್ರಯತ್ನ ಪಟ್ಟೆ. ಹೀಗಾಗಿ ಸಾಹಿತ್ಯ ಚಳುವಳಿಗಳೊಂದಿಗೆ ನನ್ನ ಸಂಪರ್ಕ ಕೇವಲ ಆಗಂತುಕವಾದುದೇ ಹೊರತಾಗಿ ಗಾಢವಾದುದಲ್ಲ.

ಪ್ರ: *ಪುತಿನ ಸಹ ಇದನ್ನೇ ಹೇಳ್ತಾರೆ. ಯಾವುದೇ ಚಳುವಳಿಯಲ್ಲಿ ನೀವು ಭಾಗವಹಿಸಬಾರದು ಹೊರಗೆ ನಿಂತು ನೋಡಿದರೆ ಅದು..... ಹೆಚ್ಚು ....*

ಉ: ಹೌದು. ಚಳುವಳಿಲಿ ಭಾಗವಹಿಸೋದು ತಪ್ಪಲ್ಲ. ಆದರೆ ಅದಕ್ಕೆ ಬದ್ಧವಾಗಬಾರದು. ಎಲ್ಲ ಚಳವಳಿಗಳನ್ನೂ ನಾವು ಮೀರಿದಾಗ ಮಾತ್ರ, ನಾವು ಚಲನಶೀಲರಾಗೋಕೆ ಸಾಧ್ಯ. ಮತ್ತು ಯಾವ ಯಾವ ಚಳವಳಿಗಳಿಂದ ಏನೇನು ಪ್ರಯೋಜನ ಪಡೀಬಹುದು ಅನ್ನೋದನ್ನ ನೋಡಬೇಕು. ಅದರಿಂದ ವ್ಯಕ್ತಿತ್ವಕ್ಕೆ ಹೆಚ್ಚು ಲಾಭ ಅನ್ನೋದು ವಿಷಯ.

ಪ್ರ: *ನೀವು ನವ್ಯದ ಸಂದರ್ಭದಲ್ಲಿ ಅನ್ಯರಾಗಿ ಉಳಿದ ಹಾಗೆ ಈ ಬಂಡಾಯದ ಸಂದರ್ಭದಲ್ಲಿ* ಹಾಗೆ ಉಳೀಲಿಲ್ಲ. ಇದಕ್ಕೆ ಏನಾದ್ರೂ ಕಾರಣಗಳಿದ್ಯಾ ? ಅದು ನವೋದಯಕ್ಕೆ ನೀವು ಹತ್ತಿರಾಂತ.....

ಉ: ಅದೂ .... ಇಲ್ಲ ಯಾವುದೇ ಸಾಹಿತ್ಯ ಮೂಲತಃ ಬಂಡಾಯವೇ (ನಗು ) ಯಾವುದೇ ಸಾಹಿತ್ಯ ವ್ಯವಸ್ಥೆಯನ್ನು ಪ್ರಶ್ನಿಸದೆ ರಾಜಿ ಮಾಡ್ಕೊಂಡು ಇರೋದಿಲ್ಲ. ನವ್ಯ ಕೂಡ ಹಾಗಲ್ಲ. ನವ್ಯದ ಕಾಲದಲ್ಲೂ ಕೂಡ ಎಂತ ದೊಡ್ಡ ವೈಚಾರಿಕ ಎಚ್ಚರ ಬಂತು ಅನ್ನೋದನ್ನು ಗಮನಿಸಬೇಕು. ನವ್ಯ ಸಾಹಿತ್ಯದ ಮೂಲದ್ರವ್ಯವೇ ವೈಚಾರಿಕತೆ. ಎಲ್ಲವನ್ನು ಪ್ರಶ್ನಿಸುವಂಥದ್ದು. ಒಂದಷ್ಟು ಅತೃಪ್ತಿ ದೇಶದ ರಾಜಕೀಯದ ಬಗ್ಗೆ, ಶೋಷಣೆ ಬಗ್ಗೆ ಅತೃಪ್ತಿ ಅದೆಲ್ಲ ಇತ್ತು. ಆದರೆ .. ದಲಿತ, ಬಂಡಾಯ, ನವೋದಯ ಕೋಮಿಗಿಂತ ಸ್ವಲ್ಪ ಭಿನ್ನವಾಗಿತ್ತು ಅಷ್ಟೇನೇ.

ಪ್ರ: *ದಲಿತ ಚಳುವಳಿಯ ಆಶಯ ನವೋದಯಕ್ಕೆ ತೀರಾ ಹತ್ತಿರವಾದದ್ದು ಅಂತೀರಾ ?*

ಉ: ಬಹಳ ಹತ್ತಿರವಾದದ್ದು.

ಪ್ರ: *ಕುವೆಂಪು ಅವರ ವೈಚಾರಿಕತೆ ನೇರವಾಗಿ ನಿಮ್ಮನ್ನು ಪ್ರಭಾವಿಸಿದೆ. ಪುರೋಹಿತ ಶಾಹಿಯನ್ನು ಕುವೆಂಪು ಅವರು ಬಹಳ ಕಟುವಾಗಿ ವಿರೋಧಿಸಿದರು.*

ಉ: ಕುವೆಂಪು ಅವರಿಗೆ ಇರುವ ಬಂಡಾಯದ ಲಕ್ಷಣ ಇನ್ಯಾರಿಗೆ ಇದೆ ?

ಪ್ರ: ಅವರದು ಆ ದೃಷ್ಟಿಯಿಂದ ಸಿಂಹಘರ್ಜನೆ ಪುರೋಹಿತಶಾಹಿ ವಿರುದ್ಧ. ನೀವು ಕೂಡ ಪುರೋಹಿತಶಾಹಿ ವಿರೋಧಿಸಿದ್ದೀರಿ, ಆದರೆ ನಿಮ್ಮದು ಸೌಮ್ಯದನಿ.

ಉ: (ನಗು). ಅದು ಕುವೆಂಪು ಅವರು ಬರೆದ ಸಂದರ್ಭಕ್ಕೂ ನಾನು ಬರೆದ ಸಂದರ್ಭಕ್ಕೂ ಇರೋ ವ್ಯತ್ಯಾಸವೇ ಆ ದನಿ ಸೌಮ್ಯವಾಗೋದಿಕ್ಕೆ ಕಾರಣ. ಆದರೆ ಇವತ್ತಿನ ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದಾಗ ಕೂಡ ಬಹಳ ಕಸಿವಿಸಿಯಾಗ್ತಾ ಇದೆ ನಮಗೆ. ಧರ್ಮ ಮತ್ತು ರಾಜಕಾರಣದ ಅಪವಿತ್ರ ಮೈತ್ರಿಯಿಂದ ಕೋಮುವಾದ, ಮೂಲಭೂತವಾದ ಇತ್ಯಾದಿಗಳಿಂದ ನಾವು ಅಸ್ವಸ್ಥವಾದ ಪರಿಸ್ಥಿತಿಯೊಳಗೆ ಇದ್ದೇವೆ ಅಂತ ಅನ್ನಿಸ್ತಾ ಇದೆ ನನಗೆ. ಇದರ ವಿರುದ್ಧವಾಗಿ ಕೂಡ, ನಾನು ಸಾಕಷ್ಟು ದನಿಯನ್ನು ಎತ್ತಿದ್ದೇನೆ. ನಮ್ಮ ಕನ್ನಡ ಸಹೃದಯರು ಗಮನಿಸಿದ್ದಾರೆ ಅಂತ ತಿಳ್ಕೊಂಡಿದ್ದೇನೆ.

ಪ್ರ: *ಈ ವಚನಕಾರರು ನಿಮಗೆ ಬಹಳ ಪ್ರಿಯರಾದವರು. ನಿಮ್ಮನ್ನು ಪ್ರಭಾವಿಸಿದವರು ಕೂಡ. ಯಾರು, ಯಾವ ಅಂಶಗಳು, ಅಲ್ಲಮ, ಬಸವಣ್ಣ, ಅಕ್ಕ, ಮೂವರಲ್ಲಿ ಯಾರು ಹೆಚ್ಚು ಪ್ರಿಯರಾದವರು ?*

ಉ: ಹೆಚ್ಚು ಪ್ರಿಯವಾದವನು ಬಸವ. ಯಾಕೇಂದ್ರೆ ಅವನು ನೆಲಕ್ಕೆ ಸಂಬಂಧಪಟ್ಟವನು. ನನ್ನ ಬದ್ಧತೆ ಕೂಡ ಈ ನೆಲಕ್ಕೆ. ಪರದ ವಿಚಾರದಲ್ಲಿ ನನಗೆ ಆಸಕ್ತಿ ಇಲ್ಲ. ನಾನು ಇಹಕ್ಕೆ, ಈ ಲೋಕ, ಅದರ ದುಃಖ, ಅದರ ಸಂಕಟ, ಅದರ ಜೊತೆ ಹೊಡೆದಾಟ, ಅದನ್ನು ಸುಧಾರಿಸೋದು, ಇದು ಬಹಳ ಮುಖ್ಯ ನನಗೆ ಈ ದೃಷ್ಟಿಯಿಂದ ನನಗೆ ಬಸವಣ್ಣನವರು ಹೆಚ್ಚು ಹತ್ತಿರ ಆಗ್ತಾರೆ. ಅಲ್ಲಮ ಪ್ರಭುವಿನ ಅಮೂರ್ತ ಪ್ರಪಂಚ ನನಗೆ ಗೌರವಾಸ್ಪದವಾದದ್ದು. ಆದರೆ ಅಕ್ಕಮಹಾದೇವಿ ಮತ್ತು ಅಲ್ಲಮ ಇಬ್ಬರೂ ಕೂಡ ಅನುಭಾವ ಹುಡುಕಿದವರು. ಶರಣ ಚಳವಳಿಯನ್ನು ಅವರು ಸೇರಿದ್ದು ತಾತ್ಕಾಲಿಕ. So ಅಕ್ಕಮಹಾದೇವಿಯಲ್ಲಿನ ಭಾವಗೀತಾತ್ಮಕತೆ, ಅಲ್ಲಮನ ಅನುಭಾವ ನಮಗೆ ಪ್ರಿಯವಾದರೂ ಕೂಡ ಬಸವಣ್ಣನವರ ಜೊತೆ ಇರುವ ಸಂಘರ್ಷ, ದುಃಖ, ಆ ದುಃಖದ ಮೂಲಕ ಬರುವ ಪಕ್ವತೆ ಇದು ನನಗೆ ಹೆಚ್ಚು ಪ್ರಿಯವಾದದ್ದು ಮತ್ತು ಹೆಚ್ಚು ಪ್ರಸ್ತುತವಾದದ್ದು.

ಪ್ರ: *ಇತ್ತೀಚಿನ ವರ್ಷಗಳಲ್ಲಿ ನೀವು ನಮ್ಮ ಜಾನಪದ ಮಹಾಕಾವ್ಯಗಳಾದ ಮಂಟೇಸ್ವಾಮಿ ಮಲೆ ಮಹದೇಶ್ವರ ಕಾವ್ಯಗಳನ್ನು ಓದುತ್ತಾ ಅವುಗಳನ್ನು ಭಿನ್ನ ರೀತಿಯಲ್ಲಿ ಅರ್ಥೈಸಿಕೊಳ್ತಾ ಇದೀರಿ. ಆಮೇಲೆ ೨೧ನೇ ಶತಮಾನದ ದೊಡ್ಡ ಸವಾಲು ಏನು ಅಂತ ಈ ಮೂಲಕ ಗುರುತಿಸ್ತಾ ಇದೀರಿ, ವಿವರಿಸ್ತೀರಾ ?*

ಉ: ಈ ನಮ್ಮ ಸಾಹಿತ್ಯ ಪರಂಪರೆಯಲ್ಲಿ ಲಿಖಿತವಾದದ್ದು ಹೇಗೋ ಅಲಿಖಿತವಾದದ್ದು ಕೂಡ ಒಂದು ದೊಡ್ಡ ಪರಂಪರೆಯಿದೆ. ನಮ್ಮ ಸಾಹಿತ್ಯ ಚರಿತ್ರೆಯನ್ನು ಕುರಿತು ಮಾತಾಡೋವಾಗ ೧೯ ಮತ್ತು ೧೮ನೇ ಶತಮಾನಗಳನ್ನು ನಾವು ಜೀಳುಗಾಲಗಳು ಅಂತ ತಪ್ಪಾಗಿ ವ್ಯಾಖ್ಯಾನ ಮಾಡ್ತಾ ಇದ್ದೇವೆ. ಆದರೆ ಈ ಅಲಿಖಿತ ಕಾವ್ಯ ಪರಂಪರೆ ಅಂತ ನಾವೇನು ಕರೆದಿದ್ದೇವೆ ಸ್ವರ ವಚನಗಳಾಗಿರಬಹುದು ಅಥವಾ ಮಲೆಮಹದೇಶ್ವರ

ಕಾವ್ಯ, ಮಂಟೇಸ್ವಾಮಿ ಆಗಿರಬಹುದು, ಇವು ಲಿಖಿತ ರೂಪಕ್ಕೆ ಈಗ ಬಂದಿವೆ. ಇವನ್ನು ನೋಡಿದ ಮೇಲೆ ಅಲಿಖಿತವಾದುದನ್ನು ಇಟ್ಕೊಂಡೇ ಸಾಹಿತ್ಯವನ್ನು ಅಳೆಯುವ ಕೆಲಸವನ್ನು ಮಾಡಬೇಕು ಅಂತ ನನಗೆ ಅನ್ನಿಸುತ್ತೆ. ಈ ಹೊತ್ತು ನಾವು ಪಶ್ಚಿಮದ ಪ್ರೇರಣೆಗಳಿಂದ ಪಾರಾಗಿ ನಮ್ಮ ಸಾಹಿತ್ಯ, ನಮ್ಮ ದೇಶೀಯವಾದ ಪುರಾಣ, ಜಾನಪದ, ಚರಿತ್ರೆ, ಇದರೊಳಗೆ ಹುಡುಕೋ ಪ್ರಯತ್ನ ಮಾಡ್ತಾ ಇದೀವಿ. ಇದು ಇವತ್ತಿನ ಸವಾಲು. ಆದರೆ ದುರುದೃಷ್ಟವಶಾತ್ ಈ ಜಾಗತೀಕರಣ ಮುಂತಾದ ಪ್ರಭಾವಗಳಿಂದ ಈ ದೇಶೀ ಸಂಸ್ಕೃತಿಗಳಿಗೆ ದೊಡ್ಡ ಆಘಾತ ಉಂಟಾಗೋ ಸಂದರ್ಭ ಬರ್ತಾ ಇದೆ. ಭಾಷೆ, ಸಾಹಿತ್ಯ, ಸಂಸ್ಕೃತಿ ಇದಕ್ಕೆಲ್ಲ ಅಪಾಯ ಬರ್ತಾ ಇದೆ ಅನ್ನೋ ಕೂಗು ಕೇಳಿ ಬರ್ತಾ ಇದೆ. ಹೀಗೆ ಒಂದು ವಿಲಕ್ಷಣ ಸಂದರ್ಭದಲ್ಲಿ ಮತ್ತೆ ನಾವು ಈ ಮಂಟೇಸ್ವಾಮಿ ಕಾವ್ಯ ಮತ್ತು ಮರುಳಸಿದ್ಧ ಇಂತಾ ದೇಶೀಯ ಪರಂಪರೆಗಳನ್ನು ಹೊಸದಾಗಿ ಅರ್ಥ ಮಾಡಿಕೊಂಡು ಅವುಗಳಿಂದ ನಮ್ಮ ಸಾಹಿತ್ಯಕ್ಕೆ ಬೇಕಾದ ಮೂಲದ್ರವ್ಯಗಳನ್ನು ಪಡೆದುಕೊಳ್ಳುವ ಅಗತ್ಯವೇ ೨೧ನೇ ಶತಮಾನದ ಸಾಹಿತ್ಯ ಎದುರಿಸಬೇಕಾದ ಸಂದರ್ಭ ಅಂತ ಕೂಡ ನಾನು ತಿಳ್ಕೊಂಡಿದ್ದೇನೆ. ಶಿವಪ್ರಕಾಶ್, ಬಿ.ಕೆ. ಸಿದ್ಧಯ್ಯ, ಸಿದ್ಧರಾಮಯ್ಯ ಇಂತಹವರ ಪ್ರಯತ್ನಗಳಲ್ಲಿ ಮತ್ತೆ ದೇಶೀಯತೆಗೆ ಹಿಮ್ಮರಳುವ ಹೊಸ ಪ್ರಯೋಗಗಳು, ಪ್ರಯತ್ನಗಳು ಕಂಡು ಬರ್ತಾ ಇದೆ.

ಪ್ರ: *ಹಿರಿಯರ ಕೃತಿಗಳನ್ನು ನೀವು ಶ್ರದ್ಧೆಯಿಂದ ಓದುವಂತೆ ಹೊಸ ತಲೆಮಾರಿನವರ ಕೃತಿಗಳನ್ನು ಓದ್ತಾ ಇದೀರಿ. ಹೀಗೇ ಓದುವಂತಹ ವಿದ್ವಾಂಸರು ಕನ್ನಡದಲ್ಲಿ ಬಹಳ ಅಪರೂಪ ಅಂತ ನಾನು ಭಾವಿಸಿದೀನಿ. ಆದರೆ ನೀವು ನಿರಂತರವಾಗಿ ಓದ್ತಾ ಬರ್ತಿದೀರಿ. ಆಮೇಲೆ ಸತ್ತ್ವ ಇರುವವರ ಬೆನ್ನು ತಟ್ತಾ ಬರ್ತಿದೀರಿ. ಇತ್ತೀಚಿನ ವರ್ಷಗಳ ಕನ್ನಡ ಸಾಹಿತ್ಯದ ಚಲನೆಯನ್ನು ಹೇಗೆ ವ್ಯಾಖ್ಯಾನಿಸ್ತೀರಿ ?*

ಉ: ಕಾವ್ಯದ ಬಗ್ಗೆ ಪ್ರೀತಿ ಇದ್ದರೆ ಎಲ್ಲ ಕಾವ್ಯವೂ ನಮಗೆ ರುಚಿಸೋದಿಕ್ಕೆ ಸಾಧ್ಯ. ಒಂದು ಕವಿತೆ ಬಗ್ಗೆ ಪ್ರೀತಿ ಮತ್ತು ಗೌರವ ಇರಬೇಕು. ಹಾಗಿದ್ದಾಗ ಮಾತ್ರ ನಾವು ..... ಆಮೇಲೆ ಚಿಕ್ಕವರ ಕವಿತೆಯಿಂದಲೂ ನಾವು ಕಲಿಯೋದು ಇರುತ್ತೆ. ಪರಂಪರೆಯಿಂದ ಕಲಿಯೋದು ಹೇಗಿದೆಯೋ ನಮ್ಮ ಸಮಕಾಲೀನರಿಂದ ವಯಸ್ಸಿನ ತಾರತಮ್ಯವಿಲ್ಲದೆ, ನಾವು ಕಲೀಲಿಕ್ಕೆ ಸಾಧ್ಯ ಅನ್ನುವ ಒಂದು ಮನೋಧರ್ಮ ನನ್ನದು. ಇತ್ತೀಚೆಗೆ ಅನೇಕ ಹೊಸ ಕವಿಗಳು ಬರೀತಾ ಇದಾರೆ. ಅವುಗಳು ಹೊಸ ದಾರಿಯನ್ನು ಹುಟ್ಟು ಹಾಕೋಷ್ಟು ಶಕ್ತವಲ್ಲದಿದ್ದರೂ ಕೂಡ ಇದುವರೆಗಿನ ದಾರಿಗಿಂತ ಭಿನ್ನವಾದ ಧ್ವನಿಗಳಾಗಿ ಕಾಣ್ತಾ ಇರೋದು ನನಗೆ ಸಂತೋಷವನ್ನು ತರ್ತಾ ಇದೆ. ನಮ್ಮ ಕನ್ನಡ ಕಾವ್ಯ ಸ್ಥಗಿತತೆಗೆ ಬಂದಿದೆ ಅಂತ ನಾನು ತಿಳ್ಕೊಂಡಿಲ್ಲ. ಅದಕ್ಕೆ ಬದಲು ಹೊಸ ಹಾದಿಯನ್ನು ಹುಡುಕುವ ಪ್ರಯತ್ನದಲ್ಲಿ ಇರುವ, ನಾವೀನ್ಯವನ್ನು ನಾವು ಗುರುತಿಸೋದಿಕ್ಕೆ ಸಾಧ್ಯ. ಈ ದೃಷ್ಟಿಯಿಂದ ಮುಂದಿನ ಸಾಹಿತ್ಯದ ಅಥವಾ ಕಾವ್ಯದ ಗತಿಯನ್ನು ನಾನು ಕಾದು ನೋಡುವ ಕುತೂಹಲವನ್ನು ಉಳಿಸಿಕೊಂಡಿದ್ದೇನೆ.

ಪ್ರ: *ರಾಮಕೃಷ್ಣರು ವಿವೇಕಾನಂದರು ನಿಮಗೆ ಹತ್ತಿರ ಆದರು. ಆದರೆ ನಮ್ಮ ಸಂಸ್ಕೃತಿಯ ಮಹತ್ವದ ಚಿಂತಕರಾದ ಲೋಹಿಯಾ, ಅಂಬೇಡ್ಕರ್, ಗಾಂಧಿ ನಿಮ್ಮನ್ನು ಹೆಚ್ಚಾಗಿ ಕಾಡಲಿಲ್ಲವೇ ?*

ಉ: ನೀವು ತಿಳ್ಕೊಂಡಷ್ಟು ಇಲ್ಲ ಅಂತಿಲ್ಲ. ನನ್ನ ಪ್ರಕಾರ ನಮ್ಮ ಭಾರತೀಯ ಪ್ರಮುಖ ಚಿಂತಕರು ಅಂದ್ರೆ ಗಾಂಧಿ, ಲೋಹಿಯಾ, ಅಂಬೇಡ್ಕರ್. ಈ ಮೂವರ ವಿಚಾರ ಧಾರೆಗಳನ್ನು ಪರಿಚಯ ಮಾಡಿಕೊಳ್ಳದೆ ಇರೋ ಲೇಖಕ ಬೆಳೆಯೋದಿಕ್ಕೆ ಸಾಧ್ಯ ಇಲ್ಲ. ಈ ದೃಷ್ಟಿಯಿಂದ ಗಾಂಧಿ ಪ್ರಭಾವ ನನ್ನ ಮೇಲೆ ಸಾಕಷ್ಟು ಆಗಿದೆ. ಲೋಹಿಯಾ ಚಿಂತನೆಗಳನ್ನು ನಾನು ಈಚೆಗೆ ಮೆಚ್ಕೊತಾ ಇದೀನಿ. ಅಂಬೇಡ್ಕರ್ ಅವರ ಬಂಡಾಯದ ಧ್ವನಿ ಕೂಡ ನನಗೆ ತುಂಬಾ ಇಷ್ಟ. ನನ್ನ ಮೇಲೆ ಪ್ರಭಾವ ಆಗಿದೆಇಲ್ಲ ಅಂತ ನಾನು ಹೇಳಲ್ಲ. ಅದನ್ನು ಓದುಗರು ಹೇಳಬೇಕಷ್ಟೇ.

ಪ್ರ: *ವೈಯುಕ್ತಿಕವಾದ ಪ್ರಶ್ನೆ. ಅದರ ಬಗ್ಗೆ ಕವಿತೆ ಕೂಡ ಬರೆದಿದ್ದೀರಿ ಅಂತ ಕೇಳ್ತಾ ಇದೇನೆ. ನೀವು ಒಂದು ಅರ್ಥದಲ್ಲಿ ಸಾವಿನ ಅಂಚಿಗೆ ಹೋಗಿ ಮತ್ತೆ ಹುಟ್ಟನ್ನು ಪಡೆದಿದ್ದನ್ನು ಆ ಅವಸ್ಥೆಯನ್ನು ಹೇಳಿದೀರಿ. ಅದರ ಹಿನ್ನೆಲೆ ಹೇಳಿ ಆ ಕವಿತೆ ಓದ್ತೀರಾ ಸರ್*

ಉ: ಕವಿತೆ ಹೇಗೆ ಹುಟ್ಟುತ್ತೆ ಅಂತ ಹೇಳಿದೆನಲ್ಲ. ಅದೊಂದು ಆಶ್ಚರ್ಯ. ಇದು ಹಾಗೇ. ನನಗೆ ೧೯೯೫ನೇ ಇಸವಿಯೊಳಗೆ ತೆರೆದ ಹೃದಯದ ಶಸ್ತ್ರ ಚಿಕಿತ್ಸೆ ಆಯ್ತು. ಒಬ್ಬ ಕವಿಗೆ ಶಸ್ತ್ರಚಿಕಿತ್ಸೆ ಕೂಡ ಕಾವ್ಯದ ಮೂಲ ಆಗಬಹುದು ಅಂತ ಪದ್ಯ ಬರೆದ ಮೇಲೆ ಗೊತ್ತಾಯ್ತು. ಸುಮಾರು ಅನೇಕ ಗಂಟೆಗಳ ಕಾಲ ಮೈಮೇಲೆ ಎಚ್ಚರ ಇರಲಿಲ್ಲ. ಅನಿಸ್ತೀಷಿಯಾ ಕೊಟ್ಟಮೇಲೆ ಪ್ರಜ್ಞೆ ಇರಲಿಲ್ಲ. ಅದು ವಿಸ್ಮೃತಿ, ಸಾವು, ಮಹಾವಿಸ್ಮೃತಿ. ಇದನ್ನು ಅನುಭವಿಸಿ ಹೊರಲೋಕದ ಎಚ್ಚರಕ್ಕೆ ಬಂದಾಗ ಅದು ಅದ್ಭುತ ಅನುಭವ ಅಂತ ಅನ್ನಿಸ್ತು. ಅದರಲ್ಲಿ ಇಡೀ ಸೃಷ್ಟಿಯ ಮೂಲವನ್ನು ನಾನು ಪ್ರವೇಶ ಮಾಡಿ ಪ್ರಳಯದ ಗರ್ಭವನ್ನು ಹೊಕ್ಕು, ಮತ್ತೆ ಸೃಷ್ಟಿಯ ವಿಕಾಸದಲ್ಲಿ ಮೂಡಿದ, ಪ್ರಯಾಣ ಮಾಡಿದ ಅನುಭವ ನನಗಾಯ್ತು. ಆಸ್ಪತ್ರೆಯಿಂದ ಮನೆಗೆ ಬಂದೆ. ಎಷ್ಟೋ ದಿನ ... ೧೫ ದಿನಗಳ ಕಾಲ ... ಆ ಅನುಭವ, ವಿಸ್ಮೃತಿಯ ಅನುಭವ ನನ್ನ ಕಾಡ್ತಾ ಬಂತು. ಅದನ್ನು ಕುರಿತೇ ಪದ್ಯ ಬರೆದೆ. ಅವಸ್ಥೆ.

ಜಾಗೃತ್, ಸ್ವಪ್ನ, ಸುಷುಪ್ತಿ, ತುರಿಯಾ ಅಂತ ೪ ಅವಸ್ಥೆಗಳಿವೆ. ಈ ಅನುಭವ ಯಾವುದಕ್ಕೆ ಸೇರಿದ್ದು ? ಇದು ತುರಿಯಾವಸ್ಥೆ ಅಲ್ಲ, ಜಾಗೃತ್ ಅಲ್ಲ, ಸ್ವಪ್ನವೂ ಅಲ್ಲ ಸುಷುಪ್ತಿಯೂ ಅಲ್ಲ. ಒಂದು ವಿಲಕ್ಷಣ ಅನುಭವ. ಈ ಅನುಭವ ಕುರಿತು ನಾನು ರೋಗಿಯಾಗಿರುವಾಗಲೇ ಒಂದು ರಾತ್ರಿ ಕೂತು ಕಾಗದ ತೊಗೊಂಡು ಬರೆದೆ. "ಅವಸ್ಥೆ."

ಪ್ರ: *ಪುನರ್ಜನ್ಮದಲ್ಲಿ ನಿಮಗೆ ನಂಬಿಕೆ ಇದೆಯಾ ?*

ಉ: ಪುನರ್ಜನ್ಮದಲ್ಲಿ ನಂಬಿಕೆ ಇಲ್ಲದಿದ್ರೂ ಕೂಡ ಪುನರ್ಜನ್ಮ ಇದೆ ಅಂತ ಗೋಚರವಾಗ್ತಾ ಇದೆ.

ಪ್ರತಿಯೊಂದು ಗಿಡ ಹುಟ್ಟಿ ಬೆಳೆದು ಬೀಜವಾಗುತ್ತೆ. ಆ ಬೀಜ ಮತ್ತೆ ನೆಲಕ್ಕೆ ಬೀಳುತ್ತೆ ಮತ್ತೆ ಬೀಜವಾಗುತ್ತೆ. ಇದನ್ನು ನೋಡಿದಾಗ ಪುನರ್ಜನ್ಮ ಅನ್ನೋದು ಸೃಷ್ಟಿಯ ನಿರಂತರತೆಯ ಪ್ರಕ್ರಿಯೆ ಅಂತ ನನಗನ್ನಿಸ್ತಾ ಇದೆ. ಒಂದು, ಹುಟ್ಟಿದ್ದು, ಒಂದು ಸಾವು, ಒಂದು.... ಸಾವು ಅನ್ನೋದು ಮತ್ತೊಂದಕ್ಕೆ Preparation ಹುಟ್ಟೋದು. ಸಾವು ಅಂತ ನಾವೇನು ಕರೀತೀವಿ ಅದು ಸಾವಲ್ಲ. It is not the end. It is the beginning for something else ಅನ್ನೋ ಕಲ್ಪನೆ ಒಳಗೆ ಪುನರ್ಜನ್ಮವನ್ನು ಒಂದು ನೆಲೆಯಲ್ಲಿ ಒಪ್ಕೊಬಹುದು. ಸಾವು ಹೇಗೆ ಪುನರ್ಜನ್ಮ? ನನಗಿದೆಯೋ ಇಲ್ಲವೋ ಗೊತ್ತಿಲ್ಲ. ಗಿಡ ಹುಟ್ಟಿದ ಹಾಗೆ ನಾನು ಹುಟ್ತೀನೋ ಇಲ್ಲವೋ ಗೊತ್ತಿಲ್ಲ. ಆದರೆ ಪುನರ್ಜನ್ಮ ಅಂತ ಹೇಳಿದ್ರೆ ಸೃಷ್ಟಿಯಾದದ್ದು ಪ್ರಳಯವಾಗಿ, ಪ್ರಳಯವಾದದ್ದು ಸೃಷ್ಟಿಯಾಗಿ ಮತ್ತೆ..... ಈ ಚಕ್ರ ಇದೆಯಲ್ಲ ಸೃಷ್ಟಿ, ಸ್ಥಿತಿ ಪ್ರಳಯ ಈ ಮೂರೂ ಅವಸ್ಥೆಗಳೂ ನಿರಂತರವಾಗಿ ಬರೋದ್ರಿಂದ ಪುನರ್ಜನ್ಮದ ಕಲ್ಪನೆ ದೃಢ ಆಗುತ್ತದೆ. (ಅವಸ್ಥೆ ಪದ್ಯದ ಓದು)

"ಅರಿವಳಿಕೆ ಸೂಜಿಮೊನೆ ತಾಗಿದ್ದಷ್ಟೇ ಗೊತ್ತು.
ಮೂರ್ತದಿಂದ ಅಮೂರ್ತಕ್ಕೆ ಒಂದೇ ನೆಗೆತ
ಬರೀ ನಿರಾಕಾರದ ಶೂನ್ಯದ ಕಡಲು ಎತ್ತೆತ್ತಲೂ
ಅಲ್ಲಿ ರವಿಯಿಲ್ಲ. ಶಶಿಯಿಲ್ಲ. ನಕ್ಷತ್ರವೊಂದೂ ಇಲ್ಲ
ನಾನು ನೀನುಗಳಿಲ್ಲ, ನಾಮರೂಪಗಳಿಲ್ಲ
ಹಿಂದಿಂದು ಮುಂದುಗಳಿಗರ್ಥವೇ ಇಲ್ಲ.
ಸೃಷ್ಟಿಪೂರ್ವದ ಪ್ರಳಯದಲ್ಲಿ ಹೆಪ್ಪುಗಟ್ಟಿದ ಕಪ್ಪು
ಕಾಲಾತೀತದಲಿ ಲಯವಾಗಿ ಹೋಗಿದ್ದೆನೋ ಏನೋ
ಯಾವುದಕ್ಕೆ ಹೋಲಿಸಿ ಹೇಳಲಿ ನಾನು ಈ ಅವಸ್ಥೆಯನ್ನು?
ಯೋಗಿಯ ಸಮಾಧಿಯೊಳಗಿನ ದ್ವೈತವೋ, ಅಥವಾ
ಮಹಾಭ್ರಾಂತಿಯೋ ಪರಮಶಾಂತಿಯೋ
ಇದನ್ನು ಈ ಭವದ ಯಾವುದೇ ಆಕೃತಿಯಲ್ಲಿ
ಹಿಡಿದು ತೋರಿಸಲಾರೆ ಅಷ್ಟು ಹೊತ್ತೂ
ಬಿದ್ದುಕೊಂಡಿದ್ದಾಗ. ಈ ದೇಹ
ಶಸ್ತ್ರಕ್ರಿಯೆಗೊಳಗಾಗುತ್ತ "ನೈನಂ ಛಿಂದಂತಿ ಶಸ್ತ್ರಾಣಿ"
ಆಗ ಈ ಆತ್ಮ ಎಲ್ಲಿತ್ತು ?
ಥಟ್ಟನೆಚ್ಚರವಾಗಿ ಕಣ್ಣು ಕುಕ್ಕುವ ಬೆಳಕು
ಪ್ರತ್ಯಕ್ಷವಾದ ಪಂಚೇಂದ್ರಿಯ ಪ್ರಪಂಚದಲ್ಲಿ
ಎರಡುರುಣಾಪೂರ್ವ ಕಣ್ಣುಗಳು !
ಹಣೆ ಮೇಲೆ ಹೆಣ್ಣು ಕೈ ಬೆರಳುಗಳ ಸಾಂತ್ವನದ ಸ್ಪರ್ಶ.
ಆ ಕುರುಡು ಕತ್ತಲೆಯಿಂದ ಈ ಬೆಳಕಿನೆಚ್ಚರದೊಳಗೆ
ಬಂದದ್ದು ಯಾವಾಗ?
ನಾನಾರು ? ಎಲ್ಲಿದ್ದೇನೆ ? ಯಾಕಿದ್ದೇನೆ ? ಅರೆ!
ನನ್ನ ಶರೀರವೆಲ್ಲಿ ? ನೋಡುತ್ತೇನೆ ಮೈ ತುಂಬಾ
ಏನೇನೋ ನಳಿಕೆಗಳು.

ಕಾಲು ಬಳ್ಳಿಗಳು ಹೆಣೆದುಕೊಂಡ ಒಂದು
ಸಸ್ಯವಿಶೇಷದಂತಿದ್ದೇನೆ.. ಈ ಮನುಷ್ಯತ್ವದಿಂದ
ಹಿಮ್ಮುಖವಾಗಿ, ಸಸ್ಯಸ್ಥಿತಿಗೆ ಪಯಣ ಮಾಡುತ್ತ
ಸ್ಥಗಿತಗೊಂಡಿದ್ದೇನೆಯೇ ? ಅಥವಾ
ಅಲ್ಲಿಂದ ಮೇಲ್ಮುಖವಾಗಿ ಬರುತ್ತಲಿದ್ದೇನೆಯೇ . .
ಅಲ್ಲ ಮರವಲ್ಲ ಮನುಷ್ಯ, ಈಗೀಗ
ಪ್ರಜ್ಞೆಯಒಳಗೆ ತೇಲಿ ಬರುತ್ತಲಿದ್ದಾನೆ. ನಿಧಾನವಾಗಿ ನೆನಪುಗಳು!
ಕ್ಷೀಣದನಿಯಿಂದ ಕೇಳಿದೆನು ಬಳಿ ನಿಂತ
ಹಸಿರು ಮುಸುಕಿನೊಳಗಿದ್ದ ಹೆಣ್ಣನ್ನು
"ನಾನು ಎಲ್ಲಿದ್ದೇನೆ ?" "ಟೈಮೆಷ್ಟು?"
ನೀವೀಗ intensive care unit ನಲ್ಲಿದ್ದೀರಿ,
ಸಮಯ ಮಧ್ಯಾಹ್ನ ೩.೩೦. ನಿಮಗೆ ಆಪರೇಷನ್
ಆಗಿ ಹತ್ತೆಂಟು ಗಂಟೆಗಳಾಯ್ತು. ಇನ್ನಿಲ್ಲ ಅಪಾಯ.
ದತ್ತವಾಗಿದೆ ಮತ್ತೆ ವ್ಯಕ್ತಮಧ್ಯದ ಬದುಕು
ಮೊದಲಿಗಿಂತಲೂ ಹೊಸದಾಗಿ ಕಂಡಿದೆ ಲೋಕ
ಈವರೆಗೂ ಮಹಾವಿಸ್ಮೃತಿಯಲ್ಲಿ, ಕರಗಿ ಹೊರಬಂದ
ಅಸ್ತಿತ್ವಕ್ಕೆ, ಎಲ್ಲವನ್ನು ತಬ್ಬಿಕೊಳ್ಳುವ ತವಕ !

ಪ್ರ: *ಸರ್, ಇನ್ನೊಂದು ಪದ್ಯವನ್ನು ಓದಿದರೆ ಚೆನ್ನಾಗಿರುತ್ತೆ. ನಿಮಗೆ ಬಹಳ ಪ್ರಿಯವಾದದ್ದು ಚರಿತ್ರೆ, ಆ ಚರಿತ್ರೆಗೆ ಸಂಬಂಧಿಸಿದ ಹಾಗೆ ಒಂದು ಪದ್ಯ ಕೂಡ ಇದೆಯಲ್ಲ.*

ಉ: 'ಚರಿತ್ರೆ ಅಂದರೇನು'? ಅಂತ ಕವಿತೆ ಹೆಸರು. ಇದು ಇತ್ತೀಚಿನ ಸಮಕಾಲೀನ ಭಾರತದ ಅನೇಕ ದುರ್ಘಟನೆಗಳನ್ನು ಹಿನ್ನೆಲೆಯಲ್ಲಿ ಇಟ್ಕೊಂಡಿದೆ.

"ಚರಿತ್ರೆ, ಅಂದರೆ ಅದೊಂದು ಮಬ್ಬು ಕವಿದ ಸುರಂಗ
ಪಂಜು ಹಿಡಿದು ಹೊರಟರೆ ನೀವು
ಓತೂರಿಗಳ ಸಂದಿಗೊಂದಿಗಳಲ್ಲಿ ಕೈ ಕಾಲು ಮುರಿದು
ಬಿದ್ದಿರುವ ಶತಮಾನಗಳ ನೋವು
ಹಾಗೆಯೇ ತಡವರಿಸಿಕೊಂಡು ನಡೆದರೆ ಮುಂದ
ಯುಗ ಯುಗಾಂತರದ ನೆತ್ತರ್ ಕೆಸರು ಮೆತ್ತುವುದು ಕಾಲಿಗೆ
ಗೂಢ ಲಿಪಿಗಳ ಕಲ್ಲು ! ಒಡೆದ ಮಡಕೆಯ ಚೂರು
ಮೂಳೆಗಳ ನಿಟ್ಟುಸಿರು !
ಮುಸ್ಸಂಜೆ ಬೆಳಕಲ್ಲಿ, ಕೂತ ಪಿರಮಿಡ್ಡುಗಳು
ಮಹಲುಗಳು ಗೋರಿಗಳ ಮೇಲೆ ಕಿರೀಟಗಳು
ಅಪರಾಧಗಳ ಶೂಲಗಳಲಿ ಪ್ರೇತಗಳಾಗಿ ಜೋತಾಡುತ್ತಿರುವ
ಅಮಾಯಕರ ಶಾಪಗಳು !

ಚರಿತ್ರೆ ಎಂದರೆ ತುಂಗಭದ್ರೆಯ ತಡಿಯ ಹಾಳು ಹಂಪೆಯ ನೋಟ !
ಬಂಡೆಯ ಮೇಲೆ ಬಂಡೆ, ಶತಮಾನಗಳ ರಣಬಿಸಿಲಿಗೂ
ಒಂದಿಷ್ಟೂ ಮೆತ್ತಗಾಗದ ನಿಷ್ಠುರ ಶಿಲೆಯ ಅಸ್ತವ್ಯಸ್ತವಿಸ್ತಾರ
ಹೆಜ್ಜೆ ಹೆಜ್ಜೆಗೂ ಮುರಿದ ಗುಡಿಗೋಪುರ

ನೆಲ ಸಮವಾದ ನಗರ
ಮರೆತು ಹೋದಂದು ಮಹಾಸಾಮ್ರಾಜ್ಯದವಶೇಷಗಳು !
ಸಂಶೋಧಕರು, ಗುದ್ದಲಿಗೆ ತೆರೆದುಕೊಳ್ಳುತ್ತಲಿವೆ.
ಹಳೆಯ ನೆನವುಗಳನ್ನು !
ಏನೇನೂ ಆಗಿಲ್ಲವೆಂಬಂತೆ ಈ ಪ್ರಕೃತಿ
ಸಂತೈಸುತ್ತ ಕೂತಿದ್ದಾಳೆ ಬಿದ್ದ ಬದುಕಿನ ಮೇಲೆ
ಹೊದಿಸಿ, ಹಸುರಿನ ಪ್ರೀತಿ !

ಚರಿತ್ರೆ ಅಂದರೆ  ಬಾಬರಿ ಮಸೀದಿಯ ಧ್ವಂಸ !
ದೇಶಾದ್ಯಂತ ಬಿದ್ದ ಗೊಮ್ಮಟದ ಧೂಳು
ಸರಯೂ ನದಿಯ ನೀರಲ್ಲಿ ಕಾಶಿ ವಿಶ್ವೇಶ್ವರನ ಜಡೆಯಲ್ಲಿ
ವೃಂದಾವನದ ಕೃಷ್ಣನ ಕೊಳಲಿನಲ್ಲಿ
ಕನ್ಯಾಕುಮಾರಿಯ ಕಣ್ಣುಗಳಲ್ಲಿ
ಆ ಧೂಳಿನೊಂದೊಂದು ಕಣವೂ ಸಿಡಿಮದ್ದಾಗಿ, ಚೂರಿಗಳಾಗಿ,
ಹರಿದ ನೆತ್ತರಿಗೆ ಕೊನೆಯೆಲ್ಲಿ ?
ಈ ಚರಿತ್ರೆಯ ಚಕ್ರದಲಿ ನುಚ್ಚು ನೂರಾದವರೂ ಈ
ಸಾಮಾನ್ಯ ಜನರೇ.
ಯಾರು ಬರೆದಿಟ್ಟಿದ್ದಾರೆ. ಈ ಇವರು ಪಟ್ಟ ಪಾಡುಗಳನ್ನು
ಶಾಸನದ ತುಂಬಾ ರಾರಾಜಿಸಿವೆ ಸದಾ
ಪಟ್ಟಭದ್ರರ ಹೆಸರೇ

ಚರಿತ್ರೆ ಅಂದರೆ ನಡೆದುದಷ್ಟೇ ಅಲ್ಲ
ನಡೆಯುತ್ತಿರುವುದೂ ಕೂಡ
ಎಲ್ಲ ಪಾಠಗಳೂ ಮರೆತು ಮತ್ತೆ ಚಿತ್ತವಿಕಾರ
ಈ ಮಾನವತೆಯ ಹೃದಯದ ಮೇಲೆ
ಎಷ್ಟೊಂದು ಗಾಯಗಳ ಗುರುತು

ಪ್ರ: *ನಿಮ್ಮ ಈ ಕವಿತೆಯ ಗುಂಗಿನ ಜೊತೆಗೆ ಸಂದರ್ಶನ ಮುಗಿಸೋಣ ನಮಸ್ಕಾರ,*

ಜಿಎಸ್.ಎಸ್.:	ನಮಸ್ಕಾರ.

*ಪ್ರಸಾರ ದಿನಾಂಕ: ೦೮.೦೩.೦೪*

■■

# ಕನ್ನಡ ಭಾರತಿ ಕಾರ್ಯಕ್ರಮಕ್ಕಾಗಿ ನಡೆಸಿದ ಸಂವಾದ

●

*ಜಿಎಸ್‌ಎಸ್ ಅವರೊಂದಿಗೆ ಭಾಗವಹಿಸಿದ್ದಾರೆ :*

***ಕಿ.ರಂ. ನಾಗರಾಜ ಹಾಗೂ ನರಹಳ್ಳಿ ಬಾಲಸುಬ್ರಹ್ಮಣ್ಯಂ***

*ಕಿ.ರಂ.ನಾ : ನಾವು ಒಂದು ಸಂದರ್ಶನ-ಸಂವಾದವನ್ನು ಮಾಡ್ತಾ ಇದ್ದೇವೆ. ನಮ್ಮ ಕಾಲದ ಮುಖ್ಯಕವಿಗಳಲ್ಲಿ ಒಬ್ಬರಾದ ಡಾ. ಜಿ.ಎಸ್. ಶಿವರುದ್ರಪ್ಪ ಅವರನ್ನು ಮಾತನಾಡಿಸ್ತಾ ಇದ್ದೇವೆ. ನಮ್ಮ ಜೊತೆ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಇದ್ದಾರೆ. (ವಿಮರ್ಶಕರು) ನಾವಿಬ್ಬರೂ ಕೂಡಿ, ಶಿವರುದ್ರಪ್ಪನವರ ಸಾಹಿತ್ಯ ಸಂಬಂಧಿಯಾದ, ಸಂಸ್ಕೃತಿಯ ಸಂಬಂಧಿಯಾದ ಮತ್ತು ಅವರ ವೈಯಕ್ತಿಕ ವಿಚಾರಗಳ ಕೆಲವಂಶಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡ್ತೀವಿ.*

*ಜಿ.ಎಸ್.ಎಸ್. ಅವರು ಒಂದು ರೀತಿಯಲ್ಲಿ ಈ ಕಾಲದ ಸಾಂಸ್ಕೃತಿಕ ಪರಿಸರದ ಮುಖ್ಯ ವ್ಯಕ್ತಿಗಳಲ್ಲಿ ಒಬ್ಬರು. ಒಂದು ರೀತಿಯಲ್ಲಿ, ಈ ಹೊತ್ತಿನ ಸಾಹಿತ್ಯಕ ವಾತಾವರಣವನ್ನು ಒಂದು ಹೊಸ ಜೀವಂತಿಕೆಯ ನೆಲೆಯಲ್ಲಿ ಪ್ರಸ್ತುತ ಪಡಿಸೋದಿಕ್ಕೆ ವಿಶೇಷವಾಗಿ ಕೆಲಸ ಮಾಡಿರೋಂಥವರು. ನವೋದಯ ಸಾಹಿತ್ಯದ ಮುಖ್ಯ ಲೇಖಕರ ಮತ್ತು ಆ ಕಾಲದ ಮುಖ್ಯ ಸಾಹಿತ್ಯ ಚಿಂತಕರ ನಡುವೆ ತನ್ನ ಸಾಹಿತ್ಯಕ ವ್ಯಕ್ತಿತ್ವವನ್ನು ರೂಪಿಸಿಕೊಂಡ ಶಿವರುದ್ರಪ್ಪನವರು ಒಂದು ರೀತಿ ಹಿಂದಿನ ಅನೇಕ ಮೌಲ್ಯಗಳನ್ನು ಹೊಸಪೀಳಿಗೆಯಲ್ಲಿ ಹೊಸ ರೀತಿಯಲ್ಲಿ ವ್ಯಾಖ್ಯಾನಿಸಿದ ವ್ಯಕ್ತಿ ಅಂತ ನಾನು ವೈಯುಕ್ತಿಕವಾಗಿ ತಿಳಿದಿದ್ದೇನೆ. ಅವರು ೧೨ ಕವನ ಸಂಕಲನಗಳನ್ನು ಬರೆದು ನಾಡಿನ ಜನಮನದಲ್ಲಿ ವಿಶೇಷವಾದಂಥ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ ಅವರು ಪ್ರಮುಖ ಕಾವ್ಯ ತತ್ವ ಚಿಂತಕರು. ಕಾವ್ಯಮೀಮಾಂಸೆ ಮತ್ತು ಕಾವ್ಯವಿಮರ್ಶೆ ಅವರ ಬಹಳ ಮುಖ್ಯವಾದ ಆಸಕ್ತಿ. ಆಸಕ್ತಿ ಅಷ್ಟೇ ಅಲ್ಲ ಅದಕ್ಕೆ ಅವರದೇ ಆದಂಥಹ ಹೊಸ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅದು ಇವತ್ತಿನ ನಮ್ಮ ಸಾಹಿತ್ಯಾಧ್ಯಯನದ ಮುಖ್ಯ ಭಾಗ ಕೂಡ ಆಗಿದೆ. ಅಲ್ಲದೆ ಪ್ರವಾಸ*

*ಸಾಹಿತ್ಯವನ್ನು ಅವರು ಬರೆದಿದ್ದಾರೆ. ಪ್ರವಾಸ ಅವರ ಬಹಳ ಮುಖ್ಯವಾದಂಥ ಒಂದು ಆಸಕ್ತಿ. ಪ್ರವಾಸದ ಮುಖಾಂತರ ಲೋಕಕ್ಕೆ ಸ್ಪಂದಿಸುವ ಅವರ ವಿಚಾರಗಳು ಸಾಹಿತ್ಯದಲ್ಲಿ ಅವರ ಸೃಜನಶೀಲ ಕೃತಿಗಳಲ್ಲಿ ಹೇಗೋ ಹಾಗೇ ಇನ್ನಿತರ ಅವರ ಕಾರ್ಯಕ್ಷೇತ್ರಗಳಲ್ಲಿಯೂ ಕೂಡ ವ್ಯಾಪಿಸಿಕೊಂಡಿದೆ. ಅಲ್ಲದೆ ಈ ಕಾಲದ ಕನ್ನಡ ಶಿಕ್ಷಣಕ್ಕೆ ಅಂದ್ರೆ ಕನ್ನಡ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ತೆರೆದಂಥಹ ಶ್ರೇಯಸ್ಸು ಅವರಿಗೆ ಇದೆ ಅಂತ ನಾನು ತಿಳಿತೀನಿ. ಹೀಗಾಗಿ ಪರಂಪರೆ ಮತ್ತು ಆಧುನಿಕ ನೆಲೆ ಎರಡರ ಮಧ್ಯೆ ಕ್ರಿಯಾತ್ಮಕವಾದಂಥಹ ವ್ಯಕ್ತಿತ್ವವನ್ನು, ಸಾಹಿತ್ಯ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರತಕ್ಕಂತಹ ಅವರನ್ನು ನಾವೀಗ ಸಂದರ್ಶಿಸ್ತಾ ಇದೀವಿ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರೇ ನೀವು ನಿಮ್ಮ ಮೇಷ್ಟ್ರ ಜೊತೆ ಸಂವಾದವನ್ನು ಪ್ರಾರಂಭ ಮಾಡಬಹುದು.*

*ನರಹಳ್ಳಿ* : *ನಮಸ್ಕಾರ ಸಾರ್*

ಜಿ.ಎಸ್.ಎಸ್.: ನಮಸ್ಕಾರ

*ನರಹಳ್ಳಿ* : *ಇತ್ತೀಚೆಗೆ ಸ್ವಯಂಕಾನು ಓದ್ತಾ ಇದ್ದಾಗ ಅವನೊಂದು ಮಾತು ಹೇಳಿದ. ಅದು ಮುಖ್ಯ ಅಂತ ಹೇಳಿ ಅನ್ನಿಸ್ತು ನನಗೆ. ಪ್ರತಿಯೊಬ್ಬ ಸಾಹಿತಿಯೂ ಕೂಡ ತನ್ನ ಬಾಲ್ಯದಲ್ಲಿ ಪಡೆದ ಅನುಭವಗಳನ್ನು ಕ್ರಮೇಣ ಉದ್ದಕ್ಕೂ ಅರ್ಥೈಸ್ತಾ ಹೋಗ್ತಾನೆ ಅನ್ನುವಂಥ ಅರ್ಥದ ಮಾತು ಅದು. ಸುಮಾರು ೪-೫ ದಶಕಗಳಿಂದ ನೀವು ಸಾಹಿತ್ಯ ರಚನೆಯಲ್ಲಿ ತೊಡಗಿದೀರಿ. ನಿಮ್ಮ ಬಾಲ್ಯದ ಅನುಭವಗಳನ್ನು, ಹಾಗೇ ಪರಿಸರ, ಸಾಹಿತ್ಯದ ವ್ಯಕ್ತಿತ್ವವನ್ನು ರೂಪಿಸಲಿಕ್ಕೆ ನೆರವಾಗಿದೆಯಾ ಅಂತ ಈ ಹಿನ್ನೆಲೆಯಲ್ಲಿ ನಿಂತು ನೋಡಿದಾಗ ನಿಮಗೆ ಏನನ್ನಿಸ್ತಿದೆ ?*

ಜಿ.ಎಸ್.ಎಸ್.: ಬಾಲ್ಯದ ಅನುಭವ ನನಗೆ ಒಂದು ನಿರ್ದಿಷ್ಟ ಪ್ರಾದೇಶಿಕ ಪರಿಸರದಲ್ಲಿ ಆದದ್ದಲ್ಲ. ಏಕೆಂತ ಹೇಳಿದರೆ ನಮ್ಮ ತಂದೆಯವರು ಸರ್ಕಾರಿ ನೌಕರರಾದ್ದರಿಂದ ನಾನು ಹುಟ್ಟಿ ಬೆಳೆದ ಮಲೆನಾಡಿನ ದಟ್ಟವಾದ ಅನುಭವಗಳು ನನಗೆ ದಕ್ಕದಿದ್ದ ಕಾರಣ ನನ್ನ ತಂದೆಯವರು ಊರಿಂದ ಊರಿಗೆ ಹೋಗಿದ್ದೇ ಆಗಿದೆ. ಒಂದು ವೇಳೆ ಅವರು ದಟ್ಟವಾದ ಮಲೆನಾಡಿನ ಪರಿಸರದಲ್ಲಿ ಉಳಿದಿದ್ರೆ ಅವರು ಹುಟ್ಟೂರಲ್ಲೇ ಉಳಿದಿದ್ರೆ ನನ್ನ ಕಾವ್ಯದ ಇವತ್ತಿನ ಅಭಿವ್ಯಕ್ತಿಯಲ್ಲಿ ಸ್ವಲ್ಪ ವ್ಯತ್ಯಾಸವಾಗ್ತಾ ಇತ್ತೋ ಏನೋ ಗೊತ್ತಿಲ್ಲ. ಆದರೆ ಮತ್ತೊಂದು ಲಾಭ ಆಗಿದೆ. ಅದೇನು ಅಂದ್ರೆ ಅನೇಕ ಊರುಗಳನ್ನು ಸಂಚಾರ ಮಾಡಿದ್ದು. ಈಗಾಗಲೇ ಕಿರಂನಾಗರಾಜ್ ಅವರು ಪ್ರವಾಸ ಅನ್ನೋದು ನನ್ನ ಮುಖ್ಯವಾದ ಆಸಕ್ತಿ ಅಂತ ಹೇಳಿದರು. ಆ ಆಸಕ್ತಿ ನನಗೆ ಹುಟ್ಟಿದಂದಿನಿಂದ ಬಂದದ್ದು. ಹೀಗಾಗಿ ಒಂದು ರೀತಿ Nomadic tribe

ಅಂತಾರಲ್ಲ, ಆ ಗುಂಪಿಗೆ ನನ್ನ ತಂದೆ ಸೇರಿದ್ದರಿಂದ ನಾನು ಊರಿಂದ ಊರಿಗೆ ಅಲೀತಾ ಅನೇಕ ವಿಭಿನ್ನ ಪರಿಸರಗಳಲ್ಲಿ ಬೇರೆ ಬೇರೆ ಊರುಗಳಲ್ಲಿ, ಬೇರೆ ಬೇರೆ ಭೌಗೋಳಿಕ ಪರಿಸರದಲ್ಲಿ ಬೆಳೆದವನು. ಹೀಗಾಗಿ ನನ್ನ ಬಾಲ್ಯದ ಅನುಭವ ಒಂದು ಕಡೆ ಎಲ್ಲೋ ದಟ್ಟವಾದ, ನಿರ್ದಿಷ್ಟವಾದ ಒಂದು ನೆಲೆಗೆ ಬೇರೂರಿದ್ದಲ್ಲ. ಹೀಗಾಗಿ ನನ್ನಲ್ಲಿ ಮಲೆನಾಡಿನ ಆ ರಮ್ಯತೆಗೆ ಇರುವ ಆಸಕ್ತಿ ಜೊತೆಗೆ ಬಯಲುನಾಡಿನ ಬೆಟ್ಟ, ಗುಡ್ಡ, ಬಂಡೆ, ಹೊಳೆ, ಮರ, ಗಿಡ ಇತ್ಯಾದಿಗಳಲ್ಲೂ ಕೂಡ ಉಳಿದುಕೊಂಡಿದೆ. ಹೀಗಾಗಿ ನನ್ನ ಬಾಲ್ಯದ ಅನುಭವಗಳ ಅನೇಕ ನೆನಪುಗಳೆಯೆಲ್ಲ ಅವು ನನ್ನ ಕವಿತೆಯಲ್ಲಿ ಮತ್ತೆ ಮತ್ತೆ ಪುನರಾವರ್ತನೆ ಆಗುವ ಪ್ರತಿಮೆಗಳಾಗಿ ಉಳಿದುಕೊಂಡಿವೆ. ಉದಾಹರಣೆಗೆ ಒಂದು ಹೊಳೆ, ನದಿ ನದೀ ಪ್ರತಿಮೆ! ಮತ್ತೆ ಮತ್ತೆ ಬರುತ್ತೆ ನನ್ನ ಕವನಗಳಲ್ಲಿ. ಆಮೇಲೆ ದೀಪದ ಪ್ರತಿಮೆ. ನನ್ನ ಎಳೆಯಂದಿನಲ್ಲಿ electricity ಇರಲಿಲ್ಲ. ನಾವೆಲ್ಲ ಬಹಳ ಬಡತನದ ಬವಣೆಯಲ್ಲಿ ಬೆಂದವರು ಮನೆಯಲ್ಲಿ ಹಣತೆ ಹಚ್ಚಿಕೊಂಡು ಓದಿದವರು. ಆದರೆ ಹಳ್ಳಿಗಳಲ್ಲಿ ಮುಖ್ಯವಾಗಿ ನಾವು ಬೆಳೆದಿದ್ರ ಕಾರಣ ಹಳ್ಳಿಗಳಲ್ಲಿ ಕಾಣುವ ಹಣತೆ, ಗುಡಿಯಲ್ಲಿ ಕಾಣುವ ಹಣತೆ, ಮನೆ ಹಣತೆ ..... ಇದೆಲ್ಲ

*ಕಿರಂ.ನಾ : "ದೀಪದ ಹೆಜ್ಜೆ" ಅಂತ್ಲೇ ಹೆಸರು ಕೊಟ್ಟಿದ್ದೀರಿ*

ಜಿಎಸ್.ಎಸ್. : ಹೌದು, ದೀಪ ನನ್ನ ಕವನಗಳಲ್ಲಿ ಮುಖ್ಯ ಪ್ರತೀಕವಾಗ್ಲಿ ಕಾಣುತ್ತೆ. ಹಾಗೆನೇ ತೆಂಗಿನಮರ. ಅದು ನನ್ನಲ್ಲಿ ಉಂಟು ಮಾಡಿದ ವಿಸ್ಮಯ ಬಹಳ ಆಶ್ಚರ್ಯಕರವಾಗಿದ್ದು. ಅದ್ಭುತ ಅದು. ಎಲ್ಲ ಮರಗಳಿಗಿಂತ ಭಿನ್ನ ಅದು. ಎಲ್ಲ ಮರಗಳು ಋತುಪರಿವರ್ತನೆಗೆ ಒಳಪಟ್ರೆ, ಅದು ಮಾತ್ರ ತಾನು ಯಾವುದಕ್ಕೂ ಸಂಬಂಧವಿಲ್ಲ ಅಂತ ಇರುತ್ತದೆ. ಈಗಲೋ ಆಗಲೋ ಗರಿಬಿಚ್ಚಿಕೊಂಡು ಹಾರಿ ಹೋಗೋ ಹಕ್ಕಿ ಥರ ನನಗೆ ಅದು ಕಾಣ್ತಾ ಇದೆ. ಹೀಗೆ ತೆಂಗಿನ ಮರ ಕೂಡ ನನ್ನ ಕವಿತೆಗಳಲ್ಲಿ ಪ್ರತೀಕವಾಗಿ ಆಗಾಗ ಬರ್ತದೆ. ಬಹುಶಃ ಕವಿಯ ವ್ಯಕ್ತಿತ್ವವನ್ನು ವ್ಯಾಖ್ಯಾನಿಸುವಾಗ ಈ ತೆಂಗಿನ ಮರ ಬಹಳ ಸಹಾಯಕ್ಕೆ ಬಂದಿದೆ. ಅನೇಕ ಸಲ ಕವಿಯ ವ್ಯಕ್ತಿತ್ವ ತೆಂಗಿನ ಮರದ ಹಾಗೆ ಅಂತ ಅಂದುಕೊಂಡಿದೀನಿ. ಆಳದಲ್ಲಿ ಬೇರೂರಿ ತನ್ನ ಜೊತೆ ಅನೇಕ ಮರಗಳಿದ್ದರೂ ಕೂಡ ಏಕಾಂಗಿಯಾಗಿ ತೋರ್ತಾ ಈಗಲೋ ಆಗಲೋ ಹಾರಿ ಹೋಗುವ ಹಕ್ಕಿಯ ಹಾಗೆ, ಈ ನೆಲದ ಸಂಪರ್ಕ ತಪ್ಪಿಸಿ ಬಿಡುತ್ತೆ ಅನ್ನುವ ಭ್ರಮೆಯನ್ನು ಕೊಡ್ತಾ ಮತ್ತೂ ಎತ್ತರದಲ್ಲಿ ಗರಿಬಿಚ್ಚಿ ನೀಲಾಕಾಶದಲ್ಲಿ ನವಿಲಿನ ಹಾಗೆ ಚಿತ್ರವನ್ನು ರಚಿಸ್ತಾ ಬಹಳ ವಿಲಕ್ಷಣವಾದ ಮರ ಅನ್ನಿಸುತ್ತೆ. ಅದಕ್ಕೆ ತನ್ನದೇ ಆದ ನೀತಿ ಇರೋ ಹಾಗೆ ಕಾಣುತ್ತೆ. ಯಾವಾಗಲೋ ಎಲೆಗಳನ್ನು ಉದುರಿಸಿಬಿಡುತ್ತೆ. ಹೀಗೆ ನನ್ನ ವಿಸ್ಮಯ ತೆಂಗಿನಮರ ಅನೇಕ ಕಡೆ ಕಾಡುತೆ. ಹೀಗಾಗಿ ನನ. ಕವಿತೆಗಳ ತುಂಬ

ನಿಮಗೆ ಅನೇಕ ಸ್ಪಷ್ಟವಾದ ಪ್ರತೀಕಗಳು ಬಂದಿರುವುದನ್ನು ನೀವು ನೋಡಬಹುದು.

*ಕಿರಂ.ನಾ : ನೀವು ಒಂದು ಪರಿಸರದ ಪ್ರಕೃತಿಯ ಪ್ರಭಾವ ಹೇಗೆ ಆಯ್ತು ಅಂತ ಹೇಳಿದ್ರಿ. ನನಗೆ ಅದನ್ನೇ ಸ್ವಲ್ಪ ಮುಂದುವರೆಸ್ತಾ ನಿರ್ದಿಷ್ಟವಾಗಿ ಸಾಹಿತ್ಯಕ್ಕೆ ಒಲಿದ ಸಂದರ್ಭ ಎಂಥದ್ದು ಅಂತ ತಿಳ್ಕೋಳಕ್ಕೆ ಕುತೂಹಲ ಅನ್ನಿಸ್ತಾ ಇದೆ.*

ಜಿ.ಎಸ್.ಎಸ್.: ನಿರ್ದಿಷ್ಟವಾಗಿ ಸಾಹಿತ್ಯಕ್ಕೆ ಒಲಿಯುವ ಯಾವ ಸಂದರ್ಭ ನನ್ನ ಹಿನ್ನೆಲೆಯಲ್ಲಿ ಒದಗಿ ಬಂದಿತ್ತೋ, ಪರಂಪರೆಯಲ್ಲಿ ಇತ್ತೋ ಗೊತ್ತಿಲ್ಲ. ನಾನು ಎಲ್ಲರ ಹಾಗೇ ಬೆಳೆದಂಥಹವನು. ಆದರೆ ನನಗೆ ಲೋಕದ ಬಗ್ಗೆ ವಿಸ್ಮಯ ಮೂಲವಾದ ಭಾವನೆ ಮೊದಲಿನಿಂದಲೂ ಇತ್ತು. So I was when I was young, when I was in youth, so it be when I grew old ಅಂತ wordsworth ಏನು ಹೇಳಿದನೋ ಈ ಸಂವಾದ ನನಗಿತ್ತು. ನಾನು ಅನೇಕ ಊರುಗಳಲ್ಲಿ, ಹಳ್ಳಿಗಳಲ್ಲಿ ಇದ್ದೆ. ಅಲ್ಲಿ, ಈ ಮಗ್ಗದ ಮನೆಗಳಿದೆಯಲ್ಲ, ಅಲ್ಲಿ ಬಹಳ ಹೊತ್ತು ನಿಲ್ತಾ ಇದ್ದೆ. ಆ ಮಗ್ಗದಲ್ಲಿ ಹಾಸಿಕೊಂಡ ನೂಲು, ಲಾಳಿ ಆಡ್ತಾ ಆಡ್ತಾ ವಸ್ತ್ರವಾಗುವ ಪರಿಯಿದೆ ನೋಡಿ, ಅದು ನೋಡ್ತಾ ಕವಿತೆ ಹುಟ್ಟೋ ಪರಿ ಬರ್ತಾ ಇತ್ತು. ಹಾಗೇನೇ ಕುಂಬಾರ ಬೀದಿಗೆ ಹೋದ್ರೆ ನಾನು, ಕುಂಬಾರನ ಎರೆಮಣ್ಣು ತಿರುಗಿಸುವ ಗಾಲಿ ನಡುವೆ ಅವನ ಬೆರಳುಗಳ ಮೂಲಕ ಮಡಿಕೆಯಾಗೋ ಕೌಶಲವನ್ನು ನೋಡೋವಾಗ ಕವಿತೆಯ ಹುಟ್ಟು ಹೀಗಿರಬಹುದು ಅನ್ನೋ ಕಲ್ಪನೆಗಳು ಬಂತು. ಆದರೆ ಕುಂಬಾರ ಮಣ್ಣಿಗೆ ಆಕಾರ ಕೊಡೋ ಹಾಗೆ ನೇಕಾರ ವಸ್ತ್ರಕ್ಕೆ ಆಕಾರ ಕೊಡೋ ಒಂದು ಸಂದರ್ಭ ಒದಗಿದ್ದು ನಾನು ಹೈಸ್ಕೂಲ್ ತರಗತೀಲಿ ಇರುವಾಗ. ಬಹುಶಃ ಆ ಹೊತ್ತಿಗೆ ಓದುವ ಆಸಕ್ತಿ ಹೇಗೋ ಬಂದಿತ್ತು. ನನ್ನ ತಂದೆ ಅಧ್ಯಾಪಕರಾದ್ದರಿಂದ ನನಗೆ ಪೂರ್ವ ಸಿದ್ಧತೆ ಇತ್ತು. ಬೇರೆ ಬೇರೆ ಪತ್ರಿಕೆಗಳು ಮನೇಗೆ ಬರ್ತಾ ಇದ್ದವು. ಶಿವರಾಮಕಾರಂತರ ಬಾಲಪ್ರಪಂಚ ಬರ್ತಾ ಇತ್ತು. ಅದರೊಳಗೆ ಇರುವ ಪ್ರಾಚೀನ ಮನುಷ್ಯನ ಕೆಲವು ಐತಿಹ್ಯಗಳು ಬಹಳ ಸೊಗಸಾಗಿ ಕಥೆ ಥರ ಇರ್ತಾ ಇತ್ತು. ಅವನ್ನು ಓದ್ತಾ ಇದ್ದೆ. ಗಳಗನಾಥರ ಕಾದಂಬರಿಗಳು, ವೆಂಕಟಾಚಲರ ಕಾದಂಬರಿಗಳು ಇವೆಲ್ಲ ಓದ್ತಾ ಇದ್ದೆ. ಹೀಗಾಗಿ ಸಾಹಿತ್ಯದ ಬಗ್ಗೆ ಏನೋ ಒಂದು ರುಚಿ ನನ್ನಲ್ಲಿ ಹುಟ್ಟುಕೊಂಡಿತ್ತು. ಇದು ಬಹಳ ಮುಖ್ಯವಾದ ವಿಚಾರ. ಹೈಸ್ಕೂಲ್ ತರಗತಿ ಸಮಯದಲ್ಲಿ ನನ್ನ ಕಿವಿಗೆ ಬಿದ್ದ ಕವನಗಳು ಮುಖ್ಯವಾಗಿ ಕುವೆಂಪು ಮತ್ತು ಬೇಂದ್ರೆಯವರದು, ಸಮಕಾಲೀನವಾದ ಕವನಗಳು. ಅದರಲ್ಲೂ ಮುಖ್ಯವಾಗಿ ದಾವಣಗೆರೇಲಿ ಇದ್ದಾಗ ಕಿವಿಗೆ ಬೀಳ್ತಾ ಇದ್ದವು. ಬೇಂದ್ರೆಯವರ ಕಾವ್ಯದ ಭಾಷೆ ಆ ಕಾಲದ ಮೈಸೂರಿನವರಾದ ನಮಗೆ ಒಂದು ರೀತಿ

ಅಪರಿಚಿತವಾಗೇ ಇತ್ತು ಬಹಳ ಕಾಲ. ಈವಾಗೇನೂ ಯಾವುದೂ ಅಪರಿಚಿತ ಅಲ್ಲ. ಹೀಗಾಗಿ ಮೊದ ಮೊದಲು ಬೇಂದ್ರೆಯವರ ಶೈಲಿ ಹಿಡಿಸ್ತಾ ಇರಲಿಲ್ಲ. ಕುವೆಂಪು ಬರೆದ ಪದ್ಯಗಳ ಭಾಷೆ ಇತ್ತಲ್ಲ. ಅದರಲ್ಲಿ ಏನೋ ಒಂದು ಹೊಸತನ ಇದ್ದ ಹಾಗೆ ಕಾಣಿಸ್ತಾ ಇತ್ತು. ಯಾಕೆಂದ್ರೆ.. ಜನ ಆಡಿದ ಭಾಷೆ ಹಾಗೇ ಬೇಂದ್ರೆಯವರ ಭಾಷೆ ಇದ್ದಿದ್ರಿಂದ ಅದರಲ್ಲಿ ವಿಶೇಷ ಅಂತ ಅನ್ನಿಸ್ತಾ ಇರಲಿಲ್ಲ ಅಂತ ಅನ್ನಿಸ್ತೇನೋ ಗೊತ್ತಿಲ್ಲ. ಹೀಗೆ.. ಕುವೆಂಪು ಅವರ ಕಾವ್ಯ ಮತ್ತು ನಾಟಕಗಳ ವಾಚನವನ್ನು, ಕವನಗಳನ್ನು ನಾನು ಕೇಳಿ ಸಾಹಿತ್ಯದ ಬಗ್ಗೆ ನನಗೆ ಅತ್ಯಂತ ಆಸಕ್ತಿ ಹುಟ್ಟಿತು. ಆದರೆ ನನಗೆ ಇಷ್ಟು ಕಥೆ, ಕಾದಂಬರಿ ಮುಂತಾದವುಗಳನ್ನು ಓದಿಕೊಂಡು ಕಾವ್ಯದಲ್ಲೇ ಯಾಕೆ ನನ್ನ ಅಭಿವ್ಯಕ್ತಿ ಕಂಡುಕೊಂಡೆ ಅಂತ ಹೇಳೋದು ಕಷ್ಟ. ಹಾಗೇನೇ ಕಥೆ ನಾನು ಯಾಕೆ ಬರೀಲಿಲ್ಲ, ಕಾದಂಬರಿ ಯಾಕೆ ಬರೀಲಿಲ್ಲ ಅನ್ನೋದಕ್ಕೂ ನನ್ನಲ್ಲಿ ಉತ್ತರ ಇಲ್ಲ ಹೀಗಾಗಿ ನನ್ನ ಆಸಕ್ತಿ ಕಾವ್ಯದ ಕಡೇ ಹರಿದದ್ದು. ಹೈಸ್ಕೂಲಿನ ದಿನಗಳಲ್ಲಿ ಪದ್ಯವನ್ನು ಬರೆದು ಓದಿ ಅಂತ ಹೇಳಿದಾಗ ಆಗ ನಾನು ಬರೆಯೋಕೆ ಪ್ರಯತ್ನಪಟ್ಟಾಗ ಅದು ಒಳ್ಳೆದಿರಲಿಲ್ಲ ಬಿಡಿ. ಆದರೆ ಸ್ವಲ್ಪ ಒಳ್ಳೆ ಪದ್ಯ ಬರೆದದ್ದು, intermediateನಲ್ಲಿದ್ದಾಗ. ನಾನು intermediate ಬಂದಾಗ ೧೯೪೩ನೇ ಇಸವಿ. ನನಗೆ ಆಗ ೧೭ ವರ್ಷ. ರಾಜರತ್ನಂ ನನ್ನ ಅಧ್ಯಾಪಕರು. ಆ ಸಂದರ್ಭದಲ್ಲಿ ರಾಜರತ್ನಂ ಪದ್ಯ ಓದೋ ರೀತಿ, ಅವರ ಕಂಠ, ಅವರ ವಾಚನದ ವೈಭವ, ಅವರ ವ್ಯಕ್ತಿತ್ವ, ಇವೆಲ್ಲ ಹಳೆಗನ್ನಡ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿ ಹುಟ್ಟಿಸಿತ್ತು. ಆದರೆ, ಒಂದು ದಿನ ತರಗತಿಯಲ್ಲಿ ಒಬ್ಬ ಅಧ್ಯಾಪಕರು ಇಂಗ್ಲಿಷ್ ಪಾಠ ಮಾಡ್ತಾ ಇದ್ದರು. ಅವತ್ತು ಮಾಡಿದ ಪಾಠ ಅಂದ್ರೆ ಥಾಮಸ್ ಗ್ರೇ ಕವಿಯ an elegy written on a country churchyard ಅನ್ನೋ ಪದ್ಯ. ಅದು ಇವತ್ತಿಗೂ ನನಗೆ ಜ್ಞಾಪಕದಲ್ಲಿದೆ.

ಈ ಪದ್ಯ ನನ್ನ ಮೇಲೆ ಮಾಡಿದ ಪರಿಣಾಮ ಕನ್ನಡ ಕಾವ್ಯ ಮಾಡಿರಲಿಲ್ಲ. ಅದ್ಭುತವಾದ ಪರಿಣಾಮ. ಇದನ್ನು ಮೆಲುಕು ಹಾಕ್ತಾ ಹಾಕ್ತಾ ಬೇರೆ ಸುಂದರವಾದ ಪದ್ಯ ಬರೆದೆ.

ಕಡಲಿನ ಕತ್ತಲು ಗವಿಯಲ್ಲಿ, ಅಡಗಿಹವೆಷ್ಟೋ ರತ್ನಗಳು,
ಘೋರಾರಣ್ಯದ ತರುಗಳಲಿ, ತುಂಬಿಹವೆಷ್ಟೋ ಕುಸುಮಗಳು
ಎಸೆಯುವ ರತ್ನವ ಧರಿಸುವರಾರು, ಕತ್ತಲಗವಿಯಿಂ ಹೊರತೆಗೆದು
ಕುಸುಮದ ಕಂಪನು ಸೇವಿಪರಾರು ತುಂಬಿದ ಕಾನನ ಮಧ್ಯದಲಿ

ಹೀಗೆ ಕನ್ನಡದಲ್ಲೂ ಕೂಡ ಇಂಥ ಅನೇಕ ಕವಿಗಳಿದ್ದಾರೆ ಅಂತ ಮುಂದಿನ ಪದ್ಯ ಬರ್ತದೆ. ಅವರನ್ನು ಯಾರೂ ಕೇಳೋದಿಲ್ಲ. ಅದರಲ್ಲಿ ನಾನೂ ಒಬ್ಬನು ಅಂದ್ಕೊಂಡನೋ ಏನೋ ಗೊತ್ತಿಲ್ಲ. ಈ ಥರ ನನ್ನ ಆಶಯವನ್ನು ಆ

ಇಂಗ್ಲಿಷ್ ಕವಿತೆ ಮೂಡಿಸಿತು. ೧೭ ವರ್ಷದಲ್ಲಿ ಬರೆದದ್ದು ಪದ್ಯದ ಧಾಟಿ, ಧೋರಣೆ ನೋಡಿದ್ರೆ ಚೆನ್ನಾಗಿದೆ ಅಂತ ನಿಮಗನ್ನಿಸಬಹುದು. ಇಂಥಾ ಒಂದು ಪದ್ಯ ಬರೆದ ಮೇಲೆ ಇತರ ಪದ್ಯಗಳ ಜೊತೆಗೆ ರಾಜರತ್ನಂ ಅವರಿಗೆ ತೊಗೊಂಡು ಹೋಗಿ ಕೊಟ್ಟೆ, ಅವರು ಬಹಳ ಚೆನ್ನಾಗಿದೆ ಇದನ್ನ ಪತ್ರಿಕೆಗೆ ಕಳಿಸೋಣ ಅಂದ್ರು, ಮಾಸ್ತಿಯವರು ಬೆಂಗಳೂರಿನಲ್ಲಿ ನಡೆಸ್ತಾ ಇದ್ದ "ಜೀವನ" ಪತ್ರಿಕೆಗೆ ಕಳಿಸಿಕೊಟ್ಟರು. ಕೆಲವೇ ತಿಂಗಳಲ್ಲಿ ಅದು ಪ್ರಕಟವಾಯ್ತು. ಯಾವಾಗ ನನ್ನ ಪದ್ಯ ಚೆನ್ನಾಗಿದೆ ಅಂತ ಅಧ್ಯಾಪಕರು ಹೇಳಿದ್ರು ಅದು ಪ್ರಕಟ ಬೇರೆ ಆಯ್ತೋ, ಅನೇಕ ಸ್ನೇಹಿತರು ಚೆನ್ನಾಗಿದೆ ಅಂದ್ರೋ, ಅಲ್ಲಿಂದ ಬಹುಶಃ ನನ್ನಲ್ಲಿ ಹುದುಗಿದ್ದ ಆಸಕ್ತಿ ಇನ್ನೂ ಹೆಚ್ಚು ಕಾವ್ಯದ ಕಡೆ ಒಲಿಯೋ ಹಾಗೆ ಮಾಡಿತು. ಇದು ಮೊಟ್ಟ ಮೊದಲ ಪ್ರಕಟವಾದ ಪದ್ಯ. ರಾಜರತ್ನಂ ಅವರ, ಮಾಸ್ತಿಯವರ ಪ್ರೀತಿ, ವಿಶ್ವಾಸಗಳು, ನನ್ನ ವ್ಯಕ್ತಿತ್ವದಲ್ಲಿ ಸೇರಿಕೊಂಡದ್ದು ಹೀಗೆ. ಮುಂದೆ ಎಷ್ಟೋ ಕಾಲದ ನಂತರ ಮಾಸ್ತಿಯವರು ನನಗೆ ಸಿಕ್ಕಾಗ I have the credit of having published his first poem ಅಂತ ನನ್ನ ಬೆನ್ನು ತಟ್ತಾ ಇದ್ದರು. ಇದು ಬಹಳ ಮುಖ್ಯವಾದ ಘಟ್ಟ ಅಂತ ನನಗೆ ಅನ್ನಿಸ್ತಾ ಇದೆ.

*ನರಹಳ್ಳಿ* : *ಆಗ ಬಹುಶಃ ಎಲ್ಲಾ ಇಂಗ್ಲಿಷಿನ ಪ್ರೇರಣೆ ಪಡೆದು ಇಂಗ್ಲಿಷಿನಲ್ಲಿ ಬರೆದ್ರು, ಉದಾಹರಣೆ ಕೆ.ಎಸ್.ನ., ಕುವೆಂಪು ಇಂಗ್ಲಿಷಿನಲ್ಲೇ ಬರೆದರು ಆಮೇಲೆ ಕನ್ನಡಕ್ಕೆ ಬಂದ್ರು ಅಂತ ಕೇಳ್ತೀವಿ). ಆ ಕಾಲದ ಒಟ್ಟು ಸಾಂಸ್ಕೃತಿಕ ಪರಿಸರ ಹೇಗಿತ್ತು ಸಾರ್, ಇಂಗ್ಲಿಷ್ ಪ್ರೇರಣೆ ಕನ್ನಡಕ್ಕೆ ಒಲಿದದ್ದು, ಈ ಸಂದರ್ಭಗಳನ್ನು ಕುರಿತು ಹೇಳ್ತೀರಾ ?*

ಜಿ.ಎಸ್.ಎಸ್.: ಅದನ್ನ ನಾವು ಇವತ್ತು ನವೋದಯ ಅಂತ ಗುರುತಿಸ್ತಾ ಇದ್ದೇವೆ. ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಯಾವ ಒಂದು ಪುನರುಜ್ಜೀವನ ಇಂಡಿಯಾದಲ್ಲಿ ಪ್ರಾರಂಭವಾಯ್ತೊ ಅದರ ಒಂದು ಅಂಗವನ್ನು ನಾವು ನವೋದಯ ಅಂತ ಗುರುತಿಸ್ತಾ ಇದೀವಿ. ನವೋದಯ ಅನ್ನೋ ಮಾತು ಕುವೆಂಪು ಅವರು ಕೊಟ್ಟಿದ್ದು. ಅದಕ್ಕೆ ಸರಿಯಾದ ಮಾತು ಇರಲಿಲ್ಲ. ಅದುವರೆಗೂ...೧೯೫೦ನೇ ಇಸವಿವರೆಗೂ ಕೂಡ ಅಲ್ಲಿವರೆಗೆ ರಚಿತವಾದ ಸಾಹಿತ್ಯವನ್ನು ಹೊಸಗನ್ನಡ ಸಾಹಿತ್ಯ, ಹೊಸಗನ್ನಡ ಕಾವ್ಯ ಅಂತ ಕರೀತಾ ಇದ್ದರು. ನವ್ಯ ಕಾವ್ಯ ಪ್ರಾರಂಭವಾದಾಗ ಯಾವಾಗ ಅದನ್ನು ರಮ್ಯ ಕಾವ್ಯ, ರೋಮಾಂಟಿಕ್ ಕಾವ್ಯ ಅಂತ ಹೇಳೋಕೆ ಶುರು ಮಾಡಿದ್ರೋ ಆ ತಪ್ಪು ಕಲ್ಪನೆಯನ್ನು ಹೋಗಲಾಡಿಸೋಕೆ ಕುವೆಂಪು, "ನವೋದಯ" ಅನ್ನೋ ಮಾತನ್ನು ಬಳಸೋಕೆ ಶುರು ಮಾಡಿದ್ರು, ನಿಜವಾದ ಅರ್ಥದಲ್ಲಿ ನವೋದಯ ಕಾವ್ಯ ಅದು. ಒಂದು ಹೊಸ ಉದಯ, ಹೊಸ ಎಚ್ಚರ, ಹೊಸ ಸಂಭ್ರಮ, ಉಂಟಾಗ್ತಾ ಇತ್ತು. "ನೂರು ಮರ ನೂರು ಸ್ವರ ಒಂದೊಂದು ಅತಿಮಧುರ

ಸ್ವಚ್ಛಂದ ಸುಂದರ" ಅಂತ ಬೇಂದ್ರೆಯವರ ಮಾತಲ್ಲಿ ಇದೆಯಲ್ಲ. ಆ ಸಂಭ್ರಮ ಈ ಹೊಸ ಹುಟ್ಟನ್ನು ಹೇಳುತ್ತೆ. ಹಾಗೇ ಕುವೆಂಪು ಅವರು "ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯವಾಗುತ್ತಿದೆ. ಚಿರನೂತನ ಚೇತನ ದುತ್ಸಾಹದಿ ನವೀನ ಜೀವನ ಚಿಮ್ಮುತ್ತಿದೆ ಅಂದ್ರು" ಇದೆಲ್ಲವೂ ಕೂಡ ನವೋದಯದ ವ್ಯಾಖ್ಯೆನೇ. ಹೀಗಾಗಿ ಹೊಸದೊಂದು ಏನೋ ಸಾಹಿತ್ಯದಲ್ಲಿ ಸಂಭವಿಸ್ತಾ ಇದೆ ಅನ್ನೋ ಒಂದು ಜೀವಂತವಾದ ಕಲ್ಪನೆ, ಅನುಭವ ಪ್ರತಿಯೊಬ್ಬರಲ್ಲೂ ಮೂಡ್ತಾ ಇತ್ತು. ಆ ಕಾಲ ಒಂದು ರೀತಿ ಕುವೆಂಪು, ಬೇಂದ್ರೆ, ಏಸೀ, ರಾಜರತ್ನಂ, ನರಸಿಂಹಸ್ವಾಮಿ, ಆ ಕಡೆ ಅಡಿಗರು ಇವರೆಲ್ಲ ನನಗಿಂತ ಮೊದಲು ಬರೀಥಾ ಇದ್ದಂಥಹವರು. ಎಲ್ಲರೂ ಕೂಡ ಒಂದು ಹೊಸ ಉತ್ಸಾಹ ಅನ್ನೋದನ್ನು ಚಿಮ್ಮಿಸ್ತಾ ಇದ್ದರು. ಕುವೆಂಪು ಅವರು ವಾಚನ ಮಾಡ್ತಿದ್ದ ಕಾವ್ಯಕ್ಕೆ ಕೂಡ ಮೂರು ಮೂರು ಗಂಟೆ ಕೂತುಕೊಂಡು ಜನ ಕೇಳ್ತಾ ಇದ್ದರು. ಬಿ.ಎಂ.ಶ್ರೀ, ಗೋಕಾಕರ ಮಾತುಗಾರಿಕೆಗೆ ಬೆರಗಾಗಿ ನಾವು ಓಡಾಡ್ತಾ ಇದ್ದೆವು. ಹೀಗೆ ಆ ಕಾಲದಲ್ಲಿ ಏನೋ ಹೊಸದು ಸಂಭವಿಸ್ತಾ ಇದೆ ಅಂತ ಅನ್ನಿಸ್ತಾ ಇತ್ತು. ಅಷ್ಟೇ ಅಲ್ಲದೆ, ನಮ್ಮಂಥ ಯಾರಾದ್ರೂ ಹೊಸಬರು ಬರೆದರೆ ಕೂಡ ಪ್ರೀತಿಯಿಂದ ಮೆಚ್ಚುವಂಥ ತೀನಂಶ್ರೀ, ಪುತಿನ ಅಂಥಹವರು ಇದ್ದರು. ಇದು ಬಹಳ ಮುಖ್ಯವಾದದ್ದು. ಬರೆಯೋದು ಮುಖ್ಯ ಅಲ್ಲ. ನೀವು ಬರೆದಿದ್ದನ್ನು ಅದರಲ್ಲಿ originality ಇದೆಯೋ, ಇಲ್ಲವೋ, ಅದನ್ನ ಮೆಚ್ಚಿ, ಪ್ರೋತ್ಸಾಹಿಸಿ ನಿಮ್ಮನ್ನು ಮುಂದಕ್ಕೆ ತಂದ್ರಲ್ಲ. ಅದು ಬಹಳ ಮುಖ್ಯವಾದದ್ದು.

*ಕಿರಂನಾ* : *ಸಾಹಿತ್ಯಕ್ಕೂ, ಸಮಾಜಕ್ಕೂ ಇರತಕ್ಕಂತಹ ಅನನ್ಯವಾದ ಸಂಬಂಧವನ್ನು ಈ ಕಾಲದಲ್ಲಿ ನಾವು ಚರ್ಚೆ ಮಾಡ್ತಾ ಇದೀವಿ. ಹಾಗೆ ನೀವು ಕಾವ್ಯ ಬರೀತಾ ಇದ್ದ ಕಾಲದಲ್ಲಿ ಸಾಹಿತ್ಯ ಮತ್ತು ನಮ್ಮ ಸಮಾಜ ಜೀವನದ ಜೊತೆ ಸಂಬಂಧವನ್ನು ಕುರಿತು ಯಾವ ರೀತಿ ಚರ್ಚೆ ನಡೀತಾ ಇತ್ತು ?*

ಜಿ.ಎಸ್.ಎಸ್.: ಇಷ್ಟು ಗಟ್ಟಿಯಾಗಿ ಇಷ್ಟು ಒತ್ತುಕೊಟ್ಟು ಮಾತಾಡ್ತಾ ಇರಲಿಲ್ಲ ಅನ್ನೋದಂತೂ ನಿಜ. ಆದರೆ ಅವರಿಗೆ ಸಾಹಿತ್ಯದಲ್ಲಿ ಬಹಳ ಮುಖ್ಯವಾದ ಕಾಳಜಿಗಳು ಅಂತ ಹೇಳಿದ್ರೆ, ಗಾಂಧಿ ಯುಗದ ಆದರ್ಶಗಳು, ಮೌಲ್ಯಗಳು, ಆವೇಶಗಳು, ಇವೆಲ್ಲ ಅತ್ಯಂತ ಜ್ವಲಂತವಾಗಿದ್ದವು. ಹೀಗಾಗಿ ಮಾತೆತ್ತಿದರೆ ಮೌಲ್ಯನಿಷ್ಠವಾದ, ಮುಖ್ಯವಾಗಿ ಬರೀ ಸಾಮಾಜಿಕ ಮಾತ್ರ ಅಲ್ಲ. ಬೇರೆ ಬೇರೆ ರೀತಿ ಮನುಷ್ಯನ ಜೀವನ ಹಸನಾಗಬೇಕು, ದೊಡ್ಡದಾಗಬೇಕು, ಎತ್ತರವಾಗಬೇಕು, ಎಲ್ಲ ಕಡೆಯಿಂದ ನಾವು ನಮ್ಮ ಗಾಳಿ-ಬೆಳಕುಗಳನ್ನು ಬರಮಾಡಿಕೊಂಡು ನಮ್ಮ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳಬೇಕು ಈ ಬಗೆಯ ಕಾಳಜಿಗಳು ಅವತ್ತು ಪ್ರಮುಖವಾಗಿದ್ದವೇ ಹೊರತು ಸಮಾಜಕ್ಕೆ ಒತ್ತು ಕೊಡುವಂಥ ಪ್ರವೃತ್ತಿಗಳು ಅಷ್ಟಾಗಿ ಇರಲಿಲ್ಲ ಅಂತ ಹೇಳಬೇಕು.

*ಕಿರಂನಾ : ನೀವು ಪ್ರಧಾನವಾಗಿ ಕವಿಗಳು. ಕಾವ್ಯಮೀಮಾಂಸೆ, ವಿಮರ್ಶೆಯ ಕಡೆಗೆ ನಿಜವಾದ ಒಲವು ಬೆಳೆದಂತಹ ಕಾಲ ಯಾವುದು ಮತ್ತು ಯಾವ ಕಾರಣಕ್ಕಾಗಿ ನೀವು ಕಾವ್ಯದ ತತ್ತ್ವ ಮೀಮಾಂಸೆಯ ಕಡೆಗೆ ವಿಶೇಷವಾದ ಆಸಕ್ತಿಯನ್ನು ತೋರಿಸಿದ್ರಿ ?*

ಜಿ.ಎಸ್.ಎಸ್.: ಒಂದು ಕಡೆ ಕವಿತೆ ಬರೀತಾ ಇದ್ದ ಹಾಗೆ ಮತ್ತೊಂದು ಕಡೆ ಕವಿತೆಯನ್ನು ಕುರಿತು ಚಿಂತನೆಗೆ ಅವಕಾಶ ಕೊಡುವಂತಹ ಕಾವ್ಯಮೀಮಾಂಸೆಯನ್ನು ನಾನು ನನ್ನ ಹಿರಿಯರಿಂದ ಕೇಳಿದ್ದು. ಒಂದು ಕಡೆ ಕುವೆಂಪು ಮತ್ತೊಂದು ಕಡೆ ತೀನಂಶ್ರೀ, ಇವರಿಬ್ಬರು ನನ್ನ ಕಾವ್ಯಮೀಮಾಂಸೆಯನ್ನು ನೇರ ಮಾಡಿದಂಥವರು. ಮತ್ತಿಬ್ಬರ ಪ್ರಭಾವವೂ ನನ್ನಲ್ಲಿದೆ. ಕುವೆಂಪು ಅವರು ಕಾವ್ಯಮೀಮಾಂಸೆ ಅನೇಕ ರೀತಿಯ ಅದ್ಭುತವಾದ ಒಳನೋಟಗಳನ್ನು ಕೊಡ್ತಾ ಭಾರತೀಯ ಕಾವ್ಯಮೀಮಾಂಸೆಯನ್ನು ಹೊಸ ರೀತಿಯಲ್ಲಿ ವ್ಯಾಖ್ಯಾನ ಮಾಡಿದರು. ತೀನಂಶ್ರೀ ಅತ್ಯಂತ ಅಚ್ಚುಕಟ್ಟಾಗಿ, ನಿಷ್ಕೃಷ್ಟವಾಗಿ, ನಿರ್ದಿಷ್ಟವಾಗಿ, ಕಾವ್ಯ ಮೀಮಾಂಸೆಯ ಪರಿಕರಗಳನ್ನು ಕೊಡ್ತಾ ಇದ್ದರು. ಹೀಗೆ ಶ್ರೀಕಂಠಯ್ಯನವರಿಂದ ಕಂಡು ಬರುವ ಆ ನಿಷ್ಕೃಷ್ಟತೆ, ಕುವೆಂಪು ಅವರಿಂದ ಪಡೆದುಕೊಂಡ ಒಳನೋಟಗಳು ಇವೆರಡೂ ನನ್ನ ಕಾವ್ಯ ಮೀಮಾಂಸೆಯ ಬರಹಗಳಲ್ಲಿ ಕಾಣ್ತಾ ಇವೆ. ಅಷ್ಟೇ ಅಲ್ಲದೆ ನನಗೆ ಅಧ್ಯಾಪಕನಾದ್ದರಿಂದ ಅದು ಕಾವ್ಯವನ್ನು ಕುರಿತು ಇನ್ನೊಬ್ಬರಿಗೆ ತಿಳಿಸಬೇಕಾದರೆ ಕಾವ್ಯ ಮೀಮಾಂಸೆ ಅನ್ನೋದು ಸಹಜವಾಗಿ ಅದರ ಜೊತೆಗೇ ಬರೋಂಥದ್ದು. ಬೇರೆ ಅಧ್ಯಾಪಕರು ಏನು ಹೇಳ್ತಾರೋ ಗೊತ್ತಿಲ್ಲ. ಕಾವ್ಯದ ರಹಸ್ಯವನ್ನು, ಕಾವ್ಯದ ಪರಿಕರಗಳನ್ನು, ಕಾವ್ಯದ ತತ್ವಗಳನ್ನು ಕುರಿತು ನಾನು ವಿದ್ಯಾರ್ಥಿಗಳಿಗೆ ಪಾಠ ಮಾಡ್ತಾ ಮಾಡ್ತಾ ನನ್ನ ಕಾವ್ಯ ಮೀಮಾಂಸೆಯನ್ನು ಪರಿಕಲ್ಪನೆಗಳು ಅನೇಕ ವೇಳೆ, ಸ್ಪಷ್ಟವಾದವು. ಹೀಗಾಗಿ ೧೯೬೦ನೇ ಇಸವಿಯೊಳಗೆ ತೀನಂಶ್ರೀ ಅವರು ನನಗೆ ಪಾಶ್ಚಾತ್ಯ ಕಾವ್ಯಮೀಮಾಂಸೆ ಪಾಠ ಹೇಳಲು ನನ್ನ ಹಚ್ಚಿದ್ದರಿಂದ ನಾನು ಆ ಕಾಲದಲ್ಲಿ ಸಾಕಷ್ಟು ಓದಿಕೊಂಡು ಭಾರತೀಯ ಕಾವ್ಯಮೀಮಾಂಸೆ ಹಿನ್ನೆಲೆಯಿಂದ ನಾನು ನನ್ನ ಪರಿಸರದಲ್ಲಿ ಕಾವ್ಯಮೀಮಾಂಸೆ ಬಗ್ಗೆ ಪ್ರಾಥಮಿಕವಾದ ತಿಳುವಳಿಕೆ ಕೊಡುವ ಒಂದು ಕೃತಿಯನ್ನು "ವಿಮರ್ಶೆಯ ಪೂರ್ವ ಪಶ್ಚಿಮ" ಬರೆಯೋದಿಕ್ಕೆ ಸಾಧ್ಯ ಆಯ್ತು. ಹೀಗೆ ನನ್ನ ಪ್ರವೇಶ ಅಧ್ಯಾಪಕತನದಿಂದ ಕಾವ್ಯ ಮೀಮಾಂಸೆ ಒಳಗೆ ಆಗಿದ್ದು.

*ನರಹಳ್ಳಿ : ನಿಮಗೆ ಕವಿಯಾಗಿ ಒಂದು ವ್ಯಕ್ತಿತ್ವ ಇದೆ. ಹಾಗೇ ವಿಮರ್ಶಕರಾಗಿ, ಬಹಳ ಮುಖ್ಯ ವಿಮರ್ಶಕರಲ್ಲಿ ಒಬ್ಬರು. ಕಾವ್ಯಮೀಮಾಂಸೆ ಬಗ್ಗೆ ಬಹಳ ಪ್ರಮುಖವಾದ ಕೊಡುಗೆಯನ್ನು ನೀಡಿದ್ದೀರಿ. ಈ ಮೂರೂ ವ್ಯಕ್ತಿತ್ವಗಳು ಪರಸ್ಪರ ಒಟ್ಟು ನಿಮ್ಮ ಕಾವ್ಯ ರಚನೆಗೆ ಪೂರಕವಾಯ್ತಾ ? ಅದರ ನಡುವೆ ಘರ್ಷಣೆಗಳೇನಾದರೂ..... ಸಂಭವಿಸ್ತಾ?*

ಜಿ.ಎಸ್.ಎಸ್.: ಎಲ್ಲವೂ ಸಾಹಿತ್ಯದ ಕೆಲಸವೇ, ಘರ್ಷಣೆಯೇ ಇಲ್ಲ. ಕಾವ್ಯವನ್ನು ಬರೆಯುವುದು ಎಷ್ಟು ಮುಖ್ಯವಾದ ಕೆಲಸವೋ, ಕಾವ್ಯವನ್ನು ಕುರಿತು ಪಾಠ ಮಾಡೋದೂ ಅಷ್ಟೇ ಮುಖ್ಯವಾದ ಕೆಲಸ. ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡೋದು ಅಷ್ಟೇ ಮುಖ್ಯವಾದ ಕೆಲಸ ಮತ್ತು ಕಾವ್ಯ ಮೀಮಾಂಸೆ ಕುರಿತು ಚಿಂತನೆ ಮಾಡೋದು ಕೂಡ ಅಷ್ಟೇ ಮುಖ್ಯವಾದ ಕೆಲಸ.

*ಕಿರಂನಾ : ನಮ್ಮ ಕುತೂಹಲ ಕವಿಯಾಗಿ ಪಾಶ್ಚಾತ್ಯ ಮತ್ತು ಭಾರತೀಯ ಚಿಂತನೆಗಳ ಬಗೆಗೆ ವಿಶೇಷವಾದ ಆಸಕ್ತಿ ತೊಗೊಂಡಂಥ ನೀವು ಹ್ಯಾಗೆ ಅದನ್ನು ಅಂದ್ರೆ ಕಾವ್ಯ ತತ್ತ್ವವನ್ನು ನಿಮ್ಮ ಕಾವ್ಯಸೃಷ್ಟಿಯೊಂದಿಗೆ ಅನುಸಂಧಾನ ಮಾಡಿದ ಪ್ರಭಾವ? ಅದನ್ನು ಕೇಳಬೇಕು.*

ಜಿಎಸ್.ಎಸ್.: ಕಾವ್ಯವನ್ನು ಕುರಿತು ಬುದ್ಧಿಪೂರ್ವಕವಾಗಿ ವಿಚಾರ ಮಾಡುವ ಹಂತವೇ ಬೇರೆ. ಕಾವ್ಯವನ್ನು ಬರೆಯೋ ಹಂತವೇ ಬೇರೆ. ಯಾರೂ ಕಾವ್ಯಮೀಮಾಂಸೆ ಓದಿಕೊಂಡು ಆ ತತ್ತ್ವಗಳ ಹಿನ್ನೆಲೆಯಲ್ಲಿ ಕಾವ್ಯ ಬರೆಯಲು ಹೋಗೋದಿಲ್ಲ. ಆದರೆ ಕಾವ್ಯಮೀಮಾಂಸೆಯ ತಿಳುವಳಿಕೆ, ಆ ಪರಿಕಲ್ಪನೆಗಳು ಏನಿರ್ತವೆ ಬಹುಶಃ ಅದು ನಾವು ಬರೆಯುವ ಕಾವ್ಯದ ಕ್ರಿಯೆ ಮೇಲೂ ಪರೋಕ್ಷವಾದ ಪರಿಣಾಮವನ್ನು ಬೀರ್ತಾ ಇರ್ತದೆ ಅಂತ ಕಾಣುತ್ತೆ. ಅಷ್ಟೇ ಹೊರತಾಗಿ ಈ ಒಂದು ಕಡೆ ಕಾವ್ಯ ಮೀಮಾಂಸೆ ಪಾಠವನ್ನು ನಾವು ಚರ್ಚೆ ಮಾಡ್ತಾ ಕಾವ್ಯಸ್ಥ ಸೃಷ್ಟಿ ಕುರಿತೇ ಚಿಂತನೆ ಮಾಡತಕ್ಕದ್ದು. ಕಾವ್ಯ ಬರೆಯೋದು ಕೂಡ ಕಾವ್ಯದ ಕೆಲಸ.

*ಕಿರಂನಾ. : ಕಾವ್ಯವೇ.... ಮೀಮಾಂಸೆಗೆ.. ಆಕರ*

*ನರಹಳ್ಳಿ : ಇಲ್ಲೇ ಒಂದು ಪ್ರಶ್ನೆ. ಕಾವ್ಯ ಮೀಮಾಂಸೆಯ ಸೃಷ್ಟಿಯ ರಹಸ್ಯವನ್ನು ಕುರಿತು ಯೋಚನೆ ಮಾಡಿರೋದ್ರಿಂದ ನಾಲ್ಕು ದಶಕಗಳು ಕಾವ್ಯವನ್ನು ಬರೀತಾ ಇರೋದ್ರಿಂದ ವೈಯುಕ್ತಿಕವಾಗಿ ನಿಮ್ಮ ಕಾವ್ಯರಚನೆ process ಹೇಗೆ? ಇದು ವಿವರಿಸೋದು ಕಷ್ಟ ಅಂತ ನನಗೆ ಗೊತ್ತು. ಆದರೆ ಕುತೂಹಲಕ್ಕೆ ಕೇಳ್ತಾ ಇದೀನಿ ಒಬ್ಬೊಬ್ಬ ಕವಿಯಲ್ಲೂ ಒಂದೊಂದು ರೀತಿಯಲ್ಲಿ ಇರಬಹುದು.*

*ಕಿರಂನಾ : ಸಾರ್ ನಾವು ಆ Creative process ಬಗ್ಗೆ ನೀವು ಬರೆದಿರುವ ಕವಿತೆಗಳನ್ನು ಓದಿಕೊಂಡಿದೀವಿ. ಅಲ್ಲಿ ನೀವು ಕಾವ್ಯವನ್ನು ಕುರಿತೇ ವಿಚಾರ ಮಾಡಿದ್ದೀರಿ. ಅದನ್ನು ನೀವು ಅಲ್ಲಿ ಚಿಂತನೆ ಮಾಡಿದ್ದಕ್ಕಿಂತ ಭಿನ್ನವಾಗಿ ಏನಾದ್ರೂ .... ಕೇಳ್ತೀರಾ..*

*ನರಹಳ್ಳಿ : ಯಾಕಂದ್ರೆ... ಮೊದಲ ಸಂಕಲನದಿಂದ ಇತ್ತೀಚಿನ ಪದ್ಯದವರೆಗೂ ಆ ಥರ ಪದ್ಯಗಳು ನಿಮ್ಮಲ್ಲಿ ಸಿಗುತ್ತೆ. ಸಾರ್, ಸಾಮಗಾನದಿಂದ ಓಡಿದು ಈ ಹೊತ್ತಿನ ೧೨ನೇ ಸಂಕಲನ "ಚಕ್ರಗತಿ"ವರೆಗೂ.....*

ಜಿ.ಎಸ್.ಎಸ್.: ಕಾವ್ಯಕ್ಕೆ ಬೇರೆ ಬೇರೆ ವಸ್ತುಗಳು ಹೇಗೋ ಕಾವ್ಯ ನಿರ್ಮಿತಿಯೂ ಕೂಡ ಒಂದು ವಸ್ತು. ಅದನ್ನು ಕುರಿತು ಅನೇಕ ಕವಿತೆಗಳು ಬರೆದ್ದೆವು. ಕಾವ್ಯ ಅನ್ನೋದು ಕವಿಗೆ ತಿಳಿಯದ ಒಂದು ನೆಲೆಯಿಂದ ಅವನ ಮೇಲೆ ಒಂದು ರೀತಿ ಒತ್ತಡ ತರ‍್ತದೆ. ಕಾವ್ಯದ ಅರೂಪವಾದ ಅನುಭವ ದ್ರವ್ಯ ಕವಿಯಲ್ಲಿ ಹೇಗೆ ರೂಪುತಾಳ‍್ತದೆ, ಆ ಕಾಲದ ಅನುಭವಗಳೇನು, ಸಂಘರ್ಷಗಳೇನು, ನನ್ನ ಕಾವ್ಯದ ಕಲ್ಪನೆಯೇನು ಇಂಥ ಅನೇಕ ಪದ್ಯಗಳನ್ನು ನಾನು ನನ್ನ ಕಾವ್ಯ, ಕಾವ್ಯ ಮೀಮಾಂಸೆಯಲ್ಲಿ ಬರೆದಿದ್ದೇನೆ. So ಈ ದೃಷ್ಟಿಯಿಂದ ನೋಡಿದಾಗ ಸುಮ್ಮನೆ ನಿರ್ದಿಷ್ಟವಾದ ಉದಾಹರಣೆ ತೊಗೊಂಡ್ರೆ ; ಅನೇಕ ವೇಳೆ ಕಾವ್ಯಕ್ಕೆ ನಾನುಕಂಡ ಯಾವುದೋ ವಸ್ತು, ಕೆಲವು ವೇಳೆ ಪ್ರತಿಕ್ರಿಯೆ ಆಗಿರಬಹುದು, ಕೆಲವು ವೇಳೆ ಯಾವುದೋ ಒಂದು ವಸ್ತು ಬಹಳ ಕಾಲದವರೆಗೂ ಕೂತ್ಕೊಂಡು ಇಳಿದು ಅನೇಕ ವರ್ಷಗಳ ಕಾಲ ಹದಗೊಂಡು, ಆ ಮೇಲೆ ಬರೀಬಹುದು. ಹೀಗೆ ನಾನು ಕೆಲವು ಪದ್ಯಗಳನ್ನು ಅನೇಕ ವರ್ಷ ತೊಗೊಂಡು ಬರ‍್ದಿದೀನಿ. ಇತ್ತೀಚೆಗೆ ಬರೆದ ಅಸ್ತಮಾ ಅನ್ನೋ ಪದ್ಯ ಸುಮಾರು ಅನೇಕ ವರ್ಷಗಳ ಹಿಂದಿನ ಒಂದು ಪದ್ಯ. ಆದ್ದರಿಂದ ಕಾವ್ಯದ ವಸ್ತುಗಳು ಯಾವ ಸಂದರ್ಭದಲ್ಲಿ ಯಾವ ಪರಿಸ್ಥಿತಿಯೊಳಗೆ ಬರುತ್ವೆ ಅನ್ನೋದನ್ನು ಹೇಳೋಕೆ ಸಾಧ್ಯವೇ ಇಲ್ಲ ಕಾವ್ಯ ಅನ್ನೋದು ಒಂದು ರಹಸ್ಯ. ಮೂಲಭೂತವಾಗಿ ರಹಸ್ಯವೇ ಅದು. ಆದ್ದರಿಂದ ನನ್ನ ಸುತ್ತಮುತ್ತ ಕಾಣುವಂತಹ ವಸ್ತುಗಳಲ್ಲಿ ಉದಾ : ಛತ್ರಿ, ಛತ್ರಿ ನಾವೆಲ್ಲ ನಾವು ನೋಡಿದೀವಿ. ಆದರೆ ನನಗೆ ಒಂದು ಸಾರಿ ಅನ್ನಿಸಿತು. ಗಂಡುಛತ್ರಿ ಹೆಣ್ಣುಛತ್ರಿ, ಅಂತ ವ್ಯತ್ಯಾಸ ... ವ್ಯತ್ಯಾಸ ... ಅಂದ್ರೆ... ಗಂಡುಛತ್ರಿ? (Question mark) ಹೆಣ್ಣು ಛತ್ರಿ ! (exclamatory) ಅಂತ ಅನ್ನಿಸ್ತು. ಮತ್ತೆ ಇದರೊಳಗೆ ಏನಾದ್ರೂ ಅರ್ಥ ಇರಬಹುದೇನೋ ಅಂತ.

ಅಂದ್ರೆ ನಮ್ಮ ಕಣ್ಣಿಗೆ ಕಂಡದ್ದು, ಮನಸ್ಸಿಗೆ ಮುಟ್ಟಿದ್ದು ಅದು ನನ್ನಲ್ಲಿ ಪ್ರಚೋದಿಸಿದ ಭಾವನೆ ಇದೆಲ್ಲವೂ ಕೂಡ ವಿಲಕ್ಷಣ ರೀತಿಯಲ್ಲಿ ಅರಿಯದ ಯಾವುದೋ ಭಾವನೆ ಕಾವ್ಯವಾಗಿ ರೂಪುಗೊಳ್ಳುವ ಕ್ರಿಯೆಯನ್ನು ನನ್ನ ಕವಿತೆಗಳಲ್ಲಿ ಕಾಣಬಹುದು.

*ಕಿರಂನಾ : ಇದೆಲ್ಲ ರಹಸ್ಯ ಸರಿ ಸರ್. ಕಾವ್ಯಕ್ಕೆ ಭಾಷೆ ಬಹಳ ಮುಖ್ಯವಾದಂಥ ನೆಲೆ. ನೀವು ಆಧುನೀಕರಣಗೊಳ್ತಾ ಇರತಕ್ಕಂತಹ ಇವತ್ತಿನ ಕನ್ನಡ ಭಾಷೆ ಮಧ್ಯೆ ನಿಂತು ಕಾವ್ಯವನ್ನು ಬರೀತಾ ಇರೋಂಥವರು. ಬಹಳ ಕ್ಷಿಪ್ರವಾಗಿ ಬದಲಾವಣೆ ಆಗ್ತಾ ಇದೆ. ವೇಗವಾಗಿ ಬದಲಾವಣೆ ಆಗ್ತಾ ಇದೆ. ಉಪಕರಣಗಳು, ಸಾಧನಗಳಿಂದ ನಾವು ಆವೃತರಾಗಿದ್ದೇವೆ. ಇಂತಹ ಒಂದು ಪರಿಸರದ ಮಧ್ಯೆ ನಿಂತಂತಹ ಕವಿ ಎದುರಿಸುವ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು... ಹೇಳಿ.*

ಜಿ.ಎಸ್.ಎಸ್.: ಕಾವ್ಯಕ್ಕೆ ಒಂದು ಚರಿತ್ರೆ ಇರೋ ಹಾಗೆ ಭಾಷೆಗೂ ಒಂದು ಚರಿತ್ರೆ ಇದೆ. ಮತ್ತು ಅವೆರಡರ ಸಂಬಂಧ ಅವಿನಾ ಸಂಬಂಧವೇ. ಯಾಕೇಂದ್ರೆ, ಕಾವ್ಯ ಅನ್ನೋದು ಭಾಷೆಯಲ್ಲೇ ಸಂಭವಿಸುತ್ತದೆ. ಈ ಭಾಷೆ ಅನ್ನೋದು ಮೂಲತಃ ಒಂದು ಸಾಮಾಜಿಕ ಮಾಧ್ಯಮ. ಸಮಾಜದ ಒಬ್ಬ ವ್ಯಕ್ತಿಯಾಗಿ ಸಾಮಾಜಿಕ ಭಾಷೆ ಬಳಸುವ ಕವಿ ಎಲ್ಲ ಕಾಲದಲ್ಲೂ ಅವತ್ತವತ್ತಿನ ಭಾಷೆಯ ಸ್ವರೂಪವನ್ನು ದುಡಿಸಿಕೊಳ್ತಾನೆ. ಉದಾ: ಪಂಪನ ಕಾಲ; ಅವನು "ಪುಲಿಗೆರೆಯ ತಿರುಳ್ಗನ್ನಡದ ಭಾಷೆಯಲಿ ಕವಿತೆಯನೊರೆವಾ" ಅಂತಾನೆ. ಅವನ ಕಾಲದ ಭಾಷೆಯ ಸ್ವರೂಪ ಅವನಿಗೆ ಗೊತ್ತಿತ್ತು. ಹಾಗೇ ಈ ಭಾಷೆ ಅಂತ ಅನ್ನೋದು ಉದ್ದಕ್ಕೂ ಬದಲಾಗ್ತಾ ಬಂದಿದೆ. ಇವತ್ತು ಯಾವುದೇ ಕವಿಯನ್ನು ಕುರಿತು ಸಾಹಿತ್ಯ ಚರಿತ್ರಕಾರರು ಅವನ ಕಾಲವನ್ನು ನಿರ್ಣಯ ಮಾಡಬೇಕಾದ್ರೆ ಮೂಲಭೂತವಾಗಿ ಹಿಡಿಯೋದು ಭಾಷೆಯನ್ನು. ಭಾಷೆಯ ಸ್ವರೂಪ ಕೂಡ ಸ್ವರೂಪದ ಮೇಲೆ ಅವನು ಈ ಕಾಲಕ್ಕೆ ಸಂಬಂಧಪಟ್ಟವನು ಅಂತ.

ಅಂತರಗಳಾಗ್ತವೆ ಕಾಲದಿಂದ ಕಾಲಕ್ಕೆ. ಬದಲಾವಣೆ ಆಗುತ್ತೆ. ನೀವು ಹೇಳೋ ಹಾಗೆ ಇವತ್ತೂ ಬದಲಾವಣೆ ಇದೆ. ನಾನು ಒಂದು ಭಾಷೆಯ ಸಂದರ್ಭದಲ್ಲಿ ಕೆಲಸ ಮಾಡ್ತಾ ಇರೋದ್ರಿಂದ ಸಮಕಾಲೀನ ಭಾಷೆಗೆ ಮಾತ್ರ ಸಂಬಂಧಪಟ್ಟವನಲ್ಲ ನಾನು. ಅದಕ್ಕೆ ನನ್ನ ಹಿಂದೆ ಒಂದು ಭಾಷೆ ಪರಂಪರೆ ಇದೆ. ಪಂಪ ಬಳಸಿದ ಭಾಷೆ, ಕುಮಾರವ್ಯಾಸ ಬಳಸಿದ ಭಾಷೆ, ರತ್ನಾಕರ ಬಳಸಿದ ಭಾಷೆ, ವಚನಕಾರರ ಭಾಷೆ ಹೀಗೆ ಭಾಷೆಗೆ ಒಂದು tradition ಇದೆ. Language tradition ಆದ್ದರಿಂದ ಒಬ್ಬ ಸಮಕಾಲೀನ ಕವಿ ತನ್ನ ಸಮಕಾಲೀನ ಸಾಹಿತ್ಯದ ಸಂದರ್ಭದ ಭಾಷೆಗೆ ಎಚ್ಚರಗೊಳ್ಳುತ್ತಲೆ ಅವನ ಹಿಂದೆ ಶತಮಾನಗಳ ಭಾಷೆಯ ಒತ್ತಡ ಕೂಡ ಇರ್ತದೆ. ಈ ಎರಡೂ ಸಂಘರ್ಷದಿಂದಾನೇ ಆತ ತನ್ನ ಭಾಷೆಯನ್ನು ರೂಪಿಸಿಕೊಳ್ಳಬೇಕಾಗುತ್ತೆ. ಆಮೇಲೆ ನೀವು ಹೇಳೋ ಹಾಗೆ ಭಾಷೆ ಅನೂಹ್ಯವಾದ ರೀತಿ ಬದಲಾಗ್ತಾ ಇದೆ. ಖಂಡಿತವೂ ಕೂಡ. ಬದಲಾಗುವ ಭಾಷೆಯನ್ನೂ ಕೂಡ ಒಬ್ಬ ನಿಜವಾದ ಸಾಹಿತಿ ತನ್ನ ಅಭಿವ್ಯಕ್ತಿಯ ಮಾಧ್ಯಮ ಮಾಡ್ಕೊಳ್ಳಬೇಕು. ಹಾಗೆ ಮಾಡ್ಕೊಳ್ಳುವಾಗ ಅವನು ಪ್ರಜ್ಞಾಪೂರ್ವಕವಾಗಿ ಈ ಭಾಷೆಯನ್ನು ಉಪಯೋಗಿಸಬೇಕೋ, ಆ ಭಾಷೆಯನ್ನು ಉಪಯೋಗಿಸಬೇಕೋ ಅನ್ನೋದಿಲ್ಲ. ಅವನು ಯಾವುದೋ ಒಂದು ವಸ್ತು ತೊಗೊಳ್ತಾನೆ ಅಂತ ಇಟ್ಕೊಕೊಳ್ಳಿ. ಅದಕ್ಕೆ ಅನುಸಾರವಾಗಿ ಅವನು, ಆ ಭಾಷೆಯನ್ನು ಒದಗಿಸ್ತಾನೆ. ಯಾವ ಕವಿ ಭಾಷೆಯ ಪರಂಪರೆಯನ್ನು ಬಲ್ಲನೋ ಮತ್ತು ಯಾರಿಗೆ ಭಾಷೆಯ ಪರಂಪರೆ ಎಷ್ಟು ವಿಧೇಯವಾಗಿದೆಯೋ ಮತ್ತು ಯಾರಿಗೆ ಸಮಕಾಲೀನವಾದ ಭಾಷೆ ಅವಸ್ಥೆ, ಅಂತರಗಳು ಪರಿಚಿತವಾಗಿದೆಯೋ ಇವೆಲ್ಲವೂ ಕೂಡ ಒಂದು ರೀತಿಯಲ್ಲಿ ಅವನ ಅಭಿವ್ಯಕ್ತಿಯ ಸಂದರ್ಭದಲ್ಲಿ

ಒದಗಿ ಬರ್ತದೆ. ಇದಕ್ಕೋಸ್ಕರ ಪ್ರತ್ಯೇಕವಾಗಿ ಈ ಕಾಲದ ಭಾಷೆಯನ್ನು ಅಭಿವ್ಯಕ್ತ ಮಾಡೋಕೆ ಬರೀತೀನಿ ಅಂತ ಯಾರೂ ಬರೆಯೋದಿಲ್ಲ. ನನಗೆ ನನ್ನ ಒಂದು ಕವಿತೆಯಲ್ಲಿ, "Wrong numberಗೆ telephone ಮಾಡಿ ಉತ್ತರಕ್ಕೆ ಕಾಯುತ್ತೇವೆ" ಅಂತ ಬರುತ್ತೆ ಇಲ್ಲಿ Wrong number ಪದ ಬಂತು. ಅದನ್ನು ಬೇರೆ ಅನುವಾದ ಮಾಡಕ್ಕೆ ಆಗಲ್ಲ. ಅಂದ್ರೆ ಮನುಷ್ಯ ಮನುಷ್ಯನ ನಡುವೆ ಸಂಬಂಧ ಎಷ್ಟು ಕೆಟ್ಟು ಹೋಗಿವೆ ಎಂಬುದಕ್ಕೆ ಈ ಸಂವೇದನೆ ಹೇಳೋದಿಕ್ಕೆ ಆ ಸಾಲು ಬಳಸಿದ್ದೆ. ಇಲ್ಲಿ ನೀವು ಹೇಳೋ ಹಾಗೆ ಆಧುನಿಕ ಪರಿಭಾಷೆಯ ಒಂದು idiomನ ನಾನು ಬಳಸೋಕೆ ಸಾಧ್ಯವಾಯ್ತು. ಆದ ಕಾರಣ ನಿಜವಾದ ಕವಿ ಪ್ರತಿಯೊಂದು ಕಾಲದ ಭಾಷೆಯ ಸೂಕ್ಷ್ಮಗಳನ್ನು, ಅದರ ಆಯಾಮಗಳನ್ನು, ಅದರ ವೈವಿಧ್ಯಗಳನ್ನು ಅವನು ಸಹಜವಾಗಿಯೇ ತನ್ನ ಸೃಷ್ಟಿಯ ಪ್ರಕ್ರಿಯೆಯೊಳಗೆ ಒಳಗೊಂಡಿರ್ತಾನೆ. ಅಷ್ಟೇ ಅಲ್ಲದೆ ಭಾಷೆ ಕೂಡ ನಮ್ಮ ಕಾವ್ಯ ಮೀಮಾಂಸೆ ಹೇಳೋ ಹಾಗೆ ಒಂದು ರೀತಿ ಪ್ರತಿಭೆಯ imaginationಗೆ ಸಿಕ್ಕಿ ಪರಿವರ್ತಿತ ಆಗ್ತಾ ಇರ್ತದೆ. ಆ ಪರಿವರ್ತಿತವಾದ ಭಾಷಾ ಸೂಕ್ಷ್ಮದೊಳಗೆ ನೀವು ಈ ಭಾಷೆಯ ಲಕ್ಷಣಗಳನ್ನು ಕೂಡ ಗುರುತಿಸೋದಿಕ್ಕೆ ಸಾಧ್ಯ. ಆದ್ದರಿಂದ ಯಾವುದೇ ಕಾಲದ ಕವಿ ತನ್ನ ಭಾಷೆಯೊಂದಿಗೆ, ಮುಖಾಮುಖಿಯನ್ನು ಮಾಡ್ಕೊಳ್ತ, ಆ ಭಾಷೆಯ ಸ್ವರೂಪವನ್ನು ತನ್ನ ಅಭಿವ್ಯಕ್ತಿಗೆ ತಕ್ಕ ಮಾಧ್ಯಮವನ್ನಾಗಿ ರೂಪಿಸಿಕೊಳ್ಳುವ ಪ್ರಯತ್ನ.

*ನರಹಳ್ಳಿ : ಸರಿ ಸಾರ್. ಭಾಷೆಗೆ ತನ್ನದೇ ಆದ ಪರಂಪರೆ ಇದೆ. ಕವಿಯ ಪರಂಪರೆಯ ಹಿನ್ನೆಲೆಯಲ್ಲಿ ಅದನ್ನು ಬಳಸಿಕೊಳ್ತಾನೆ ಅಂತ. ಕಿರಂ ಅವರು ಕೇಳಿದ ಪ್ರಶ್ನೆಗೆ ಪೂರಕವಾಗಿ ಈ ಪ್ರಶ್ನೆ. ಈ ಹೊತ್ತು ಆಧುನಿಕ ಸಂದರ್ಭದಲ್ಲಿ ಈ ಸಮಾಜ ಭಾಷೆಯನ್ನು ಬಳಸ್ತಿದೆ, ಬಳಸ್ಕೊಳ್ತಾರೆ. ಈ ಭಾಷೆಯನ್ನು ಬಳಸ್ತಾ ಬಳಸ್ತಾ ಯಾವುದು ನಿಜ ಯಾವುದು ಸುಳ್ಳು ಅನ್ನೋದನ್ನ ವಿಶ್ಲೇಷಿಸಲಿಕ್ಕೆ ಸಾಧ್ಯ ಆಗದ ಹಾಗೆ ಭಾಷೆ ಬಳಕೆ ಆಗ್ತಾ ಇದೆ. ಉದಾಹರಣೆಗೆ ; ಕೆಲವು ಪದಗಳು ನಿಜವಾದ ಅರ್ಥದಲ್ಲಿ ಅರ್ಥವನ್ನು ಕಳ್ಕೊಂಡು ಸವಕಲಾಗಿದೆ. ಎಷ್ಟು ಅಂದ್ರೆ ಒಂದು ರೀತಿ ಬರ್ತಾ ಬರ್ತಾ ಭಾಷೆ ಕೊಡುವ ಅರ್ಥ ಸಂಪತ್ತೇ ದುರ್ಬಲ ಆಗ್ತಾ ಇದೆ. ಇಲ್ಲಿ ಕವಿ ಮಾಡೋದು ?*

ಜಿ.ಎಸ್.ಎಸ್.: ಕವಿ Poet has to recreate the language. If it is a real creation ಅವನು ಭಾಷೆಯನ್ನು ಸೃಷ್ಟಿಸಬೇಕಾಗ್ತದೆ. ಸೃಷ್ಟಿಸಿದಾಗ ನೀವು ಈ ಕ್ಲೀಷೆ ಗೀಷೆ... ಅರ್ಥ ಇದರಿಂದ ಪಾರಾಗೋ ಅಂಥ ಒಂದು ಪ್ರಯತ್ನವನ್ನೂ ಕಾಣಬಹುದು.

*ಕಿರಂ. : Infact ಕಾವ್ಯದ ನಿಜವಾದ function ನಿಯೋಗವೇ ಈ ರೀತಿಯಾದಂಥ ಕ್ಲೀಷೆಗೆ ಅಥವಾ ಒಂದು ರೀತಿ ಅರ್ಥವನ್ನು ಕಳೆದು ಕೊಳ್ಳುವ ಭಾಷೆಗೆ*

*ಹೊಸ ರೀತಿಯ ಸೂಕ್ಷ್ಮತೆ ತಂದು ಕೊಡುವಂತಹ ಕ್ರಿಯೆ. ಏಕೆಂದ್ರೆ ಕವಿ ಅಂತಹ ಭಾಷೆಯನ್ನು ಮತ್ತು dialectನ ಮತ್ತೆ ಮತ್ತೆ ಹೊಸ ರೀತಿಯಲ್ಲಿ ವಿನ್ಯಾಸಗೊಳಿಸ್ತಾನೆ.*

ಜಿಎಸ್.ಎಸ್. : ವಚನಗಳನ್ನು ನೋಡಿ. ಭಾಷೆ ಹಳೇದು ಅನ್ನಿಸುತ್ತಾ ? ಸಾಧ್ಯವೇ ಇಲ್ಲ. ಅಷ್ಟರ ಮಟ್ಟಿಗೆ ಅದು ಅನುಭವದಲ್ಲಿ ಮತ್ತು ಒಂದು creative tranformation ಪಡೆದಿದೆ. ಅದರಿಂದ ಯಾವ ಭಾಷೆ ನಿಜವಾಗಿ ಕೂಡ ಸೃಜನಾತ್ಮಕವಾಗಿ ಬಳಸಲ್ಪಡುತ್ತದೆಯೋ ಅದು ಹೊಳಪು ಕಳೆದುಕೊಳ್ಳವುದಿಲ್ಲ. ಇವತ್ತಿಗೂ ಬಿ.ಎಂ.ಶ್ರೀ ಅವರ ಇಂಗ್ಲಿಷ್ ಗೀತೆಗಳು ಹಾಗೇ ಇವೆ. ವಚನಗಳು ಹಾಗೇ ಇವೆ. ಪಂಪನ ಭಾಷೆ ಹೊಳಪು ಕಳಕೊಳ್ಳಲ್ಲ. ಯಾಕೆಂದರೆ ಅಲ್ಲಿ ಸೃಜನಾತ್ಮಕತೆ ಇದೆ.

*ಕಿರಂನಾ : ಸರ್, ಈಗ ನೀವು ಹೊಸಗನ್ನಡದಲ್ಲಿ ಸಾಹಿತ್ಯದ ಚಳುವಳಿಗಳ ಸ್ವರೂಪವನ್ನು ನೋಡಿದೀರಿ. ನೀವೇ ನವೋದಯ ಸಾಹಿತ್ಯದ ಸಂಬಂಧದಲ್ಲಿ ಆನಂತರದ ನವ್ಯ ಸಾಹಿತ್ಯ ಮತ್ತು ಈ ಹೊತ್ತಿನ ಸಾಹಿತ್ಯಕ ಚಳುವಳಿಯ ಜೊತೆಯಲ್ಲಿ ಸಂಪರ್ಕವನ್ನು ಇಟ್ಕೊಂಡಿದೀರಿ. ಲೇಖಕರಾಗಿ ನೀವು ನಿಮ್ಮ ಹಿರಿಯ, ಸಮಕಾಲೀನ ಲೇಖಕರು ಮತ್ತು ನಿಮ್ಮ ಸಮಕಾಲೀನರು ಆನಂತರದ ಯುವ ಪೀಳಿಗೆ ಇವರ ನಡುವೆ ನೀವು ಲೇಖಕರಾಗಿ ಪಾಲ್ಗೊಂಡಿರುವಂಥ ವಿಚಾರವನ್ನು ಸ್ವಲ್ಪ ಹೇಳಿ.*

ಜಿ.ಎಸ್.ಎಸ್.: ನಾನು ಬರೆಯೋದಕ್ಕೆ ಪ್ರಾರಂಭ ಮಾಡಿದ್ದೇ ನವೋದಯದ ಉತ್ಕರ್ಷ ಕಾಲದಲ್ಲಿ. ಆವಾಗಲೇನೇ ಕುವೆಂಪು, ಬೇಂದ್ರೆ, ಪುತಿನ ಮುಂತಾದವರು ಕೆಲವು ಕಾವ್ಯದ ಮಾದರಿಗಳನ್ನು ಸಿದ್ಧ ಪಡಿಸಿದ್ದರು. ಇಂಥಾ ಸಂದರ್ಭದಲ್ಲಿ ಬರೆಯೋನಿಗೆ ಬಹಳ ಕಷ್ಟ. ಯಾಕೇಂದ್ರೆ ಒಂದು ಉಜ್ವಲವಾದ ಸಾಹಿತಿಗಳ ಪ್ರಭಾವಳಿಯ ಮಧ್ಯೆ ಹೊಸದಾಗಿ ಬರೆಯೋನು ಒಬ್ಬ ಪ್ರವೇಶ ಮಾಡಿದ ಕೂಡಲೇ ಅವನಿಗೆ ಎದುರಾಗುವ ಸಮಸ್ಯೆ ಅಂದ್ರೆ ಅದರ ಪ್ರಭಾವಕ್ಕೆ ಒಳಗಾಗುವುದು ಇಲ್ಲಾ ಅದರಿಂದ ತಪ್ಪಿಸಿಕೊಳ್ಳೋದು. ಇದು ಮುಖ್ಯವಾದ ಪ್ರಶ್ನೆ. ಇದನ್ನು ನಾನು ಎದುರಿಸಬೇಕಾಯ್ತು. ಸಹಜವಾಗಿಯೇ ನಾನು ಕುವೆಂಪು ಅವರ ಶಿಷ್ಯನಾದ್ದರಿಂದ ಅವರ ಕಾವ್ಯದ ಬಗ್ಗೆ, ವ್ಯಕ್ತಿತ್ವದ ಬಗ್ಗೆ ಗಾಢವಾಗಿ ಒಲವು ಇಟ್ಕೊಂಡಿದ್ರಿಂದ ಸಹಜವಾಗಿಯೇ ನನ್ನ ಕಾವ್ಯದ ಮೊದಲ ಹಂತ ಕುವೆಂಪು ಅವರ ದಟ್ಟವಾದ ಪ್ರಭಾವಗಳಿಂದ ತುಂಬಿದೆ ಅನ್ನೋದು ಕಾಣುತ್ತೆ. ಆ ದಟ್ಟವಾದ ಪ್ರಭಾವ ಎಲ್ಲ ರೀತಿಯಿಂದಲೂ ಅಲ್ಲ. ಬಹುಶಃ ಕೆಲವು ವಿಷಯಗಳಲ್ಲಿ ಮಾತ್ರ ಅಂತ ಕಾಣ್ತದೆ. ಹೀಗಾಗಿ ನನ್ನ ೧೯೪೭ ರಿಂದ ೫೧ರವರೆಗೆ ಬರೆದ ಪದ್ಯಗಳಿರುವ 'ಸಾಮಗಾನ' ಸಂಕಲನವನ್ನು ತೊಗೊಂಡಾಗ, ಅಲ್ಲಿ ಕುವೆಂಪು ಅವರ ಪ್ರಭಾವ ಕಾಣಿಸೋದು ಆದರ್ಶಪರವಾದ ನಿಲುವುಗಳಲ್ಲಿ. ಅಷ್ಟೇ ಹೊರತಾಗಿ ಉಳಿದ ಹಾಗೆ ಅಲ್ಲಿ

ನಾನು ಅವರಿಂದ ಬೇರೆಯಾಗುವ ಒಂದು ಪ್ರಯತ್ನವನ್ನು ನಡೆಸಿದ್ದ ಹಾಗೆ ನನಗೆ ಕಾಣ್ತಾ ಇದೆ. ಹೀಗಾಗಿ ಎಲ್ಲೋ ಒಂದು ಸೂಕ್ಷ್ಮವಾಗಿ ಅದರಿಂದ ಬಿಡಿಸಿಕೊಳ್ಳೋದು ಹೇಗೆ ಅನ್ನೋದು ಮುಖ್ಯವಾಗಿತ್ತು. ಮತ್ತು ಆ ಕಾಲದ ಕಾವ್ಯ ಅನ್ನೋದು ತುಂಬಾ ಆಕರ್ಷಕವಾದ ಕಾವ್ಯ. ತಪ್ಪಿಸಿಕೊಳ್ಳಲು ಕಷ್ಟ ಆಗೋ ಕಾವ್ಯ. ಇಂಥಾ ಕೊನೆ ಕೊನೆ ಸಂದರ್ಭದಲ್ಲಿ ಬಹುಮಟ್ಟಿಗೆ ಪ್ರಾರಂಭ ಮಾಡಿದ ನಾನು ಆಗ ತಾನೇ ಒಂದು ಪ್ರವಾಹದೋಪಾದಿಯಲ್ಲಿ ಬರ್ತಾ ಇದ್ದಂತಹ ನವ್ಯ ಕಾವ್ಯದ ಸೆಳವಿನಲ್ಲಿಯೇ ಸಿಕ್ಕಿಹಾಕ್ಕೊಳ್ಳಲಿಲ್ಲ. ಏಕೇಂದ್ರೆ ನನ್ನ ಉದ್ದೇಶ ಒಂದು ಕಾವ್ಯದ ಸಂದರ್ಭದಿಂದ ಮತ್ತೊಂದು ಕಾವ್ಯದೊಳಕ್ಕೆ ಒಳಗಾಗೋದಲ್ಲ. ನಾನು ನನ್ನದೇ ಆದ ನೆಲೆಗಳನ್ನು ಕಂಡುಕೊಳ್ಳೋದು ಹೇಗೆ ಅನ್ನೋದು. ಹೀಗಾಗಿ ನವೋದಯ ಕಾಲದ ಸಂದರ್ಭದ ಪ್ರಾರಂಭ ನವ್ಯಕಾಲದ ಸಂಧಿ ಕಾಲಕ್ಕೆ ಬಂದಾಗಲೇ ನನ್ನ ಮೊದಲ ಪ್ರಶ್ನೆ ಎಷ್ಟರ ಮಟ್ಟಿಗೆ ನಾನು ಈ ನವ್ಯ ಚಳುವಳಿಯಿಂದ ಕಲೀಬೇಕಾದದ್ದು? ಕಲೀಬಹುದು? ಅಂತ. ಆದರೆ ಯಾವುದೇ ಸಾಹಿತ್ಯ ಚಳುವಳಿಗಳಿಗೆ ಸಂಪೂರ್ಣವಾಗಿ ನನ್ನನ್ನು ನಾನು ಗುರುತಿಸಿಕೊಂಡಿಲ್ಲ ಅಂತ ವಿಮರ್ಶಕರು ಹೇಳೋಂಥ ಮಾತು. ಹಾಗೆ ಗುರುತಿಸಿಕೊಳ್ಳೋದು ನನಗೆ ಬೇಕಾಗಿರಲಿಲ್ಲ. ಆದ್ದರಿಂದ ಏನು ಮಾಡಿದೆ ನಾನು ಪ್ರತಿ ಚಳುವಳಿ ಸಂದರ್ಭದಲ್ಲೂ ಕೂಡ ಅದ್ದರಿಂದ ಪಡೆಯಬಹುದಾದೆಷ್ಟು, ಉಳಿಸಬೇಕಾದ್ದು, ಬಿಡಬೇಕಾದಷ್ಟು ಅನ್ನೋ ವಿವೇಚನೆ ಮಾತ್ರ ಉಳಿಸಿಕೊಂಡೆ. ವಿವೇಚನೆ ಬಹುಶಃ ನನ್ನನ್ನು ಪ್ರತ್ಯೇಕವಾದ ರೀತಿಯಲ್ಲಿ ನನ್ನನ್ನು ರೂಪಿಸಿತು, ಅವಕಾಶ ಮಾಡ್ಕೊಡ್ತು ಅಂತ ಭಾವಿಸ್ತೀನಿ. ಆದ ಕಾರಣ ಸಾಹಿತ್ಯ ಚಳುವಳಿಗಳು ಬರ್‍ತವೆ. ಅಲ್ಲಿ ಆ ಸಂದರ್ಭದಲ್ಲಿ ಬರೆದವರು ಒಳ್ಳೆ ಸಾಹಿತ್ಯವನ್ನು ಬರೆದಿರ್‍ತಾರೆ. ಆದರೆ ಪ್ರತಿಯೊಬ್ಬನೂ ಒಂದು ರೀತಿ ಬರೆದಿದ್ದಾರೆ, ಬರೀತಾರೆ ಅನ್ನೋದು ನಿಜವಾದ ಮಾತು. ನವೋದಯದ ಮಟ್ಟಿಗೂ ಕೂಡ ನಿಜ. ನವೋದಯ ಅಂತ ನಾವೆನು ಕರೀತಿವಿ ಅದೊಂದೇ ಅಲ್ಲ. ಅದು ಕೂಡ ಅನೇಕ ಪ್ರಬೇಧಗಳನ್ನು ಒಳಗೊಂಡಿದೆ. ನವ್ಯಸಾಹಿತ್ಯ ಸಂದರ್ಭದಲ್ಲಿ ಮಾತ್ರ ಈ ವೈವಿಧ್ಯ ಅಷ್ಟು ಕಾಣಲಿಲ್ಲ ಅದು ಬಹಳ ಆಶ್ಚರ್ಯ. ಅದು ಏನೋ ಒಂದು ರೀತಿಯಾದ ದಟ್ಟವಾದ ಒಂದೇ ಮಾದರಿಯ ಏಕತಾನತೆಗೆ ಒಳಗಾಗಿಸಿಕೊಳ್ಳುವಂತಹ ಪ್ರಭಾವ ಕಂಡದ್ದರಿಂದ.

*ಕಿರಂನಾ* : *ಈಗ ಲಂಕೇಶರು ಬರೆಯೋಂಥ ವಿಧಾನ, ಅಡಿಗರು ಬರೆಯೋಂಥ ವಿಧಾನ, ಅನಂತಮೂರ್ತಿ ಬರೆಯೋ ವಿಧಾನ,... ಮೂಲಭೂತವಾಗಿ ಬೇರೆ ಬೇರೆ ಅಂತಾನೇ ತೋರಲ್ವೆ ? ತೋರುತ್ತೆ.*

ಜಿಎಸ್.ಎಸ್. : ಕಾವ್ಯದ ಮಟ್ಟಿಗೆ ನಾನು ಹೇಳ್ತಾ ಇದ್ದೇನೆ.

*ಕಿರಂನಾ* : *ಕಾವ್ಯದಲ್ಲಿಯೂ ಅನೇಕ ಧ್ವನಿಗಳನ್ನು ಗಮನಿಸಿದರೆ ಅಡಿಗರು ಹೇಗೆ, ಕಂಬಾರರು ಹೇಗೆ ಬರೀತಾರೆ ಅಂತ ಯೋಚನೆ ಮಾಡಿದರೆ ಎರಡಕ್ಕೂ ಬೇರೆ ಬೇರೆ ನೆಲೆಗಳಿವೆ ಅಂತ.*

ಜಿಎಸ್.ಎಸ್. : ಆಯ್ತು (ನಗು)

*ನರಹಳ್ಳಿ* : *ಕಾವ್ಯವನ್ನು ಓದಿದಾಗ ನವೋದಯ ಸಂದರ್ಭದ ನಿಮ್ಮ ಕವಿತೆಗಳನ್ನು ನೋಡಿದಾಗ ಪ್ರಕೃತಿಯ ಬಗ್ಗೆ ಒಲವು ಜಾಸ್ತಿ ಗೊತ್ತಾಗುತ್ತೆ. ಅದರಲ್ಲೂ ಭಿನ್ನವಾದ ರೀತಿಯಲ್ಲಿ ನೀವು ಪ್ರಕೃತಿಯನ್ನು ನೋಡೋದು ಕೂಡ ನಾವು ಗಮನಿಸಬಹುದು. ಆದರೆ ನಂತರ ವ್ಯಕ್ತಿತ್ವ ವಿಘಟನೆಯೇ ನಿಮ್ಮ ಕಾವ್ಯವಸ್ತುವಾಗಿದೆ. ಅದರ ಬಗ್ಗೆ ನೀವು ಸಾತ್ವಿಕ ಕ್ರೋಧವನ್ನು ವ್ಯಕ್ತಪಡಿಸೋದು ಮುಖ್ಯ ಆಗಿದೆ. ಈ ಚಳವಳಿಗಳು ಇದಕ್ಕೆ ಕಾರಣನಾ ? ನವ್ಯ ಚಳವಳಿ ಸಂದರ್ಭದಲ್ಲಿ ಈ ಅಂಶ ಪ್ರಧಾನ ಆಗಲಿಕ್ಕೆ, ಮೊದಲು ನವೋದಯ ಸಂದರ್ಭದಲ್ಲಿ ನೀವು ಬರೆದಾಗ ಪ್ರಕೃತಿ ಪ್ರಧಾನ ಆಗಲಿಕ್ಕೆ ಆ ಚಳವಳಿಗೂ ನಿಮಗೂ ಇರೋ ಸಂಬಂಧ ಕಾರಣ ಇರಬಹುದಾ ?*

ಜಿಎಸ್.ಎಸ್. : ಇರಬಹುದು. ಯಾವುದೇ ಕವಿ ಅನೇಕ ಚಳುವಳಿಗಳ ಮೂಲಕ ಹಾದು ಬಂದರೂ ಕೂಡ ಆ ಚಳುವಳಿಗಳ ಮೌಲಿಕವಾದ ಅಂಶಗಳ ಬಗ್ಗೆ ಅವನು ಸ್ಪಂದಿಸದೆ ಇರೋದು ಒಳ್ಳೆದಲ್ಲ. ಸ್ಪಂದಿಸದೆ ಇದ್ರೆ ಅವನು ಕವಿನೇ ಅಲ್ಲ. ಆದ್ದರಿಂದ ಚಳುವಳಿಗೆ ನಾನು ಸಂಪೂರ್ಣ ಬದ್ಧನಾಗದೆ ಇದ್ರೂ ಕೂಡ, ಒಂದೊಂದು ಚಳುವಳಿಯ ಕೆಲವು ಸಂದರ್ಭಗಳಲ್ಲಿಯೂ ಕೂಡ ನನ್ನ ಅಭಿವ್ಯಕ್ತಿಗೆ ಬೇಕಾದ ಸೂಚನೆಗಳನ್ನು, ಗ್ರಹಿಕೆಗಳನ್ನು ನಾನು ಪಡೆದಿರೋದುಂಟು. ಅದಕ್ಕೆ ಆ ದೃಷ್ಟಿಯಿಂದ ನೀವು ಹೇಳೋ ಹಾಗೆ ವ್ಯಕ್ತಿತ್ವ ವಿಘಟನೆ ಅನ್ನೋದು ನವ್ಯ ಕಾವ್ಯದ ಸಂದರ್ಭದಲ್ಲಿ ಬಂದಂಥ ಒಂದು ಮಾತು. ಹಾಗೇ ನವ್ಯ ಕಾವ್ಯದ ಸಂದರ್ಭದಲ್ಲಿ ಕೂಡ ಈ ಕಾಲ ಮತ್ತು ಮನುಷ್ಯ, ಭೂಮಿ ಮತ್ತು ಮನುಷ್ಯ ಎರಡೂ ಮುಖ್ಯ ವಸ್ತುಗಳು ಆ ಕಾಲದಲ್ಲೇ ಹುಟ್ಟಿಕೊಂಡಿರುವಂಥವು. ಅವುಗಳನ್ನು ಕುರಿತು ನಾನು ಪದ್ಯಗಳನ್ನು ಬರೆದಿದ್ದೇನೆ. ಆದರೆ ನಾನು ಬರೆದ ಕವಿತೆ ಇತರ ನವ್ಯಕವಿಗಳು ಬರೆದ ಕವಿತೆಗಿಂತ ಸ್ವಲ್ಪ ಭಿನ್ನವಾಗಿದೆ. ಈ ದೃಷ್ಟಿಯಿಂದ ನನ್ನ ಕಾವ್ಯದಲ್ಲಿ ಆಗಿರುವ ಬದಲಾವಣೆಗಳ ಹಿಂದೆ ಅಂದಂದಿನ ಸಾಹಿತ್ಯ ಚಳುವಳಿಗಳ ಒಂದು ಪರಿಹಾರ ಕೂಡ ಬಹಳ ಮುಖ್ಯವಾದ ಕಾರಣ ಅಂತ ಒಪ್ಕೊಳ್ತೀನಿ. ಮತ್ತೆ ಈ ವ್ಯಕ್ತಿತ್ವ-ವಿಘಟನೆ ಪ್ರಶ್ನೆ ಅಂತ ಹೇಳಿದ್ರಲ್ಲ. ಎರಡನೇ ಹಂತದಲ್ಲಿ ನನಗೆ ಅನಿಸಿದ್ದು, ಮೊದಲಿನಿಂದ ನನಗೆ ಈ ದೇವರು, ಆಧ್ಯಾತ್ಮ ಇಂಥ ವಿಚಾರಗಳಲ್ಲಿ ಹೆಚ್ಚು ಆಸಕ್ತಿಗಳಿಲ್ಲ. ಅದಕ್ಕಿಂತ ನನ್ನ ಮೂಲ ಕಾಳಜಿ ಮನುಷ್ಯ ಮತ್ತು ಮಾನವೀಯ ಸಂಬಂಧಗಳು. ಈ ಮಾನವೀಯ ಸಂಬಂಧಗಳನ್ನು ಒಡೆಯುವ ನಮ್ಮ ಸಾಮಾಜಿಕ ಮತ್ತು ರಾಜಕೀಯ ಪರಿಸರ ಇದ್ದವಲ್ಲ.

ಇದು ಬಹುಶಃ ತಲ್ಲಣಗೊಳಿಸುವಂಥ ಅಂಶಗಳಾಯ್ತು. ಈ ದೃಷ್ಟಿಯಿಂದಲೇ ಮನುಷ್ಯ, ಮನುಷ್ಯನ ಸಂಬಂಧಗಳನ್ನು ಒಡೆದು ಹಾಕುವ, ಕಂದರಗಳನ್ನು ಏರ್ಪಡಿಸುವ ಬಿರುಕುಗಳನ್ನು ಏರ್ಪಡಿಸುವ ಈ ಪ್ರವೃತ್ತಿಯನ್ನು ಬಹಳ ತಲ್ಲಣದಿಂದ ನಾನು ನನ್ನ ಕವಿತೆಗಳಲ್ಲಿ ತೋಡಿಕೊಂಡಿದ್ದೆ. ಇದು ಕೂಡ ನವ್ಯ ಕಾವ್ಯದ ವಸ್ತುವಿನಿಂದ ತೀರಾ ಭಿನ್ನವಾದ ವಸ್ತುವನ್ನು ಪ್ರದರ್ಶಿಸ್ತದೆ ಅಂಥ ನನಗೇನೂ ಅನ್ನಿಸೋದಿಲ್ಲ.

*ಕಿರಂನಾ : ಯಾವುದೇ ಚಳವಳಿ ಲೇಖಕನಿಗೆ ಒಂದು ಸ್ಥೂಲ ಕಲ್ಪನೆ ಮಾತ್ರ, ಆ ಲೇಖಕನ ಒಟ್ಟು ಜೀವನಾನುಭವ ಮತ್ತು ಅಭಿವ್ಯಕ್ತಿ ವಿಧಾನ ಅವುಗಳೇ ಅಂತಿಮವಾದದ್ದು. ಸೃಷ್ಟಿಕ್ರಿಯೆನಲ್ಲಿ ನಾವು ಗುರುತಿಸೋದು ಚಳವಳಿಯ ಚಹರೆಗಳನ್ನಲ್ಲ. ಕವಿ ವ್ಯಕ್ತಿತ್ವದ ನೆಲೆಗಳನ್ನು ಅಂತ ಅಂದ್ಕೊಂಡಿದ್ದೇನೆ. ಆ ದೃಷ್ಟಿಯಿಂದ ನೀವು ಹೇಳಿದ ಮಾತು ......*

ಜಿಎಸ್.ಎಸ್. : (ಮುಂದುವರೆಸ್ತಾ).. ನಾಳೆ ದಿನ... ಈ ಕವಿ ಯಾವ ಚಳವಳಿ ಸಂದರ್ಭದಲ್ಲಿ ಬರೆದ ಅನ್ನೋದು ಮುಖ್ಯವಾಗದೆ ಕನ್ನಡ ಪರಂಪರೆಯ ಸಂದರ್ಭದಲ್ಲಿ ಎಷ್ಟು ಮುಖ್ಯವಾಗ್ತಾನೆ ಅನ್ನೋದು ತುಂಬಾ ವಿಶೇಷ ಸಂಗತಿ ಅಂತ ನನಗನ್ನಿಸುತ್ತೆ. ಆ ದೃಷ್ಟಿಯಿಂದ ಚಳವಳಿ ಸಂದರ್ಭದ ಒಲವುಗಳು ಆಗ ಏನೇ ಇದ್ದರೂ ಅದು ತಾತ್ಕಾಲಿಕ. ಕವಿಯಾಗಿ ಆತ ಎಷ್ಟು ಬೆಳೆದಿದ್ದಾನೆ ಅನ್ನೋದು ತುಂಬಾ ಮುಖ್ಯವಾಗ್ತದೆ.

*ನರಹಳ್ಳಿ : ಈ ಸಂದರ್ಭದಲ್ಲಿ ನಿಮ್ಮನ್ನು ಸಮನ್ವಯ ಕವಿ ಅಂತ ಬರೆದಿದ್ದು ಸರಿಯಲ್ಲ ಅಂತ ನೀವು..*

ಜಿಎಸ್.ಎಸ್.: ಖಂಡಿತ... ಸರಿಯಲ್ಲ (ನಗು)

*ಕಿರಂನಾ : ಪ್ರವಾಸದ ಬಗ್ಗೆ ನಿಮಗಿದ್ದ ಆಸಕ್ತಿಯನ್ನು ಊರಿಂದ ಊರಿಗೆ ನೀವು ಹೋಗಬೇಕಾದ ಸಂದರ್ಭವನ್ನು ಮೊದಲೇ ಹೇಳಿದೀರಿ. ನಿಮ್ಮ ಮೇಲಿನ ಅದರ ಪ್ರಭಾವವನ್ನು ಹೇಳಿದೀರಿ. ಹಾಗೇನೇ ನಿಮ್ಮ ದಿನ ನಿತ್ಯದ ಅನೇಕ ಹವ್ಯಾಸಗಳು ಮತ್ತು ನೀವು ಯಾವಾಗಲೂ ನಡೆಸುವ ಪ್ರವಾಸ ಇವುಗಳೂ ಕೂಡ ನಿಮ್ಮ ಕಾವ್ಯದಲ್ಲಿ ಮತ್ತು ಪ್ರವಾಸ ಸಾಹಿತ್ಯವಾಗಿ ಬೇರೆ ಬಂದಿದೆ. ಇದಕ್ಕೆ ಸಂಬಂಧಪಟ್ಟಂತಹ ನಿಮ್ಮ ಒಲವುಗಳನ್ನು....*

ಜಿಎಸ್.ಎಸ್.: ದಿನನಿತ್ಯದ ಹವ್ಯಾಸ.. ತಿರುಗಾಡೋದು (ನಗು) *ಸಂಗೀತಹೇಳ್ತೀರಾ..?* ಪ್ರಿಯವಾದದ್ದು. ಹಾಗೂ ಓದು... ಬರೆಯೋದಕ್ಕಿಂತ ಓದೋದು ಮುಖ್ಯ ಅನ್ನಿಸ್ತಾ ಇದೆ. ಇನ್ನೂ ಓದೋದಿಕ್ಕೆ ಬಹಳ ಇದೆ ಅಂತ ಅನಿಸುತ್ತೆ. ಅದು ಬಿಟ್ಟರೆ ವರ್ಷಕ್ಕೆ ಎಷ್ಟೋ ಬಾರಿ ಹೊರಗೆ ಹೋಗೋ ಅಭ್ಯಾಸ ಇದೆ. ಮುಖ್ಯವಾಗಿ ಕಾಡುಮೇಡುಗಳಿಗೆ. (ನಗು)

ರಷ್ಯಾಗೆ ಹೋದೆ. ಅಮೆರಿಕಾಗೆ ಹೋದೆ. ಹಿಮಾಲಯಕ್ಕೆ ಹೋದೆ. ಮೂರೂ

ವಿಶಿಷ್ಟವಾದ ಪರಿಸರಗಳು ಅಂತ ಅನ್ನಿಸುತ್ತೆ. ಅನ್ಯ ದೇಶಗಳಿಗೆ ಹೋಗೋದ್ರಿಂದ. ನಮ್ಮ ದೇಶದ ಜೀವನ ವಿಧಾನಕ್ಕೂ ಮತ್ತೊಂದು ದೇಶದ ಜೀವನ ವಿಧಾನಕ್ಕೂ ಪರಿಸರದ ಹೋಲಿಕೆಗಳನ್ನು ಮಾಡಬಹುದು. ಮಾಡಿದಷ್ಟೂ ನನಗೆ ವಿಷಾದವನ್ನು ಉಂಟು ಮಾಡ್ತಾ ಇದೆ. ಬೇರೆ ದೇಶಗಳನ್ನು ನೋಡಿದಷ್ಟೂ ನನ್ನ ದೇಶದ ಬಗ್ಗೆ ಬಹಳ ವಿಷಾದ ಆಗ್ತಾ ಇದೆ. ಮತ್ತು ಬೇರೆ ದೇಶಗಳಲ್ಲಿನ ನಮ್ಮ ಜನ ಪಡುವ ಸಾಂಸ್ಕೃತಿಕ ಸಂಘರ್ಷಗಳು ಕೂಡ ನನ್ನ ಮನಸ್ಸನ್ನು ತಟ್ಟಿದೆ. ಈ ದೃಷ್ಟಿಯಿಂದ ಪ್ರವಾಸ ಕೇವಲ ದೃಶ್ಯಗಳನ್ನು ನೋಡೋದಲ್ಲ. ಅದು ನಿಸರ್ಗದ ಅನುಭವ. ಅದು ಜೀವನದ ಪರಿಚಯ. ಮತ್ತು ಸಾಂಸ್ಕೃತಿಕ ಸಂಘರ್ಷ ಆಗಬಹುದು. ಬೇರೆ ದೇಶಗಳ ಅಭ್ಯುದಯದೊಂದಿಗೆ ನಮ್ಮ ದೇಶವನ್ನು ಹೋಲಿಸಿ ನಾವು ಪಡುವ ವಿಷಾದವೂ ಆಗಬಹುದು. ಆರೋಗ್ಯಕರವಾದ ನಾಚಿಕೆ ಆಗಬಹುದು. ಮುಖ್ಯವಾಗಿ ಹಿಮಾಲಯ ಪ್ರವಾಸವೂ ತುಂಬಾ ಅದ್ಭುತವಾದದ್ದು ಅನ್ನಿಸ್ತು. ಅಲ್ಲಿಗೆ ಹೋಗಿ ಬಂದ ಮೇಲೆ ಹಿಮಾಲಯ ನೋಡದೆ ಇದ್ದರೆ ನಮ್ಮ ದೇಶದ ಸಂಸ್ಕೃತಿ ನಮಗೆ ಖಂಡಿತ ಅರ್ಥ ಆಗಲ್ಲ ಅಂತ ಅನ್ನಿಸುತ್ತೆ. ಮತ್ತೆ ಮತ್ತೆ ನೋಡುವ ಪ್ರಬಲ ಸೆಳೆತ ಇರೋದು, ಬರೋದು ಅನ್ನುತ್ತೆ ಹಿಮಾಲಯಕ್ಕೆ ಮಾತ್ರ. ಮನುಷ್ಯ ಮತ್ತೆ ಮತ್ತೆ ತನ್ನ ಪ್ರಾಚೀನತೆಯನ್ನು ಹುಡುಕಿಕೊಂಡು ಹೋಗುವ ಅನ್ವೇಷಣೆ ಅನ್ನೋದೇ ಪ್ರವಾಸದ ಹಿಂದೆ ಇರುವ ಮೂಲ ದ್ರವ್ಯ, ಆಸಕ್ತಿ ಅಂತನೂ ಅನ್ನಿಸುತ್ತೆ. ಯಾವುದೋ ಕಾಲಕ್ಕೆ ನಿಸರ್ಗಕ್ಕೂ ನಮಗೂ ಗಾಢವಾದ ಸಂಬಂಧ ಇತ್ತಲ್ಲ. ಆ ಸಂಬಂಧಕ್ಕೂ ನಮಗೂ ಈಗ ಬಿರುಕು ಬಿಟ್ಟಿದೆ. ಹೀಗಾಗಿ ಮತ್ತೆ ಮತ್ತೆ ಕಾಡು ಮೇಡುಗಳನ್ನು ಬೆಟ್ಟಗುಡ್ಡಗಳನ್ನು ಹುಡುಕಿಕೊಂಡು ಹೋಗುವ ಪ್ರವೃತ್ತಿಯೊಳಗೆ ನಿಸರ್ಗಕ್ಕೂ ನಮಗೂ ಒಂದು ಕಾಲದಲ್ಲಿ ಇದ್ದಂತಹ ಒಂದು ಅನ್ಯೋನ್ಯ ಸಂಬಂಧದ ವಿಚ್ಛಿತ್ತಿಯನ್ನು ಪರಿಹಾರ ಮಾಡಿಕೊಳ್ಳಲಿಕ್ಕೆ ನಾವು ಕೈಕೊಳ್ಳುವ ಕೆಲಸ ಅಂತ ನನಗನಿಸ್ತಾ ಇದೆ. ಈ ದೃಷ್ಟಿಯಿಂದ ವಿಶೇಷವಾಗಿ ಬೇರೆ ದೇಶಗಳನ್ನು ನೋಡೋದಿಕ್ಕಿಂತ ನಮ್ಮ ದೇಶದ ಪರ್ವತಾರಣ್ಯಗಳು, ನಿಸರ್ಗ, ಇದರಿಂದ ಬರುವ ಒಂದು ಸಮಾಧಾನ ಮತ್ತು ತಿಳಿವು ಬೇರೆದ್ರಿಂದ ಬರಲಾರದು ಅಂತ ನನಗೆ ಅನೇಕ ವೇಳೆ ಅನಿಸುತ್ತೆ.

*ನರಹಳ್ಳಿ : ಸರ್, ನೀವು ಬಹಳ ಪ್ರಮುಖ ವಿಮರ್ಶಕರಲ್ಲಿ ಒಬ್ಬರು. ಕಾವ್ಯ ತತ್ತ್ವದ ಬಗ್ಗೆ, ಮೀಮಾಂಸೆ ಬಗ್ಗೆ ಸಾಕಷ್ಟು ಯೋಚನೆ ಮಾಡಿದೀರಿ, ಬರೆದಿದ್ದೀರಿ. ಹಾಗನೇ.... ನಮ್ಮ ಕೃತಿಗಳನ್ನು ಕನ್ನಡದ ಪರಂಪರೆಯಲ್ಲಿ ಇಟ್ಟು ನೋಡುವ ಪ್ರಯತ್ನವನ್ನು ನೀವು ಮಾಡಿದ್ದೀರಿ. ನಿಮ್ಮ ಪರಿಶೀಲನದ ಲೇಖನಗಳು ಆ ಬಗೆಯ ಪ್ರಯತ್ನಗಳು. ಅಷ್ಟೇ ಅಲ್ಲ ವಿಮರ್ಶೆಗೆ ಒಂದು ಹೊಸ ಪರಿಭಾಷೆಯನ್ನು ಸೃಷ್ಟಿಸುವ ಕೆಲಸವನ್ನು ಕೂಡ ನೀವು ಕಾವ್ಯ ರಚನೆಯ*

*ಜೊತೆ ಜೊತೆಗೇನೇ ವಿಮರ್ಶೆಯನ್ನು ಬೆಳೆಸಿದ್ದೀರಿ. ಪ್ರಶ್ನೆ.... ನೀವು ಎದುರಿಸಿದ ಸಮಸ್ಯೆಗಳು ಯಾವ ರೀತಿ ಇದ್ದವು? ಆಗಿನ್ನೂ ವಿಮರ್ಶೆ ಪರಿಭಾಷೆ ಸೃಷ್ಟಿ ಆಗಿರಲಿಲ್ಲವಲ್ಲ...... ನಿಮ್ಮ ವಿಮರ್ಶೆ ಸ್ವರೂಪ ಯಾವ ರೀತೀದು ?*

ಜಿಎಸ್.ಎಸ್.: ನನ್ನ ವಿಮರ್ಶೆ ಮುಖ್ಯವಾಗಿ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವ, ಅರ್ಥಮಾಡಿಕೊಡುವ ಪ್ರಯತ್ನಕ್ಕೆ ಹೆಚ್ಚು ಒತ್ತು ಕೊಟ್ಟಿದೆ. ಯಾಕೇಂದ್ರೆ ಇಡೀ ನಮ್ಮ ಸಾಹಿತ್ಯವನ್ನು ಒಂದು ಪರಂಪರೆಯಲ್ಲಿಟ್ಟು ನೋಡೋದು ತುಂಬಾ ಮುಖ್ಯವಾದದ್ದು. ಹೀಗಾಗಿ T.S.Iliot ಹೇಳ್ತಾನೆ tradition of the individual talent ಅಂತ, ಅದು ಒಂದು ದೊಡ್ಡ ಕೀಲಿ ಕೈ ಥರಾ ನನಗೆ ವರ್ತಿಸಿತು. ಯಾವುದೇ ಕವಿಯನ್ನು ಅವನ ವ್ಯಕ್ತಿ ವಿಶಿಷ್ಟ ಪ್ರತಿಭೆಯನ್ನು ನೋಡುವಾಗ ಅವನು ಎಷ್ಟರ ಮಟ್ಟಿಗೆ ತನ್ನ ಪರಂಪರೆಯನ್ನು ಅರ್ಥೈಸ್ತಾನೆ ಅಂತ. ನನಗೆ ತೋರೋ ಮಟ್ಟಿಗೆ ಕವಿಗಳಲ್ಲಿ ಬಹುಶಃ ಮೂರು ರೀತಿ ಇರಬಹುದು. ಪರಂಪರೆಯನ್ನು ಶ್ರದ್ಧೆಯಿಂದ ಅನುಸರಿಸುವವರು, ಪರಂಪರೆಯನ್ನು ಕಾಲಕ್ಕೆ ತಕ್ಕ ಹಾಗೆ ವ್ಯಾಖ್ಯಾನಿಸುವವರು, ಪರಂಪರೆಯನ್ನು ನಿರಾಕರಣ ಮಾಡುವವರು. ಇವರಲ್ಲಿ ನನಗೆ ಮಧ್ಯದದವರು ಇದ್ದಾರಲ್ಲ ಅವರೇ ಅಗತ್ಯ ಅವರ ವ್ಯಾಖ್ಯಾನವೇ ಅಗತ್ಯ ಅದೇ ಸಾಹಿತ್ಯಕ್ಕೆ ಬೇಕಾದ್ದು ಅಂತ ಅನ್ನಿಸ್ತಾ ಇದೆ.

*ಕಿರಂನಾ : ಪರಂಪರೆಯನ್ನು ನಿರಾಕರಿಸಲು ಬರುತ್ತದೆಯೇ ? ಅದು ಹೇಗೆ ? ಹೇಳ್ತೀರಾ?*

ಜಿಎಸ್.ಎಸ್.: ನಿರಾಕರಿಸಲು ಬರೋದಿಲ್ಲ. ಆದರೆ ನಿರಾಕರಿಸುವ ಒಂದು ನಿಲುವನ್ನು ತಾಳ್ತಾರಲ್ಲ. ಅವರನ್ನು ಕುರಿತು ನಾನು ಮಾತಾಡ್ತಾ ಇದ್ದೇನೆ. ನಿರಾಕರಿಸುವುದು ಅಂದಾಗ ಒಂದು ರೀತಿ... ಉದಾಹರಣೆಗೆ : ವಚನಕಾರರಲ್ಲಿ... ಮೂರು ರೀತಿ. ವೇದ, ಉಪನಿಷತ್ತು, ಪುರಾಣಗಳನ್ನು ಅವರು ನಿರಾಕರಣ ಮಾಡಿದರು. ಹೌದು ತಾನೆ ? ಆ ಪ್ರವೃತ್ತಿ ಕಂಡು ಬರುತ್ತದೆ. ಯಾವ ಪರಂಪರೆ ನಮ್ಮನ್ನು ನಿಯಂತ್ರಿಸುತ್ತದೆಯೋ, ಆ ಪರಂಪರೆಯ ಕೆಲವು ಜೀವ ವಿರೋಧಿ ನಿಲುವುಗಳನ್ನು ನಿರಾಕರಿಸೋದು ಇರಬಹುದು.

*ಕಿರಂನಾ : ವಚನಕಾರರು ಆ ರೀತಿಯ ಪರಂಪರೆಯನ್ನು ನಿರಾಕರಣ ಮಾಡ್ತಾನೇ... ಒಂದು ಪರಂಪರೆಯನ್ನು ಕೊಡ್ತಾ...... ಪುನರ್ ವ್ಯಾಖ್ಯಾನ ಮಾಡುವ... ಒಂದು ಕೆಲಸ...ಮಾಡಿದ್ರು*

ಜಿಎಸ್.ಎಸ್.: ಹೌದು. ಒಂದು ಪರಂಪರೆಯಲ್ಲಿ ಸಂಪ್ರದಾಯದ ಅಂಶಗಳಿರ್ತಾವೆ. ಪರಂಪರೆಯ ಅಂಶಗಳೂ ಇರ್ತವೆ. ಯಾವುದು ಪರಂಪರೆ ಅಂತೀವಿ ಅದು ಒಂದು ರೀತಿ creative ಆದ process. ಸಂಪ್ರದಾಯ ಅನ್ನೋದು ಜಡ್ಡುಗಟ್ಟಿದ, ಅರ್ಥವನ್ನು ಕಳೆದುಕೊಂಡಂಥ ಅಂಶಗಳು. ಇವುಗಳನ್ನು

ನಿರಾಕರಣ ಮಾಡುವ ಪ್ರಯತ್ನ ಇದ್ದೇ ಇರ್‍ತದೆ. ಆದರಿಂದ ಪ್ರತಿಯೊಂದು ಸಾಹಿತ್ಯ ಸಂದರ್ಭದಲ್ಲಿಯೂ ಕೂಡ ನಿರಾಕರಣೆ, ಸ್ವೀಕಾರ, ವ್ಯಾಖ್ಯಾನದ ಅಂಶಗಳಿರುತ್ತವೆ. ಈ ಮೂರೂ ಸೇರಿಕೊಳ್ತಾನೇ ನಮ್ಮ ಸಾಹಿತ್ಯ ಬೆಳೆದಿರೋದು ಅಂತ ನನಗೆ ಅನ್ನಿಸ್ತಾ ಇದೆ. ಆ ದೃಷ್ಟಿಯಿಂದ ಜೈನಕವಿಗಳು ಮಾಡಿದ್ದೇನು? ಒಂದು ರೀತೀಲಿ ಅವರು ತಮ್ಮ ಪೂರ್ವ ಪರಂಪರೆಯನ್ನು ಪುನರ್ವ್ಯಾಖ್ಯಾನ ಮಾಡಿದ್ದರು. ಹಾಗೇ ನಿರಾಕರಣ ಮಾಡಿದರು ಅಂತಾ ಇಟ್ಕೊಳ್ಬಹುದು. ಇದು ಸೃಜನಾತ್ಮಕ ಪ್ರತಿಕ್ರಿಯೆ ಅಂತ ಬೇಕಾದರೂ ಕರೀರಿ.

*ಕಿರಂನಾ : ಅದು ಪರಂಪರೆ ನಿರಾಕರಣ ಅನ್ನೋದಕ್ಕಿಂತ ಆ conventionsನ ನಿರಾಕರಣೆ ಅಂತ ಭಾವಿಸಬಹುದು ಅಂತ ಅನ್ನಿಸುತ್ತೆ ಸರ್...*

ಜಿಎಸ್.ಎಸ್. : ಆಗಬಹುದು ಆಗಬಹುದು.

ನನ್ನ ವಿಮರ್ಶೆಯ ಹಿನ್ನೆಲೆಗೆ ಇದೇ ಮುಖ್ಯವಾದದ್ದು. ಆಮೇಲೆ ಎರಡನೇದು, ತೌಲನಿಕ ಅಧ್ಯಯನ ಬಹಳ ಮುಖ್ಯವಾದದ್ದು. ಒಬ್ಬ ಕವಿಯನ್ನು ಮತ್ತೊಬ್ಬನ ಜೊತೆ ಇರಿಸಿ ನೋಡುವುದೇನಿದೆ ಅದು ಕೂಡ ತುಂಬ ಮುಖ್ಯ. ಅದರಲ್ಲೂ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಾವ್ಯ ತತ್ತ್ವಗಳ ಹಿನ್ನೆಲೆಯಲ್ಲಿ ನಮ್ಮ ಕಾವ್ಯವನ್ನು ನೋಡುವ ದೃಷ್ಟಿಕೋನವನ್ನು ಬೆಳೆಸಬೇಕು ಅನ್ನೋದಿತ್ತು. ಹೀಗೆ ಮಾಡುವ ಸಂದರ್ಭದಲ್ಲಿ ನವ್ಯ ಕಾವ್ಯ ವಿಮರ್ಶೆಯಲ್ಲಿ ಪ್ರಖರವಾಗಿ ಬೆಳೀತು. ಆದರೆ ಆಗಿನ್ನೂ ಪಾರಿಭಾಷಿಕಗಳ ಗೊಂದಲ ಸಾಕಷ್ಟಿತ್ತು. ನಾನು ಬರೀಲಿಕ್ಕೆ ಪ್ರಾರಂಭ ಮಾಡಿದಾಗ ಕೂಡ ನವ್ಯ ಕಾವ್ಯದ ವಿಮರ್ಶೆಯ ನೆಲೆಯಲ್ಲೇ ನಾನು ವಿಮರ್ಶೆಗಳನ್ನು ಬರೆದದ್ದು. ಆಗ ಪಾರಿಭಾಷಿಕಗಳ ಬಗ್ಗೆ ಎಷ್ಟು ಗೊಂದಲ ಇತ್ತು ಅಂದ್ರೆ ಅಲ್ಲಲ್ಲಿನ ಪದಗಳನ್ನು ಹಾಗೇ ತೆಗೆದುಕೊಂಡು ಬಳಸೋದಿಕ್ಕೆ ಶುರು ಮಾಡಿದರು. ಆಗ ನನ್ನ ಮಾತೇನು ಅಂದರೆ ಒಂದು ವಿಮರ್ಶೆಯ ಪರಿಭಾಷೆಯನ್ನು ಸಿದ್ಧ ಮಾಡಬೇಕಾದರೆ ನಮ್ಮ ಪ್ರತಿಭಾರತೀಯ ಕಾವ್ಯಮೀಮಾಂಸೆಯ ನಿಜವಾದ ತಿಳುವಳಿಕೆ ಇರಬೇಕು. ಮತ್ತು ಪಶ್ಚಿಮದ ಸಾಹಿತ್ಯದ ಪರಿಕಲ್ಪನೆಗಳ ಪರಿಚಯಾನೂ ಇರಬೇಕು. ಈ ಎರಡನ್ನೂ ನಮ್ಮ ಜೊತೆ ಇಟ್ಕೊಂಡು ಮೂರನೆಯ ಹೊಸ ಪರಿಭಾಷೆಯನ್ನು ನಾವು ಸಿದ್ಧ ಮಾಡಬೇಕು ಅಂತ. ಈ ದೃಷ್ಟಿಯಲ್ಲಿ ನಾನು ಸ್ವಲ್ಪ ಕೆಲಸ ಮಾಡಿದ್ದೇನೆ ಅನ್ನೋದು ನನ್ನ ಅಭಿಪ್ರಾಯ.

*ಕಿರಂನಾ : ಭಾರತೀಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳ ನೆಲೆ ಮತ್ತು ಪಾಶ್ಚಾತ್ಯ ಚಿಂತನೆಗಳು. ಜೊತೆಗೆ ಕನ್ನಡದ್ದೇ ಆದ ಕಾವ್ಯ ಚಿಂತನೆಗಳೂ ಇವೆ ಅಂತ... ಅದನ್ನು ಕುರಿತು ಬರೆದಿದ್ದೀರಿ. ಕನ್ನಡ ಕಾವ್ಯ ಚಿಂತನೆ ಬಗ್ಗೆ ಹೇಳಿ.*

ಜಿಎಸ್.ಎಸ್. : ಕನ್ನಡ ಕವಿಗಳ ಕಾವ್ಯಕಲ್ಪನೆ ಅನ್ನುವ ಪುಸ್ತಕ ಬರೆದಾಗ ಮುಖ್ಯವಾಗಿ ಕನ್ನಡಕ್ಕೆ ತನ್ನದೇ ಆದ originality ಇದೆ ಅನ್ನೋದು ಮುಖ್ಯವಾಗಿತ್ತು.

ಕನ್ನಡಕ್ಕೆ ಇರುವ ಉಳಿದ ಬೇರೆ ಭಾಷೆಗಳಿಗಿಲ್ಲದೆ ಇರುವ ಒಂದು ವಿಶಿಷ್ಟತೆ ಏನೂ ಅಂದ್ರೆ ಅದು ಯಾವತ್ತೂ ಕೂಡ ಅನ್ಯಪರ ರಕ್ಷಣೆಯ ವಿಚಾರದಲ್ಲಿ ಅನುವ್ಯಾರವಾಗಿಲ್ಲ. ಆದರೆ ಯಾವುದೇ ಪರಂಪರೆಗೆ ಕೂಡ ಸೃಜನಾತ್ಮಕವಾಗಿ ಪ್ರತಿಕ್ರಿಯಿಸುತ್ತಾ ತನ್ನ ಪ್ರಾದೇಶಿಕವಾದ ವಿಶಿಷ್ಟತೆಯಲ್ಲಿ ಅದು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ತಾ ಇದೆ. ಇದು ಕನ್ನಡ ಪ್ರತಿಭೆಯ ಬಹಳ ಮುಖ್ಯ ಲಕ್ಷಣ. ಮತ್ತು ಅಲ್ಲಿ localisation ಇದೆಯಲ್ಲ ಪಂಪ, ವಿಕ್ರಮಾರ್ಜನ ಬರೆದಾಗ ೧೦ನೇ ಶತಮಾನದ ಸಮಸ್ತ ಕನ್ನಡಿಗರ ಮೂಲದ್ರವ್ಯದಿಂದ ರಚಿಸಿದ್ದಾನೆ. ಇಲ್ಲದಿದ್ದರೆ ಬನವಾಸಿ, ವರದಾನದಿ ವರ್ಣನೆ ಅದರಲ್ಲಿ ಬರೋಕೆ ಸಾಧ್ಯವಿಲ್ಲ. ಹೀಗೆ ಕನ್ನಡ ಕವಿಗಳಿಗೆಲ್ಲರಿಗೂ ಕೂಡ ಆ ಪ್ರಾದೇಶಿಕವಾದ ಎಚ್ಚರ ಇದ್ದೇ ಇದೆ. ಬಹಳ ಮುಖ್ಯವಾದದ್ದು ಇನ್ನೊಂದು ರಾಜವಿರೋಧಿ ನಿಲುವು, ವ್ಯವಸ್ಥೆ ವಿರೋಧಿ ನಿಲುವು–ಇದು ಮೊದಲಿ ನಿಂದಲೂ ನಮ್ಮಲ್ಲಿ ಕೆಲಸ ಮಾಡ್ತಾ ಇದೆ.

ವ್ಯವಸ್ಥೆಗೆ ಯಾವತ್ತೂ ನಮ್ಮ ಕವಿಗಳು ಒಳಗಾಗಿಲ್ಲ. ಅವರು ಒಂದು ರೀತಿ ಸ್ವತಂತ್ರರು. ಪಂಪನಿಂದ ಹಿಡಿದು ಇಂದಿನವರೆಗೂ... ರಾಜಾಸ್ಥಾನದಲ್ಲಿ ಕವಿಗಳು ಇದ್ದರೂ ಕೂಡ ರಾಜಾಸ್ಥಾನದಲ್ಲಿ ಇದ್ದಾರೆಯೇ ಹೊರತು ಹಂಗಿಗೆ ಒಳಗಾಗಿಲ್ಲ. ಬಹಳ ಮುಖ್ಯ ಪ್ರವೃತ್ತಿ ಇದು. ಮತ್ತೊಂದು ಒಂದು ವೈದಿಕ ವಿರೋಧಿ ಧೋರಣೆ ಅಂತ ಏನು ಕರೀತೇವೆ ಇದು ಅತ್ಯಂತ ಪ್ರಬಲವಾದ ಲಕ್ಷಣವಾಗಿ ನಮ್ಮ ಕನ್ನಡ ಸಾಹಿತ್ಯದಲ್ಲಿ ಕಂಡು ಬರುತ್ತೆ. ಈಗ ವೇದ, ಉಪನಿಷತ್ತು ಪುರಾಣಗಳ ವಿರುದ್ಧವಾಗಿ ಒಂದು ದನಿ ಎತ್ತುತ್ತ ತಮ್ಮದೇ ಆದ ಸ್ವತಂತ್ರವಾದ ಅಭಿವ್ಯಕ್ತಿಯನ್ನು ರೂಪಿಸಿಕೊಳ್ಳುವ ಒಂದು ಪ್ರಯತ್ನ. ಇದು ಸಾಹಿತ್ಯದ ಉದ್ದಕ್ಕೂ ಕಂಡು ಬರ್ತಾ ಇದೆ. ಇದೊಂದು ಬಹಳ ಮುಖ್ಯವಾದ ಸಂಗತಿ. ಹೀಗೆ ಕೆಲವು ವಿಶಿಷ್ಟವಾದ ಲಕ್ಷಣಗಳು ಕನ್ನಡ ಕಾವ್ಯಕ್ಕೆ ಇವೆ. ಕನ್ನಡ ಕಾವ್ಯ ಅನ್ನೋದು ಯಾವತ್ತಿಗೂ ಕೂಡ ಪಂಪ ಹೇಳಿದ ಹಾಗೆ "ನಿಚ್ಚಂ ಪೊಸತು"...

*ನರಹಳ್ಳಿ* : *ಈ ಹೊತ್ತಿನ ಕನ್ನಡ ಸಂಸ್ಕೃತಿಯ ಬಿಕ್ಕಟ್ಟುಗಳೇನು ?*

ಜಿಎಸ್.ಎಸ್. : ಭಾಷೆ ಬಗ್ಗೆ, ಅದರ ಅಸ್ತಿತ್ವದ ಬಗ್ಗೆ, ಒಂದು ದೊಡ್ಡ ಸಮಸ್ಯೆ. ಕನ್ನಡಿಗರ ನೆಲ ಜಲಗಳನ್ನು ಕುರಿತು ತುಂಬಾ ಹೆಚ್ಚು ಕಾಳಜಿಗಳು ನಮಗೆ ಕಂಡು ಬರ್ತಾ ಇವೆ.. ಸಾಹಿತ್ಯದ ಮಟ್ಟಿಗೆ ಮತ್ತು ಕಾವ್ಯದ ಮಟ್ಟಿಗೆ ಇವು ಬೇರೆ ಆಗುತ್ತೆ. ಅಲ್ಲೂ ಕೂಡ ಸಾಹಿತ್ಯದ ಮೇಲಿನ ಪ್ರಭಾವವನ್ನು ಇಂಥವು ನಿಯಂತ್ರಿಸುವ ಹಾಗೆ ಆಗಿದೆ. ನಾವು ಕಲಿಯುವ ಶಿಕ್ಷಣ, ನಮ್ಮ ಭಾಷೆ, ಮಾಧ್ಯಮ ಇದೆಲ್ಲ ನಮ್ಮ ಸಾಹಿತ್ಯವನ್ನು ಓದುಗ ವರ್ಗವನ್ನು ಸಾಹಿತ್ಯದ ಅಧ್ಯಯನವನ್ನು ನಿಯಂತ್ರಿಸುವ ಹಾಗೆ ಕಾಣ್ತದೆ. ಹಾಗಾಗಿ ಇವತ್ತು ಕನ್ನಡ

ನಾಡಿನಲ್ಲಿ ಕನ್ನಡಕ್ಕೆ ಯಾವ ಒಂದು ನ್ಯಾಯ ಸಲ್ಲಬೇಕು ಅಂತ ನಾವು ಬಹಳ ಕಾಲದಿಂದ ಆಶಿಸ್ತಾ ಇದ್ದೇವೋ ಅದು ಸಂಪೂರ್ಣವಾಗಿ ಸಂದಾಗ ಮಾತ್ರ ನಮ್ಮ ಇಡೀ ಸಮಗ್ರ ಕನ್ನಡನಾಡು ಸಾಹಿತ್ಯ ಸಮೃದ್ಧಿಯಲ್ಲಿ ಪಾಲ್ಗೊಳ್ಳಕ್ಕೆ ಸಾಧ್ಯ ಆಗ್ತದೆ. ಅದಕ್ಕೆ ಅನೇಕ ಆತಂಕಗಳು ನಮಗೆ ಇವತ್ತು ಪ್ರಾಪ್ತವಾಗಿವೆ.

*ನರಹಳ್ಳಿ* : *ಕವಿಯಾಗಿ, ವಿಮರ್ಶಕರಾಗಿ, ಸಹೃದಯರ ಪ್ರೀತಿ ಪಡೆದುಕೊಂಡಂಥವರಾಗಿ, ನಾಲ್ಕು ದಶಕಗಳು ಸಾಹಿತ್ಯ ಚಟುವಟಿಕೆಯಲ್ಲಿದ್ದೀರಿ. ಇವತ್ತು ಸಾಹಿತ್ಯ ಮತ್ತು ಓದುಗನ ನಡುವಿನ ಸಂಬಂಧ ಏನು ? ವಿವಿಧ ಮಾಧ್ಯಮಗಳ ಆಕ್ರಮಣಗಳ ಹಿನ್ನೆಲೆಯಲ್ಲಿ.*

ಜಿಎಸ್.ಎಸ್. : ಸಾಹಿತ್ಯ ಮುಖ್ಯವಾಗಿ ಭಾಷಿಕವಾದ ಅಭಿವ್ಯಕ್ತಿ. ಒಂದು ಕಾಲಕ್ಕೆ ಸಾಹಿತ್ಯ ಅನ್ನೋದು ಅನೇಕ ಹಂತಗಳಲ್ಲಿ ಸಂವಹನಗೊಳ್ತಾ ಇತ್ತು. ಓದುಗವರ್ಗ ಇತ್ತು. ಪಂಡಿತ ಮಂಡಳಿ ಇತ್ತು. ಇನ್ನೊಂದು ಕಡೆ.. ಅನಕ್ಷರಸ್ತ ಶ್ರವಣಪ್ರಿಯ ಬಹುಜನ ಸಮಾಜ ಇತ್ತು. ಈ ಎರಡಕ್ಕೂ ಕಾವ್ಯ ಅನ್ನೋದು ಬೇರೆ ಬೇರೆ ರೀತಿ ಸಂವಹನಗೊಳ್ತಾ ಇತ್ತು. ಒಂದು ಕಡೆ ತಾವಾಗಿಯೇ ಓದಿಕೊಳ್ಳುವ ಓದುಗವರ್ಗ. ಇನ್ನೊಂದು ಕಡೆ ರಾಜಾಸ್ಥಾನಗಳಲ್ಲಿ ಮುಂತಾದ ಕಡೆ ಕವಿಯೋ ಯಾರೋ ಓದಿ ಹೇಳಿ, ಕೇಳುವ ವರ್ಗ ಇತ್ತು. ಮತ್ತೊಂದು ಕಡೆ ಅಕ್ಷರ ಜ್ಞಾನ ಇಲ್ಲದ ಸಾಮಾನ್ಯಜನ ಕುಮಾರವ್ಯಾಸ ಭಾರತವನ್ನು, ಲಕ್ಷ್ಮೀಶನ ಕಾವ್ಯವನ್ನು ಗಮಕಿಗಳ ಮೂಲಕ ಕೇಳ್ತಾ ಇದ್ದರು. ಹೀಗೆ.... ಕಾವ್ಯದ ಸಂವಹನಕ್ಕೆ ಅನೇಕ ಹಂತದ ಓದುಗರಿದ್ದಾರೆ ಎಲ್ಲ ಕಾಲದಲ್ಲೂ ಕೂಡ. ಎಲ್ಲರೂ ಕಾವ್ಯಾಸಕ್ತರೇ ಎಲ್ಲರಿಗೂ ಸಾಹಿತ್ಯದ ಅಭಿರುಚಿ ಇದೆ. ಹಾಗಾಗಿ ಓದುಗರನ್ನು ಸಮಾನವಾಗಿ ನೋಡಲು ಸಾಧ್ಯವಿಲ್ಲ. ಸ್ತರಗಳಿವೆ. ಇವತ್ತು ಸಾಹಿತ್ಯಕ್ಕೆ ಅನೇಕ ಪ್ರಕಾರಗಳಿವೆ. ಕಾವ್ಯ, ಸಾಹಿತ್ಯ, ಕಾದಂಬರಿ, ಅಂದಂದಿನ ಸಾಮಗ್ರಿ ಓದೋ ಪತ್ರಿಕೆ ಇರಬಹುದು. ಹಾಗೆ ನೋಡಿದರೆ ಅಂದಿಗಿಂತ ಇಂದಿನ ಓದುಗವರ್ಗ ಹೆಚ್ಚಾಗಿದೆ.

ಮತ್ತು ಈ ಓದುಗರಿಗೆ ಸಾಹಿತ್ಯದಿಂದ ಬರಬೇಕಾದ ಕಲ್ಪನೆ ಏನಿದೆ ಅದು ಸಾಹಿತ್ಯದಿಂದಲೇ ಬರಬೇಕಾಗಿಲ್ಲ. ಬೇರೆ ಕಡೆಯಿಂದಲೂ ಬರಬಹುದು. ಉದಾ : ಒಂದು ಕಾದಂಬರಿ ಚಲನಚಿತ್ರ ಆಯ್ತು ಅನ್ನಿ. ಅಷ್ಟರಮಟ್ಟಿಗೆ ಆ ಕಾದಂಬರಿಯನ್ನು ಓದದೆ ಇದ್ದವರು ಚಿತ್ರದ ಮೂಲಕ ಓದುವಂತೆ ಆಗುತ್ತಲ್ಲವೇ? ಮತ್ತು Cassetteಗಳ ಮೂಲಕ ಹಳ್ಳಿಜನಕ್ಕೂ ಕಾವ್ಯ ಗ್ರಹಿಸ್ತಾ ಇದ್ದಾರೆ. ಮತ್ತು ಬೇರೆ ಬೇರೆ ಕಡೆ ಕಾವ್ಯವಾಚನವನ್ನು ಕೇಳೋಂತದ್ದು. ಆಕಾಶವಾಣಿ, ದೂರದರ್ಶನದ ಮೂಲಕ. ಆದ್ದರಿಂದ ಇವತ್ತು ಮಾಧ್ಯಮಗಳು ಎಷ್ಟು ಹೆಚ್ಚಾಗಿವೆ ಇವು ಸಾಹಿತ್ಯಕ್ಕೆ ಆತಂಕಕಾರಿಯೇನೋ ಅನ್ನುವಂಥಾ ಒಂದು ಕಲ್ಪನೆಯನ್ನು ಒಂದು ಭ್ರಮೆಯನ್ನು ಹುಟ್ಟಿಸ್ತವೆ. ಬಹುಶಃ ನನಗೆ

ತಿಳಿದ ಹಾಗೆ ಎಲ್ಲವೂ ಕೂಡ ಸಾಹಿತ್ಯವನ್ನು ಮುಟ್ಟಿಸುವ ಕೆಲಸವನ್ನೇ ಮಾಡ್ತಾ ಇವೆ. ಆದರೆ ತಕ್ಕ ಪರಿಣತಿ ಬರಬೇಕು ಅಷ್ಟೆ. ಇವತ್ತು Commercial Culture ಅಂತ ಒಂದು ಮಾತು ಬಳಸ್ತೀವಿ. ಅಂದರೆ ಯಾವುದೇ ಒಂದು ಹಾಡನ್ನು ಹಾಡೋವಾಗ, ಓದುವಾಗ, ವಸ್ತುವನ್ನು ಅಥವಾ ಪುಸ್ತಕವನ್ನು ಗಂಭೀರವಾಗಿ ಮುಟ್ಟಿಸೋ ಒಂದು ಹಂತ ಉಂಟು. ಅದನ್ನು ನೀವು Commercial ಮಾಡಿ ಮುಟ್ಟಿಸುವಂಥ ಒಂದು ಹಂತವೂ ಉಂಟು. ಆದರೆ ಎಲ್ಲಿಯವರೆಗೆ ನಾವು ಸಾಹಿತ್ಯವನ್ನು ಓದುಗರಿಗೆ ಮುಟ್ಟಿಸುವಲ್ಲಿ ಒಂದು ಗಂಭೀರವಾದ ಕಾಳಜಿಗಳನ್ನು ವಹಿಸ್ತೇವೋ ಅಷ್ಟರ ಮಟ್ಟಿಗೆ ಅದು ಹೆಚ್ಚು ಫಲಪ್ರದ ಆಗ್ತದೆ. ಆದ್ದರಿಂದ ಓದುಗವರ್ಗ ನಮ್ಮಲ್ಲಿದೆ ನಿಜ. ಆ ಓದುಗವರ್ಗ ಅನೇಕ ಹಂತಗಳಿಂದ ಅದನ್ನು ಪಡೀತಾ ಇದೆ. ಹಿಂದಿನ ಸಂದರ್ಭಕ್ಕೆ ಹೋಲಿಸಿದರೆ ಇವತ್ತಿನ ಓದುಗವರ್ಗ ವಿಸ್ತಾರವಾಗಿದೆ.

ಆದರೆ ಇಲ್ಲೂ ಕೂಡ ಒಂದು ಸಾಹಿತ್ಯ ಕೃತಿಯನ್ನು ನಿಜವಾಗಿಯೂ ಗಂಭೀರವಾಗಿ ಪರಿಗಣಿಸುವಂಥ ವರ್ಗ ಎಲ್ಲ ಕಾಲಕ್ಕೂ ಕಡಿಮೇನೇ. ಆದರೆ ನೀವು ಹೇಳೋ ಹಾಗೆ LKG ಯಿಂದ ಸ್ನಾತಕೋತ್ತರದವರೆಗೂ ವಿದ್ಯಾರ್ಥಿ ಸಮುದಾಯವೇ ಓದುಗವರ್ಗ ಅಂತ ನಾವು ಒಪ್ಪಿಕೋಳ್ಳೋದಾದ್ರೆ ನಾವು ಹಿಂದಿನ ಓದುಗವರ್ಗಕ್ಕೂ ಇಂದಿನ ಓದುಗವರ್ಗಕ್ಕೂ ವ್ಯಾಪ್ತಿಯನ್ನು ಕಾಣಬೇಕು.

ಕಿರಂನಾ : *ನಿಮ್ಮ ಸಾಹಿತ್ಯ ವ್ಯಕ್ತಿತ್ವದ ಮತ್ತೊಂದು ಭಾಗ ನೀವು ಕನ್ನಡ ಅಧ್ಯಾಪಕರಾಗಿ ಮತ್ತು ಕನ್ನಡ ಅಧ್ಯಯನವನ್ನು ಒಂದು ರೀತಿ ಗಂಭೀರವಾದಂಥಹ ಒಂದು ಚಟುವಟಿಕೆಯಾಗಿ ಬೆಳೆಸಿದವರು.*

*ಹೀಗೆ ಹಿಂದಿನ ಅಧ್ಯಯನಕ್ರಮಕ್ಕಿಂತ ಹೊಸ ಅಧ್ಯಯನಕ್ರಮವನ್ನು ರೂಪಿಸುವಾಗ ನೀವು ಯಾವ Vision ಇಟ್ಟೊಂಡಿದ್ರಿ ?*

ಜಿಎಸ್.ಎಸ್. : ಕನ್ನಡ ಅಧ್ಯಯನಕ್ಕೆ ಕನ್ನಡ ತಿಳುವಳಿಕೆಯಷ್ಟೇ ಸಾಲದು. ಇದು Basis. ನಮಗೆ ಅನ್ಯ ಜ್ಞಾನ ಶಿಸ್ತುಗಳಿಂದ ಬರುವ ತಿಳುವಳಿಕೆ, ಅನ್ಯ ಸಾಹಿತ್ಯ ಪರಂಪರೆಯಿಂದ ಉಂಟಾಗುವ ವಿಸ್ತಾರ ಮತ್ತು ತೌಲಿಕ ವಿವೇಚನೆಯಿಂದ ನಾವು ಪಡೆಯಬಹುದಾದ ಲಾಭ ಮೂರು ಬಹಳ ಮುಖ್ಯವಾದ ನೆಲೆಗಟ್ಟುಗಳು. ನನ್ನ Vision ಹಿಂದೆ ಇರುವಂಥದ್ದು, ಇವು ಆದಕಾರಣ ಒಬ್ಬ ಸಾಹಿತ್ಯದ ವಿದ್ಯಾರ್ಥಿ ಒಂದು ಸಾಹಿತ್ಯ ಪರಂಪರೆಯಿಂದಷ್ಟೇ ಬೆಳೆಯಲು ಸಾಧ್ಯವಿಲ್ಲ. ಅಲ್ಲದೆ ಇವತ್ತು ನಮ್ಮ ಸಾಹಿತ್ಯ ಪರಂಪರೆಯ ಕಲ್ಪನೆ ಸಂಪೂರ್ಣವಾಗಿ ಭಿನ್ನವಾಗಿದೆ. ಇಲ್ಲಿ ನಮ್ಮ ಕವಿಗಳನ್ನೇ ತಗೊಳ್ಳಿ, ನಮ್ಮ ಹಿಂದಿನ ಕವಿಗಳಿಗಿದ್ದ ಕಲ್ಪನೆಗಳಿಗೂ ಇವತ್ತಿನ ಲೇಖಕರ ಕಲ್ಪನೆಗಳಿಗೂ ಸಂಪೂರ್ಣ ವ್ಯತ್ಯಾಸವಾಗಿದೆ. ಏಕೆಂದ್ರೆ ಹಿಂದೆ ನಮಗೆ ಸಂಸ್ಕೃತ ಸಾಹಿತ್ಯ

ಪರಂಪರೆ ಮತ್ತು ಕೆಲವು ಪ್ರಾದೇಶಿಕ ಸಾಂಸ್ಕೃತಿಕ ಪರಂಪರೆ ಮಾತ್ರ ಸಾಕಾಗಿತ್ತು. ಇವತ್ತು ಹಾಗಲ್ಲ. ಇಡೀ ಜಗತ್ತಿಗೆ ನಾವು ನಮ್ಮನ್ನು ತೆರೆದುಕೊಂಡಿದ್ದೇವೆ. ಹೀಗೇ ಜಾಗತಿಕ ಸಾಹಿತ್ಯ ಸಂದರ್ಭದಲ್ಲಿ ಕನ್ನಡವನ್ನು ಅಥವಾ ಯಾವುದೇ ಸಾಹಿತ್ಯವನ್ನು ಅಧ್ಯಯನ ಮಾಡುವಂಥಹವನ ದೃಷ್ಟಿಕೋನಗಳು ಖಂಡಿತವಾಗಿಯೂ ಬೇರೆ ಇರಬೇಕಾಗ್ತದೆ. ಈ ಅಧ್ಯಯನ ಕೇಂದ್ರದಲ್ಲಿ ನಾನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ವ್ಯವಸ್ಥೆಗೊಳಿಸುವ ಈ ಬಗ್ಗೆಯಾದ ಕಲ್ಪನೆಗಳು ಬಹಳ ಪ್ರಮುಖವಾಗಿದ್ದವು.

*ಕಿರಂನಾ : ನೀವು ಪಠ್ಯಪುಸ್ತಕಗಳ ಬಗೆಗೂ ಬಹಳ ಆಸಕ್ತಿ ವಹಿಸಿದಿರಿ.*

ಜಿಎಸ್.ಎಸ್. : ಪಠ್ಯಪುಸ್ತಕ ನಿರ್ಮಾಣ ಮಾಡೋದು ಕೂಡ ಪರಂಪರೆಯ ಒಂದು ಭಾಗವಾಗಬೇಕು. ವಿಚಾರ ಸಾಹಿತ್ಯವನ್ನು ಕೂಡ ನಾನು B.A.ತರಗತಿಗೆ ಇಟ್ಟೆ. ಅಂದ್ರೆ ಮುಖ್ಯವಾಗಿ ನಮ್ಮ ವಿದ್ಯಾರ್ಥಿಗಳಲ್ಲಿ ವೈಚಾರಿಕತೆಯನ್ನು ಪ್ರಚೋದನೆ ಮಾಡಬೇಕು. ತೌಲನಿಕ ದೃಷ್ಟಿಕೋನ ಪ್ರಚೋದನೆ ಆಗಬೇಕು. ಪರಂಪರೆಯ ಅರಿವನ್ನು ಅದು ಕಟ್ಟಿಕೊಡಬೇಕು. ಈ ಮೂರು ದೃಷ್ಟಿಗಳ ಹಿನ್ನೆಲೆಯಿಂದ ನಾವು ಅಧ್ಯಯನವನ್ನು ಮಾಡಿದ್ವಿ ಪಠ್ಯಪುಸ್ತಕಗಳಿಗೆ ಸಂಬಂಧಪಟ್ಟ ಹಾಗೆ.

*ಕಿರಂನಾ : ಭಾರತದಂತಹ ಒಂದು ಬಹು ಭಾಷಿಕ ಸಂದರ್ಭದಲ್ಲಿ ನಿಮ್ಮ ಸಾಹಿತ್ಯವನ್ನು ಬೇರೆ ಸಾಹಿತ್ಯದ ವಲಯಕ್ಕೆ ಅಥವಾ ಬೇರೆ ಸಾಹಿತ್ಯ ನಮ್ಮ ಸಾಹಿತ್ಯದ ವಲಯಕ್ಕೆ ಆದಾನ–ಪ್ರದಾನವಾಗುವ ಪ್ರಕ್ರಿಯೆ ಬಗ್ಗೆ ನಿಮ್ಮ ವಿಚಾರಗಳೇನು?*

ಜಿಎಸ್.ಎಸ್. : ನಾವು ಯಾವಾಗ ವಸಾಹತುಶಾಹಿ ಸಂದರ್ಭಕ್ಕೆ ಒಳಗಾದೆವೋ ಆಗ ಬಹುಮಟ್ಟಿಗೆ ನಾವು ಪಶ್ಚಿಮ ಮುಖಿಗಳಾಗಿಯೇ ನಮ್ಮ ಆಲೋಚನೆಗಳನ್ನು ಮುಂದುವರೆಸ್ತಾ ಬಂದೆವು. ಹೀಗಾಗಿ ನಮ್ಮ ಬಹುಭಾಷಿಕ ಸಾಹಿತ್ಯದ ಸಂದರ್ಭದ ಸಾಹಿತ್ಯದ ಬಗ್ಗೆ ಕೊಡಬೇಕಾದಷ್ಟು ಒತ್ತನ್ನು ನಾವು ಕೊಡಲು ಆಗಲಿಲ್ಲ. ಈಗ ಆ ಸಂದರ್ಭ ಬದಲಾಗಿದೆ. ಇವತ್ತು ಭಾರತೀಯವಾದ ಎಲ್ಲ ಸಾಹಿತ್ಯಗಳೂ ಕೂಡ ಬೇರೆ ಸಾಹಿತ್ಯ ಪ್ರಭಾವಗಳ ಹಿನ್ನೆಲೆಯಲ್ಲಿ, ತಮ್ಮದೇ ಆದ ವಿಶಿಷ್ಟವಾದ ಎತ್ತರವನ್ನು ಗಳಿಸಿಕೊಂಡಿವೆ. ಹೀಗಾಗಿ ಇವತ್ತು ಭಾರತೀಯ ಸಾಹಿತ್ಯ ಅಂತ ಏನು ಕರೀತೀವಿ ಅದು ಉಂಟೆ, ಯಾವುದು ಭಾರತೀಯ ಸಾಹಿತ್ಯ ಅನ್ನುವ ಒಂದು ಮೂಲಭೂತವಾದ ಪ್ರಶ್ನೆ ನಮ್ಮನ್ನು ಕಾಡುತ್ತೆ. ಅಂದಾಗ ಭಾರತೀಯ ಭಾಷೆಯಲ್ಲಿ ಬರೆದದ್ದೆಲ್ಲವೂ ಭಾರತೀಯ ಸಾಹಿತ್ಯವೇ. ಇದೇ ಸರಿಯಾದ ಉತ್ತರ ಅಂತ ಕಾಣ್ತದೆ. ಇಂಡಿಯಾ ದೇಶಕ್ಕೇ ಸಲ್ಲುವಂತಹ ಸಮಾನವಾದ ಅಂಶಗಳು ಎಲ್ಲ ಸಾಹಿತ್ಯದಲ್ಲೂ ಇರಬಹುದು. ನಮ್ಮ ದೇಶದ ಮುಖ್ಯವಾದ ಲಕ್ಷಣ ಅಂತ ಹೇಳಿದರೆ, ನಮ್ಮಲ್ಲಿ ಪ್ರತಿಯೊಂದು ಭಾಷಾ ವಿಚಾರಕ್ಕೂ, ಪ್ರತಿಯೊಂದು ಪ್ರಾದೇಶಿಕ

ಸಾಹಿತ್ಯಕ್ಕೂ ತನ್ನದೇ ಆದ ಸಂಸ್ಕೃತಿಗಳಿವೆ. ಅನೇಕ ಸಂಸ್ಕೃತಿಗಳ, ಉಪಸಂಸ್ಕೃತಿಗಳ ದೇಶ ಇದು. ಈ ದೃಷ್ಟಿಯಿಂದ ಭಾರತೀಯ ಸಾಹಿತ್ಯ ಅನ್ನೋದು ಈ ಎಲ್ಲ ಭಾಷೆಗಳ ಒಟ್ಟು ಸ್ವರೂಪವನ್ನು ಗಮನಿಸಿದರೂ ಕೂಡ ಪ್ರತಿಯೊಂದು ಭಾಷೆಯಲ್ಲಿ ರಚಿತವಾಗ್ತಾ ಇರೋದು ಭಾರತೀಯ ಸಾಹಿತ್ಯ ಈ ಪರಸ್ಪರ ಭಾರತೀಯ ಸಾಹಿತ್ಯದ ನಡುವೆ ಅಡ್ಡಿಯಾಗಿರೋದು ಭಾಷೆಗಳು. ಹೀಗಾಗಿ ಬಹುಭಾಷಿಕವಾದ ಭಾರತೀಯ ಪರಿಸರದೊಳಗೆ ನಾವು ಒಂದು ಸಾಹಿತ್ಯದಿಂದ ಮತ್ತೊಂದು ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳೋದು ಕಷ್ಟವಾಗಿದೆ. ೧೫, ೧೬, ೨೨ ಭಾಷೆಗಳಿರುವ ಈ ಪರಿಸರದೊಳಗೆ ಎಲ್ಲ ಭಾಷೆ ನಾವು ಕಲಿಯಲು ಆಗಲ್ಲ. ಕಡೇ ಪಕ್ಷ ನಮಗೆ ಸಾಧ್ಯವಾದಷ್ಟು ಭಾಷೆಗಳನ್ನು ಕಲಿತುಕೊಂಡು, ಅದರ ಮೂಲಕ ನಾವು ಬೇರೆ ಸಾಹಿತ್ಯ ಅರ್ಥ ಮಾಡಿಕೊಳ್ಳಬಹುದು. ಇರುವ ಒಂದೇ ಮಾರ್ಗ ಅಂದ್ರೆ... ಅನುವಾದ. ಆ ದೃಷ್ಟಿಯಿಂದ ನಮ್ಮ ಸಾಹಿತ್ಯ ಅನ್ಯಭಾಷೆಗೆ ಹೋಗೋದಾಗಲೀ, ಅನ್ಯವಾದ ಭಾಷೆಯ ಉತ್ಕೃಷ್ಟ ಸಾಹಿತ್ಯ ನಮ್ಮ ಭಾಷೆಗೆ ಬರೋದಾಗಲೀ ಶ್ರೇಷ್ಠವಾದ ಅನುವಾದಗಳ ಮೂಲಕ ಸಾಧ್ಯ. ಹೀಗಾಗಬೇಕಾದರೆ ಎಲ್ಲ ಭಾಷೆಗಳಲ್ಲೂ ಪರಿಣತರಾಗುವ ಒಂದು ತಂಡ ಮೊದಲು ಸಿದ್ಧವಾಗಬೇಕಾಗುತ್ತದೆ. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ ಪ್ರತಿಯೊಂದು ಭಾಷಾಪ್ರಸಂಗದಲ್ಲೂ ಅನೇಕ ಭಾಷೆಗಳನ್ನು ಬಲ್ಲಂಥ ಅನುವಾದಕರ ತಂಡ ಸಿದ್ಧವಾಗಿ ಒಂದು ಭಾಷೆಯ ಉತ್ಕೃಷ್ಟ ಕೃತಿಗಳು ಮತ್ತೊಂದು ಭಾಷೆಗೆ ಅನುವಾದ ಆಗೋದ್ರ ಮೂಲಕ ನಾವು ಆದಾನ–ಪ್ರದಾನ ಮಾಡಬಹುದು. ಇದರ ಜೊತೆಗೆ ಕನ್ನಡದ ಶ್ರೇಷ್ಠ ಕೃತಿಗಳು ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದವಾಗುವ ಅಗತ್ಯ ಕೂಡ ಇದೆ.. ಹಾಗೇನೇ ಜಗತ್ತಿನ ಅನೇಕ ಭಾಷೆಗಳನ್ನು ಅದರ ಮೂಲದಲ್ಲಿಯೇ ಕಲಿತು ಅಲ್ಲಿನ ಕೃತಿಗಳನ್ನು ಕನ್ನಡಕ್ಕೆ ತರುವಂಥ ಕೆಲಸ ಆಗಬೇಕು. ಅನ್ಯದೇಶೀಯ ಕೃತಿಗಳು ಇಂಗ್ಲಿಷಿನ ಮೂಲಕ ನಮಗೆ ಬಂದಿವೆ. ಆದರೆ ಅದಕ್ಕಿಂತ ಮೂಲದಿಂದ ಬಂದ್ರೆ ಚೆನ್ನಾಗಿರುತ್ತದೆ. ಹಾಗಾಗಿ ಭಾಷೆಗಳನ್ನು ಕಲಿತು ಅಲ್ಲಿಂದಲೇ ಬಂದಾಗ ಅದು ಹೆಚ್ಚು ಉತ್ಕೃಷ್ಟವಾಗುತ್ತೆ.

*ನರಹಳ್ಳಿ : ಈ ೮೦ರ ದಶಕದ ನಂತರದಲ್ಲಿ ನಾವು ಕನ್ನಡ ಸಾಹಿತ್ಯವನ್ನು ಗಮನಿಸಿದರೆ ಅನೇಕ ಕಿರು ಸಂಸ್ಕೃತಿಗಳು, ಉಪಸಂಸ್ಕೃತಿಗಳು ಸಾಹಿತ್ಯರಂಗಕ್ಕೆ ಬಂದಿರೋದನ್ನ ನಾವು ಕಾಣ್ತೇವೆ. ಈ ಹಿನ್ನೆಲೆಯಲ್ಲಿ ಇವತ್ತಿನ ಸಾಹಿತ್ಯ ಸಂದರ್ಭದ ಬಗ್ಗೆ.. ಏನನ್ನಿಸುತ್ತೆ ?*

ಜಿಎಸ್.ಎಸ್. : ಯಾವತ್ತೂ ಕನ್ನಡ ಸಾಹಿತ್ಯ ಪರಂಪರೆಯ ಬಗ್ಗೆ ನಾನು ನಿರಾಶೆ ತಾಳಿದವನಲ್ಲ. ಮುಖ್ಯವಾದ ಹಲವು ಚಳವಳಿಗಳು ಈಗಾಗಲೇ ನಮ್ಮ ಮುಂದೆ ಇದೆ. ಈ ಹೊತ್ತಿನ ಸಾಹಿತ್ಯ ಸಂದರ್ಭದಲ್ಲಿ ದಟ್ಟವಾದ ಸಾಮಾಜಿಕ ಕಾಳಜಿಗಳುಳ್ಳ

ಅನೇಕ ಹೊಸ ಧ್ವನಿಗಳು ಬರ್‍ತಾ ಇವೆ. ಆದರೆ ಇವತ್ತಿನ ಬರೆಹಗಾರರ ವಿಚಾರದಲ್ಲಿ ಒಂದು ಅತೃಪ್ತಿ ಏನಂದ್ರೆ ಅವರು ತಮಗಿಂತ ಹಿಂದಿನ ಸಾಹಿತ್ಯವನ್ನು ಪರಿಚಯ ಮಾಡಿಕೊಳ್ಳುವ ಹುಮ್ಮಸ್ಸು, ಉತ್ಸಾಹ ತೋರಿಸಿಲ್ಲ ವೇನೋ ಎಂಬ ಗುಮಾನಿ ನನಗಿದೆ. ಈ ದೃಷ್ಟಿಯಿಂದ ನಮ್ಮ ಇವತ್ತಿನ ಹೊಸ ಬರಹಗಾರರು ಮುಖ್ಯವಾಗಿ ತಮಗಿಂತ ಹಿಂದಿನ ಪರಂಪರೆ ಒಳಗೆ ಕಾವ್ಯವನ್ನು ಆ ಲೇಖಕರು ಎಷ್ಟು ಗಂಭೀರವಾಗಿ, ಪ್ರಯೋಗಶೀಲರಾಗಿ ನಿರ್ವಹಿಸಿದರು ಎಂಬ ಪ್ರಜ್ಞೆಯನ್ನು ಹೆಚ್ಚು ಹೆಚ್ಚು ಇವರು ತಿಳಿದಷ್ಟೂ, ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸತ್ತ್ವ ಪ್ರಾಪ್ತವಾಗಬಹುದು ಅಂತ ನನಗೆ ಅನ್ನಿಸ್ತಾ ಇದೆ. ಹೀಗಾಗಿ ನಮಗೆ ಅನೇಕ ಬರೆಹಗಾರರಿದ್ದಾರೆ. ಹಾಗೆ ನೋಡಿದರೆ ನವ್ಯ ಕಾವ್ಯದ ನಂತರ ನಾವು ನೋಡೋದಾದ್ರೆ ಎತ್ತರದ ಬರಹಗಾರರು ಬಹಳ ಕಡಿಮೆಯಾಗಿದ್ದಾರೆ. ಒಂದೊಂದು ಚಳವಳಿಗಳನ್ನು ನಾವು ಕಂಡಾಗ ನವೋದಯ, ನವ್ಯ ಹೀಗೆ ಅವು ಎಷ್ಟು ಎತ್ತರದ ಸಾಹಿತಿಗಳನ್ನು ಕೊಡ್ತೋ, ಮೌಲ್ಯಗಳನ್ನು ಕೊಡ್ತೋ ಅಷ್ಟೇ ಮೌಲ್ಯದ, ಎತ್ತರದ ಕೃತಿಗಳು ಇವತ್ತು ಬರ್‍ತಾ ಇದೆಯೇ ಅಂತ ಅನುಮಾನವನ್ನು ನಾವು ವ್ಯಕ್ತಪಡಿಸಬೇಕಾಗಿದೆ. ಒಂದು ಮಹತ್ವಾಕಾಂಕ್ಷೆಯ ಅಭಾವ ನಮ್ಮ ಪರಿಸರದಲ್ಲಿ ಇದೆ ಅಂತ ನನಗೆ ಕಾಣಿಸ್ತಾ ಇದೆ.

*ಕಿರಂನಾ* : *ಹೊಸ ಚಳವಳಿಗಳಲ್ಲಿ ಅಂತ ಅಂತೀರಿ. ಆದರೆ ಬೇರೆ ಬೇರೆ ಸಾಹಿತ್ಯ ಚಳವಳಿಗಳಿಗೆ ಸೇರಿದ ಮಹತ್ವದ ಕೃತಿಗಳು ಲೇಖಕರಿಂದ ಬರ್‍ತಾ ಇವೆ ಅನ್ನೋದನ್ನು ನಾವು ಒಪ್ಪಲೇಬೇಕು.*

ಜಿಎಸ್.ಎಸ್. : ಅದು ನಿಜ. ಹಿರಿಯ ಹಳೆ ತಲೆಮಾರಿನ ಬೇರೆ ಅನ್ಯ ಚಳವಳಿಗಳಲ್ಲಿ ಭಾಗವಹಿಸಿದಂಥವರು, ಚಳವಳಿಯ ಆಚೆಯ ನೆಲೆಗಳಲ್ಲಿ ಉತ್ಕೃಷ್ಟವಾದ ಕೃತಿಗಳನ್ನು ಕೊಟ್ಟಿದ್ದಾರೆ. ಆದರೆ, ಪ್ರಸ್ತುತವಾದ ಸಾಹಿತ್ಯ ಸಂದರ್ಭ ಅಂತ ಮಹತ್ವಾಕಾಂಕ್ಷೆಗಳನ್ನು ಹೊಂದಿದೆಯೇ ಅಂತ ಕಳೆದ ಒಂದು ದಶಮಾನದ ಸಾಹಿತ್ಯವನ್ನು ನೋಡಿದಾಗ ನನಗೆ ಅನುಮಾನ ಬರುತ್ತೆ

*ಕಿರಂನಾ* : *ದೇವನೂರು ಮಹಾದೇವ ಅಂತ ಲೇಖಕರನ್ನು ಗಮನದಲ್ಲಿಟ್ಟುಕೊಂಡ್ರೆ ಒಂದು ಒಳ್ಳೆಯ making ಹೇಗಿದೆ ಅಂತ....*

ಜಿಎಸ್.ಎಸ್. : ಸೂಚನೆಗಳಿವೆ. ಆದರೆ... ಅನ್ನಿಸಲ್ಲ. ನಾವು ತುಂಬಾ ಶ್ರೀಮಂತವಾದ ಕಾಲವನ್ನು ನೋಡಿದವರು.

*ನರಹಳ್ಳಿ* : *ಅಂಥ ಒಂದು ಉದಾಹರಣೆ ಸಿಗಬಹುದು ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಸಿಗೋದು....*

*ಕಿರಂನಾ* : *ಒಂದು ಪ್ರಸ್ತಾಪಿಸಿದೆ. ಬಹುಶಃ ಹತ್ತಾರು ಉದಾಹರಣೆ ಕೊಡಬಹುದು. (ನಗು)*

ನರಹಳ್ಳಿ : *ಮೇಷ್ಟ್ರ ಅಭಿಪ್ರಾಯ ಹೆಚ್ಚಿನ ಸಂಖ್ಯೆಯಲ್ಲಿ ಕಾಣ್ತಾ ಇಲ್ಲ ಅಂತ.*
(ನಗು) (ಜಿಎಸ್.ಎಸ್. ಮೌನ)

ಕಿರಂನಾ : *ನಿಮ್ಮ ಕವಿತೆ ನಾಡಿನಾದ್ಯಂತ ಓದುಗರ, ಕೇಳುಗರ ವಿಶೇಷವಾದ ಆಸಕ್ತಿಗೆ ಪಕ್ಕಾಗಿದೆ.*

ಜಿಎಸ್.ಎಸ್. : ಆ ವಿಚಾರದಲ್ಲಿ ನಾನು ಅದೃಷ್ಟಶಾಲಿ ಅಂತಾನೇ ಹೇಳಬೇಕು. ಯಾವತ್ತೂ ನನ್ನ ಕವಿತೆಯನ್ನು ಕನ್ನಡ ನಾಡಿನ ಜನ ತುಂಬ ಪ್ರೀತಿಯಿಂದ ಸ್ವೀಕರಿಸಿದ್ದಾರೆ. ಅನ್ನೋ ವಿಶ್ವಾಸವೇ ನನ್ನ ಕವಿತೆಯ ವಿಮರ್ಶೆ ಅಂತ ನಾನು ತಿಳ್ಕೊಂಡಿದ್ದೇನೆ.

ಕಿರಂನಾ : *ಖಂಡಿತವಾಗಿ.*

ನರಹಳ್ಳಿ : *ನಾಲ್ಕು ದಶಕಗಳ ಸಾಹಿತ್ಯದ ಒಡನಾಟದ ನಿಮ್ಮ ಜೊತೆ ಇಷ್ಟು ಹೊತ್ತು ಸಂವಾದ ನಡೆಸಿದ್ದು ಚೇತೋಹಾರಿ ಅನುಭವ.*

ಕಿರಂನಾ : *ನಿಮಗೆ ನಾವು ಕೃತಜ್ಞರು. ನಮಸ್ಕಾರ.*

ಜಿಎಸ್.ಎಸ್. : ಈ ಸಂವಾದ ನನಗೂ ಖುಷಿ ತಂದಿದೆ. ನಡೆಸಿದ ನಿಮಗೆ ವಂದನೆಗಳು.

*ಧ್ವನಿಮುದ್ರಣ ದಿನಾಂಕ: ೧೦.೮.೯೨*

*ಪ್ರಸಾರ : ೧೬.೮.೯೨*

■■

# ರಾಷ್ಟ್ರಕವಿ ಕು.ವೆಂ.ಪು. ಅವರ ಜನ್ಮದಿನದ ಸಂದರ್ಭದಲ್ಲಿ ಡಾ॥ ಜಿ.ಎಸ್.ಶಿವರುದ್ರಪ್ಪ ಅವರೊಂದಿಗೆ ಸಂದರ್ಶನ

*ಸಂದರ್ಶಕರು : **ವೈ.ಕೆ.ಮುದ್ದುಕೃಷ್ಣ***

*ದಿನಾಂಕ : ೨೯.೧೨.೨೦೦೩*

**ಮುದ್ದುಕೃಷ್ಣ :** *ನಮಸ್ಕಾರ*

**ಜಿ.ಎಸ್.ಎಸ್. :** ನಮಸ್ಕಾರ

**ಮುದ್ದುಕೃಷ್ಣ :** *೨೦ನೇ ಶತಮಾನ ಕಂಡ ಭವ್ಯ ಕವಿ ಕುವೆಂಪು. ಕುವೆಂಪು ಅವರ ಶತಮಾನೋತ್ಸವ ಸಂದರ್ಭದಲ್ಲಿ ಎಲ್ಲ ಸಿದ್ಧತೆಗಳನ್ನೂ ಸರ್ಕಾರ ಮಾಡ್ತಾ ಇದೆ. ಇವತ್ತು ಅವರನ್ನು ತೀರ ಹತ್ತಿರದಿಂದ ನೋಡಿದ ನಿಮ್ಮನ್ನು ಮಾತಾಡಿಸ್ತಾ ಇದ್ದೇವೆ. ತಮಗೆ ಅವರ ಪ್ರೇರೇಪಣೆ ಹೇಗಾಯ್ತು ಅಂತ ಹೇಳಬೇಕು.*

**ಜಿ.ಎಸ್.ಎಸ್. :** ೨೦ನೇ ಶತಮಾನದ ಬಹಳ ಪ್ರಮುಖವಾದ ಸಾಹಿತಿ ಅನ್ನೋ ಮಾತನ್ನು ಪ್ರಸ್ತಾಪಿಸಿದಿರಿ. ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೇ ೨೦ನೇ ಶತಮಾನದ ಮೊದಲ ೪ ದಶಕಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅತ್ಯಂತ ಅನನ್ಯ ಕಾಲ. ಏಕೆಂದರೆ, ಕನ್ನಡ ಸಾಹಿತ್ಯ ಚರಿತ್ರೆಯ ಯಾವ ಸಂದರ್ಭದಲ್ಲೂ ಕೂಡ ಇಷ್ಟೊಂದು ಎತ್ತರದ ಸಾಹಿತಿಗಳು ನಮ್ಮಲ್ಲಿ ಕಂಡಿಲ್ಲ. ಮಾಸ್ತಿ, ಬೇಂದ್ರೆ, ಕಾರಂತ, ಕುವೆಂಪು ಇಂತಹವರನ್ನು ನೋಡಿದ್ರೆ ಗೊತ್ತಾಗುತ್ತೆ. ಅತ್ಯಂತ ಸಮೃದ್ಧ ಕಾಲ. ಇದನ್ನು ನವೋದಯ ಅಂತ ಕರೀತೀವಿ. ಈ ನವೋದಯ ಸಂದರ್ಭದಲ್ಲಿ ಅತ್ಯಂತ ಮಹತ್ವದ ಸಾಧನೆಯನ್ನು, ವಿಸ್ತಾರ, ಆಳಗಳಲ್ಲಿ ದೊಡ್ಡ ಕೆಲಸ ಮಾಡಿದ ಸಾಹಿತಿಗಳಲ್ಲಿ ಕುವೆಂಪು ಬಹಳ ಮುಖ್ಯ ಆಗ್ತಾರೆ. ಇಂತ ಸಾಹಿತಿಯ ಶಿಷ್ಯನಾಗುವ ಭಾಗ್ಯ ನನ್ನ ಪಾಲಿಗೆ ಒದಗಿ ಬಂದಿತು. ಕುವೆಂಪು ಅವರನ್ನು ಕಾಣುವುದಕ್ಕೆ ಮೊದಲೇ ಅವರ ಕಾವ್ಯ ಮತ್ತು ನಾಟಕಗಳ ದಟ್ಟ ಪ್ರಭಾವ ನನ್ನ ಮೇಲೆ ಆಗಿತ್ತು. ಒಂದು ದೃಷ್ಟಿಯಿಂದ ಶಿವರಾಮಕಾರಂತರು ಮತ್ತು ಕುವೆಂಪು ಇಬ್ಬರೂ ನನ್ನ ಸಾಹಿತ್ಯವನ್ನು ರೂಪಿಸಿದ ಶಕ್ತಿಗಳು ಅಂತ ಹೇಳಬಹುದು.

ಶಿವರಾಮಕಾರಂತರ ಬಾಲ ಪ್ರಪಂಚದ ಮೂಲಕ ತೆರೆದುಕೊಂಡ ವಾಸ್ತವದ ದಟ್ಟ ಅನುಭವಗಳು ಕುವೆಂಪು ಅವರ ಕಾವ್ಯದ ಮೂಲಕ ತೆರೆದುಕೊಂಡ ರಮ್ಯ ಅನುಭವ ನಿಸರ್ಗಾನುಭೂತಿ, ಅನುಭವಗಳು ನನ್ನ ಮೇಲೆ ಗಾಢವಾದ ಪ್ರಭಾವವನ್ನು ಉಂಟು ಮಾಡಿದೆ. ಮಹಾರಾಜಾ ಕಾಲೇಜಿನಲ್ಲಿ ನಾನು ಐದು ವರ್ಷಗಳ ಕಾಲ ನಿರಂತರವಾಗಿ ಅವರ ವಿದ್ಯಾರ್ಥಿಯಾಗಿದ್ದೆ. ಆನಂತರ ನನ್ನ ಸಂಶೋಧನಾ ಪ್ರಬಂಧಕ್ಕೆ ಅವರು ಮಾರ್ಗದರ್ಶಿಗಳಾಗಿದ್ದರು ಕೂಡ. ಇದು ನನ್ನ ಸೌಭಾಗ್ಯ. ಹೀಗೆ ನನ್ನ ವಿದ್ಯಾರ್ಥಿ ಜೀವನದಲ್ಲಿ ಅವರನ್ನು ತೀವ್ರ ಹತ್ತಿರದಿಂದ ಕಂಡವನು ನಾನು.

ಪ್ರ : *ಐದು ವರ್ಷ ಅವರ ಜೊತೆನೇ ನೀವಿದ್ರಿ ಅಂತ ಕೇಳೋದೇ ಒಂದು ರೋಮಾಂಚನ ನಮಗೆ. ಕುವೆಂಪು ಅವರನ್ನು ಶಿಕ್ಷಕರಾಗಿ ತರಗತಿನಲ್ಲಿ ಹೇಗೆ ಕಾಣ್ತಾ ಇದ್ದಿರಿ?*

ಉ : ಅವರ ತರಗತಿಗಳು ಬಹಳ ವಿಶಿಷ್ಟವಾದ ತರಗತಿಗಳು. ಬಹಳ ಪರಿಮಿತವಾದ ವಿದ್ಯಾರ್ಥಿಗಳಿದ್ದ್ವಿ ನಾವು. ಆಗ ೭-೮ ಜನ. ಅಲ್ಲಿ ನಮಗೆ ಅವರು ಪಾಠ ಮಾಡೋವಾಗ ಕೇವಲ ಕನ್ನಡ ಸಾಹಿತ್ಯವನ್ನು ಮಾತ್ರ ಮಾಡ್ತಾ ಇರಲಿಲ್ಲ. ಪಂಪ ಕವಿ ಕುರಿತು ಹೇಳೋವಾಗ, Homerನ ಅನ್ನು ಪಕ್ಕದಲ್ಲಿಟ್ಟುಕೊಂಡು ಹೇಗೆ ಜಾಗತಿಕ ಪ್ರಜ್ಞೆ ವಿಸ್ತಾರದಲ್ಲಿ ನಮ್ಮ ಕವಿಗಳನ್ನು ಅರ್ಥ ಮಾಡಿಕೊಳ್ಳಬಹುದು ಅಂತ ತಿಳಿಸೋರು. ಇದು ಬಹಳ ಮುಖ್ಯವಾದದ್ದು. ಒಬ್ಬ ಕವಿಯನ್ನು ಕೇವಲ ಕನ್ನಡದ ಸಂದರ್ಭದಲ್ಲಿ ಮಾತ್ರ ಅಲ್ಲ, ಜಗತ್ತಿನ ಪ್ರಜ್ಞೆಯಲ್ಲಿ ಕನ್ನಡವನ್ನು ಹೇಗೆ ಕಟ್ಟಬಹುದು ಅಂತ ಹೇಳ್ತಾ ಇದ್ದರು. ಅದು ಕಾವ್ಯ ಮೀಮಾಂಸೆ ಇರಬಹುದು ಅಥವಾ ಹಳಗನ್ನಡ ಇರಬಹುದು ಪಾಠ ಮಾಡೋವಾಗ ಹಾಗೇ ಮಾಡ್ತಾ ಇದ್ದರು.

ಎರಡನೇದು ಅವರ ಕವಿತೆ ಅತ್ಯಂತ ಆಕರ್ಷಕ. ಸಮಕಾಲೀನ ಜೀವನದಲ್ಲಿ ಕವಿತೆ ಮಾಡಿದ ಪ್ರಭಾವ ಬೊಮ್ಮನಹಳ್ಳಿ ಕಿಂದರಿ ಜೋಗಿಯಿಂದ ಹಿಡಿದು, ರಾಮಾಯಣ ದರ್ಶನದವರೆಗೆ ಚಿಕ್ಕಮಕ್ಕಳಿಂದ ಹಿಡಿದು ಅತ್ಯಂತ ಪ್ರೌಢ ಮನಸ್ಸಿನವರೆಗೆ ಎಲ್ಲ ಕಾಲಕ್ಕೆ ಸಲ್ಲುವ ಕವಿ ಕುವೆಂಪು ಅಂತ ಹೇಳಬಹುದು. ನನ್ನ ಕವಿತೆಯ ಮೇಲೆ ಅವರ ಪ್ರಭಾವ ಬಹಳ ದಟ್ಟವಾಗಿಯೇ ಆಗಿದೆ. ಆನಂತರ ನಾನು ಆ ಪ್ರಭಾವದಿಂದ ತಪ್ಪಿಸಿಕೊಳ್ಳಲು ಕಷ್ಟಪಟ್ಟೆ. ದೊಡ್ಡ ಆಲದ ಮರದ ಕೆಳಗೆ ಸಣ್ಣ ಸಸಿಗಳು ಬೆಳೆಯೋದು ಬಹಳ ಕಷ್ಟ. ಒಂದು ದೃಷ್ಟಿಯಿಂದ ಎಷ್ಟು ಆಕರ್ಷಕವಾಗಿದ್ದರೋ ಅಷ್ಟೇ ಆಕ್ರಮಣಕಾರಿಯಾಗಿಯೂ ಇದ್ದರು. ಅವರ ವ್ಯಕ್ತಿತ್ವದ ಮೂಲಕ ನಾವು ಹೇಗೆ ಮನುಷ್ಯ ಸ್ವಾತಂತ್ರ್ಯನಾಗಬಹುದು ಅನ್ನೋದನ್ನು ಕಾಣಬಹುದು. ಕುವೆಂಪು ಪ್ರತಿಪಾದಿಸಿದ್ದೇ ಇದು. ಪ್ರತಿಯೊಬ್ಬನೂ ಸ್ವಂತ ಆಲೋಚನೆ ಬೆಳೆಸಿಕೊಂಡು ವ್ಯಕ್ತಿಯಾಗಬೇಕು ಅಂತ. ಅದನ್ನು ಕಲಿಯುವ ಪ್ರಯತ್ನ ನಾವು ಮಾಡಿದೆವು ಇದು ಕುವೆಂಪು ಅವರ ಜೊತೆಗಿನ ನನ್ನ ಸಂಬಂಧ.

ಒಂದು ಸಲ ಏನಾಯ್ತು ಅಂಥರೆ ನಾನು ಪದ್ಯ ಬರೀತಾ ಇದ್ದೆ. ಅವರ ಪ್ರಭಾವದ

ಮೇಲೇ ಬರೀತಾ ಇದ್ದೆ. ನನ್ನ ಒಂದು ಪದ್ಯಕ್ಕೆ ಕರ್ನಾಟಕ ಸಂಘದ ಬಹುಮಾನ ಬಂತು. ಪುಟ್ಟಪ್ಪನವರಿಗೆ ನಾನು ಪದ್ಯ ಬರೀತೀನಿ ಅಂತ ಗೊತ್ತಾಯ್ತು. ತರಗತಿಯಲ್ಲಿ ನನ್ನ ಕರೆದು ಅದ್ಯಾವ ಪದ್ಯ ತೊಗೊಂಡು ಬಾ ಅಂದ್ರು ನಾನು ಸ್ವಲ್ಪ ಗಾಬರಿಯಿಂದ ಅವರಿಗೆ ಅದನ್ನು ಕೊಟ್ಟೆ, ಆ ಪದ್ಯ ಹೇಗೆ ಶುರು ಆಗುತ್ತೆ ಅಂದರೆ

ಉಡುಗಣಗಳೊಡೆಯಂಬರದ ವಕ್ಷಸ್ಥೋಮ ಹೇಮದಾಮ....................................
ಹೀಗೆ

ಇದು ಯಾರ ಮುದ್ರೆ ಅಂತ ನಿಮಗೆ ಗೊತ್ತು. ಓದಿದ್ರು, 'ಏನಿದು ಬರೆದಿರೋದು ನೀವು?' ಅಂದ್ರು, 'ಏನಿಲ್ಲ ಸಾರ್.... ಹಂಪೆಗೆ ಹೋದಾಗ ಒಂದು ರಾತ್ರಿ ಆಕಾಶದಲ್ಲಿ, ಬೆಳದಿಂಗಳಲ್ಲಿ, ಮೋಡ ಹೋಗೋದು ನೋಡಿ ಅದು......' ಅಂದೆ. 'ಒಳ್ಳೆ ಮಧ್ಯಾಹ್ನದ ವರ್ಣನೆ ಇದ್ದ ಹಾಗೆ ಇದೆಯಲ್ರೀ ಇದು ನೀವು ಬರೆದಿರೋದು ಅಂದ್ರು.....'. ನನಗೆ ಗಾಬರಿ ಆಗೋಯ್ತು. ಆಗ ಅವರೇ ಪ್ರೀತಿಯಿಂದ ಕೂಡಿಸಿಕೊಂಡು, ಹೇಗೆ ಪದ್ಯ ಬರೀಬೇಕು, ಪೂರ್ವ ಸಿದ್ಧತೆ ಏನುಬೇಕು, ಹೇಗೆ ಪ್ರಭಾವದಿಂದ ಮುಕ್ತವಾಗಿ ಸ್ವಂತಿಕೆ ಬೆಳೆಸಿಕೋಬೇಕು ಅಂತ ಕಲಿಸಿದರು ಇದು ಮುಖ್ಯ ಘಟನೆ ಅವರ ಜೊತೆ.

ಆಮೇಲೆ ನಾನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾದಾಗ ೧೯೯೨ರಲ್ಲಿ ಅವರನ್ನು ಭೇಟಿ ಮಾಡಲು ಹೋದೆ. ಆ ವೇಳೆಗಾಗಲೇ ಅವರು ಶರಶಯ್ಯೆಯಲ್ಲಿ ಮಲಗಿದ ಭೀಷ್ಮರ ಹಾಗೆ ಹಾಸಿಗೆ ಹಿಡಿದಿದ್ರು, ಯಾರ ಜೊತೆಗೂ ಮಾತಾಡ್ತಾ ಇರಲಿಲ್ಲ. ಒಂದು ರೀತಿ withdraw ಮಾಡ್ತಾರಲ್ಲ ಹಾಗೇ. ಲೋಕದ ಜೊತೆ ಸಂಪರ್ಕನೇ ಕಳ್ಕೊಂಡು ತಾನೇ ತಾನಾಗಿರುವ ಸ್ಥಿತಿಗೆ ಬಂದಿದ್ರು, ಯಾವ ಕಾರ್ಯಕ್ರಮಕ್ಕೂ ಯಾವುದಕ್ಕೂ ಬರ್ತಾ ಇರಲಿಲ್ಲ. ಅಂತಾ ಹೊತ್ತಿನಲ್ಲಿ ನಾನು ಅವರ ಆಶೀರ್ವಾದ ಕೋರಿ ಅವರ ಮನೆಗೆ ಹೋದೆ. ಅವರು ಯಾರನ್ನೂ ನೋಡೋದಿಲ್ಲ ೨ ನಿಮಿಷ ನಿಮಗೆ ಅವಕಾಶ ಕೊಡ್ತೀವಿ ಅಂತ ಅವರ ಮಗಳು ಅಳಿಯ ಹೇಳಿದರು. ನಾನು ಒಳಗೆ ಹೋದೆ. ಮಾತಾಡಲಿಲ್ಲ ಕುವೆಂಪು. ನನ್ನ ಕೈಯನ್ನು ಹಿಡಕೊಂಡ್ರು, ಸ್ಪರ್ಶದಲ್ಲಿ ಅವರು ನನ್ನ ನೋಡ್ತಾ ಇದ್ದರು. ನಾನೂ ಅವರನ್ನೇ ನೋಡ್ತಾ ಇದ್ದೆ. ದುಃಖ ಬಂತು..... ಅವರ ಮಗಳು ಹೇಳಿದಳು ಈ ಸಲ ಇವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ ಅಂದ್ರು, ಮುಖದಲ್ಲಿ ಮಿನುಗು ಬಂತು. ಮಾತಾಡಲಿಲ್ಲ. ಕೊನೆಗೆ ನಾನು ಮೇಲಕ್ಕೆ ಎದ್ದೆ. "ಜೈ ಶ್ರೀ ಗುರುಮಹಾರಾಜ್ ಕೀ ಜೈ" ಅಂದ್ರು, ರಾಮಕೃಷ್ಣರ ಕೃಪೆ ತನ್ನ ಶಿಷ್ಯನ ಮೇಲಿರಲಿ ಅಂತ. ಇವತ್ತಿಗೂ ಆ ಭೇಟಿ ನನಗೆ ಅಚ್ಚೊತ್ತಿದ ಹಾಗೆ ಇದೆ. ಇದೆ ನನ್ನ ಅವರ ಕೊಟ್ಟ ಕೊನೆಯ ಭೇಟಿ.

ಪ್ರ : *ನೀವು ಅವರ ಶಿಷ್ಯರು, ಅವರ ಕೊಡುಗೆ ಅನ್ನೋದು ನಮಗೆ ತುಂಬಾ ಹೆಮ್ಮೆ. ಕುವೆಂಪು ಅವರ ಸಾಹಿತ್ಯದ ಸಂದರ್ಭದಲ್ಲಿ ನೋಡಿದಾಗ ಅವರು ನಿಸರ್ಗಕ್ಕೆ ಸಂಬಂದಪಟಂತೆ ಕಾವ್ಯರಚನೆ ಮಾಡಿದಾರೆ. ಪ್ರೇಮ ಗೀತೆಗಳನ್ನು ಬರೆದಿದಾರೆ.*

*ವೈಚಾರಿಕ ಗೀತೆಗಳು ಹೀಗೆ..... ರಾಮಾಯಣದರ್ಶನಂ ತೊಗೊಂಡ್ರೆ...... ಸರ್.. ಬೇಕಾದಷ್ಟು ಜನ ರಾಮಾಯಣ ಬರೆದಿದ್ದಾರೆ. ಕುವೆಂಪು ಅವರ 'ರಾಮಾಯಣದ' ವಿಶಿಷ್ಟತೆ ಏನು ಸರ್?*

ಉ : ನಿಸರ್ಗ ಅಂದ್ರಿ, ಆ ಬಗ್ಗೆ ಎರಡು ಮಾತು ಮೊದಲು ಹೇಳ್ತೀನಿ. ಕುವೆಂಪು ಸಹ್ಯಾದ್ರಿಯ ಅರಣ್ಯ ಪ್ರದೇಶದ ದಟ್ಟವಾದ ಅನುಭವಗಳನ್ನು ತಮ್ಮ ಕವಿತೆಯಲ್ಲಿ ಹೇಳಿದ್ದಾರೆ. ಅವರೇ ಹೇಳಿದ ಹಾಗೆ, "ಕಾಡ ಕವಿ ನಾ ಕಾಡಿನ ಕೊಳಲಿದು.. ನಾಡಿನ ಜನರೊಲಿದು ದಾಳಿ ಕೊಟ್ಟರು". ಕುವೆಂಪು ಕಾಡಿನ ಕವಿ ಅನ್ನೋದೇ ಅವರನ್ನು ಇತರ ಕವಿಗಳಿಂದ ಬೇರ್ಪಡಿಸುತ್ತೆ. ಏಕೆಂದ್ರೆ ಅವರ ಹಾಗೆ ದುರ್ಗಮ ದಟ್ಟ ಅರಣ್ಯ ಅನುಭವಗಳನ್ನು ಬಳಸಿದವರು ಮತ್ತೆ ಯಾರೂ ಇಲ್ಲ. ಅವರ ಎಲ್ಲ ವಸ್ತುಗಳೂ, ಪಾತ್ರಗಳೂ, ಮಲೆನಾಡಿನ ಕಾಡಿನ ಅನುಭವಗಳನ್ನೇ ಹೇಳತಕ್ಕದ್ದು. ಅವರ ಏಕಲವ್ಯ, ಅವರ ಹೂವಯ್ಯ, ಬುತ್ತಿ ಎಲ್ಲ ಕೂಡ ಹಾಗೆ. ಅರಣ್ಯ ಸಂಸ್ಕೃತಿಯಿಂದ ಒಬ್ಬ ವ್ಯಕ್ತಿಗೆ ಬರುವ ಸಂಸ್ಕೃತಿ, ದೃಷ್ಟಿಕೋನ ಇದನ್ನು ಅವರಲ್ಲಿ ಕಾಣಬಹುದು.

ಯಾಕೇಂದ್ರೆ ನಗರ ನಾಗರೀಕರಿಂದ ದೂರವಾದ ಅಪ್ರತಿಷ್ಠಿತ ಸಾಮಾಜಿಕ ಸ್ತರದಿಂದ ಹುಟ್ಟಿಬಂದ ಕುವೆಂಪು ಯಾವುದೇ ಸಿದ್ಧಪರಂಪರೆಗೆ ಸೇರದೆ ಸಮಸ್ತ ಅನುಭವಗಳನ್ನು ಅರಣ್ಯದ ಮಡಿಲಲ್ಲಿ ಪಡೆದುಕೊಂಡರಲ್ಲ ಬಹಳ ಮುಖ್ಯವಾದದ್ದು ಅದು. ವನ ಸಂಸ್ಕೃತಿಯಿಂದ ಎಷ್ಟರ ಮಟ್ಟಿಗೆ ನಾವು ರೂಪುಗೊಳ್ಳಬಹುದು! ಇವತ್ತು ನಾವು ನಿಸರ್ಗದಿಂದ ದೂರ ಆಗ್ತಾ ಇದೀವಿ. ಹೀಗಿರುವಾಗ, ಕುವೆಂಪು ಪ್ರತಿಪಾದಿಸಿದ ನಿಸರ್ಗ ಪ್ರೀತಿ ಇದೆಯಲ್ಲ ಅದು ಬಹಳ ದೊಡ್ಡ ಮೌಲ್ಯ.

ಪ್ರ *: ಅವರ ಕವನ ಒಂದು ನೆನಪಾಗುತ್ತೆ ಸರ್.. "ಹೋಗುವೆನು ಹೋಗುವೆನುಬೇಸರಾಗಿದೆ ಬಯಲು ಸೀಮೆಯ ನಾಡಿದು.." ಅಂತ*

ಉ : ಅವರಿಗೆ ಬೇಸರವಾದಾಗ ಬರೆದರು. ಮೈಸೂರಿನಲ್ಲಿದ್ದಾಗ ಬರೆದದ್ದು ಅವರು. ನಾನೊಂದು ಪ್ರಶ್ನೆ ಕೇಳಿದೆ ಅವರನ್ನು ಒಂದು ದಿನ. "ನೀವು ಮಲೆನಾಡಿನ ದಟ್ಟವಾದ ಅನುಭವದಲ್ಲಿ ಬೆಳೆದವರು. ಆ ಮಲೆನಾಡಿನ್ನ ಬಿಟ್ಟು ಮೈಸೂರಿಗೆ ಬಂದಿದೀರಿ. ಮೈಸೂರಿಗೆ ಬಂದು ಬಹಳ ಕಾಲವಾಗಿದೆ. ಈ ಮೈಸೂರಿನ ಪರಿಸರಕ್ಕೂ ಮಲೆನಾಡಿನ ಆ ಪರಿಸರಕ್ಕೂ ಸಂಬಂಧ ಕಡಿದು ಹೋಗಿದೆಯಲ್ಲ. ಏನನ್ನಿಸುತ್ತೆ?" ಅಂತ.

ಅವರು ಹೇಳಿದರು "ಸಂಬಂಧ ಕಡಿದು ಹೋಗಿಲ್ಲ. ಅದು ಬೇರು-ಗಿಡ. ಇದು ಕೊಂಬೆ ರೆಂಬೆ. ನಾನು ಎಲ್ಲಿದ್ದರೂ ಮಲೆನಾಡಲ್ಲೇ ಇದೀನಿ. ಮಲೆನಾಡಿನ ನೆನಪನ್ನು ತರುವ ಒಂದು ಹಕ್ಕಿ. ಒಂದು ಹೂವು, ಒಂದು ಮರ, ಗಿಡ, ನಿರಂತರವಾಗಿ ಅದರ ಸ್ಮೃತಿಯಲ್ಲಿ ನಾನು ಬದುಕ್ತಾ ಇದೀನಿ. ಹೀಗೆ ಮಲೆನಾಡಿನ ಪರ್ವತಾರಣ್ಯ ಪ್ರಪಂಚದ ಅಭಿವ್ಯಕ್ತಿಯಂತೆ ತೋರುವ ಕುವೆಂಪು ಅವರು ಅದರ ನೆನಪಿನಲ್ಲಿ ಬದುಕಿದವರು.

ಇನ್ನು ರಾಮಾಯಣ ದರ್ಶನ ;
ಯಾಕೆ ಬರೆದರು?
ಇಡೀ ರಾಮನ ಬದುಕು ಅವನು ತನ್ನ ಬದುಕಿನ ಬಹು ಭಾಗ ಕಳೆದದ್ದು ಅರಣ್ಯಗಳಲ್ಲಿ. ಕುವೆಂಪು ಅವರಿಗೆ ತಮ್ಮ ಅರಣ್ಯಾನುಭವಗಳನ್ನು ಚಿತ್ರಿಸೋದಿಕ್ಕೆ "ರಾಮಾಯಣ ದರ್ಶನಂ"ಗಿಂತ ಬೇರೆ ಕೃತಿ ಬೇಕಿತ್ತೆ? ಗಿರಿವನಪ್ರಿಯ ರಾಮ. ಕುವೆಂಪು ಅವರ ರಾಮ ಸೀತಾರಾಮ ಅಲ್ಲ. ಆ ಗಿರಿವನಪ್ರಿಯ ರಾಮನ ಕಥನ ಅದು. ಅರಣ್ಯ ಯಾವ ಕಾಲದಲ್ಲಿ ಹ್ಯಾಗೆ ಕಾಣುತ್ತೆ ಅನ್ನೋದರ ಸಮಸ್ತ ಚಿತ್ರಣ... ಪಕ್ಷಿ, ಪ್ರಾಣಿ, ಭಯಂಕರತೆ ಎಲ್ಲಾ.......ಅಲ್ಲಿದೆ.

ಪ್ರ : *ಹೌದು ಅನ್ನಿಸುತ್ತೆ. ರಾಮಾಯಣದರ್ಶನಂ ಓದಿದವರು ಪಾತ್ರಗಳ ಬಗ್ಗೆ ಗಮನ ಕೊಟ್ಟು ಓದ್ತಾರೆ ಹೊರತು ಈ ದೃಷ್ಟಿಯಿಂದ ಓದಿರ್ತಾರೋ ಇಲ್ಲವೋ ನಿಜವಾಗಿ ತುಂಬಾ ಒಳ್ಳೆಯ ಮಾತು ಸಾರ್ ನೀವು ಹೇಳಿದ್ದು ಕುವೆಂಪು ಅವರ ವೈಚಾರಿಕತೆ ಬಗ್ಗೆ.....ಹೇಳಿ.*

ಉ : ಕುವೆಂಪು ಅವರ ವೈಚಾರಿಕತೆ ವಿಜ್ಞಾನ ಮತ್ತು ವೇದಾಂತಗಳಿಂದ ಹುಟ್ಟಿಕೊಂಡಿದ್ದು. ವೇದಾಂತ ಏನು ಹೇಳುತ್ತೆ? ಜಾತಿಮತಗಳಿಲ್ಲ ಅಂತ. ನಮ್ಮ ದೇಶದಲ್ಲಿ ಆರಂಭದ ಉಪನಿಷತ್ ಕಾಲ ಇದೆಯಲ್ಲ ಅದನ್ನು ಕುವೆಂಪು ಬಹಳ ಮೆಚ್ಚಿದ್ದಾರೆ. ಯಾವಾಗ ಬರ್ತಾ ಬರ್ತಾ ಬರ್ತಾ ಈ ದೇಶದ ಸಾಮಾಜಿಕ ಜೀವನ ಶ್ರೇಣೀಕೃತವಾಗಿ ಚಾತುರ್ವಣಗಳು ಹುಟ್ಟಿಕೊಳ್ತೋ ಆಗ ತರತಮಗಳು ಹುಟ್ಟಿಕೊಳ್ತು. ಕುವೆಂಪು ಅವರು ಮೆಚ್ಚಿಕೊಳ್ಳೋದು ವೇದಾಂತವನ್ನು, ನಿರಾಕರಿಸೋದು ಈ ಜಾತಿಮತದ ವರ್ಣ ವ್ಯವಸ್ಥೆಯನ್ನು. ಹೀಗಾಗಿ ಕುವೆಂಪು ಅವರ ವೈಚಾರಿಕತೆಯನ್ನು ರೂಪಿಸಿರತಕ್ಕದ್ದು ವೇದಾಂತ ದೃಷ್ಟಿ. ವೇದಾಂತ ಅಂದ್ರೇನು ಅಂದ್ರೆ ಆಧ್ಯಾತ್ಮವನ್ನು ಎತ್ತಿ ಹಿಡಿಯೋಂತಹದ್ದು. ಅಧ್ಯಾತ್ಮ ಅಂದ್ರೆ ಕುವೆಂಪು ಅವರ ಪಾಲಿಗೆ ಸಮಾನತೆಯನ್ನು ಕಾಣುವ ಸಮಾನತೆಯನ್ನು ಕಟ್ಟುವ ಮನೋಧರ್ಮ. ಅಂತ ಹೀಗೆ ಈ ಧರ್ಮ ಮಹಾತ್ಮಾ ಗಾಂಧಿಯವರಿಂದ ಸರ್ವೋದಯ ಅನ್ನೋ ಹೆಸರನ್ನು ಪಡೆದುಕೊಳ್ತು. ಕುವೆಂಪು ಅವರು ಸರ್ವೋದಯವನ್ನು ಎತ್ತಿ ಹಿಡಿದ ಕವಿ. ಏಕೆಂದ್ರೆ ಸರ್ವೋದಯ ವಿರೋಧಿಯಾದ ಚಾತುರ್ವರ್ಣ, ಜಾತಿಪದ್ಧತಿ, ಅಸ್ಪೃಶ್ಯತೆ, ಕುತಂತ್ರ , ಅಸಮಾನತೆ ಇದೆಲ್ಲದರ ವಿರುದ್ಧ ಕುವೆಂಪು ಅವರು ಬಹಳ ದಿಟ್ಟತನದಿಂದ ಮಾತಾಡಿದರು. ಎರಡನೇದು ವಿಜ್ಞಾನ. ಅವರು ಹೇಳ್ತಾರೆ ಒಂದು ಕಡೆ ಇನ್ನೂರು ವರ್ಷಗಳ ಬ್ರಿಟಿಷ್ ಆಡಳಿತ ಸಂದರ್ಭದಲ್ಲಿ ಪಶ್ಚಿಮದ ವಿಜ್ಞಾನ ನಮ್ಮ ಬದುಕನ್ನು ರೂಪಿಸಿದೆ. ಆದರೆ ವೈಜ್ಞಾನಿಕ ದೃಷ್ಟಿ ನಮಗಿನ್ನೂ ಬರಲೇ ಇಲ್ಲ. ಯಾಕೇಂದ್ರೆ ಯಾವುದನ್ನೂ ಪರೀಕ್ಷೆ ಮಾಡದೆ ಒಪ್ಪಲೇಬಾರದು. ನಿರಂಕುಶಮತಿಗಳಾಗಿ ಅನ್ನೋ ಬರೆಹದಲ್ಲಿ ಒಂದು ಮಾತು ಹೇಳ್ತಾರೆ. ೧೯೩೬ರಲ್ಲಿ ಶ್ರೀರಂಗಪಟ್ಟಣದಲ್ಲಿ ಮಾಡಿದ ಭಾಷಣ ಅದು. "ಸಾಕ್ಷಾತ್ ಬ್ರಹ್ಮನೇ ನಿಮ್ಮ ಎದುರಿಗೆ ಬಂದು ವೇದಗಳನು. ನಾನು ಋಷಿಗಳಿಗೆ ಉಪದೇಶ ಮಾಡಿದೆ ಅಂತ ಹೇಳಿದರೆ

ಕಣ್ಣುಮುಚ್ಚಿಕೊಂಡು ನಂಬಬೇಡಿ". ಪರಂಪರಾಗತವಾಗಿ ನಮ್ಮನ್ನು ನಿಯಂತ್ರಿಸುವ ಎಲ್ಲ ಮೂಢ ನಂಬಿಕೆಗಳು, ಅವೈಚಾರಿಕ ಸಂಗತಿಗಳು, ಸಂಪ್ರದಾಯ ಇತ್ಯಾದಿ ಬಿಟ್ಟು ನಾವು ಮುಕ್ತವಾಗಿ ಅಲೋಚಿಸಬೇಕು ಅನ್ನೋದನ್ನು ಅವರು ಹೇಳಿದರು. ಇದು ಕೂಡಾ ವಿಜ್ಞಾನ ಕಲಿಸಿದ ಮಾತು. ವಿಜ್ಞಾನದ ಗುರಿ ಚೈತನ್ಯದ ದರ್ಶನ; ಇಡೀ ಜಗತ್ತನ್ನು ನಡೆಸುವ ಚೈತನ್ಯವೇ ಅದರ ಗುರಿ; ಹೀಗಾಗಿ ವಿಜ್ಞಾನ, ವೇದಾಂತ ಅವರ ಪಾಲಿಗೆ ಸಮಾನ.

ಮತ್ತೊಂದು ಸಮಾಜವಾದೀ ಚಿಂತನೆಗಳು. ಜಗತ್ತಿನ ಸಮಾಜವಾದಿ ಚಿಂತನೆಗಳು ಅವರ ವೈಚಾರಿಕತೆಯನ್ನು ತುಂಬ ಚೆನ್ನಾಗಿ ರೂಪಿಸಿವೆ. Lenin ಆಗಬಹುದು, Marx ಆಗಬಹುದು, ಗಾಂಧಿ ಆಗಬಹುದು, ಬುದ್ಧ ಆಗಬಹುದು. ಅವರು ಅನೇಕ ಪದ್ಯಗಳಲ್ಲಿ ಅಭಿವ್ಯಕ್ತಿ ಮಾಡಿರೋದನ್ನ ನೋಡಬಹುದು.

"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು
ಎದೆಯ ದನಿಗೂ ಮೀರಿದ ಶಾಸ್ತ್ರವಿಹುದೇನು"

ಅನ್ನೋ ಮಾತು ಕೂಡ ಸಮಾಜವಾದಿ ಚಿಂತನೆಯ ಮುಖ್ಯ ಲಕ್ಷಣ.

ಪ್ರ : *ಮನುವನ್ನು ಬಹಳ ಕಟುವಾಗಿ ಪ್ರಶ್ನೆ ಮಾಡಿದಾರೆ.*

ಉ : ಹೌದು "ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು? ನಿನ್ನೆದೆಯ ದನಿ ಮನು, ಋಷಿ ನಿನಗೆ ನೀನು" ಇದು ವೈಚಾರಿಕತೆ.
ಇಷ್ಟು ಪ್ರಬಲವಾಗಿ ಹೇಳೋಕೆ ಯಾಕೆ ಸಾಧ್ಯ ಆಯ್ತು ಅಂದ್ರೆ ಅವರು ಶೂದ್ರವರ್ಗದಿಂದ ಬಂದವರು ಅನ್ನೋ ಕಾರಣಕ್ಕೆ. ನಮ್ಮ ಪರಿಸರದಲ್ಲಿ ಸಾಹಿತ್ಯವನ್ನು ರಚನೆ ಮಾಡಿದ ಅನೇಕರು ಮೇಲ್ವರ್ಗದ ಸಾಹಿತಿಗಳ ನಡುವೆ ಕುವೆಂಪು, ಮಲೆನಾಡಿನ ಅಪ್ರತಿಷ್ಠಿತ ಶೂದ್ರ ಸಮುದಾಯದಿಂದ ಬಂದವರು ಅನ್ನೋದೇ ಅವರನ್ನು ಬೇರ್ಪಡಿಸೋಂಥ ಲಕ್ಷಣವಾಗಿದೆ. ಶೂದ್ರನಾದವನಿಗೆ ಸುಲಭವಾಗಿ ಶೋಷಣೆಯ ಅನುಭವವಿದೆ. ತನ್ನ ಜನ ಸಮುದಾಯದ ನೋವುಗಳು, ದುಃಖಗಳು ಗೋಚರಿಸ್ತದೆ. ಯಾವುದೇ ಸಿದ್ಧ ಸಂಪ್ರದಾಯದ ಸಂಕೋಲೆಗಳಿಗೆ ಒಳಗಾಗದೆ, ಬದುಕಿನ ವಾಸ್ತವಗಳನ್ನು ಉಳಿದ ವರಿಗಿಂತ ಹೆಚ್ಚು ನಿಖರವಾಗಿ ಯೋಚಿಸೋದಿಕ್ಕೆ ಸಾಧ್ಯವಾಯ್ತು. ಉಳಿದವರಿಗೆ ಸಾಧ್ಯ ಆಗಲಿಲ್ಲ ಅಂತ ಅಲ್ಲ. ಯಾವುದೇ ಸಾಹಿತಿ ತನ್ನ ಸೃಜನಶೀಲತೆಯ ಕ್ಷಣಗಳಲ್ಲಿ ತನ್ನ ಮಿತಿಗಳನ್ನು ಮೀರ್ತಾನೆ ಅನ್ನೋದನ್ನ ನಾವು ಒಪ್ಕೋಬೇಕು. ಆದರೆ ಕುವೆಂಪು ಅವರ advantage ಅವರು ಕಟ್ಟುಪಾಡುಗಳಿಗೆ ಒಳಗಾಗದೆ ವಾಸ್ತವ ನೋಡೋದಿಕ್ಕೆ ಸಾಧ್ಯ ಆಯ್ತು.

ಪ್ರ : *ರಾಮಕೃಷ್ಣರ ಪ್ರಭಾವ ಅವರ ಮೇಲೆ ಆಗಿದೆಯಲ್ಲ.*

ಉ : ಅವರು ಹೇಳಿದ್ರು "ಈ ದೇಶದ ಸಾಮಾನ್ಯ ಜನರ ಬಿಡುಗಡೆಗೆ ಎರಡು ದಾರಿ. ಇಂಗ್ಲಿಷ್ ಶಿಕ್ಷಣ, ಮತ್ತು ರಾಮಕೃಷ್ಣರ ಸಂದೇಶ. ಇದರ ಮೂಲಕವೇ ಬಡತನದಿಂದ,

ಅಜ್ಞಾನದಿಂದ, ನರಳ್ತಾ ಇರೋ ಜನರನ್ನು ಪಾರು ಮಾಡೋದಿಕ್ಕೆ ಸಾಧ್ಯ. ಕುವೆಂಪು ಇದನ್ನು ತಿಳಿದಿದ್ರು. ಕುವೆಂಪು ಕನ್ನಡಕ್ಕೆ ಬಂದಿದ್ದು ಇಂಗ್ಲಿಷ್‌ಮೂಲಕವೇ. ಅವರು ಕನ್ನಡದಲ್ಲಿ ಬರೆದು ಕವಿಯಾಗಲಿಲ್ಲ. ಮೊದಲು ಇಂಗ್ಲಿಷ್‌ನಲ್ಲಿ ಪದ್ಯ ಬರೆದರು. ಯಾಕೇಂದ್ರೆ ಅವರಿಗೆ ಇಂಗ್ಲಿಷ್‌ನಲ್ಲಿ ಆ ಪರಿಣತಿ ಇತ್ತು. ಒಬ್ಬ ಮಲೆನಾಡಿನ ಕಾಡಿನ ಹುಡುಗ ೧೮ನೇ ವಯಸ್ಸಿಗೆ ಇಂಗ್ಲಿಷ್ ಕವನ ಸಂಕಲವನ್ನು ಪ್ರಕಟಿಸಬೇಕು ಅಂದರೆ ಆ ಸಾಮರ್ಥ್ಯ ಹೇಗೆ ಬಂತು ಹೇಳೋದಿಕ್ಕೆ ಬಹಳ ಆಶ್ಚರ್ಯ. ಇಂಗ್ಲಿಷ್ ಶಿಕ್ಷಣ ಕೆಳವರ್ಗದವರನ್ನು ಬಿಡುಗಡೆ ಮಾಡುವ ಸಾಧನ ಅಂತ ಈ ಮೂಲಕ ಹೊಸ ಎಚ್ಚರ ಬಂತು. ಹೊಸ ಜಾಗೃತಿ ಬಂತು. ಶಾಲೆಗಳನ್ನು ತೆರೆದರು ಅವರು. ಸಮಾನ ಅವಕಾಶಗಳನ್ನು ಒದಗಿಸಿದರು ಅವರು. ಹೀಗೆ ಇಂಗ್ಲಿಷ್ ಶಿಕ್ಷಣವನ್ನು ಕುವೆಂಪು ಸ್ವಾಗತಿಸಿದ್ದಾರೆ. ಆದರೆ ಬ್ರಿಟಿಷರನ್ನು ನಾನು ದ್ವೇಷ ಮಾಡಿದ್ದೇನೆ. ಅವರ ಭಾಷೆಯಾದ ಇಂಗ್ಲಿಷನ್ನು ಪ್ರೀತಿಸಿದೆ ಅಂತ ಹೇಳ್ತಾರೆ. ವಸಾಹತುಶಾಹಿಯ ಎರಡು ಮುಖಗಳು. ಒಂದು ಆಕ್ರಮಣಕಾರಿ ಮುಖ, ಇನ್ನೊಂದು ಸಂಸ್ಕೃತಿ ಪರವಾದ ಮುಖ. ಹೀಗೆ ಸಾಮ್ರಾಜ್ಯಶಾಹಿಯನ್ನು ವಿರೋಧಿಸಿ ಅನೇಕ ಹಾಡುಗಳನ್ನು ಬರೆದು ಸ್ಫೂರ್ತಿಕೊಟ್ಟರು. ಇನ್ನೊಂದು ಕಡೆ ಇಂಗ್ಲಿಷ್ ಶಿಕ್ಷಣದ ಮೂಲಕ ಪಡೆದುಕೊಂಡ ತಿಳಿವಳಿಕೆ ಇದೆಯಲ್ಲ ಅಧ್ಯಾತ್ಮ, ವೈಚಾರಿಕತೆ ಇದನ್ನೂ ಅರಗಿಸಿಕೊಂಡರು.

ರಾಮಕೃಷ್ಣರ ಪ್ರಭಾವ ಸರ್ವಧರ್ಮಕ್ಕೆ ಸೇರಿದ್ದು. ಆ ಮತದ ಈ ಮತದ ಹಳೇ ಮತದ ಕೊಳೆಯೆಲ್ಲ ತೊಳೆದು ಹೊಸಧರ್ಮಕ್ಕೆ ನಾವು ಸೇರೋಣ. ಅದನ್ನು ರಾಮಕೃಷ್ಣರು ಹೇಳಿದರು. ಎಲ್ಲಾ ಧರ್ಮಗಳೂ ಸಮಾನ ಅಂದರು. ಈ ಸಮನ್ವಯ ದೃಷ್ಟಿ ಕುವೆಂಪುಗೆ ಬಹಳ ಪ್ರಿಯವಾದ್ದರಿಂದ ಅವರು ಒಂದು ರೀತಿ ವಿವೇಕಾನಂದವಾಣಿಯ ಹಾಗೆ ತೋರ್ತಾರೆ. ಈ ದಿನ.

ಪ್ರ : *ಕನ್ನಡದ ಬಗ್ಗೆ ಆತಂಕ ತೋರಿಸಿದಾರೆ 'ಕನ್ನಡಕ್ಕೆ ಹೋರಾಡು ಕನ್ನಡದ ಕಂದ' ಇಂಥ ಕವನಗಳಲ್ಲಿ. ಕನ್ನಡಕ್ಕೆ ಅಂಥಾ ಆತಂಕ ಇತ್ತೆ?*

ಉ : ಕುವೆಂಪು ಕನ್ನಡವನ್ನು ಪ್ರೀತಿಸಿದರು. ಕನ್ನಡದಲ್ಲಿ ಬರೆದರು. ಕನ್ನಡದಲ್ಲಿ ಬರೆಯಕ್ಕೆ ಮೊದಲೇ ಅವರು ಇಂಗ್ಲಿಷ್‌ನಲ್ಲಿ ಬರೆದು ಕವಿ ಆಗಿದ್ದರು. ಅದು ಕವಿಯಾಗೋ ಸಾಮರ್ಥ್ಯ ದೈವದತ್ತ. ಜನ್ಮದಿಂದಲೇ ಬಂದಿತ್ತು ಯಾವಾಗ ಅವರಿಗೆ ಇನ್ನೊಬ್ಬ ಕವಿ "ನೀವು ಏನು ಮಾಡಿದರೂ ನಿಮ್ಮದಲ್ಲದ ಭಾಷೆಯಲ್ಲಿ ನಿಮ್ಮನ್ನು ವ್ಯಕ್ತ ಪಡಿಸಿಕೊಳ್ಳಲು ಸಾಧ್ಯವಿಲ್ಲ. ಅದರಲ್ಲೂ ಸೃಜನಶೀಲ ಕವಿಯಾದ ನೀವು ನಿಮ್ಮ ಭಾಷೆಯಲ್ಲೇ ಅಭಿವ್ಯಕ್ತಿ ಕಾಣಬೇಕು" ಅಂತ ಹೇಳಿದನೋ ಆಗ ಅವರಿಗೆ ಹೊಸ ಎಚ್ಚರ ಬಂತು. ಹೀಗಾಗಿ ಕುವೆಂಪು ಕನ್ನಡಕ್ಕೆ ತಿರುಗಿದರು.

ಅವರ ಕಾಲಕ್ಕೆ ಕನ್ನಡ ಇವತ್ತಿನಷ್ಟು ಹಿಂದುಳಿದಿರಲಿಲ್ಲ. ಇವತ್ತು ೧ ರಿಂದ ೧೦ ತರಗತಿಗೆ ಕನ್ನಡ ಶಿಕ್ಷಣಕೊಡಲು ಒದ್ದಾಡ್ತಾ ಇದೀವಿ ನಾವು. ನಮ್ಮ ಕಾಲದಲ್ಲಿ

ಕನ್ನಡ ಇತ್ತು. ಆದರೆ ಕನ್ನಡದ ಬಗ್ಗೆ ಕುವೆಂಪು ಮಾತಾಡೋದು ಕೇವಲ ಭಾಷೆ ಮೇಲಿನ ಪ್ರೀತಿ ಅಲ್ಲ. ಅದೊಂದು ಸಾಂಸ್ಕೃತಿಕ ಅಗತ್ಯ. ಅದು ಎಚ್ಚರಿಕೆ. ಅದು, ಶ್ರೀ ಸಾಮಾನ್ಯನ ಪರವಾದ ಎಚ್ಚರ. ಅವರು ಹೇಳ್ತಾರೆ ಈ ದೇಶದಲ್ಲಿ ಇಂಗ್ಲಿಷ್ ಭಾಷೆ, ಆಸ್ತಿ ಪದ್ಧತಿ, ಜಾತಿ ವ್ಯವಸ್ಥೆ ಈ ಮೂರೂ ಕೂಡ ತರತಮಗಳನ್ನು ನೆಲೆಗಳಿಸುವಂಥ ತಂತ್ರಗಳು. ಇಂಗ್ಲಿಷ್ ಹಲವರು ಕಲಿಯಬೇಕಾದ ಭಾಷೆಯಲ್ಲ. ಕೆಲವರು ಕಲಿಯಬೇಕಾದ ಭಾಷೆ. ಇಂಗ್ಲಿಷ್‌ನ ಅವರು ಪೂರ್ಣ ನಿರಾಕರಿಸಲಿಲ್ಲ. ಆದರೆ ಅದನ್ನ ಸಾಮಾನ್ಯರ ಮೇಲೆ ಅನಗತ್ಯವಾಗಿ ಹೇರಿ ಅವರ ಅಸ್ತಿತ್ವವನ್ನು ಕುಂಠಿತಗೊಳಿಸುವಂತದ್ದಿದೆಯಲ್ಲ ಅದು ಬೇಡ. ಅಲ್ಲದೆ ತರತಮಗಳು ಬೇಡ, ಇಂಗ್ಲಿಷ್ ಭಾಷೆಯ ಪ್ರಭುತ್ವ ಪಡೆದವರು ಸಾಮಾನ್ಯ ಹಂತಗಳಲ್ಲಿ ಬೇರೆ ಬೇರೆ ವಿಧಾನಗಳಲ್ಲಿ ಶೋಷಣೆ ಮಾಡೋದನ್ನ ತಪ್ಪಿಸೋದಿಕ್ಕೆ ಅವರು ಭಾಷೆ ನಿರಾಕರಿಸಿದರು. ಜಗತ್ತಿನ ತಿಳಿವು ಕನ್ನಡದಲ್ಲೇ ಬರಲಿ ಅಂದರು. ಅವರ ಕನ್ನಡ ಪ್ರೀತಿ ಪ್ರಜಾಪ್ರಭುತ್ವಮೂಲವಾದದ್ದೇ ಹೊರತು, ಕೇವಲ ಭಾಷೆಯ ಮೇಲಿನದ್ದಲ್ಲ. ಕರ್ನಾಟಕ ಒಂದಾಗಬೇಕು ಅನ್ನೋದು ಅವರ ಆಶಯವಾಗಿತ್ತು. ಒಂದು ಜನದ ಅಭಿವೃದ್ಧಿ ಆಗಬೇಕಾದರೆ ಭಾಷೆ ಮೂಲಕವೇ ಸಾಧ್ಯ. ಹೀಗೆ ಇಡೀ ಜನಸಮುದಾಯದ ಕಾಳಜಿ ಅವರ ಕನ್ನಡ ಪರ ಹೋರಾಟದ್ದು.

ಪ್ರ : *ವಿಶೇಷವಾಗಿ ಕುವೆಂಪು ಅವರ ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಮತ್ತು ನಾಟಕಗಳು ಇವುಗಳ ಮೂಲಕ ಅವರು ಏನನ್ನು ಹೇಳೋಕೆ ಇಷ್ಟಪಟ್ಟರು ಅಂತ ತಮಗನ್ನಿಸುತ್ತೆ?*

ಉ : ಕನ್ನಡದಲ್ಲಿ ಮೊಟ್ಟಮೊದಲ ಸರಳ ರಗಳೆ ನಾಟಕ ಬರೆದವರು ಕುವೆಂಪು. ಕವಿತೆಗಿಂತ ನಾಟಕವೇ ಅವರನ್ನ ಜನಕ್ಕೆ ಪರಿಚಯ ಮಾಡಿಕೊಟ್ಟದ್ದು. ಅವರ ಮೊದಲ ಕವನದ್ದು ಸಂಕಲನ ಕೊಳಲು ಪ್ರಕಟವಾಗಿ ೧೯೩೦ರಲ್ಲಿ. ಮೊದಲ ನಾಟಕ ಅವರು ಬರೆದದ್ದು ಜಲಗಾರ ೧೯೨೭ರಲ್ಲಿ. ಯಮನ ಸೋಲು ಬರೆದರು. ಬೆರಳ್‌ಗೆ ಕೊರಳ್ ಹೀಗೆ ಬರೆದರು. ರಂಗಭೂಮಿಗೆ ಕೊಡುಗೆ ಕೊಟ್ಟರು. ಉಳಿದ ನಾಟಕಕಾರರಿಗೂ ಇವರಿಗೂ ವ್ಯತ್ಯಾಸವಿದೆ. ಕುವೆಂಪು ಮೂಲತ: ನಾಟಕಕಾರರಲ್ಲ ಕವಿ. ಕವಿಯಾದವನು ನಾಟಕ ಬರೆದಾಗ ಅದಕ್ಕೆ ಬರುವ ಆಯಾಮಗಳು ಬೇರೆ ನಾಟಕಕಾರ ಬರೆದಾಗ ಬರುವ ಆಯಾಮಗಳು ಬೇರೆ. ಅವರ ಮುಖ್ಯವಸ್ತು: ಜಲಗಾರ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ.... ಈ ಮೂರು ನಾಟಕಗಳಲ್ಲಿ ಇರುವ ಸಾಮಾಜಿಕ ದೃಷ್ಟಿಕೋನ ಬಹಳ ಅದ್ಭುತ. ಅವರಿಗೆ ಗೊತ್ತಿತ್ತು ಈ ದೇಶದಲ್ಲಿ ವರ್ಣ ವ್ಯವಸ್ಥೆ ಎಷ್ಟು ಕೆಟ್ಟದ್ದು ಅಂತ. ಹೇಗೆ ಕೆಳವರ್ಗದವರಿಗೆ ಶೋಷಿಸುತ್ತೆ ಅಂತ. ಜಲಗಾರ, ಅಸ್ಪೃಶ್ಯತೆ ಸಮಸ್ಯೆ ಬಗ್ಗೆ ಹೇಳುತ್ತೆ. ಅವನನ್ನು ದೇವಸ್ಥಾನದೊಳಗೆ ಸೇರಿಸೋದಿಲ್ಲ.

ಹೇಗೆ ಅದು ಶಾಪ ಅಂತ ಹೇಳುತ್ತೆ. ಅವನು, ನನ್ನ ಶಿವ ನನ್ನಲ್ಲಿದ್ದಾನೆ, ನನ್ನ ಕೆಲಸದಲ್ಲಿದ್ದಾನೆ ಅಂತಾನೆ. ಹೀಗೆ ಕುವೆಂಪು ಅವರು ದೇವಸ್ಥಾನವನ್ನೇ ನಿರಾಕರಣೆ

ಮಾಡ್ತಾರೆ. ಇದು ಬಹಳ ಆಶ್ಚರ್ಯಕರವಾದ ಹೆಜ್ಜೆ ಅಂತ ಅನ್ನಿಸುತ್ತೆ ಸಾಂಸ್ಥಿಕ ಧರ್ಮಗಳ ವಿರೋಧಿ ಅವರು. ಅದಕ್ಕೇ ಅವರು ದೇವಸ್ಥಾನ, ತೀರ್ಥಯಾತ್ರೆ, ಯಜ್ಞಯಾಗ ಇತ್ಯಾದಿಗಳನ್ನು ನಿರಾಕರಣೆ ಮಾಡಿದರು. ಆದರ ಮೂಲಕ ನಿಸರ್ಗವನ್ನೇ ದೇವರಸ್ಥಾನದಲ್ಲಿ ಇಟ್ಟರು. ಪ್ರಕೃತಿಯನ್ನೆ ಆರಾಧಿಸಿ ಬರುವ ಸಂತೋಷ ಇದೆಯಲ್ಲ ಅದು ಬೇರೆ ಎಲ್ಲ ಬಗೆಯ ಪೂಜೆ, ಆಚರಣೆಗಳಿಗೆ ಸಮನಾದ್ದು, ನಿಸರ್ಗ ಪ್ರೀತಿ ದೇವಸ್ಥಾನದ ಪರ್ಯಾಯ ಹಂತ ಅವರು ಭಾವಿಸ್ತಾರೆ.

**ಮುದ್ದುಕೃಷ್ಣ** : *ಕುವೆಂಪು ಅವರ ಬಗ್ಗೆ ಮಾತಾಡ್ತಾ ಸಮಯದ ಪರಿವೆ ಗೊತ್ತಾಗ್ತಾ ಇಲ್ಲ. ಧನ್ಯವಾದಗಳು, ನಮಸ್ಕಾರ*

**ಜಿ.ಎಸ್.ಎಸ್.** : ನಮಸ್ಕಾರ.

■■

# ಜಿ.ಎಸ್.ಶಿವರುದ್ರಪ್ಪನವರೊಂದಿಗೆ ಸಂದರ್ಶನ

*ಸಂದರ್ಶಕರು : **ಡಿ.ಎಸ್.ನಾಗಭೂಷಣ***

ಪಂಪ ಪ್ರಶಸ್ತಿ ಸಂದ ಸಂದರ್ಭದಲ್ಲಿ ಜಿ.ಎಸ್.ಎಸ್. ಭದ್ರಾವತಿ ಆಕಾಶವಾಣಿಗಾಗಿ ನೀಡಿದ ಸಂದರ್ಶನ ಫೆಬ್ರವರಿ ೧೯೯೯:

***ಡಿ.ಎಸ್.ಎನ್ :*** *ಕನ್ನಡ ಸಾಹಿತ್ಯಲೋಕದಲ್ಲಿ ಜಿ.ಎಸ್.ಎಸ್. ಎಂದೇ ಹೆಸರುವಾಸಿಯಾದಂತಹ ಡಾ.ಜಿ.ಎಸ್.ಶಿವರುದ್ರಪ್ಪ ಅವರನ್ನು ನಮ್ಮ ಕೇಳುಗರಿಗೆ ವಿಶೇಷವಾಗಿ ಪರಿಚಯ ಮಾಡಿಕೊಡುವ ಅವಶ್ಯಕತೆ ಇಲ್ಲ ಅಂತ ಕಾಣುತ್ತೆ. 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ, ಹಾಡುವುದು ಅನಿವಾರ್ಯ ಕರ್ಮ ಎನಗೆ' ಎಂದೇ ಕಳೆದ ೫೦ ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕನ್ನಡ ಕಾವ್ಯ ರಸಿಕರ ಮುಂದೆ ಎದೆ ತುಂಬಿ ಹಾಡಿದ ಕವಿ ಶಿವರುದ್ರಪ್ಪ ಅವರು. ಇವರು ಕವಿ ಮಾತ್ರ ಅಲ್ಲ, ಕಾವ್ಯಮೀಮಾಂಸೆ ಕ್ಷೇತ್ರದಲ್ಲಿ ಕೂಡ ಕೆಲಸ ಮಾಡಿ ವಿದ್ವಾಂಸರು ಅಂತ ಹೆಸರು ಪಡೆದವರು. ಇದರ ಜತೆಗೆ ಕನ್ನಡ ಪ್ರಾಧ್ಯಾಪಕರಾಗಿ ಹಲವಾರು ಪ್ರತಿಭಾವಂತ ಶಿಷ್ಯರನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟವರು. ಇಂತಹ ಜಿ.ಎಸ್.ಎಸ್. ಅವರು ಇವತ್ತು ನಮ್ಮೊಡನಿದ್ದಾರೆ. ಅವರೊಡನೆ ಇವತ್ತಿನ ಸಾಹಿತ್ಯ ಮತ್ತು ಸಾಹಿತ್ಯ ವಾತಾವರಣದ ಬಗ್ಗೆ ಲೋಕಾಭಿರಾಮವಾಗಿ ಮಾತಾಡುವ ಆಶಯ ನಮ್ಮದು. ನಮಸ್ಕಾರ ಸರ್.*

**ಜಿ.ಎಸ್.ಎಸ್** : ನಮಸ್ಕಾರ

**ಪ್ರ** *: ಮೊದಲಿಗೆ, ಇತ್ತೀಚೆಗೆ ತಮಗೆ ಪಂಪ ಪ್ರಶಸ್ತಿ ಬಂದಿದೆ ಸರ್...*

**ಉ** : ಹೌದು

**ಪ್ರ** *: ನಿಮಗೆ ದೊರಕಿರುವ ಅನೇಕ ಪ್ರಶಸ್ತಿಗಳ ನಡುವೆ ಇದೊಂದು ದೊಡ್ಡ ಪ್ರಶಸ್ತಿನೇ. ಕರ್ನಾಟಕ ಸರ್ಕಾರ ಕೊಡತಕ್ಕಂತಹ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ...*

**ಉ** : ಖಂಡಿತವಾಗಿಯೂ

**ಪ್ರ** *: ಈ ಪಂಪ ಪ್ರಶಸ್ತಿ ನಿಮಗೆ ನಿಮ್ಮ ಸಾಹಿತ್ಯ ಜೀವನದಲ್ಲಿ ಎಷ್ಟು ಮುಖ್ಯ ಅನಿಸುತ್ತೆ ಸರ್ ಮತ್ತು ಯಾಕೆ?*

ಉ : ಪ್ರಶಸ್ತಿಗಳು ಬಹಳ ಮುಖ್ಯ ಅಂತ ಯಾವತ್ತೂ ಅನಿಸಿಲ್ಲ. ಯಾಕೆಂದರೆ, ಯಾವತ್ತೂ ನಾನು ಪ್ರಶಸ್ತಿಗಳನ್ನು ನಿರೀಕ್ಷಿಸಿದವನೇ ಅಲ್ಲ. ಬಹುಶ: ಪ್ರಶಸ್ತಿಗಳು ಬಂದಿದ್ದರಿಂದ ಸಂತೋಷವಾಗಿಲ್ಲ ಅಂತ ಹೇಳಲಾರೆ. ಸಂತೋಷವಾಗಿದೆ. ರಾಷ್ಟ್ರೀಯವಾದ ಪ್ರಶಸ್ತಿ– ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಖಾಸಗಿಯಾದ ಭೂಸನೂರುಮಠ ಪ್ರಶಸ್ತಿ, ಶಿವಮೊಗ್ಗ ಕರ್ನಾಟಕ ಸಂಘದ ಸದಸ್ಯತ್ವ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇಂತಹವೆಲ್ಲ ಬಂದಿವೆ. ಇವುಗಳು ಸಹಜವಾಗಿಯೇ ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಕೆಲಸ ಮಾಡಿದ ಅನೇಕರಿಗೆ ಬರುವಂತಹ ಪ್ರಶಸ್ತಿಗಳೇ. ಪಂಪ ಪ್ರಶಸ್ತಿ ನೀವು ಹೇಳಿದ ಹಾಗೆ, ಒಂದು ರಾಜ್ಯದ ಅತ್ಯಂತ ಉನ್ನತ ಮಟ್ಟದ ಪ್ರಶಸ್ತಿ ಎನ್ನುವ ಕಾರಣಕ್ಕೆ ಉಳಿದ ಪ್ರಶಸ್ತಿಗಳಿಗಿಂತ ಇದು ಹೆಚ್ಚು ಪ್ರಿಯವಾದದ್ದು ಮತ್ತು ಸಂತೋಷವಾದದ್ದು ಆಗಿದೆ ಅಂತ ಹೇಳೋದಕ್ಕೆ ಸಂಕೋಚ ಪಡಬೇಕಾಗಿಲ್ಲ ನಾನೇನೂ....

ಪ್ರ : *ಪಂಪನ ಹೆಸರಿನಲ್ಲಿ ಇರೋದ್ರಿಂದ ಏನಾದರೂ ವಿಶೇಷವಾದ ಒಲವು...*

ಉ : ಬಹಳ ಬಹಳ ಬಹಳ ಇಷ್ಟವಾದದ್ದು. ಯಾಕೆಂದರೆ ಕನ್ನಡ ಸಾಹಿತ್ಯದ ಸೀಮಾಪುರುಷರಿಬ್ಬರು ಪಂಪ ಮತ್ತು ಕುವೆಂಪು. ಪಂಪನಿಂದ ಕುವೆಂಪುವರೆಗೆ ಅನ್ನುವ ಸಾಹಿತ್ಯದ ಒಂದು ಮಾತಿದೆಯಲ್ಲಾ ಅದು ಪ್ರಾಸಂಗಿಕ ಅಂತ ನನಗನಿಸ್ತಲೇ ಇಲ್ಲ. ಇವೆರಡು ಹೆಸರುಗಳು ಎರಡು ಸಾಂಸ್ಕೃತಿಕ ಸೀಮಾರೇಖೆಗಳನ್ನು ಸೂಚಿಸ್ತವೆ ಮತ್ತು ಪಂಪನಿಗೂ ಕುವೆಂಪು ಅವರಿಗೂ ಅನೇಕ ಸಾಮ್ಯಗಳಿವೆ. ಪಂಪ "ಮನುಷ್ಯ ಜಾತಿ ತಾನೊಂದೆ ವಲಂ" ಅಂತ ಹೇಳಿದಾನೆ. ಕುವೆಂಪು "ವಿಶ್ವ ಮಾನವ" ಕಲ್ಪನೆಯನ್ನು ಅದರ ಆಧಾರದ ಮೇಲೆ ಕಟ್ತಾರೆ. ಪಂಪ ರಾಜತ್ವವನ್ನು ಕುರಿತು ಹೇಗೆ ಒಂದು ರೀತಿಯಾದ ಪ್ರತಿಭಟನೆ ಸೂಚಿಸಿದನೋ ಹಾಗೆ ಕುವೆಂಪು ರಾಜತ್ವದ ಬಗ್ಗೆ ಪ್ರತಿಭಟನೆ ಸೂಚಿಸ್ತಾರೆ. ಪಂಪ ಎಷ್ಟರ ಮಟ್ಟಿಗೆ ನಿಸರ್ಗ ಪ್ರೀತಿಯ ಬಗ್ಗೆ ಅದಮ್ಯವಾದ ಹಂಬಲವನ್ನುಳ್ಳವನಾಗಿದ್ದನೋ ಕುವೆಂಪು ಕೂಡಾ ಅಷ್ಟೇ ಗಾಢವಾದ ನಿಸರ್ಗಪ್ರೀತಿ ಉಳ್ಳವರು. ಪಂಪ ಕನ್ನಡದ ಮೊಟ್ಟಮೊದಲ ಕಥಾದ್ವೈತ್ಯ ಪ್ರತಿಭೆಯಾದರೆ ಕುವೆಂಪು ಬಹುಶ: ಕೊಟ್ಟ ಕೊನೆಯ ಕಥನದ ಮಹತ್ವದ ಕವಿ ಅಂತ ಹೇಳಬಹುದು.

ಪ್ರ : *ಕೊಟ್ಟಕೊನೆ ಅಂತ ಹೇಳ್ತೀರಾ ಸರ್...?*

ಉ ಸಧ್ಯಕ್ಕೆ, ನಮ್ಮ ಮಟ್ಟಿಗೆ... ಈ ದೃಷ್ಟಿಯಿಂದ ಪಂಪನಿಗೂ ಕುವೆಂಪುಗೂ ಬಹಳ ಸಾಮ್ಯವಿದೆ ಮತ್ತು ಕುವೆಂಪು ಶಿಷ್ಯನಾಗಿ ಪಂಪನ ಹೆಸರಿನಲ್ಲಿ ಬರುವ ಪ್ರಶಸ್ತಿಯನ್ನು ಪಡೆದುಕೊಳ್ಳುವುದು ಮತ್ತು ಪಂಪನ ಬನವಾಸಿಯೂ ಕುವೆಂಪು ಅವರ ಕುಪ್ಪಳಿಯೂ ಒಟ್ಟಿಗೆ ಕೂಡಿರುವ ಸಹ್ಯಾದ್ರಿ ಪರಿಸರದ ಶಿಕಾರಿಪುರವು ನನ್ನೂರು ಆಗಿರುವುದರಿಂದ ಇದು ಇನ್ನೂ ಹೆಚ್ಚು ಪ್ರಿಯವಾಗಿದೆ ಎನ್ನಬಹುದು.

ಪ್ರ : *ಅಂದ ಹಾಗೆ ಪ್ರಶಸ್ತಿಗಳ ಬಗ್ಗೆಯೇ ಒಂದು ಮಾತಿದೆ. ಈ ಇತ್ತೀಚಿನ ದಿನಗಳಲ್ಲಿ*

*ಊರಿಗೊಂದು ಪ್ರಶಸ್ತಿಯಾಗಿದೆ ಅಂತ. ಅನೇಕ ಸಂಘ ಸಂಸ್ಥೆಗಳು ೫೦೦ ರೂಪಾಯಿಯಿಂದ ೨೦,೦೦೦ ರೂಪಾಯಿಗಳವರೆಗೆ ಅನೇಕ ಪ್ರಶಸ್ತಿಗಳನ್ನು ಕೊಡ್ತಾ ಇದ್ದಾರೆ. ಯಾರಿಗೆ ಯಾತಕ್ಕೋಸ್ಕರ ಯಾವ ಪ್ರಶಸ್ತಿ ಕೊಡ್ತಾ ಇದ್ದಾರೆ ಅಂತ ಗೊಂದಲಾನೇ ಉಂಟಾಗಿದೆ. ಇದರಿಂದಾಗಿ ಒಳ್ಳೆಯ ಸಾಹಿತ್ಯ ಬರೀತಿರುವವರು ಯಾರು? ಕೆಟ್ಟ ಸಾಹಿತ್ಯ ಬರೀತಿರುವವರು ಯಾರು? ಅಭಿರುಚಿ ಯಾವುದು ಉತ್ತಮವಾದದ್ದು ಅನ್ನುವದರ ಬಗ್ಗೆ ಗೊಂದಲನೇ ಎದ್ದಿದೆ. ಇದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ಸಾರ್?*

ಉ : ಒಂದು ಕಾಲಕ್ಕೆ ಪ್ರಶಸ್ತಿಗಳೇ ಇರಲಿಲ್ಲ. ಮಹತ್ವದ ಕೆಲಸ ಮಾಡಿಯೂ ಪ್ರಶಸ್ತಿ ಪಡೆಯದೇ ಹೋದ ಅನೇಕ ದೊಡ್ಡ ದೊಡ್ಡವರು ನಮ್ಮಲ್ಲಿದ್ದಾರೆ ಎನ್ನುವುದು ಒಂದು ಕೊರಗಿನ ವಿಷಯ. ಆದರೆ ಇವತ್ತು ಪ್ರಶಸ್ತಿಗಳು ಸಿಕ್ಕಾಪಟ್ಟೆ ಇವೆ. ಯಾರಿಗೆ ಬೇಕಾದ್ರೂ ಪ್ರಶಸ್ತಿ ಬರಬಹುದು. ಪ್ರಶಸ್ತಿಗಳಿಂದ ತಪ್ಪಿಕೊಳ್ಳಲಾರದಷ್ಟು ಪ್ರಶಸ್ತಿಗಳು ನಮಲ್ಲಿ ಇವೆ ಅಂತ ಹೇಳಬಹುದು. ಹೀಗಾಗಿ ಕನ್ನಡ ಸಾಹಿತ್ಯ ಪರಿಸರದಲ್ಲಿ ಅಲ್ಪಸ್ವಲ್ಪ ಕೆಲಸ ಮಾಡಿದ ಯಾರೂ ಕೂಡಾ ಪ್ರಶಸ್ತಿಯ ಪರಿಗಣನೆಗೆ ಅರ್ಹರಾಗದೇ ಹೋಗುವಂತಿಲ್ಲದ ಕಾಲ ಬಂದಿರುವುದು ಒಳ್ಳೆದು ಅಂತ ಒಂದು ದೃಷ್ಟಿಯಲ್ಲಿ ಹೇಳಿದ್ರೂ ಕೂಡಾ, ನೀವು ಹೇಳಿದ ಹಾಗೆ ಇಷ್ಟೊಂದು ಸಿಕ್ಕಾಪಟ್ಟೆ ಪ್ರಶಸ್ತಿಗಳಿಂದ ಯಾರು ಯಾವುದಕ್ಕೆ ಅರ್ಹರು ಅನ್ನುವುದು ಗೊತ್ತಾಗದಿರೋ ಸಾಧ್ಯತೆಗಳೂ ಉಂಟು.

ಪ್ರ : *ಇದರಿಂದ ಅಭಿರುಚಿಯ ಗೊಂದಲ ಉಂಟಾಗೋದಿಲ್ವಾ ಸಾರ್?*

ಉ : ಒಳ್ಳೇದು ಕೆಟ್ಟದ್ದು ಅನ್ನುವ ಅಭಿರುಚಿಯನ್ನು ನಿರ್ಣಯ ಮಾಡುವವರು ಓದುಗರು. ಆದುದರಿಂದ ಗೊಂದಲ ಬಹುಶಃ ಉಂಟಾಗಲಾರದು. ಅವರಿಗೆ ಗೊತ್ತಾಗುತ್ತೆ ನೋಡಿ ಇವರಿಗೆ ಈ ಪ್ರಶಸ್ತಿ ಕೊಟ್ಟಿದ್ದಾರೆ, ಇದು ಕೊಡಬಾರದಾಗಿತ್ತು ಅಂತ ಹೇಳುವವರೂ ಇದ್ದಾರೆ ಆ... ಇವರಿಗೆ ಎಂದೋ ಬರಬೇಕಾಗಿತ್ತು ಇವತ್ತು ಬಂದಿದೆ ಅಂತ ಹೇಳುವವರೂ ಇದ್ದಾರೆ. ಅಲ್ದೇ ನಮ್ಗೇ ಗೊತ್ತಾಗುತ್ತೆ ಅನೇಕ ಕಡೆ... ಪ್ರಶಸ್ತಿಗಳು ಬಂದಾಗ ಪಡೆದಂತಹ ಜನ ಅದಕ್ಕೆ ಅರ್ಹರೇ ಅಲ್ವೇ ಅನ್ನುವ ಅನುಮಾನಗಳು. ಆ ಅನುಮಾನಗಳ ಕುರಿತು ಯೋಚನೆ ಮಾಡುವಂತಹ ಸಂದರ್ಭ ಕೂಡಾ ನಮ್ಮ ಸಹೃದಯರಿಗೆ ಇದೆ. ಆದ್ದರಿಂದ ಅಭಿರುಚಿಯಲ್ಲಿ ಗೊಂದಲ ಏನೂ ಉಂಟಾಗುವುದಿಲ್ಲ ಅಂತ ಕಾಣುತ್ತೆ.

ಪ್ರ : *ಬಹುಶಃ ಇದೇ ಮಾತನ್ನು ವಿಮರ್ಶಾ ರಾಜಕಾರಣದ ಬಗ್ಗೆ ಕೂಡಾ ಹೇಳಬಹುದೂಂತ ಕಾಣುತ್ತೆ. ಯಾಕೆಂದ್ರೆ ತಮ್ಮದೇ ಪತ್ರಿಕಾ ವಿಮರ್ಶೆ ಮೂಲಕ ಯಾರನ್ನು ಬೇಕಾದ್ರೂ ತುಳೀಬಹುದು ಯಾರನ್ನು ಬೇಕಾದ್ರು ಎತ್ತಿ ಹಿಡೀಬಹುದು ಅನ್ನುವ ಒಂದು ರೀತಿಯ ವಿಮರ್ಶೆ ಗುಂಪುಗಾರಿಕೆ ಕೂಡಾ ಹೆಚ್ಚಾಗ್ತಿದೆ ಅನ್ನೋ ಮಾತು ಕೇಳಿ ಬರ್‍ತಾ ಇದೆ...*

ಉ : ಹೌದು, ಉದಾಹರಣೆಗೆ ನನ್ನ ವಿಚಾರವೇ ತಗೊಳ್ಳಿ, ಕನ್ನಡ ವಿಮರ್ಶೆ ನನ್ನನ್ನು ಅಷ್ಟಾಗಿ ಉತ್ಸಾಹದಿಂದ ಚರ್ಚಿಸಿಲ್ಲ. ಅದ್ರೆ ಮರುಮುದ್ರಣದ ಮೇಲೆ ಮರುಮುದ್ರಣಗಳು

ಬರುವ ಹಾಗೆ ನಿಶ್ಶಬ್ದವಾಗಿ ನನ್ನ ಕೃತಿಗಳು ಖರ್ಚಾಗುತ್ತಿರುವುದು ನೋಡಿದ್ರೆ ಆ ವಿಮರ್ಶೆಗೆ ಮೂಲವಾದ ಯವುದೋ ಇನ್ನೊಂದು ಯಾವುದೋ ಒಂದು ಅಂತರಂಗ ಇದೆಯಲ್ಲಾ ಕನ್ನಡ ಜನಮನಸ್ಸಿನ ಅಂತರಾತ್ಮ, ಅದು ಒಪ್ಪಿಕೊಳ್ತಾ ಇದೆ ನನ್ನನ್ನ. ನನಗೆ ಅದೇ ದೊಡ್ಡ ವಿಮರ್ಶೆ ಅಂತ ಅನ್ನಿಸ್ತಾ ಇದೆ.

ಪ್ರ : *ವಿಮರ್ಶಾ ರಾಜಕಾರಣದಿಂದ ಆತ್ಯಂತಿಕವಾಗಿ ಯಾವುದೇ ಪ್ರಯೋಜನ ಇಲ್ಲ...*

ಉ : ಇಲ್ಲ, ಅದು ಬಹಳ ತಾತ್ಕಾಲಿಕ ಕೂಡಾ ಹೌದು.

ಪ್ರ : *ಆಮೇಲೆ ನೀವು ಬರೆಯಲಿಕ್ಕೆ ಆರಂಭ ಮಾಡಿದ ಕಾಲದಲ್ಲಿ ಸಾಹಿತ್ಯಕ ವಾತಾವರಣ ಹೇಗಿತ್ತು ಸರ್? ಸಾಕಷ್ಟು ಪ್ರೋತ್ಸಾಹ ಹಿರಿಯರಿಂದ ಸಿಗ್ತಾ ಇತ್ತಾ? ಇತ್ತೀಚಿನ ದಿನಗಳಲ್ಲಿ ಸಾಹಿತ್ಯಕ ಪ್ರೋತ್ಸಾಹ ಹಿರಿಯರಿಂದ ಇಲ್ವೇ ಇಲ್ಲ ಅನ್ನುವ ಮಾತು ಕೂಡ ಇದೆ.....*

ಉ : ಆಗ್ಲೂ ಬಹಳ ಹಿರಿಯರಾದವರೂ ಯಾರನ್ನಾದರೂ ಓದುತ್ತಿದ್ದರು ಅಂತ ಹೇಳೋದು ಕಷ್ಟಾನೆ. ಉದಾಹರಣೆಗೆ ಶಿವರಾಮ ಕಾರಂತರಾಗಲಿ, ಕುವೆಂಪು ಅವರು ಆಗಲಿ ಉಳಿದವರನ್ನು ಓದುವಷ್ಟು ವ್ಯವಧಾನ ಇಲ್ಲದಷ್ಟು ಅವರ ಸೃಜನಶೀಲತೆ ಅವರನ್ನು ಆಕ್ರಮಿಸಿಕೊಂಡಿತ್ತು ಅಷ್ಟೇನೆ. ಹಾಗಂತ ಹೇಳಿದ್ರೆ–ತಿರಸ್ಕಾರದಿಂದ ನೋಡ್ತಾ ಇರಲಿಲ್ಲ. ನಮ್ಮನೆಲ್ಲಾ ಬೆಳೆಸಿದವರು ಅವರು. ಕಾರಂತರಾಗ್ಲೀ, ಕುವೆಂಪು ಅವರಾಗ್ಲೀ ಅವರ ವ್ಯಕ್ತಿತ್ವದಲ್ಲೇ ಆ ಬಗೆಯ ಉದಾರತೆ ಇತ್ತು. ನಮ್ಮ ಪುಸ್ತಕ ಓದಲೇ ಬೇಕಾಗಿರಲಿಲ್ಲ. ಕಡೇಪಕ್ಷ, ಕುವೆಂಪು ಅವರಿಗೆ, ನಾನು ಏನು ಬರೆದಿದ್ದೇನೆ ಎಂದು ಕರೆದು ಕೇಳುವಷ್ಟು ಸೌಜನ್ಯತೆ ಇತ್ತು. ಒಂದು ಮುನ್ನುಡಿ ಬರೆದುಕೊಡಿ ಅಂದ್ರೆ ಬರೆದು ಕೊಡ್ತಾ ಇದ್ರು. ಕುವೆಂಪು ಅವರನ್ನು ಹೇಗೆ ಅವರ ಹಿಂದಿನ ತಲೆಮಾರಿನವ್ರು ಗುರುತಿಸಿ ಗೌರವಿಸಿದ್ರೋ ಹಾಗೆ ನಮ್ಮ ನವೋದಯ ಸಂದರ್ಭದಲ್ಲಿ ಕೂಡಾ ಹೊಸದಾಗಿ ಬರೆಯೋರ್ಗೆ ಈ ಪ್ರೋತ್ಸಾಹದ ಕೊರತೆ ಅಷ್ಟು ಇರಲಿಲ್ಲ. ಇವತ್ತು ಪ್ರಕಾಶನ ಸಂಸ್ಥೆಗಳು ಹೆಚ್ಚಾಗಿವೆ. ಪ್ರಕಟಣೆಯ ಅವಕಾಶಗಳು ಹಿಂದಿಗಿಂತ ಹೆಚ್ಚಾಗಿವೆ. ವಿಮರ್ಶೆಯ ಅನುಕೂಲಗಳು, ಅವಕಾಶಗಳು ಮೊದಲಿಗಿಂತ ಹೆಚ್ಚಾಗಿವೆ. ಹೀಗಾಗಿ ಮೊದಲಿಗಿಂತ ಈಗ ಬರೆಯೋದು ಹೆಚ್ಚು ಸುಲಭ ಅಂತ ಕೂಡಾ ಅಂತ ನನಗನ್ನಿಸ್ತಾ ಇದೆ.

ಪ್ರ : *ಅದರಿಂದ ಸಾಹಿತ್ಯಕ್ಕೆ ಅಪಾಯ ಇಲ್ವಾ ಸಾರ್?*

ಉ : ಇದೆ, ಅಪಾಯ ಇದೆ; ಇದ್ದೇ ಇರುತ್ತೆ.

ಪ್ರ : *ಆಮೇಲೆ, ಗಿರೀಶ್ ಕಾರ್ನಾಡ್ ಅವರು ಇತ್ತೀಚೆಗೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ಒಂದು ಮಾತು ಹೇಳಿದ್ರು,–ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲಿಗರೇನಿದ್ದಾರೆ ಕುವೆಂಪು ಆಗಲಿ, ಕಾರಂತರಾಗಲಿ, ಬೇಂದ್ರೆಯವರಾಗ್ಲಿ, ಅವರ ಸಾಹಿತ್ಯ ಸಮೃದ್ಧಿ ಏನಿದೆ ಅದು ಇತ್ತೀಚಿನ ತಲೆಮಾರಿನ ಲೇಖಕರಲ್ಲಿ–ತಮ್ಮನ್ನೂ ಸೇರಿಸಿಕೊಂಡು ಹೇಳಿದ್ದು ಅವರು ಕಾಣ್ತಾ ಇಲ್ಲ ಅಂತ.....*

ಉ : ಅದನ್ನು ನಾನೇ, ಅವರಿಗೆ ಪ್ರಶಸ್ತಿ ಬಂದಾಗ ಒಂದು ಪತ್ರಿಕೆಗೆ ಹೇಳಿಕೆ ಕೊಡುವಾಗ ಈ ಮಾತು ಹೇಳಿದ್ದೀನಿ. ನಾಟಕರಾರರಾಗಿ ಗಿರೀಶ್ ಕಾರ್ನಾಡ್ ಅವರು ಏನು ಸಾಧಿಸಿದ್ದಾರೆ ಅದಕ್ಕೆ ಸಂದ ಪ್ರಶಸ್ತಿ ಇದು ಅಂತ. ಹಿಂದಿನ ತಲೆಮಾರಿನ ಜ್ಞಾನಪೀಠ ಪ್ರಶಸ್ತಿ ಪಡೆದ ಲೇಖಕರಿಗೂ ಇವರಿಗೂ ಇರುವ ವ್ಯತ್ಯಾಸ ಅಂದ್ರೆ ಅವರ ಸಾಹಿತ್ಯ ಬಹುಮುಖಿಯಾದದ್ದು, ಸಮೃದ್ಧವಾದದ್ದು. ಆದ್ರೆ ಇದು ಒಂದು ಪ್ರಕಾರಕ್ಕೆ ಸೀಮಿತವಾದದ್ದು. ಬಹುಶಃ ಇನ್ನು ಮೇಲೆ ಹೀಗೆ ಆಗ್ತದೋ ಏನೋ ಗೊತ್ತಿಲ್ಲ ನನಗೆ.

ಪ್ರ : *ಯಾಕೆ ಹೀಗಾಗ್ತಿದೆ ಸರ್?*

ಉ : ಯಾಕೆಂದ್ರೆ ಕುವೆಂಪು ಅವರ ಹಾಗೆ, ಕಾರಂತರ ಹಾಗೆ, ಬೇಂದ್ರೆಯವರ ಹಾಗೆ ಬರೆಯುವವರು ಎಲ್ಲಿದ್ದಾರೆ ಈಗ?

ಪ್ರ : *ಅದೇ ನಾನು ಕೇಳ್ತಾ ಇರೋದು. ತಲೆಮಾರಿನಿಂದ ತಲೆಮಾರಿಗೆ ಸಾಹಿತ್ಯ ಸಮೃದ್ಧಿ ಕಡಿಮೆಯಾಗ್ತಿದೆಯಲ್ಲಾ, ಇದಕ್ಕೆ ಏನು ಮುಖ್ಯ ಕಾರಣ, ಇದರಿಂದ ಒಟ್ಟಾರೆ ಕನ್ನಡ ಸಾಹಿತ್ಯದ ಮೇಲೆ ಏನು ಪರಿಣಾಮ ಆಗಬಹುದು ಸರ್?*

ಉ : ನಾವು ಎಲ್ಲಾ ಕಾಲಕ್ಕೂ ಸಮೃದ್ಧಿಯನ್ನು ನಿರೀಕ್ಷಿಸಲಿಕ್ಕೆ ಆಗುವುದಿಲ್ಲ. ನನ್ನ ಪ್ರಕಾರ, ಮಳೆಗಾಲವನ್ನು ಎಲ್ಲ ಕಾಲದಲ್ಲೂ ನಿರೀಕ್ಷಿಸಲಿಕ್ಕೆ ಆಗುವುದಿಲ್ಲ. ನದಿಯಲ್ಲಿ ಪ್ರವಾಹವನ್ನು ಯಾವಾಗಲೂ ನಿರೀಕ್ಷಿಸಲಿಕ್ಕೆ ಆಗಲ್ಲ. ಚಳುವಳಿಗಳ ಮಳೆಗಾಲದಲ್ಲಿ ಸಾಹಿತ್ಯಕ್ಕೆ ಬರುವ ಸಮೃದ್ಧಿ ಉಳಿದ ಕಾಲದಲ್ಲಿ ಸ್ವಲ್ಪ ಕಡಿಮೆಯಾಗಬಹುದು.

ಪ್ರ : *ಅಂದ್ರೆ ಕನ್ನಡ ಸಾಹಿತ್ಯ ಲೋಕದಲ್ಲೂ ಒಂದು ಋತುಚಕ್ರ ಇದ್ದೇ ಇರುತ್ತೆ ಅಂತ ಆಯ್ತು.*

ಉ : ಖಂಡಿತವಾಗಿಯೂ ಇದ್ದೇ ಇರುತ್ತೆ. ಹಾಗೆ ನೋಡಿದ್ರೆ ವಿಮರ್ಶಾ ಲೋಕದಲ್ಲಿ ನಾವೆಷ್ಟು ವಿಸ್ತಾರವಾಗ್ತಿದೀವಿ ಈಗ ನಾವು. ಸೃಜನಶೀಲ ಕೃತಿಗಳಿಗಿಂತ ವೈಚಾರಿಕ ಕೃತಿಗಳು ಹೆಚ್ಚಾಗಿ ಬರ್ತಾವೆ. ಆದ್ರಿಂದ ಇದನ್ನು ವೈಚಾರಿಕತೆಯ ಕಾಲ ಅಂತ ಕರೆಯಲಿಕ್ಕೆ ನಾನು ಅಪೇಕ್ಷೆ ಪಡ್ತೀನಿ. ಮತ್ತೆ ಒಂದು ಸಾಹಿತ್ಯದ ಚಲನಶೀಲತೆಯ ಮಾಪನವನ್ನು ಕೇವಲ ಸೃಜನಶೀಲ ಸಾಹಿತ್ಯದ ಮೇಲೆ ಮಾಡುವುದು ಸರಿಯಲ್ಲ ಅನ್ನೋದು ಕೂಡಾ ಬಹಳ ಮುಖ್ಯವಾದ ಸಂಗತಿ ನಮಗೆ. ಒಟ್ಟು total ಆಗಿ, ಏನು ಒಂದು ಕಾಲಮಾನ, ಒಟ್ಟಾಗಿ ಸಮಗ್ರವಾಗಿ ಬೆಳೆದಿದೆ ಅನ್ನೋದನ್ನು ನಾವು ಒಟ್ಟಾಗಿ ತೆಗೆದುಕೊಂಡು ನಾವು ಅದರ ಬೆಳವಣಿಗೆ ಗುರುತಿಸಬೇಕೇ ಹೊರತಾಗಿ ಕೇವಲ ಸೃಜನಶೀಲ ಕೃತಿಗಳ ಆಧಾರದ ಮೇಲೆ ಒಂದು ಕಾಲಮಾನದ ಸಾಹಿತ್ಯದ ಗತಿಯನ್ನು ಮತ್ತು ಪ್ರಗತಿಯನ್ನು ನಿರ್ಣಯಿಸುವುದು ಸರಿಯಲ್ಲ ಅನ್ನುವುದೇ ನನ್ನ ಇತ್ತೀಚಿನ ಅಭಿಪ್ರಾಯ.

ಪ್ರ : *ಆದರೆ ಈ ಪ್ರಶ್ನೋತ್ತರದ ಹಿಂದೆ ಇನ್ನೊಂದು ಸಂಗತಿ ಇದೆ ಅಂತ ಕಾಣುತ್ತೆ*

*ಸರ್... ಏನೂಂತ ಅಂದ್ರೆ, ಇತ್ತೀಚಿನ ದಿನಗಳಲ್ಲಿ ಅಂದ್ರೆ ಕಳೆದ ಕೆಲವು ವರ್ಷಗಳಿಂದೀಚೆಗೆ ಕನ್ನಡದ ಜನರಲ್ಲಿ ಕನ್ನಡ ಭಾಷೆಯ ಬಳಕೇನೇ ತುಂಬ ಕಡಿಮೆ ಆಗ್ತಿದೆ. ಶಿಕ್ಷಣ ಮಾಧ್ಯಮವಾಗಿ ಕನ್ನಡ ನಶಿಸಿ ಹೋಗ್ತಾ ಇದೆ... ಕನ್ನಡ ಭಾಷೆಯ ಶಬ್ದಗಳನ್ನು ಬಳಸುವ ಒಂದು ಪ್ರೀತಿ-ಖುಷಿನೇ ತಪ್ಪಿ ಹೋಗ್ತಾ ಇದೆ. ಅನೇಕ ಶಬ್ದಗಳು ನಶಿಸಿ ಹೋಗ್ತಾ ಇವೆ, ವಾಕ್ಯರಚನೆ ಯದ್ವಾತದ್ವಾ ಆಗ್ತಾ ಇದೆ, ಕಾಗುಣಿತದ ಪಾಡಂತೂ ಹೇಳಬಾರದು... ಇಂತಹ ವಾತಾವರಣದಲ್ಲಿ ಲೇಖಕರು ಹುಟ್ಟುವುದು ಹೇಗೆ ಸಾಧ್ಯ? ಸೃಜನಶೀಲತೆ ಕನ್ನಡ ಭಾಷೆಯಲ್ಲಿ ವ್ಯಕ್ತವಾಗುವುದು ಹೇಗೆ ಸಾಧ್ಯ?*

ಉ : ಲೇಖಕರು ಹುಟ್ಟೋದಿಲ್ಲ. ಓದುಗರು ಬರೋದಿಲ್ಲ. ಆ ಸ್ಥಿತಿ ಬಂದಿದೆ ನಮಗೀಗ. ಇಷ್ಟೊಂದು ಪ್ರಶಸ್ತಿಗಳಿಂದ ಸಮೃದ್ಧವಾದ ಸಾಹಿತ್ಯದ ಬೇರು, ಬುಡ ಒಣಗ್ತಾ ಇದೆ. ಹೀಗಾಗಿ ಕನ್ನಡ ಮಾಧ್ಯಮದಲ್ಲಿ ಓದುವುದಕ್ಕಿಂತ ಇಂಗ್ಲಿಷ್ ಮಾಧ್ಯಮದಲ್ಲಿ ಓದುವುದು ಹೆಚ್ಚು ಲಾಭದಾಯಕ ಎನ್ನುವ ಪರಿಸ್ಥಿತಿ ನಿರ್ಮಾಣವಾಗ್ತಾ ಇರೋದು ಮತ್ತು ಇಂಗ್ಲಿಷ್‌ಮಾಧ್ಯಮವನ್ನೇ ನಮ್ಮ ಮಕ್ಕಳು ಅನಿವಾರ್ಯವಾಗಿ ಆಶ್ರಯಿಸಬೇಕಾದ ಒಂದು ವ್ಯಾಪಾರೀ ಜಾಲ ಸೃಷ್ಟಿಯಾಗುತ್ತಿರೋದ್ರಿಂದ ಮತ್ತು ಅನೇಕ ಭ್ರಮೆಗಳು ಇದನ್ನು ಪೋಷಿಸ್ತಾ ಇರೋದ್ರಿಂದ ನಮ್ಮ ಮಕ್ಕಳು ಕನ್ನಡದಿಂದ ದೂರವಾಗ್ತಾ ಇದ್ದಾರೆ. ನಾಳೆ ದಿವಸ ನಾವು ಬರೆದಿದ್ದನ್ನ ಓದುವವರು ಗತಿಯಿಲ್ಲ ಬರೆಯುವವರೂ ಇಲ್ಲ. ಮತ್ತೊಂದು ಅಂದ್ರೆ ಬೇರೆ ಬೇರೆಯ ಸಂಸ್ಕೃತಿಗಳ ಆಕ್ರಮಣ ಇದೆಯಲ್ಲ ನಮ್ಮ ಮೇಲೆ, ಅದೂ ಕೂಡಾ ಇದಕ್ಕೊಂದು ಕಾರಣ ಆಗ್ತದೆ. ನಮ್ಮ ವೈಚಾರಿಕತೆಯನ್ನ, ಸೃಜನಶೀಲತೆಯನ್ನ ಧ್ವಂಸಮಾಡುವಷ್ಟರ ಮಟ್ಟಿಗೆ ವಿಕಾರ ಸಂಸ್ಕೃತಿಗಳ ಆಕ್ರಮಣ ನಮ್ಮ ಜನಜೀವನದ ಮೇಲೆ ಆಗ್ತಾ ಇದೆ, ನಮ್ಮ ಮಕ್ಕಳ ಮೇಲೆ ಆಗ್ತಾ ಇದೆ. ಹೀಗಾಗಿ ಯಾವ ಮಾಧ್ಯಮಗಳನ್ನ-ವಿಶೇಷವಾಗಿ ದೃಶ್ಯ ಮಾಧ್ಯಮಗಳು-ಪರಿಣಾಮಕಾರಿಯಾಗಿ ಬಳಸಿದ್ದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಬಹುದಿತ್ತೋ, ಅದೇ ಮಾಧ್ಯಮಗಳು ಬಹುಶಃ ಕಲ್ಪನಾ ದರಿದ್ರರ ಅಥವಾ ವ್ಯಾಪಾರಿ ಮನೋಧರ್ಮದವರ ಕೈಗೆ ಸಿಕ್ಕು ಹೀಗೆ ಒಂದು ಕೀಳು ಸಂಸ್ಕೃತಿಯ ಪ್ರಸರಣದಲ್ಲಿ ತೊಡಗಿರೋದ್ರಿಂದ ಒಟ್ಟಾರೆಯಾಗಿ ನಮ್ಮ ನಾಳಿನ ಭವಿಷ್ಯ ಬಹಳ ನಿರಾಶದಾಯಕವಾಗಿದೆ ಅಂತ ನನಗನಿಸ್ತಾ ಇದೆ. ಸಾಹಿತ್ಯದ ಭವಿಷ್ಯ ಮಾತ್ರ ಅಲ್ಲ, ನಮ್ಮ ನಾಡಿನ ಭವಿಷ್ಯವೇ....

ಪ್ರ : *ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಹಿತಿಗಳ ಪಾತ್ರ ಏನನಿಸುತ್ತೆ ಸರ್? ಮೊದಲಿನಿಂದಲೂ ಕೂಡ ಸಾಮಾಜಿಕ ಸಂದರ್ಭಗಳಿಗೆ ಪ್ರತಿಕ್ರಿಯಿಸುತ್ತಾ ಬಂದಿರುವಂತಹ ಸಾಮಾಜಿಕ ಕವಿ ನೀವು.*

ಉ : ಸಾಹಿತಿಗಳು ಏನು ಮಾಡಬಹುದು? protest ಮಾಡಬಹುದು. ಪ್ರತಿಭಟನೆ ಮಾಡಬಹುದು. ಸರಿ ಇಲ್ಲ ಅಂತ ಹೇಳ್ಬಹುದು-ಮಕ್ಕಳಿಗೆ ಸಂದರ್ಭ ಸಿಕ್ಕಾಗ ಇದನ್ನೆಲ್ಲಾ ಪ್ರತಿಭಟಿಸುವಂತಹ ವೈಚಾರಿಕತೆ ಬೆಳೆಸಿಕೊಳ್ಳಿ ಅಂತ ಹೇಳಬಹುದು.

ನಮ್ಮ ಇವತ್ತಿನ ಅಗತ್ಯ ಅಂದ್ರೆ ವೈಚಾರಿಕತೆಯ ಅಭಾವ. ಯಾರೂ ಯಾವುದ್ರ ಕುರಿತೂ ಗಂಭೀರವಾಗಿ ವಿಚಾರ ಮಾಡ್ತಾ ಇಲ್ಲ. ತಾತ್ಕಾಲಿಕವಾಗಿ ಏನು ಸಿಗುತ್ತೋ ಅಷ್ಟರಲ್ಲಿ ತೃಪ್ತರಾಗಿ ಬಿಡ್ತಾರೆಯೇ ಹೊರತಾಗಿ ನಮ್ಮ ಮೇಲೆ ಈ ಅನ್ಯಪ್ರಭಾವಗಳು ಮಾಡುವ ದುಷ್ಪರಿಣಾಮಗಳು ಏನು, ಇದನ್ನು ಹೇಗೆ ಪ್ರತಿಭಟಿಸಬೇಕು ಎನ್ನುವ ಎಚ್ಚರ ನಮ್ಮಲ್ಲಿ ಬರ್ತಾ ಇಲ್ಲ.

ಪ್ರ : *ಅಂದ್ರೆ ವೈಚಾರಿಕತೆಯ ಕೊರತೆ ಅಂತ...*

ಉ : ಹೌದು, ಈ ಎಚ್ಚರವನ್ನು ನಮ್ಮ ಶಿಕ್ಷಣ ಹುಟ್ಟಿಸಬೇಕಾಗಿದೆ. ಲೇಖಕರು ಹುಟ್ಟಿಸಬೇಕಾಗಿದೆ. ರಾಜಕಾರಣಿಗಳು ಹುಟ್ಟಿಸಬೇಕಾಗಿದೆ. ಜಗದ್ಗುರುಗಳು ಹುಟ್ಟಿಸಬೇಕಾಗಿದೆ. ಇವರೆಲ್ಲ ಈ ಪರಿಸ್ಥಿತಿ ಹೀಗಿರುವುದಕ್ಕೆ ಕಾರಣ ಅಷ್ಟೆ.

ಪ್ರ : *ಆದ್ರೆ ನೀವು ಹಿಂದೆ ಹೇಳಿದ್ರಿ, ಇದು ವೈಚಾರಿಕ ಸಾಹಿತ್ಯದ ದೊಡ್ಡ ಕಾಲ ಅಂತ. ಇನ್ನೊಂದು ಕಡೆ ವೈಚಾರಿಕತೆಯ ಅಭಾವ ಅಂತಿರಾ...*

ಉ : ಈಗ ವೈಚಾರಿಕತೆಯ ದೊಡ್ಡ ಕಾಲ ಅನ್ನೋದು, ಬರೆಯುವವರೆಲ್ಲಾ, ೫೦+ ವರ್ಷದ ವಯಸ್ಸಿನವರು ಅಷ್ಟೇನೆ; ಅಂದರೆ ಮುಂದಿನ ತಲೆಮಾರಿನವರು ಬೆಳೆಸುವ ವಿಮರ್ಶಾಕ್ರಮವನ್ನು ಕುರಿತಾಗಿ ನಾನು ಹೇಳ್ತಾ ಇದ್ದೇನೆ ಹೊರತಾಗಿ ಅದರ ಮುಂದಿನದನ್ನು ದೇವ್ರೇ ಕಾಪಾಡಬೇಕು.

ಪ್ರ : *ಹಾಗ್ಗಾಗಿ ಕನ್ನಡ ಸಾಹಿತ್ಯ ಅಥವಾ ಭಾರತದ ಯಾವುದೇ ಭಾಷೆಯ ಸಾಹಿತ್ಯ ಈಗ ಬಡವಾಗುತ್ತಿರುವ ಈ ಸಂದರ್ಭದಲ್ಲಿ ಏಳುವ ಬಹು ದೊಡ್ಡ ಪ್ರಶ್ನೆ ಅಂದ್ರೆ, ಸಾಹಿತ್ಯವೇ ಕಳೆದು ಹೋದ್ರೆ ಇನ್ನು ಜನಜೀವನದಲ್ಲಿ ಏನು ಉಳಿಯುತ್ತೆ?*

ಉ : ಏನೂ ಉಳಿಯೋದಿಲ್ಲ. ಕೇವಲ ಪ್ರಾಯೋಜನಿಕ ಬುದ್ಧಿ ಮಾತ್ರ ಉಳಿಯಬಹುದು ಅಷ್ಟೇ.

ಪ್ರ : *ದೊಡ್ಡ ದುರಂತ ಇದು...*

ಉ : ಹೌದು

ಪ್ರ : *ಇದಕ್ಕೆ ಸಂಬಂಧಪಟ್ಟಂತೇನೇ ಇನ್ನೊಂದು ದುರಂತದ ಕಡೆ ಗಮನ ಸೆಳೆಯಬಯಸುತ್ತೇನೆ ಸರ್. ಇತ್ತೀಚೆಗೆ ಸಾಹಿತಿಗಳ ಮತ್ತು ಸರ್ಕಾರದ ಒಡನಾಟ ಜಾಸ್ತಿಯಾಗ್ತಾ ಇದೆ. ಅನುಕೂಲತೆಗಳಿಗೋಸ್ಕರ, ಸ್ಥಾನ ಮಾನಗಳಿಗೋಸ್ಕರ ಸಾಹಿತಿಗಳು ರಾಜಕಾರಣಿಗಳ ಸುತ್ತಮುತ್ತು ಓಡಾಡ್ತಿದಾರೆ ಅಂತ ಹೇಳ್ತಾರೆ. ಇದಕ್ಕೆ ನೀವು ಹೇಗೆ ಪ್ರತಿಕ್ರಿಯಿಸ್ತೀರಿ? ಇದರಿಂದ ಸಾಹಿತ್ಯದ ಮೇಲೆ ಏನು ಪ್ರಭಾವ ಆಗ್ತಹುದು ಸರ್?*

ಉ : ಹಾಗೆ ಆಗ್ಬಾರದು. ಆಗ್ತಾ ಇದೆ. ಇದನ್ನು ನಾವು ಅಸಹಾಯಕರಾಗಿ ನೋಡ್ತಾ ಇದೇವೆ. ಯಾಕೆ? ಸಾಹಿತಿಗಳಿಗೆ ರಾಜಕಾರಣಿಗಳನ್ನು ಓಲೈಸುವ ಅಗತ್ಯಗಳೇ

ಇಲ್ಲ. ಯಾಕೆಂದ್ರೆ ಸಾಹಿತಿಯ ನಿಜವಾದ ವ್ಯಕ್ತಿತ್ವ ಯಾವುದೇ ಅಧೀನತೆಗಳನ್ನು ನಿರಾಕರಿಸುವ ಮನೋಧರ್ಮ- ನಿಜವಾದ ಸಾಹಿತಿಯದು...

ಪ್ರ : *ಬಹಳ ಒಳ್ಳೆಯ ಲೇಖಕ ನಿಜವಾದ ಬಂಡಾಯಗಾರ ಅಂತಲೂ ಹೇಳ್ತಾರೆ.*

ಉ : ಹೌದು, ಹೀಗೆ ಅಧೀನತೆಯನ್ನು ಮೀರುವುದು ಹೇಗೆ ಅನ್ನುವುದನ್ನು ಪಂಪನಿಂದ ಇವತ್ತಿನ ಕುವೆಂಪುವರೆಗೆ ಎತ್ತಿ ಹೇಳುವ ಕವಿಗಳಿದ್ದಾರೆ. ಆದರೆ ಯಾಕೆ ಸಾಹಿತಿಗಳು ಹೀಗೆ ಮಾಡ್ತಾರೆ-ಅದು ವೈಯಕ್ತಿಕವಾದ ವಿಚಾರವಷ್ಟೆ. ಅದು ಸಾರ್ವತ್ರಿಕವಾಗಿ ಅನ್ವಯವಾಗುವಂತಹ ಸಂಗತಿಯಲ್ಲ.

ಪ್ರ : *ಒಟ್ಟಾರೆ ಜೀವನದ ದಿಕ್ಕೇ ಬದಲಾಗ್ತಾ ಇದೆ. ಸಾಹಿತಿಗಳೂ ಇದಕ್ಕೆ ಹೊರತಲ್ಲ ಅಂತ ಕಾಣುತ್ತದೆ.*

ಉ : ಬಹುಶಃ ಇದು ಪ್ರಾಯೋಜನಿಕ ಬುದ್ಧಿಯ ಪರಿಣಾಮ ಅಂತ ಕಾಣುತ್ತೆ.

*ಡಿ.ಎಸ್.ಎನ್.: ಇರಬಹುದು ಸರ್... ಅದೇನೇ ಇರಲಿ. ಈ ಸಂಕ್ಷಿಪ್ತ ಸಂದರ್ಶನದಲ್ಲಿ ಸಾಕಷ್ಟು ವಿಸ್ತಾರವಾದ ವಿಚಾರಗಳು ಹೊರಹೊಮ್ಮಿದಂತೆ ಕಾಣುತ್ತೆ. ವಿಶ್ವಾಸದಿಂದ ಈ ಮಾತುಕತೆಯಲ್ಲಿ ಭಾಗವಹಿಸಿದಕ್ಕೆ ವಂದನೆಗಳು ಸರ್.*

ಜಿ.ಎಸ್.ಎಸ್. : ನಮಸ್ಕಾರ.

*(ಬರಹಕ್ಕೆ :ಎಸ್. ಉಷಾಲತ)*

■■

# ಜೀವನ ಪಥ

೧. ಜನನ : ೭.೨.೧೯೨೬

೨. ಸ್ಥಳ : ಶಿಕಾರಿಪುರ, ಶಿವಮೊಗ್ಗ ಜಿಲ್ಲೆ, ಕರ್ನಾಟಕ

೩. ವಿದ್ಯಾಭ್ಯಾಸ :

ಮೈಸೂರು ವಿಶ್ವವಿದ್ಯಾಲಯ-ಬಿ.ಎ. ಆನರ್ಸ್ (೧೯೪೯); ಎಂ.ಎ. (೧೯೫೩) ಪ್ರಪ್ರಥಮ ದರ್ಜೆಯಲ್ಲಿ ತೇರ್ಗಡೆ; ಮೂರು ಸುವರ್ಣ ಪದಕ ಹಾಗೂ ಎರಡು ಬಹುಮಾನಗಳು.

ಪಿಎಚ್.ಡಿ. (೧೯೬೦) ಶ್ರೀ ಕುವೆಂಪು ಅವರ ಮಾರ್ಗದರ್ಶನದಲ್ಲಿ ಬರೆದ 'ಸೌಂದರ್ಯ ಸಮೀಕ್ಷೆ' ಎಂಬ ಪ್ರೌಢ ಪ್ರಬಂಧಕ್ಕೆ

೪. ವೃತ್ತಿ ಜೀವನ :

೧. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಧ್ಯಾಪಕ (೧೯೪೯-೧೯೬೩)

೨. ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ರೀಡರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥ (೧೯೬೩-೧೯೬೬)

೩. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ರೀಡರ್ (೧೯೬೬-೧೯೭೦)

೪. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕ ಹಾಗೂ ನಿರ್ದೇಶಕ (೧೯೭೦-೧೯೮೬)

೫. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ (೧೯೮೭-೧೯೯೦)

೬. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಕುವೆಂಪು ಪೀಠದ ಸಂದರ್ಶಕ ಪ್ರಾಧ್ಯಾಪಕ (೧೯೪೪-೧೯೯೫)

೫. ಸಾಹಿತ್ಯ ಜೀವನ (ಪ್ರಕಟಣೆಗಳು) :

ಅ) ಕವನ ಸಂಗ್ರಹಗಳು :

| | |
|---|---|
| ೧. ಸಾಮಗಾನ | ೨. ಚೆಲವು ಒಲವು (೧೯೫೩) |
| ೩. ದೇವಶಿಲ್ಪ | ೪. ತೀರ್ಥವಾಣಿ |
| ೫. ಕಾರ್ತೀಕ | ೬. ದೀಪದ ಹೆಜ್ಜೆ (೧೯೫೯) |

೭. ಅನಾವರಣ (೧೯೬೩) ೮. ತೆರೆದ ದಾರಿ
೯. ಗೋಡೆ ೧೦. ಕಾಡಿನ ಕತ್ತಲಲ್ಲಿ (೧೯೮೧)
೧೧. ಪ್ರೀತಿ ಇಲ್ಲದ ಮೇಲೆ ೧೨. ಚಕ್ರಗತಿ (೧೯೯೨)
೧೩. ವ್ಯಕ್ತಮಧ್ಯ (೧೯೯೯) ೧೪. ಸಮಗ್ರ ಕಾವ್ಯ (೧೯೮೭)

ಆ) ಗದ್ಯ ಕೃತಿಗಳು :

೧. ಕರ್ಮಯೋಗಿ
೨. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ
೩. ಗಂಗೆಯ ಶಿಖರಗಳಲ್ಲಿ
೪. ವಿಮರ್ಶೆಯ ಪೂರ್ವ-ಪಶ್ಚಿಮ(೧೯೬೧)
೫. ಪರಿಶೀಲನ (೧೯೬೭)
೬. ಗತಿಬಿಂಬ
೭. ಪ್ರತಿಕ್ರಿಯೆ
೮. ನವೋದಯ
೯. ಕನ್ನಡ ಸಾಹಿತ್ಯ ಸಮೀಕ್ಷೆ
೧೦. ಅನುರಣನ
೧೧. ಸೌಂದರ್ಯ ಸಮೀಕ್ಷೆ (೧೯೬೫)
೧೨. ಮಹಾಕಾವ್ಯ ಸ್ವರೂಪ (೧೯೭೬)
೧೩. ಕಾವ್ಯಾರ್ಥ ಚಿಂತನ (೧೯೮೩)
೧೪. ಕನ್ನಡ ಕವಿಗಳ ಕಾವ್ಯ-ಕಲ್ಪನೆ(೧೯೮೯)
೧೫. ಚತುರಂಗ
೧೬. ಬೆಡಗು(೧೯೮೯)
೧೭. ಅಮೆರಿಕಾದಲ್ಲಿ ಕನ್ನಡಿಗ
೧೮. ಹೊಸಗನ್ನಡ ಕವಿತೆಗಳಲ್ಲಿ ಕಾವ್ಯಚಿಂತನ (೧೯೯೧)
೧೯. ವಿಸ್ತರಣ (೧೯೯೫)
೨೦ ಶಿವಯೋಗಿ ಸಿದ್ಧರಾಮ
೨೧. ಸರ್ವಭೂಷಣ ಶಿವಯೋಗಿ
೨೨. ಇಂಗ್ಲೆಂಡಿನಲ್ಲಿ ಚತುರ್ಮಾಸ
೨೩. ಚದುರಿದ ಚಿಂತನೆಗಳು
೨೪. ಕುವೆಂಪು – ಒಂದು ಪುನರಾಲೋಕನ (೨೦೦೫)

ಇ) ಸಂಪಾದಿತ :

೧. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಆರು ಸಂಪುಟಗಳಲ್ಲಿ
೨. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಹತ್ತು ಸಂಪುಟಗಳಲ್ಲಿ
೩. ಸಾಹಿತ್ಯ ವಾರ್ಷಿಕ – ಹದಿನಾಲ್ಕು ಸಂಪುಟಗಳಲ್ಲಿ

ಉ) ಪ್ರವಾಸ :

ಅ) ೧೯೭೩ ನೇ ಸೆಪ್ಟೆಂಬರ್‌ನಲ್ಲಿ ಭಾರತ–ಸೋವಿಯೆತ್ ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ ರಷ್ಯಾದಲ್ಲಿ ಪ್ರವಾಸ

ಆ) ಅಮೆರಿಕಾ, ಇಂಗ್ಲೆಂಡ್ (೧೯೮೭), ಥಾಯ್‌ಲಂಡ್– ಸಿಂಗಪುರ(೧೯೯೪) ಇಂಗ್ಲೆಂಡ್–ಯೂರೋಪು (೧೯೯೬); ಅಮೆರಿಕಾ (೧೯೯೭)

೬. ಪ್ರಶಸ್ತಿ – ಗೌರವಗಳು

೧. ೧೯೭೪ರಲ್ಲಿ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಎಂಬ ಪ್ರವಾಸ ಕಥನಕ್ಕೆ 'ಸೋವಿಯೆತ್ ಲ್ಯಾಂಡ್ ನೆಹರೂ' ಪ್ರಶಸ್ತಿ

೨. ೧೯೮೨ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ
೩. ೧೯೮೩-೮೪ರಲ್ಲಿ ಯು.ಜಿ.ಸಿ.ಯಿಂದ ರಾಷ್ಟ್ರೀಯ ಉಪನ್ಯಾಸಕ (National lecturer) ಆಗಿ ನೇಮಕ
೪. ೧೯೮೪ರಲ್ಲಿ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೫. ೧೯೮೪ರಲ್ಲಿ 'ಕಾವ್ಯಾರ್ಥ ಚಿಂತನ' ಕೃತಿಗೆ ವರ್ಷದ ಅತ್ಯುತ್ತಮ ಕೃತಿ ಎಂದು ಬಹುಮಾನ
೬. ೧೯೮೪ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ
೭. ಪ್ರೊ. ಭೂಸನೂರಮಠ ಪ್ರಶಸ್ತಿ – ೧೯೯೭
೮. ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ – ೧೯೯೭
೯. ಗೊರೂರು ಪ್ರಶಸ್ತಿ – ೧೯೯೯
೧೦. ಡಾ. ಮಾಸ್ತಿ ಪ್ರಶಸ್ತಿ – ೨೦೦೦
೧೧. ರಾಷ್ಟ್ರಕವಿ ಪುರಸ್ಕಾರ – ೨೦೦೬


೭. ಇತರ :

೧. ೧೯೬೩ರಲ್ಲಿ ದೆಹಲಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿ
೨. ೧೯೬೪ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ.
೩. ೧೯೮೬ನೇ ಏಪ್ರಿಲ್‌ನಲ್ಲಿ ಮದರಾಸು ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ
೪. ೧೯೯೨ನೇ ಜನವರಿಯಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ೬೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ

೮. **ಗೌರವ ಗ್ರಂಥಗಳು :**

ಅ) ಸ್ನೇಹ ಕಾರ್ತೀಕ – ೧೯೯೭
ಆ) ಗೌರವ – ೨೦೦೧
ಇ) ಹಣತೆ – ೨೦೦೧
ಈ) ಆಕಾಶದೀಪ – ೨೦೦೮

■■



ಆಕಾಶವಾಣಿ ಸ್ಟುಡಿಯೋದಲ್ಲಿ
ಡಾ. ಜಿ.ಎಸ್.ಎಸ್.



"ಕವಿಸಮ್ಮಾನ" ಡಾ. ಜಿ.ಎಸ್.ಶಿವರುದ್ರಪ್ಪನವರಿಗೆ ರಾಷ್ಟ್ರಕವಿ ಪ್ರಶಸ್ತಿ ಸಂದ ಸಂದರ್ಭದಲ್ಲಿ
ಆಕಾಶವಾಣಿ ಸಾಂಸ.ತಿಕ ಸಂಪದ ವತಿಯಿಂದ ಸನಾನಿಸಿದಾಗ ತೆಗೆದ ಚಿತ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ರಾಷ್ಟ್ರಕವಿ ಪುರಸ್ಕಾರದ ಸಂದರ್ಭದಲ್ಲಿ ಆಕಾಶವಾಣಿಯವರು ಗೌರವ ನಮನದ ಕಾರ್ಯಕ್ರಮವಾಗಿ ಜಿ.ಎಸ್.ಎಸ್. ಅವರ ಬಗ್ಗೆ ಅವರ ಸಾಹಿತ್ಯದ ವಿವಿಧ ಆಯಾಮಗಳ ಬಗೆಗೆ ಆಪ್ತರಿಂದ ಶಿಷ್ಯರಿಂದ ತಜ್ಞರಿಂದ ಕನ್ನಡ ಜನತೆಗಾಗಿ ಮಾತನಾಡಿಸಿದಾಗ ಮೂಡಿ ಬಂದ ಬರಹಗಳು ಇಲ್ಲಿವೆ.

ವಿಶೇಷವೆಂದರೆ, ಜಿ.ಎಸ್.ಎಸ್. ಅವರು ಇದುವರೆಗೆ ಆಕಾಶವಾಣಿಯಲ್ಲಿ ಭಾಗವಹಿಸಿ ನೀಡಿರುವ ಚಿಂತನೆಗಳು ಸಂದರ್ಶನಗಳು ಈ ಸಂಕಲನದಲ್ಲಿ ಸೇರಿವೆ. ಇದು ಈ ಸಂಕಲನದ ಮಹತ್ವವನ್ನು ಹೆಚ್ಚಿಸಿದೆ.

■ ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಬೆಲೆ : ರೂ. ೭೫/-
ISBN : 81-7713-280-6

